ವಿಶ್ವವಾಣಿ
ವಿಶ್ವಾಸವೇ ವಿಶ್ವ
VISHWAVANI DAILY

ವಿಶ್ವವಾಣಿ ಗ್ಲೋಬಲ್ ಫೋರಂ ಪ್ರಸ್ತುತಪಡಿಸುವ

ಭಾರತ ಹಾಗೂ ಮಾಲ್ಡೀವ್ಸ್ ವಿಶೇಷ ನಿಯೋಗದ ಸಮ್ಮುಖದಲ್ಲಿ

ಕರ್ನಾಟಕ ಹಾಗೂ ಮಾಲ್ಡೀವ್ಸ್ ಸಾಂಸ್ಕೃತಿಕ ಸಮ್ಮಿಲನ ಮತ್ತು ಜಾಗತಿಕ ಸಾಧನೆಗೈದ

ಕರ್ನಾಟಕದ ಅಪರೂಪದ ಸಾಧಕರಿಗೆ

ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಉದ್ಘಾಟನೆ



ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ
ಶ್ರೀ ಜಗದ್ಗುರು ಸಿದ್ಧರಾಮೇಶ್ವರ
ಮಹಾಸಂಸ್ಥಾನ ಭೋವಿ ಗುರುಪೀಠ
ಬಾಗಲಕೋಟೆ-ಚಿತ್ರದುರ್ಗ

ಅಧ್ಯಕ್ಷತೆ



ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕರು
ವಿಶ್ವವಾಣಿ

ಮುಖ್ಯ ಅತಿಥಿಗಳು

ಡಾ. ಜಯಮಾಲಾ ರಾಮಚಂದ್ರ
ಖ್ಯಾತ ನಟಿ ಹಾಗೂ ಮಾಜಿ ಸಚಿವರು

ಮುಖ್ಯ ಅತಿಥಿಗಳು

ಕುಮಾರಿ ಸೌಂದರ್ಯ
ಯುವ ನಟಿ

ಇದು ಕನ್ನಡ ಪತ್ರಿಕೋದ್ಯಮದಲ್ಲೇ ಹೊಸ ದಾಖಲೆ

ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿ ಪರಿಚಯ ಈ ಕಾರ್ಯಕ್ರಮದ ಆಶಯ. ಈಗಾಗಲೇ ಇಂಥ ವಿಶಿಷ್ಟ ಮೊದಲ ಕಾರ್ಯಕ್ರಮ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಕಾಂಬೋಡಿಯಾ, ಫೆಬ್ರವರಿಯಲ್ಲಿ ವಿಯೆಟ್ನಾಂ, ಮಾರ್ಚ್‌ನಲ್ಲಿ ಇಂಡೋನೇಷ್ಯಾ ಹಾಗೂ ಮೇ ನಲ್ಲಿ ಮಾರಿಷಸ್ ದೇಶದಲ್ಲಿ ಯಶಸ್ವಿಯಾಗಿತ್ತು. ಇದೀಗ ಅದರ ಭಾಗವಾಗಿಯೇ ಐದನೇ ಕಾರ್ಯಕ್ರಮವು ಮಾಲ್ಡೀವ್ಸ್‌ನಲ್ಲಿ ನಡೆಯುತ್ತಿದ್ದು, ವಿಶ್ವವಾಣಿ ಈ ಕಾರ್ಯಕ್ರಮ ಏರ್ಪಡಿಸಿರುವುದು ವಿಶೇಷ.

ಸ್ಥಳ
ಮಾಲೆ
ಮಾಲ್ಡೀವ್ಸ್

ದಿನಾಂಕ
ಶುಕ್ರವಾರ
20.09.2024
ಸಂಜೆ 5 ಗಂಟೆ

ವಿಶ್ವವಾಣಿ ಆರಾಮ
ಪ್ರತಿದಿನ ಆರಾಮದಿಂದ ಓದಿ
ಅನುದಿನವೂ ವಿರಾಮಕ್ಕೆ ಒಂದು ನೆಪ

ಬಣ ರಾಜಕಾರಣದ ಬಿಸಿ, ಹೊಸ ಸಾರಥಿಗೆ ಶೋಧ, ಆಕಾಂಕ್ಷಿಗಳಲ್ಲಿ ಆಸಕ್ತಿ | ಸದಸ್ಯತ್ವ ಅಭಿಯಾನ ನಂತರ ಹೊಸ ಅಧ್ಯಕ್ಷ?

ಬಿಜೆಪಿಯಲ್ಲಿ ಎದ್ದಿದೆ ಬದಲಾವಣೆಯ ಸುಳಿಗಾಳಿ!

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಬಿಜೆಪಿಯಲ್ಲಿ ಈಗ ಬದಲಾವಣೆಯ ಚಿಂತನೆ ಶುರುವಾಗಿದೆ. ಇದು ಬರೀ ರಾಜ್ಯದಲ್ಲಿ ಮಾತ್ರ ವಲ್ಲ. ರಾಷ್ಟ್ರೀಯ ಸಂಘಟನೆ ಯಲ್ಲೂ ಕೆಲವು ಬದಲಾವಣೆಗಳನ್ನು ಮಾಡಬೇಕೆನ್ನುವ ಚರ್ಚೆ ಆರಂಭವಾಗಿದೆ.

ಅದರಲ್ಲೂ ರಾಜ್ಯ ಬಿಜೆಪಿಯಲ್ಲಿ ಎದ್ದಿರುವ ಅಸಮಾಧಾನ ಮತ್ತು ಬಣ ರಾಜಕಾರಣದ ಬಿರುಗಾಳಿಯನ್ನು ನಿಯಂತ್ರಿಸಲು ಮೊದಲು ರಾಜ್ಯದಲ್ಲಿ ಬದಲಾವಣೆ ಆಗಲೇಬೇಕೆನ್ನುವ ನಿಟ್ಟಿನಲ್ಲಿ ರಾಜ್ಯ ನಾಯಕರ ನಡುವೆ ಗಂಭೀರ ಚರ್ಚೆ ನಡೆದಿದೆ ಎಂದು ತಿಳಿದುಬಂದಿದೆ.

ಅದರಲ್ಲೂ ಹಿರಿಯ ನಾಯಕರಾದ ರಮೇಶ್ ಜಾರಕಿಹೊಳಿ ಮತ್ತು ಬಸನಗೌಡ ಪಾಟೀಲ್ ಯತ್ನಾಳ್ ಅವರ ವಾಗ್ದಾಳಿಗಳಿಂದ ಬದಲಾವಣೆಯ ಅನಿವಾರ್ಯ ಸ್ಥಿತಿ ಉಂಟಾಗುತ್ತಿದೆ.

ಇದೇ ಸ್ಥಿತಿ ಮುಂದುವರಿದು ಯಾವ ಮುಖಂಡರೂ ಯಾರ ಮಾತನ್ನೂ ಕೇಳಲಾಗದ ಸ್ಥಿತಿ ನಿರ್ಮಾಣವಾದರೆ, ರಾಜ್ಯಾಧ್ಯಕ್ಷರ ಬದಲಾವಣೆ ಅನಿವಾರ್ಯವಾಗಲಿದ್ದು, ಆಗ ವಿಜಯೇಂದ್ರ ಸ್ಥಾನ ತ್ಯಜಿಸಬೇಕಾಗಬಹುದು ಎನ್ನುತ್ತವೆ ಮೂಲಗಳು. ಇಂಥ ಸಂದರ್ಭದಲ್ಲಿ ಆ ಸ್ಥಾನಕ್ಕೆ 10ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದು, ಅಂಥವರು ಈಗ ವರಿಷ್ಠರ ಗಮನ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

ಒಂದುವೇಳೆ ಕಾಂಗ್ರೆಸ್ ನಲ್ಲಿ ದಲಿತ ಮುಖ್ಯಮಂತ್ರಿ ಪ್ರಸ್ತಾಪಕ್ಕೆ ಬಂದರೆ, ಬಿಜೆಪಿಯಲ್ಲೂ ದಲಿತ ರಾಜ್ಯಾಧ್ಯಕ್ಷ ವಿಚಾರ ಮುನ್ನೆಲೆಗೆ ಬರುವ ಸಾಧ್ಯತೆ ಇದೆ. ಅಷ್ಟೇ ಏಕೆ ಈ ವಿಚಾರ ಈಗಾಗಲೇ ಪಕ್ಷದ ವರಿಷ್ಠರ ವಲಯದಲ್ಲಿ ಪ್ರಸ್ತಾಪವಾಗಿದೆ ಎಂದು ದೆಹಲಿ ಬಿಜೆಪಿ ಕಚೇರಿ ಮೂಲಗಳು ತಿಳಿಸಿವೆ. ಅಂದರೆ ಬೆಂಗಳೂರಿನಲ್ಲಿ ಇತ್ತೀಚಿಗೆ ನಡೆದ ಆರ್ ಎಸ್ ಎಸ್ - ಬಿಜೆಪಿ ನಾಯಕರ ಸಭೆ ಯಲ್ಲಿ ಪಕ್ಷದೊಳಗಿನ ಅಸಮಾಧಾನ ಹಾಗೂ ವೈಫಲ್ಯಗಳ ಭಾರೀ ಚರ್ಚೆಯಾಗಿದ್ದು, ಇದರ ಪರಿಣಾಮ ದೂರದ ದಿಲ್ಲಿ ವರೆಗೂ ಮುಟ್ಟಿದೆ ಎನ್ನಲಾಗಿದೆ. ಅಂದರೆ ರಾಜ್ಯದಲ್ಲಿ ಆಗಬೇಕಿರುವ ಬದಲಾವಣೆಗಳ ಅನಿವಾರ್ಯತೆಯನ್ನು ಕೆಲವು ನಾಯಕರು ರಾಷ್ಟ್ರೀಯ ನಾಯಕರಿಗೆ ಮನವರಿಕೆ ಮಾಡಿದ್ದು, ಅವರು ಕೂಡ ಬದಲಾವಣೆಗೆ ಸಮ್ಮತಿ ಸೂಚಿಸಿದ್ದಾರೆ ಎನ್ನಲಾಗಿದೆ. ಆದರೆ ವರಿಷ್ಠರು ಉತ್ತರ ರಾಜ್ಯಗಳಾದ ಜಮ್ಮು- ಕಾಶ್ಮೀರ (ಆರಂಭವಾಗಿದೆ) ಹರಿಯಾಣ, ಮಹಾರಾಷ್ಟ್ರ ಹಾಗೂ ಜಾರ್ಖಂಡ್ ಚುನಾವಣೆ ಗಳ ಕಾರ್ಯ ತಂತ್ರದಲ್ಲಿ ನಿರತರಾಗಿರುವ ಕಾರಣ ರಾಜ್ಯದಲ್ಲಿ ಆಗಬೇಕಿರುವ ಬದಲಾವಣೆ ಗಳ ಬಗ್ಗೆ ಚುನಾವಣೆಗಳ ನಂತರ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಪಕ್ಷದ ಉನ್ನತ ಮೂಲ ಗಳು ತಿಳಿಸಿವೆ.

ದಲಿತ ರಾಜ್ಯಾಧ್ಯಕ್ಷರ ಚರ್ಚೆ

ಬಿಜೆಪಿ ನಾಯಕರಾದ ರಮೇಶ್ ಜಾರಕಿಹೊಳಿ ಹಾಗೂ ಯತ್ನಾಳ್ ಅವರ ನೇರ ವಾಗ್ದಾಳಿ ಹಾಗೂ ಮಾಜಿ ಮುಖ್ಯಮಂತ್ರಿಗಳ ಪರೋಕ್ಷ ಅಸಹಕಾರಗಳು ರಾಜ್ಯ ಬಿಜೆಪಿ ಸಾರಥ್ಯವನ್ನು ಅಲುಗಾಡಿಸಿದೆ ಎನ್ನಲಾಗಿದೆ. ಇದರಿಂದ ಕಾಂಗ್ರೆಸ್ ವಿರುದ್ಧ ಹೋರಾಡುವಲ್ಲಿ ಬಿಜೆಪಿಗ ನೈತಿಕತೆ ಪ್ರಶ್ನೆ ಎದುರಾಗಿದೆ. ಇಂಥ ಸಂದರ್ಭದಲ್ಲಿ ಎಲ್ಲಾ ಬಣಗಳನ್ನು ಸಂಭಾಳಿಸುವ ನಾಯಕರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಹೇಗೆ ಎನ್ನುವ ಚಿಂತನೆ ಆರಂಭವಾಗಿದೆ. ಹಾಗೆಯೇ ಕಾಂಗ್ರೆಸ್ ನಲ್ಲಿ ದಲಿತ ಮುಖ್ಯಮಂತ್ರಿ ಮತ್ತೆ ಹೆಚ್ಚು ಪ್ರಸ್ತಾಪಕ್ಕೆ ಬರುತ್ತಿದ್ದು, ಇದರಿಂದ ದಲಿತರನ್ನು ಬಿಜೆಪಿಯಲ್ಲೇ ಉಳಿಸಿಕೊಳ್ಳಲು ಪಕ್ಷದಲ್ಲಿ ದಲಿತ ರಾಜ್ಯಾಧ್ಯಕ್ಷರನ್ನು ನೇಮಿಸಿದರೆ ಹೇಗೆ ಎನ್ನುವ ಚರ್ಚೆ ಆರಂಭವಾಗಿದೆ. ಇದು ಬರೀ ರಾಜ್ಯದಲ್ಲಿ ಮಾತ್ರವಲ್ಲದೆ, ರಾಷ್ಟ್ರೀಯ ನಾಯಕರ ಬಳಿಯೂ ಪ್ರಸ್ತಾಪವಾಗಿದೆ.

ಇಂಥ ಸಂದರ್ಭದಲ್ಲಿ ಪಕ್ಷದ ಹಿರಿಯ ನಾಯಕರೂ ಆಗಿರುವ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಿದರೆ ಹೇಗೆ ಎಂಬ ಚರ್ಚೆ ನಡೆದಿದೆ. ಹಾಗೆ ನೋಡಿದರೆ, ಈ ಹಿಂದೆ ಅವರನ್ನು ದಲಿತ ಮುಖ್ಯಮಂತ್ರಿ ಮಾಡುವ ಬಗ್ಗೆಯೂ ಪ್ರಸ್ತಾಪವಾಗಿತ್ತು. ಹೀಗಾಗಿ ಅವರ ಹೆಸರು ಮಂಚೂಣಿಯಲ್ಲಿದೆ. ಇದೇ ವೇಳೆ ಸಂಘಟನೆಯವರಿಗೆ ಅವಕಾಶ ನೀಡಬೇಕೆನ್ನುವ ನಿಟ್ಟಿನಲ್ಲಿ ದಲಿತ ಸಮುದಾಯದ ಹಿರಿಯ ನಾಯಕರೂ ಆಗಿರುವ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರನ್ನೂ ದಲಿತ ರಾಜ್ಯಾಧಕ್ಷರ ಹುದ್ದೆಗೆ ತರುವ ಚಿಂತನೆ ನಡೆದಿದೆ. ಸಂಘಟನೆಯಲ್ಲಿ ಹೆಚ್ಚು ನಿಪುಣರಾಗಿರುವ ಲಿಂಬಾವಳಿ ಪಕ್ಷ ಬಲಪಡಿಸುವಲ್ಲಿ ಸೂಕ್ತ ನಾಯಕ ಎನ್ನುವ ಅಭಿಪ್ರಾಯಗಳನ್ನು ದಿಲ್ಲಿಯಲ್ಲಿರುವ ವರಿಷ್ಠರಿಗೆ ಸಲ್ಲಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಅಧ್ಯಕ್ಷರೂ ಬದಲು?

ಸಾಮಾನ್ಯ ಬಿಜೆಪಿಯಲ್ಲಿ ಸದಸ್ಯತ್ವ ಅಭಿಯಾನದ ನಂತರ ರಾಷ್ಟ್ರೀಯ ಅಥವಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಬದಲಾವಣೆಗಳ ಪರ್ವ ಆರಂಭವಾಗುತ್ತದೆ. ಹಾಗೆಯೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು 3 ವರ್ಷಗಳ ಅವಧಿ ಪೂರೈಸಿರುವ ಕಾರಣ ಆ ಸ್ಥಾನಕ್ಕೆ ಹಿರಿಯರೊಬ್ಬರನ್ನು ನಿಯೋಜಿಸಬೇಕೆಂಬ ಪ್ರಸ್ತಾಪ ಶುರವಾಗಿದೆ. ಹೀಗಾಗಿ ಆ ಸ್ಥಾನಕ್ಕೆ ಕೇಂದ್ರ ಸಚಿವ ಧರ್ಮೆಂದ್ರ ಪ್ರಧಾನ್, ಪಕ್ಷದ ಹಿರಿಯ ನಾಯಕ ರಾಜಸ್ಥಾನದ ಭೂಪೇಂದ್ರ, ಯಾದವ್, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವಡೆ ಅವರ ಹೆಸರುಗಳು ಹೆಚ್ಚು ಚರ್ಚೆಗೆ ಬರುತ್ತಿವೆ.

ಕೊಟ್ಟ ಹಣ ವಾಪಸಾತಿ ವೇಳೆ ಯುವತಿಯಿಂದ ಅನುಚಿತ ವರ್ತನೆ

ಹನಿಟ್ರ್ಯಾಪ್: ಉದ್ಯಮಿಯಿಂದ 40 ಲಕ್ಷ ಸುಲಿಗೆ

ಬೆಂಗಳೂರು: ಸಿನಿಮಾ ಹೆಸರಿನಲ್ಲಿ ಯುವತಿಯೊಬ್ಬಳು ತನ್ನ ಗ್ಯಾಂಗ್ ನೊಂದಿಗೆ ಉದ್ಯಮಿಯೊಬ್ಬರಿಗೆ ಹನಿಟ್ರ್ಯಾಪ್ ಮೂಲಕ ಬ್ಲಾಕ್‌ಮೇಲ್ ಮಾಡಿ 40 ಲಕ್ಷ ರು. ಸುಲಿಗೆ ಮಾಡಿರುವ ಬಗ್ಗೆ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯಮಿಯೊಬ್ಬರು ಎಂ.ಜಿ.ರಸ್ತೆಯ ಖಾಸಗಿ ಕಂಪನಿಯನ್ನು ನಡೆಸುತ್ತಿದ್ದು, ನಾಲ್ಕು ವರ್ಷದ ಹಿಂದೆ ಕುಟುಂಬ ಎಂಬ ಆ್ಯಪ್ ಮೂಲಕ ಯುವತಿಯ ಪರಿಚಯವಾಗಿದೆ. ಆಕೆ ತಾನು ಸಿನಿಮಾ ಮಾಡುತ್ತಿರುವುದಾಗಿ ಹೇಳಿ, ಹಣದ ಅವಶ್ಯಕತೆ ಇದೆ ಎಂದು ಹೇಳಿ 4.25 ಲಕ್ಷ ರು.ಗಳನ್ನು ನಿರ್ದೇಶಕರೊಬ್ಬರ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ.

ನಂತರ ಉದ್ಯಮಿ ತಾನು ನೀಡಿದ ಹಣವನ್ನು ವಾಪಸ್ ಕೊಡುವಂತೆ ಕೇಳಿದಾಗ ಯುವತಿ ವಾಟ್ಸ್ ಆ್ಯಪ್ ಮೂಲಕ ಕರೆ ಮಾಡಿ, ಮನೆಗೆ ಬಂದರೆ ಹಣ ಕೊಡುವುದಾಗಿ ಆಹ್ವಾನ ನೀಡಿದ್ದಾಳೆ.

ವಿಡಿಯೊ ಮಾಡಿ ಬೆದರಿಕೆ: ಈಕೆಯ ಮಾತನ್ನು ನಂಬಿದ ಉದ್ಯಮಿ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆಯಲ್ಲಿ ವಾಸವಿದ್ದ ಯುವತಿ ಮನೆಗೆ ಹೋಗಿದ್ದಾರೆ. ಅಲ್ಲಿ ಹಣ ಕೇಳಿದಾಗ ಆಕೆ ಅನುಚಿತವಾಗಿ ವರ್ತಿಸಿದ್ದು, ಬಲವಂತವಾಗಿ ಲೈಂಗಿಕ ಸಂಪರ್ಕ ಬೆಳೆಸಿಕೊಂಡು ಅದನ್ನು ವಿಡಿಯೊ ಮಾಡಿಕೊಂಡಿದ್ದಾಳೆ ಎಂದು ದೂರು ನೀಡಲಾಗಿದೆ. ನಂತರದ ದಿನಗಳಲ್ಲಿ ನಾನು ನಿನಗೆ ಹಣ ಕೊಡುವುದಿಲ್ಲ. ನೀನೇ ನನಗೆ ಹಣ ಕೊಡಬೇಕು. ಇಲ್ಲದಿದ್ದರೆ ಮೀಡಿಯಾಗೆ ಈ ವಿಡಿಯೊ ಕೊಡುತ್ತೇನೆ ಹಾಗೂ ಸೋಶಿಯಲ್ ಮೀಡಿಯಾದಲ್ಲಿ ಹಾಕುತ್ತೇನೆ ಎಂದು ಹೆದರಿಸಿದ್ದಾಳೆ. ಅಲ್ಲದೆ ಹೊಸ ದ್ವಿಚಕ್ರ ವಾಹನವನ್ನೂ ಖರೀದಿಸಿ ಅದರ ಇಎಮ್‌ಐ ಪಾವತಿಸುವಂತೆ ಉದ್ಯಮಿಗೆ ಹೇಳಿದ್ದಾಳೆ.

40 ಲಕ್ಷ ರು.ವಸೂಲಿ: ಇಷ್ಟಕ್ಕೆ ಸುಮ್ಮನಾಗದ ಆಕೆ ಮತ್ತೆ ಉದ್ಯಮಿಗೆ ಕರೆ ಮಾಡಿ ತನಗೆ ಬ್ರೇಸ್‌ಲೈಟ್ ಕೊಡಿಸುವಂತೆ ಬ್ಲಾಕ್‌ಮೇಲ್ ಮಾಡಿದ್ದಾಳೆ. ಹಣವನ್ನು ನಗದು ರೂಪದಲ್ಲಿ ಬ್ಯಾಂಕ್ ಖಾತೆಯ ಮೂಲಕ ಹಾಗೂ ಕ್ರೆಡಿಟ್ ಕಾರ್ಡ್ ಮೂಲಕ ಪಡೆದುಕೊಂಡು ದಿಲೀಪ್ ಹಾಗೂ ರವಿಕುಮಾರ್ ಎಂಬುವರೊಂದಿಗೆ ವಾಟ್ಸ್ ಆ್ಯಪ್ ಕರೆ ಮೂಲಕ ಮಾತನಾಡಿಸಿ ಕೇಳಿದಷ್ಟು ಹಣ ಕೊಡದಿದ್ದರೆ ಖಾಸಗಿ ವಿಡಿಯೊಗಳನ್ನು ಬಿಡುಗಡೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಹಂತಹಂತವಾಗಿ 40 ಲಕ್ಷ ರು. ಪಡೆದು, ಹೆಚ್ಚುವರಿಯಾಗಿ ಕಾರು ಕೊಡಿಸಬೇಕು. ಇಲ್ಲದಿದ್ದರೆ ಕಾರು ತೆಗೆದುಕೊಳ್ಳಲು 20 ಲಕ್ಷ ರು. ಹಣ ನೀಡಬೇಕೆಂದು ಬ್ಲಾಕ್‌ಮೇಲ್ ಮಾಡಿದ್ದಾಳೆ. ಇದರಿಂದ ಕಂಗಾಲಾದ ಉದ್ಯಮಿ ಪೊಲೀಸರ ಮೊರೆಹೋಗಿದ್ದಾರೆ. ದೂರು ಆಧರಿಸಿ ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು ಆರೋಪಿಗಳಿಗಾಗಿ ಶೋಧ ಕೈಗೊಂಡಿದ್ದಾರೆ.

ವೈರಲ್ ಆದ ಹೈಕೋರ್ಟ್ ಜಡ್ಜ್ ವಿಡಿಯೋ

ಸಂಜೆ ಆದ್ರೆ ಶೆಡ್ಡಿಗ್ ಬಾ ಅಂತಾರೆ

ಬೆಂಗಳೂರು: 'ಶೆಡ್ಡಿ ಗ್ ಬಾ' ನಟ ದರ್ಶನ್ ಕೊಲೆ ಪ್ರಕರಣದ ಸುದ್ದಿ ಪ್ರಸಾರದ ವೇಳೆ ಪತ್ರಕರ್ತ ಜಯಪ್ರಕಾಶ್ ಶೆಟ್ಟಿ ಹೇಳಿದ್ದ ಇದೊಂದು ಪದ ಬಳಿಕ ರಾಷ್ಟ್ರಮಟ್ಟದಲ್ಲಿ ವೈರಲ್ ಆಗಿತ್ತು. ಕನ್ನಡಿಗರು ಮಾತ್ರವಲ್ಲದೆ ಬೇರೆ ಭಾಷೆಯವರು ಕೂಡ ಇದನ್ನು ರೀಲ್ಸ್ ಮಾಡಿದ್ದರು. ಎಲ್ಲೆಡೆ ಭಾರಿ ಜನಪ್ರಿಯವಾಗಿರುವ 'ಶೆಡ್ಡಿ ಗ್ ಬಾ' ಪದವನ್ನು ಇದೀಗ ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರು ಕೂಡ ವಿಚಾರಣೆ ಸಂದರ್ಭದಲ್ಲಿ ಬಳಿಸಿದ್ದು ಭಾರಿ ವೈರಲ್ ಆಗಿದೆ.

ತಮ್ಮ ವಿಚಾರಣೆಯ ಶೈಲಿಯಿಂದಲೇ ಸಾಕಷ್ಟು ಗಮನ ಸೆಳೆದಿರುವ ಹೈಕೋರ್ಟ್ ನ್ಯಾಯಾಧೀಶ ವಿ. ಶ್ರೀಶಾನಂದ ಅವರು, ಮೀಟರ್ ಬಡ್ಡಿದಂಧೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಶೆಡ್ಡಿ ಗ್ ಬಾ ಎಂದರು. ಅವರು ಮಾತನಾಡಿರುವ ವಿಡಿಯೋ ಸದ್ಯ ವೈರಲ್ ಆಗುತ್ತಿದ್ದು, ಹಲವು ಸಮಸ್ಯೆಗಳ ಬಗ್ಗೆ ಅವರಿಗೆ ಗೊತ್ತಿರುವ ಮಾಹಿತಿ ನೋಡಿ ಜನ ಅಚ್ಚರಿಪಟ್ಟಿದ್ದಾರೆ.

ನ್ಯಾಯಾಧೀಶರು ಹೇಳಿದ್ದೇನು?

ಸಿಟಿ ಮಾರ್ಕೆಟ್ ಪ್ರದೇಶದಲ್ಲಿ ನಡೆಯುವ ಮೀಟರ್ ಬಡ್ಡಿದಂಧೆಯ ಬಗ್ಗೆ ನ್ಯಾಯಾಧೀಶ ವಿ. ಶ್ರೀಶಾನಂದ ವಿವರಣೆ ನೀಡಿದರು. ಬೆಳಿಗ್ಗೆ ವೇಳೆ ಸಿಟಿ ಮಾರ್ಕೆಟ್‌ನಲ್ಲಿ ವ್ಯಾಪಾರ ಮಾಡುವವರಿಗೆ, ಬೀದಿಬದಿ ವ್ಯಾಪಾರಿಗಳಿಗೆ, ಬೆಳಗ್ಗೆ 1000 ರು. ಕೊಡುತ್ತಾರೆ. ವ್ಯಾಪಾರ ಮುಗಿದ ಬಳಿಕ ಸಂಜೆ 1200 ರು. ವಾಪಸ್ ಕೊಡಬೇಕು. ಆಟೋಡ್ರೈವರ್‌ಗಳು ಕೂಡ ಬೆಳಿಗ್ಗೆ ಬಂದು ಆಟೋ ಬಾಡಿಗೆಗೆ ತೆಗೆದುಕೊಂಡು ಹೋಗಬೇಕು. ಸಂಜೆಗೆ 250 ರುಪಾಯಿ ಕೊಡಬೇಕು. ಎಷ್ಟು ಬೇಕಾದರು ಆಟೋ ಓಡಿಸಿ ಸಂಪಾದನೆ ಮಾಡಬಹುದು. ಟ್ರಾಫಿಕ್ ಫೈನ್ ಕಟ್ಟು, ಪೊಲೀಸರ ಜತೆ ಹೊಡೆದಾಡಿಕೊ. ಅದಕ್ಕೂ ನನಗೂ ಸಂಬಂಧವಿಲ್ಲ, 250 ರು. ಕೊಡದೇ ಇದ್ದರೆ ಶೆಡ್ಡಿ ಗ್ ಬಾ ಎಂದು ಕರೆಯುತ್ತಾರೆ ಎಂದು ಹೇಳಿದ್ದಾರೆ.

ಎಂಜಿನಿಯರ್ ವಿರುದ್ಧದ ತನಿಖೆ: ತಡೆಗೆ ಹೈ ನಕಾರ

ಬೆಂಗಳೂರು: ಕಿರುಕುಳ ನೀಡುತ್ತಿರುವ ಪೊಲೀಸರಿಂದ ನನ್ನನ್ನು ಕಾಪಾಡಿ ಎಂದು ನ್ಯಾಯಪೀಠದ ಮುಂದೆ ಕಣ್ಣೀರಿಟ್ಟಿದ್ದ ಕೆಪಿಟಿಸಿಎಲ್ ಸೊರಬ ಕಾರ್ಯಕಾರಿ ಸಹಾಯಕ ಎಂಜಿನಿಯರ್ ಎಂ.ಜಿ.ಶಾಂತಕುಮಾರಸ್ವಾಮಿ ವಿರುದ್ಧ ಮಾದಕದ್ರವ್ಯ ಮತ್ತು

ಅಮಲು ಪದಾರ್ಥಗಳ ಕಾಯ್ದೆ ಆರೋಪಗಳಡಿ ದಾಖಲಾಗಿರುವ ಪ್ರಕರಣದ ವಿಚಾರಣೆಗೆ ತಡೆ ನೀಡಲು ಹೈಕೋರ್ಟ್ ಬುಧವಾರ ನಿರಾಕರಿಸಿತು.

ಮಾದಕದ್ರವ್ಯ ಮತ್ತು ಅಮಲು ಪದಾರ್ಥಗಳ ಕಾಯ್ದೆಯಡಿ ತನ್ನ ವಿರುದ್ಧ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿ ಶಾಂತಕುಮಾರಸ್ವಾಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ನಡೆಸಿತು. ವಿಚಾರಣೆಯ ವೇಳೆ ಸರಕಾರದ ಪರ ವಕೀಲರು ಹಾಜರಾಗಿ, ಹೈಕೋರ್ಟ್ ಹಿಂದಿನ ಸೂಚನೆಯಂತೆ ಅರ್ಜಿದಾರರಿಗೆ ಸಾಗರ ಪೊಲೀಸರು ಕಿರುಕುಳ ನೀಡಿರುವ ಬಗ್ಗೆ ಮಾಹಿತಿ ಕೇಳಲಾಗಿದೆ. ಆ ಕುರಿತ ವರದಿ ಬರಬೇಕಿದೆ. ಅದನ್ನು ಸಲ್ಲಿಸಲು ಕಾಲಾವಕಾಶ ನೀಡಬೇಕೆಂದು ಕೋರಿದರು. ಇದಕ್ಕೆ ಅರ್ಜಿದಾರರ ಪರ ವಕೀಲರು, ಅರ್ಜಿದಾರರ ವಿರುದ್ಧದ ಎಫ್‌ಐಆರ್‌ಗಳಿಗೆ ಸಂಬಂಧಿಸಿದ ತನಿಖೆಗೆ ತಡೆಯಾಜ್ಞೆ ನೀಡಬೇಕು ಎಂದು ಕೋರಿದರು. ಅದಕ್ಕೆ ನಿರಾಕರಿಸಿದ ನ್ಯಾಯಪೀಠ, ತನಿಖೆಗೆ ತಡೆಯಾಜ್ಞೆ ನೀಡಲಾಗದು. ತನಿಖೆ ಮುಂದುವರಿಯಲಿ. ಅರ್ಜಿದಾರರ ವಿರುದ್ಧ ಪೊಲೀಸರು ಬಲವಂತದ ಕ್ರಮ ಜರುಗಿಸಬಾರದು. ಅರ್ಜಿದಾರರೂ ಸಹ ಪೊಲೀಸರ ತನಿಖೆಗೆ ಸಹಕರಿಸಬೇಕು. ಒಂದೊಮ್ಮೆ ಪೊಲೀಸರಿಂದ ಸಮಸ್ಯೆ ಉಂಟಾದರೆ, ಆಗ ಅರ್ಜಿದಾರರು ನ್ಯಾಯಾಲಯಕ್ಕೆ ಬರಬಹುದು ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ವಿಲ್ಸನ್ ಗಾರ್ಡನ್ ನಾಗ, ವೇಲು ಕಸ್ಟಡಿಗೆ

ಬೆಂಗಳೂರು: ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್‌ಗೆ ರಾಜಾತಿಥ್ಯ ಪ್ರಕರಣ ಸಂಬಂಧ ವಿಲ್ಸನ್ ಗಾರ್ಡನ್ ನಾಗ ಮತ್ತು ವೇಲುಗೆ 3 ದಿನ ಪೊಲೀಸ್ ಕಸ್ಟಡಿ ನೀಡಿ ಬೆಂಗಳೂರಿನ 9ನೇ ಅಪರ ಮುಖ್ಯ ನ್ಯಾಯಾಧೀಶರ ಆದೇಶ ಹೊರಡಿಸಿದೆ. ಸೆ.21ರ ಸಂಜೆ 4.30ರ ವರೆಗೆ ಪೊಲೀಸ್ ವಶಕ್ಕೆ ನೀಡಲಾಗಿದ್ದು, ಅಷ್ಟರೊಳಗೆ ಕೋರ್ಟ್‌ಗೆ ಹಾಜರುಪಡಿಸಲು ಸೂಚಿಸಲಾಗಿದೆ.

ನಾಗ ಮತ್ತು ವೇಲು ಇಬ್ಬರನ್ನೂ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದ ಪೊಲೀಸರು, ಜೈಲಿನ ಒಳಗೆ ವಿಚಾರಣೆಗೆ ಸಹಕಾರ ನೀಡುತ್ತಿಲ್ಲ. ಮೊಬೈಲ್‌ಗಳು ಪತ್ತೆಯಾಗಿದೆ. ಇನ್ನೂ ಕೆಲ ಮೊಬೈಲ್ ಪತ್ತೆ ಮಾಡಬೇಕಿದೆ. ಹೀಗಾಗಿ ಪೊಲೀಸ್ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದ್ದರು. ಜೈಲಿನ ಒಳಗೆ ನಡೆದಿರುವ ವಿಚಾರ ಹಾಗಾಗಿ ಜೈಲಿನ ಒಳಗೆ ವಿಚಾರಣೆ ನಡೆಯಲಿ. ಇವರನ್ನು ಹೊರಗೆ ಕರೆತಂದು ವಿಚಾರಣೆ ನಡೆಸುವ ಅವಶ್ಯಕತೆ ಇಲ್ಲ ಎಂದು ನಾಗನ ಪರ ವಕೀಲರು ಮನವಿ ಮಾಡಿದ್ದರು.

ಈಗಾಗಲೇ ಬೆಳಗಾವಿ ಜೈಲಿಗೆ ವರ್ಗಾಯಿಸಲಾಗಿದೆ ಎಂದು ಕೋರ್ಟ್‌ಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ಸೆಷನ್ಸ್ ಕೋರ್ಟ್ ಆದೇಶ ಪ್ರತಿಯನ್ನು ನ್ಯಾಯಾಧೀಶರು ಕೇಳಿದ್ದಾರೆ. ಬಳಿಕ ಕೆಲಕಾಲ ವಿಚಾರಣೆಯನ್ನು 9ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶರು ಮುಂದೂಡಿದರು.

ರಾಮಯ್ಯ ಆಸ್ಪತ್ರೆಯಲ್ಲಿ ಅಗ್ನಿ ಅವಘಡ!

ಬೆಂಗಳೂರು: ಬೆಂಗಳೂರಿನ ಮತ್ತಿಕೆರೆಯಲ್ಲಿರುವ ಎಂಎಸ್ ರಾಮಯ್ಯ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಗುರುವಾರ ಲಘು ಅಗ್ನಿ ಅವಘಡ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆಸ್ಪತ್ರೆಯ ಮೊದಲ ಮಹಡಿಯಲ್ಲಿರುವ ಕಾರ್ಡಿಯಾಕ್ ಕೇರ್ ಯೂನಿಟ್‌ನಲ್ಲಿ ಸಣ್ಣ ಪ್ರಮಾಣದ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಐಸಿಯುವಿ ನಲ್ಲಿ ದಾಖಲಾಗಿದ್ದ ನಾಲ್ವರು ರೋಗಿಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಯಿತು. ಅಗ್ನಿಶಾಮಕ ವಾಹನಗಳು ಧಾವಿಸಿದ್ದು, ಬೆಂಕಿ ನಂದಿಸಲಾಗಿದೆ.

ನಕಲಿ ನೋಟು: ಶಿಕ್ಷೆ ಎತ್ತಿಹಿಡಿದ ಕೋರ್ಟ್

ಬೆಂಗಳೂರು: 14 ವರ್ಷಗಳ ಹಿಂದೆ 500 ರೂಪಾಯಿ ಮುಖಬೆಲೆಯ ನಕಲಿ ನೋಟುಗಳ ಚಲಾವಣೆಗೆ ಯತ್ನಿಸಿದ ಪ್ರಕರಣದಲ್ಲಿ ವ್ಯಕ್ತಿಯೊಬ್ಬನಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ 5 ವರ್ಷ ಕಾರಾಗೃಹ ಶಿಕ್ಷೆಯನ್ನು ಹೈಕೋರ್ಟ್ ಎತ್ತಿಹಿಡಿದಿದೆ. ಶಿಕ್ಷೆಗೊಳಗಾಗಿದ್ದ ಟಿ.ಎನ್.ಕುಮಾರ ಎಂಬಾತ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ಪೀಠ, ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 2013ರ ಜ.3 ರಂದು ಅಪರಾಧಿಗೆ ವಿಧಿಸಿದ್ದ ಶಿಕ್ಷೆಯನ್ನು ಎತ್ತಿಹಿಡಿದಿದೆ. ಅಪರಾಧಿ ತಕ್ಷಣ ವಿಚಾರಣಾ ನ್ಯಾಯಾಲಯಕ್ಕೆ ಶರಣಾಗಬೇಕು. ನ್ಯಾಯಾಲಯ ಆತನನ್ನು ವಶಕ್ಕೆ ಪಡೆದು ಕಾನೂನಿನ ಪ್ರಕಾರ ಸೆರೆಮನೆ ವಾಸಕ್ಕೆ ಕಳುಹಿಸಬೇಕು ಎಂದು ಆದೇಶಿಸಿದೆ.

ಹೈಕೋರ್ಟ್ ಸುದ್ದಿಗಳು

ವಿಚಾರಣಾ ಕೋರ್ಟ್‌ನ ತೀರ್ಮಾನ ಸೂಕ್ತ: ಆರೋಪಿಯ ಬಳಿ ಇದ್ದ ನೋಟುಗಳು ನಕಲಿ ಎಂದು ಸಾಬೀತಾಗಿದೆಯಾದರೂ, ಆ ನೋಟುಗಳು ಹೇಗೆ ಬಂದವು ಎಂಬುದಕ್ಕೆ ಆತ ಯಾವುದೇ ವಿವರಣೆ ನೀಡಿಲ್ಲ. ದಾಳಿಯ ಸಂದರ್ಭದಲ್ಲಿ ಪೊಲೀಸರನ್ನು ಕಂಡ ತಕ್ಷಣ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಇದು ತನ್ನ ಬಳಿ ಇರುವುದು ನಕಲಿ ನೋಟುಗಳೆಂಬ ಅರಿವು ಆತನಿಗಿತ್ತು ಎನ್ನುವುದನ್ನು ತೋರಿಸುತ್ತದೆ. ವಶಪಡಿಸಿಕೊಂಡಿರುವ ಎಲ್ಲ ನೋಟುಗಳು ಒಂದೇ ಸರಣಿ ಸಂಖ್ಯೆ ಹೊಂದಿವೆ. ಒಂದು ಅಸಲಿನೋಟಿನ ಹಲವು ಬಣ್ಣದ ಫೋಟೋಕಾಪಿ ತೆಗೆದಿರುವುದು ಬರಿಗಣ್ಣಿಗೆ ಗೋಚರಿಸುತ್ತದೆ. ಇದರಿಂದ, ಆತನ ವಿರುದ್ಧದ ಅಪರಾಧಿಕ ಉದ್ದೇಶ ಸಾಬೀತಾಗಿದ್ದು, ವಿಚಾರಣಾ ನ್ಯಾಯಾಲಯ ಕೈಗೊಂಡಿರುವ ತೀರ್ಮಾನ ಸೂಕ್ತ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣದ ಹಿನ್ನೆಲೆ: ಪ್ರಾಸಿಕ್ಯೂಷನ್ ಪ್ರಕಾರ, 2010ರ ಮಾರ್ಚ್ 3ರಂದು ಮೈಸೂರಿನ ಎಂಜಿನಿಯರಿಂಗ್ ಸಂಸ್ಥೆಯ ಬಳಿ ಟಿ.ಎನ್.ಕುಮಾರನನ್ನು ಲಕ್ಷ್ಮೀಪುರ ಠಾಣೆ ಪೊಲೀಸರು ಬಂಧಿಸಿದ್ದರು. ಒಂದೇ ಸರಣಿ ಸಂಖ್ಯೆ ಹೊಂದಿದ್ದ 500 ರು. ಮುಖಬೆಲೆಯ 30 ನಕಲಿ ನೋಟು ಗಳೊಂದಿಗೆ ಈತ ಸಿಕ್ಕಿಬಿದ್ದಿದ್ದ. ಅದು ನಕಲಿ ನೋಟುಗಳೆಂಬ ಅರಿವಿದ್ದೂ, ಅವುಗಳನ್ನು ಅಸಲಿ ನೋಟುಗಳ ಸೋಗಿನಲ್ಲಿ ಚಲಾವಣೆ ಮಾಡಲು ಮುಂದಾಗಿದ್ದ. ಆರೋಪಿಯ ವಿರುದ್ಧ ಐಪಿಸಿ ಸೆಕ್ಷನ್ 489 ಸಿ (ಖೋಟಾ ಅಥವಾ ನಕಲಿ ನೋಟುಗಳನ್ನು ಹೊಂದುವುದು) ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದ ಪೊಲೀಸರು, ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಲಯ 5 ವರ್ಷ ಕಾರಾಗೃಹ ಶಿಕ್ಷೆ ಹಾಗೂ 3 ಸಾವಿರ ರು.. ದಂಡ ವಿಧಿಸಿ ಆದೇಶಿಸಿತ್ತು. ಈ ಆದೇಶ ರದ್ದು ಕೋರಿ ಹೈಕೋರ್ಟ್‌ಗೆ ಕುಮಾರ್ ಮೇಲ್ಮನವಿ ಸಲ್ಲಿಸಿದ್ದನು.

ಬ್ಯಾಂಕ್ ಆಫ್ ಇಂಡಿಯಾ Bank of India BOI Relationship beyond banking
ಅಹಮದಾಬಾದ್ ವಸೂಲಾತಿ ಶಾಖೆ
5ನೇ ಮಹಡಿ, ಬ್ಯಾಂಕ್ ಆಫ್ ಇಂಡಿಯ ಕಟ್ಟಡ, ಭದ್ರ ಅಹಮದಾಬಾದ್,
ಇ-ಮೇಲ್ : ahmdarb.ahmedabad@bankofindia.co.in

ಅಪೆಂಡಿಕ್ಸ್ -IV ಸ್ವಾಧೀನತೆಯ ಪ್ರಕಟಣೆ (ನಿಯಮ-8(1)
(ಸ್ಥಿರಾಸ್ತಿಗಳಿಗೆ)

ಕೆಳಸಹಿದಾರರು ಬ್ಯಾಂಕ್ ಆಫ್ ಇಂಡಿಯ ಇದರ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ ನಿಯಮ 13(12) ರ ನಿಯಮ 39ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ದಿನಾಂಕ 02.06.2023 ರಂದು ತಗಾದೆ ಸೂಚನೆಯನ್ನು ನೀಡಿದ್ದು, ಅದನ್ನು 14.08.2023 ರಂದು ಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದು, (ಸಾಲಗಾರ/ಅಡಮಾನದಾರ/ಜಾಮೀನುದಾರ/ಸಹ-ಸಾಲಗಾರ) ಮೆ॥ ನೀಲ್ ಕಂಠ್ ಇಂಜಿನಿಯರಿಂಗ್ ಶ್ರೀ ತೀಲರಾಮ್ ಭೋಲಾರಾಂ ರಾಥೋರ್ (ಪಾಲುದಾರ),ಶ್ರೀ ಬುಧಾರಾಮ್ ತುಲ್ಸಾರಾಮ್ (ಪಾಲುದಾರ), ಶ್ರೀ ಚಂದ್ರಾರಾಮ್ ಕೈರಾರಾಮ್ಜಿ (ಪಾಲುದಾರ), ಶ್ರೀ ಜಿಗ್ನೇಶ್‌ಕುಮಾರ್ ಚಿಮನ್‌ಭಾಯ್ ಪಟೇಲ್ (ಪಾಲುದಾರ)ನೋಟೀಸ್‌ನಲ್ಲಿ ನೀಡಿರುವಂತೆ ಬಾಕಿ ಮೊತ್ತ 02.06.2023ರವರೆಗೆ ರೂ.83,64,659.15 (ಎಂಭತ್ತೂರು ಲಕ್ಷ ಅರುವತ್ತಾಲ್ಕು ಸಾವಿರದ ಆರುನೂರ ಐವತ್ತೊಂಬತ್ತು ರೂಪಾಯಿ ಮತ್ತು ಪೈಸೆ ಹದಿನೈದು ಮಾತ್ರ) ವನ್ನು ನೀಡಿದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚಿಸಲಾಗಿತ್ತು.
ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13 ರ ಸಬ್‌ಸೆಕ್ಷನ್(4)ರ ನಿಯಮ 8ರ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳು, 2002ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 15ನೇ ಸೆಪ್ಟಂಬರ್ 2024 ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.
ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಬ್ಯಾಂಕ್ ಆಫ್ ಇಂಡಿಯ ಗೆ ಬರಬೇಕಾದ ಬಾಕಿ ಹಣ 02.06.2023ರವರೆಗೆ ರೂ.83,64,659.15 (ಎಂಭತ್ತೂರು ಲಕ್ಷ ಅರುವತ್ತನಾಲ್ಕು ಸಾವಿರದ ಆರುನೂರ ಐವತ್ತೊಂಬತ್ತು ರೂಪಾಯಿ ಮತ್ತು ಪೈಸೆ ಹದಿನೈದು ಮಾತ್ರ) ಹಾಗೂ ಹಣಸಂಪೂರ್ಣ ಮರುಪಾವತಿಯಾಗುವ ದಿನಾಂಕದವರೆಗೆ ಈಗಿರುವ/ಮುಂಬರುವ ಮೂಲವೆಚ್ಚ, ಖರ್ಚುಗಳು, ದರ ಇತ್ಯಾದಿಗಳನ್ನು ಪಾವತಿಸಬೇಕಾಗುವುದು.
ಸೆಕ್ಷನ್ 13ರ ಸಬ್‌ಸೆಕ್ಷನ್ (8) ರ ಸರ್ಫೇಸಿ ಕಾಯಿದೆ ಹಾಗೂ ನಿಯಮಗಳನುಸಾರ ಭದ್ರತಾ ಆಸ್ತಿಗಳನ್ನು ನೀವು ಮರುಪಡೆಯಲು ಅವಕಾಶವಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ.

ಸ್ಥಿರ ಆಸ್ತಿಯ ವಿವರ
ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಖಾಸಗಿ ಸ್ಥಿರಾಸ್ತಿಯ ಪ್ಲಾಟ್ ನಂ. 72/ಎ, ಪ್ರಿನ್ಸ್ ಕೈಗಾರಿಕಾ ಹಬ್, ವಾಟರ್ ಟ್ಯಾಂಕ್ ಅಹಮದಾಬಾದ್ ಇಂದೋರ್ ಎಕ್ಸ್‌ಪ್ರೆಸ್ ಹೆದ್ದಾರಿ, ಗ್ರಾಮ ಕುಹಾ ತಾಲೂಕು ದಸ್‌ಕ್ರೋಯಿ, ಜಿಲ್ಲೆ ಅಹಮದಾಬಾದ್-382433, ಪ್ಲಾಟ್ ವಿಸ್ತೀರ್ಣ ಸುಮಾರು 1742 ಚದರ ಮೀಟರ್ ಅಂದರೆ 2083.43 ಚದರ ಯಾರ್ಡ್‌ಗಳು (1098 ಚ.ಮೀಟರ್ ಪ್ಲಾಟ್ ಮತ್ತು 644 ಚ.ಮೀಟರ್ ಸಾಮಾನ್ಯ ಪ್ಲಾಟ್ ಮತ್ತು ಭಾಗ ಮಾಡಲಾಗದ ಪಾಲು ಭೂಮಿ ಮತ್ತು ರಸ್ತೆ) (1) ಸರ್ವೆ /ಬ್ಲಾಕ್ ನಂ. 1083 (ಹಳೆ ಸರ್ವೆ /ಬ್ಲಾಕ್ ನಂ. 1271), ಒಟ್ಟು ಭೂಮಿಯ ವಿಸ್ತೀರ್ಣ ಸುಮಾರು 10154ಮೀಟರ್ ಅಂದರೆ 1213.94 ಚದರ ಯಾರ್ಡ್‌ಗಳು (2) ಸರ್ವೆ/ಬ್ಲಾಕ್ ನಂ. 1085 (ಹಳೆ ಸರ್ವೆ/ಬ್ಲಾಕ್ ನಂ. 1272/ಎ/11, ಒಟ್ಟು ಭೂಮಿಯ ವಿಸ್ತೀರ್ಣ ಸುಮಾರು 12288 ಚದರ ಮೀಟರ್ ಅಂದರೆ 14696.45 ಚ.ಯಾರ್ಡ್‌ಗಳು, (3) ಸರ್ವೆ/ಬ್ಲಾಕ್ ನಂ.1086 (ಹಳೆ ಸರ್ವೆ/ಬ್ಲಾಕ್ ನಂ. 1272/ಎ/2), ಭೂಮಿಯ ಒಟ್ಟು ವಿಸ್ತೀರ್ಣ 5056ಚ.ಮೀಟರ್ ಎಲ್. ಸಿ 6046.98 ಚ.ಯಾರ್ಡ್ (4) ಸರ್ವೆ/ಬ್ಲಾಕ್ ನಂ. 2311 (ಹಳೆ ಸರ್ವೆ/ಬ್ಲಾಕ್ ನಂ. 1269/ಎ), ಭೂಮಿಯ ಒಟ್ಟು ವಿಸ್ತೀರ್ಣ 7635 ಚದರ ಮಿಟರ್ ಅಂದರೆ 9135.05 ಚದರ ಯಾರ್ಡ್‌ಗಳು (5) ಸರ್ವೆ/ಬ್ಲಾಕ್ ನಂ. 1064 (ಹಳೆ ಸರ್ವೆ/ಬ್ಲಾಕ್ ನಂ. 1270) ಭೂಮಿಯ ಒಟ್ಟು ವಿಸ್ತೀರ್ಣ ಸುಮಾರು 16028 ಚದರ ಮೀಟರ್ ಅಂದರೆ 19169.49 ಚದರ ಯಾರ್ಡ್. ಭೂಮಿಯ ಒಟ್ಟು ವಿಸ್ತೀರ್ಣ ಸುಮಾರು 42025ಚದರ ಮೀಟರ್‌ಗಳು. ಚಕ್ಕುಬಂದಿ: ಉತ್ತರಕ್ಕೆ: ಪ್ಲಾಟ್ ನಂ. 71, ದಕ್ಷಿಣಕ್ಕೆ: 9 ಮೀಟರ್ ರಸ್ತೆ, ಪೂರ್ವಕ್ಕೆ: ತೆರೆದ ಭೂಮಿ, ಪಶ್ಚಿಮಕ್ಕೆ: 18 ಮೀಟರ್ ರಸ್ತೆ.
ಸಹಿ/-
ದಿನಾಂಕ: 15.09.2024, ಸ್ಥಳ: ಅಹಮದಾಬಾದ್ — ಅಧಿಕೃತ ಅಧಿಕಾರಿ ಬ್ಯಾಂಕ್ ಆಫ್ ಇಂಡಿಯ

ನಮೂನೆ-ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 14 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯಾ ಅಡಿಯಲ್ಲಿ (ಸ್ವಯಂ ದಿವಾಳಿತನ ಪ್ರಕ್ರಿಯೆ) ನಿಯಮಗಳು, 2017)
ಇಂಟರ್‌ನ್ಯಾಷನಲ್ ಟರ್ನ್‌ಕೀ ಸಿಸ್ಟಮ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಇದರ ಸ್ಟೇಕ್‌ಹೋಲ್ಡರ್‌ಗಳ ಗಮನಕ್ಕೆ

	ಸೂಕ್ತ ವಿವರಗಳು	
1	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಇಂಟರ್‌ನ್ಯಾಷನಲ್ ಟರ್ನ್‌ಕೀ ಸಿಸ್ಟಮ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್
2	ಕಾರ್ಪೊರೇಟ್ ವ್ಯಕ್ತಿಯ ಪ್ರಾರಂಭದ ದಿನ	16.12.2020
3	ಯಾವ ಅಥಾರಿಟಿಯ ಕೆಳಗೆ ಕಾರ್ಪೊರೇಟ್ ವ್ಯಕ್ತಿಯ ಆರಂಭ / ನೊಂದಣೆ ಆಗಿರುವುದು	ರಿಜಿಸ್ಟ್ರಾರ್ ಆಫ್ ಕಂಪನೀಸ್, ಬೆಂಗಳೂರು
4	ಕಾರ್ಪೊರೇಟ್ ವ್ಯಕ್ತಿಯ ಗುರುತು ಸಂಖ್ಯೆ/ ಸೀಮಿತ ಬಾಧ್ಯತಾ ಗುರುತು ಸಂಖ್ಯೆ	U72900KA2020FTC142262
5	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಛೇರಿ ಮತ್ತು ಮುಖ್ಯ ಕಛೇರಿ (ಯಾವುದಾದರೂ ಇದ್ದಲ್ಲಿ) ಅದರ ವಿಳಾಸ	ನೋಂ.ಕಚೇರಿ: ಹೊಸ ಸೈಟ್ ನಂ. 3237, ವಿಶ್ವಭಾರತಿ, ಹೆಚ್‌ಬಿಸಿಎಸ್ ಲೇಔಟ್, 4ನೇ ಹಂತ, ಗಿರಿನಗರ, ಗಿರಿನಗರ (ಬೆಂಗಳೂರು), ಬೆಂಗಳೂರು ದಕ್ಷಿಣ, ಕರ್ನಾಟಕ, ಭಾರತ - 560085.
6	ಕಾರ್ಪೊರೇಟ್ ಸಾಲಗಾರನ ಲಿಕ್ವಿಡೇಶನ್ ಪ್ರಕ್ರಿಯೆ ಆರಂಭದ ದಿನಾಂಕ	16ನೇ ಸೆಪ್ಟಂಬರ್ 2024
7	ಲಿಕ್ವಿಡೇಟರ್‌ರವರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಐಡಿ ಹಾಗೂ ನೋಂದಣಿ ಸಂಖ್ಯೆ	ಹೆಸರು: ಅನಘ ಅನಸಿಂಗರಾಜು ವಿಳಾಸ : 1-2, ಐಶ್ವರ್ಯ ಸಂಕುಲ್, 17 ಜಿ.ಎ. ಕುಲಕರ್ಣಿ ಪಾತ್, ಜೋಶೀಸ್ ರೈಲ್ವೆ ಮ್ಯೂಸಿಯಂ ಎದುರು, ಕೊತ್ರೂಡ್, ಪುಣೆ-411038. ಇ-ಮೇಲ್ ಐಡಿ: rp.anagha@kanjcs.com ದೂರವಾಣಿ ಸಂ.: 020-25466265/25461561 ಐಪಿ ನೋಂದಣಿ ಸಂ.: IBBI/IPA-002/IP-N00247/2017-18/10732
8	ಕ್ಲೈಮುಗಳನ್ನು ಸಲ್ಲಿಸಲು ಕೊನೆಯ ದಿನಾಂಕ	16ನೇ ಅಕ್ಟೋಬರ್ 2024

ಇಂಟರ್‌ನ್ಯಾಷನಲ್ ಟರ್ನ್‌ಕೀ ಸಿಸ್ಟಮ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್ 16ನೇ ಸೆಪ್ಟಂಬರ್ 2024 ರಂದು ತನ್ನ ಸ್ವಯಂ ದಿವಾಳಿತನ ಪ್ರಕ್ರಿಯೆಯನ್ನು ಆರಂಭಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಇಂಟರ್‌ನ್ಯಾಷನಲ್ ಟರ್ನ್‌ಕೀ ಸಿಸ್ಟಮ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್ ನ ಎಲ್ಲ ಸ್ಟೇಕ್‌ಹೋಲ್ಡರ್‌ಗಳಿಗೆ 16ನೇ ಅಕ್ಟೋಬರ್ 2024 ರಂದು ಅಥವಾ ಅದಕ್ಕೂ ಮೊದಲು ತಮ್ಮ ಹಕ್ಕುಗಳನ್ನು ಪುರಾವೆಗಳೊಂದಿಗೆ ವಸ್ತು ಸಂಖ್ಯೆ 7ರಲ್ಲಿ ನೀಡಿರುವ ವಿಳಾಸಕ್ಕೆ ಸಲ್ಲಿಸಲು ಕರೆ ನೀಡಲಾಗಿದೆ. ಹಣಕಾಸು ಸಾಲದಾತರು ತಮ್ಮ ಹಕ್ಕುಗಳನ್ನು ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಉಳಿದ ಎಲ್ಲಾ ಸ್ಟೇಕ್ ಹೋಲ್ಡರ್‌ಗಳು ಪುರಾವೆಗಳೊಂದಿಗೆ ಖುದ್ದಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮ ಮೂಲಕ ತಮ್ಮ ಕ್ಲೈಮುಗಳನ್ನು ಸಲ್ಲಿಸಬೇಕು.
ಹಕ್ಕಿನ ಸುಳ್ಳು ಅಥವಾ ದಾರಿ ತಪ್ಪಿಸುವ ಪುರಾವೆಗಳನ್ನು ಸಲ್ಲಿಸಿದಲ್ಲಿ ದಂಡ ತೆರಬೇಕಾಗುವುದು
ದಿನಾಂಕ: 19ನೇ ಸೆಪ್ಟಂಬರ್ 2024 — ಅನಘ ಅನಸಿಂಗರಾಜು
ಸ್ಥಳ: ಪುಣೆ — ಲಿಕ್ವಿಡೇಟರ್

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)
ಈ ಕಾರಣದಿಂದ,
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟೀಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು 22.04.2024 ರಂದು ಕರೆದು ಸಾಲಗಾರ ಸೋಮಶೇಖರ ಎಂ ಪ್ರೊಪ್ರೈಟರ್ M/S ಶ್ರೀ ಚೌಡೇಶ್ವರಿ ಟೆಕ್ಸ್‌ಟೈಲ್ಸ್ ಮತ್ತು ನಾಗಲಕ್ಷ್ಮಿ ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ರೂ. 51,45,469.64 (ರೂಪಾಯಿ ಐವತ್ತೊಂದು ಲಕ್ಷ ನಲವತ್ತೈದು ಸಾವಿರದ ನಾಲ್ಕುನೂರಾ ಅರವತ್ತೊಂಬತ್ತು ಮತ್ತು ಅರವತ್ತನಾಲ್ಕು ಪೈಸೆ ಮಾತ್ರ) ಸಾಲ ಖಾತೆ ನಂ. HHLSKN00511543 ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ 16.04.2024 ರ ವರೆಗಿನ ಮೊತ್ತ ಮತ್ತು ಆದರ ಮೇಲಿನ ಬಡ್ಡಿ
ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ- ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ ಸಾಂಕೇತಿಕ ಸ್ವಾಧೀನ ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು 17.09.2024 ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.
ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಈಗಿನ ಹೆಸರು: ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) ಬಾಕಿ ಇರುವ ಮೊತ್ತ ರೂ. 51,45,469.64 (ರೂಪಾಯಿ ಐವತ್ತೊಂದು ಲಕ್ಷ ನಲವತ್ತೈದು ಸಾವಿರದ ನಾಲ್ಕುನೂರಾ ಅರವತ್ತೊಂಬತ್ತು ಮತ್ತು ಅರವತ್ತನಾಲ್ಕು ಪೈಸೆ ಮಾತ್ರ) 16.04.2024 ವರೆಗಿನ ಮೊತ್ತ ಮತ್ತು ಜೊತೆಗೆ ಆದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.
ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ
ಹೊಸ ಕಥಾ ನಂ.156 ಹೊಂದಿರುವ ಪ್ರಸ್ತುತ ಆಸ್ತಿಯ ಎಲ್ಲಾ ತುಂಡು ಮತ್ತು ಪಾರ್ಸೆಲ್. 356/4/96/156, ಮತ್ತು ಹಳೆಯ ಖಾತಾ ನಂ. 04, ಈಗ ವಾರ್ಡ್ ನಂ ಅಡಿಯಲ್ಲಿ ಬರುತ್ತದೆ. ಬಿಬಿಎಂಪಿ ಯ 5, ಬೆಂಗಳೂರು ಉತ್ತರ ತಾಲೂಕು, ಯಲಹಂಕ ಹೋಬಳಿ, ತಿರುಮೇನಹಳ್ಳಿ, ಗ್ರಾಮದಲ್ಲಿ ನೆಲೆಗೊಂಡಿದೆ, 6 ನೇ ಅಡ್ಡ ರಸ್ತೆ, ಪಿಐಡಿ ನಂ. 005- ಡಬ್ಲ್ಯೂ -2109-21, ಆಸ್ತಿ ಮೌಲ್ಯಮಾಪನ ಸಂಖ್ಯೆ.96, ಬೆಂಗಳೂರು ನಗರ, ಮತ್ತು ಈ ಕೆಳಗಿನಂತೆ ಬೌಂಡ್ ಮಾಡಲಾಗಿದೆ:
ಪೂರ್ವದಲ್ಲಿ ಇದರಿಂದ : ರಸ್ತೆ — ಪಶ್ಚಿಮದಲ್ಲಿ ಇದರಿಂದ : ಸೈಟ್ ನಂ. 153
ಉತ್ತರದಲ್ಲಿ ಇದರಿಂದ : ಸೈಟ್ ನಂ. 157 — ದಕ್ಷಿಣದಲ್ಲಿ ಇದರಿಂದ : ಸೈಟ್ ನಂ. 155
ಆಸ್ತಿಯ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 40-0 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 30-0 ಅಡಿ, ಸಂಪೂರ್ಣವಾಗಿ 1200 ಚದರ ಅಡಿಗಳಿದೆ.
ಅಧಿಕಾರವಿರುವ ಅಧಿಕಾರಿ
ದಿನಾಂಕ : 17.09.2024 — ಸಮ್ಮಾನ್ ಕ್ಯಾಪಿಟಲ್ ಲಿ.
ಸ್ಥಳ : ಬೆಂಗಳೂರು — (ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ಯಶಸ್ಸು ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನೋಂದಣಿ ಸಂಖ್ಯೆ: ಒಟಿಎಸ್-1/09/ಹೆಚ್.ಒ.ಟಿ / 53759/2022-23
ಆಡಳಿತ ಕಛೇರಿ: ನಂ.9, ಕ್ಷಿಪ್ರ 3ನೇ ಮಹಡಿ, ಬ್ಯೂಗಲ್ ರಾಕ್ ರಸ್ತೆ, ಬಸವನಗುಡಿ, ಬೆಂಗಳೂರು - 560 004. ದೂರವಾಣಿ ಸಂಖ್ಯೆ: 9740722699
2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ನೋಟಿಸ್
ಯಶಸ್ಸು ಕೋ-ಅಪರೇಟಿವ್ ಸೊಸೈಟಿ ಲಿಮಿಟೆಡ್ ಇದರ 2023-24ನೇ ಸಾಲಿನ ಮೊದಲನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ: 22-09-2024ನೇ ಭಾನುವಾರ ಬೆಳಿಗ್ಗೆ 11:00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಧೀರನ್ ಎನ್.ಪಿ, ರವರ ಅಧ್ಯಕ್ಷತೆಯಲ್ಲಿ "ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಕ್ಲಬ್ ಹೌಸ್ (ಕೆಎಸ್‌ಸಿಎ), ಪಿ2 ಸಿ ಹಾಲ್, ನಂ.1, ಎಂ ಚಿನ್ನಸ್ವಾಮಿ ಕ್ರೀಡಾಂಗಣ, ಕಬ್ಬನ್ ರೋಡ್, ಬೆಂಗಳೂರು - 560 001, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರುಗಳಿಗೆ ಸಾಮಾನ್ಯ ಸಭೆಯ ನೋಟೀಸನ್ನು ಕಳುಹಿಸಲಾಗಿದೆ. ಈ ಸಂಬಂಧ ಸರ್ವ ಸದಸ್ಯರ ಸಾಮಾನ್ಯ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ತಮ್ಮಲ್ಲಿ ಕೋರಲಾಗಿದೆ.
ಆಡಳಿತ ಮಂಡಳಿಯ ಆದೇಶದ ಮೇರೆಗೆ
ಸ್ಥಳ: ಬೆಂಗಳೂರು — ಸಹಿ/-
ದಿನಾಂಕ: 19.09.2024 — ಕಾರ್ಯದರ್ಶಿ

ವೈರಮುಡಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,
ನಂ.1/2, 1ನೇ ಮಹಡಿ, ಮಹೇಶ್ವರಮ್ಮ ದೇವಸ್ಥಾನದ ಎದುರು, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು-560068
ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ
ವೈರಮುಡಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ದಿನಾಂಕ: 22.09.2024 ಭಾನುವಾರದಂದು ಬೆಳಿಗ್ಗೆ 10.30 ಗಂಟೆಗೆ ಬೊಮ್ಮನಹಳ್ಳಿ ಶಾಖೆಯ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬೋರೇಗೌಡರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲು ಏರ್ಪಡಿಸಲಾಗಿದೆ.
ಸದಸ್ಯರೆಲ್ಲರಿಗೂ ಈಗಾಗಲೇ ಸಾಮಾನ್ಯ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಿ ಕೊಡಲಾಗಿದೆ. ಆಹ್ವಾನ ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬೇಕೆಂದು ಸದಸ್ಯರಲ್ಲಿ ವಿನಂತಿ.
ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಸ್ಥಳ: ಬೆಂಗಳೂರು — ಮುಖ್ಯ ಕಾರ್ಯನಿರ್ವಹಣಾಧಿಕಾರಿ
ದಿನಾಂಕ: 22.09.2024 — ವೈರಮುಡಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,

ಇ-ಹರಾಜು ಸೂಚನೆ
ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್
ನೋಂ. ಕಚೇರಿ : ನಂ. 180, 1ನೇ ಮಹಡಿ, 8ನೇ ಕ್ರಾಸ್, 14ನೇ ಮುಖ್ಯ ರಸ್ತೆ 6ನೇ ಸೆಕ್ಟರ್, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ, ಭಾರತ-560102.
ಲಿಕ್ವಿಡೇಟರ್: ಶ್ರೀ ಅಮರ್ ಪಾಲ್
ಸಂವಹನ ವಿಳಾಸ: 905, 9ನೇ ಮಹಡಿ, ಬಾರ್ಟನ್ ಸೆಂಟರ್, ಎಂಜಿ ರಸ್ತೆ, ಬೆಂಗಳೂರು, ಕರ್ನಾಟಕ -560001
ಇ-ಮೇಲ್ : cirp.shridiya@gmail.com, ಮೊಬೈಲ್ ಸಂ: 9717105008
ಐಬಿಬಿಐ ಯ ನಿಯಂತ್ರಣ, 2016ರ ನಿಯಂತ್ರಣ 32ಎ ಯ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ ಆಫ್ ಇಂಡಿಯ (ಲಿಕ್ವಿಡೇಶನ್ ಪಕ್ರಿಯೆ) ಅಡಿ
ಕಾರ್ಪರೇಟ್ ಸಾಲಗಾರನಾಗಿ ಹೋಗುವ ಕಾಳಜಿಯಿಂದ ಕಂಪನಿಯ ಸ್ವತ್ತುಗಳ ಮಾರಾಟ

ಹರಾಜಿನ ದಿನಾಂಕ ಮತ್ತು ಸಮಯ	12 ಅಕ್ಟೋಬರ್, 2024, ಮಧ್ಯಾಹ್ನ 3:00 ರಿಂದ (ಭಾ.ಕಾ.) ಸಂಜೆ 5:00 ಗಂಟೆ (ಭಾ.ಕಾ.) ಅನಿಯಮಿತ 5 ನಿಮಿಷಗಳ ವಿಸ್ತರಣೆಯೊಂದಿಗೆ)
ಇಎಂಡಿ ಸಲ್ಲಿಕೆಗೆ ಕೊನೆಯ ದಿನಾಂಕ	10 ಅಕ್ಟೋಬರ್, 2024, ಮಧ್ಯಾಹ್ನ 2:00 (ಭಾ.ಕಾ.) ರವರೆಗೆ
ಅಪೇಕ್ಷಿತ ಬಿಡ್ಡುದಾರರ ಅರ್ಹತಾ ದಾಖಲೆಗಳ ಸಲ್ಲಿಕೆಗೆ ಕೊನೆಯ ದಿನಾಂಕ	03 ಅಕ್ಟೋಬರ್, 2024, ಸಂಜೆ 6:00 (ಭಾ.ಕಾ.) ಗಂಟೆಗೆ

ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈ. ಲಿ., (ಲಿಕ್ವಿಡೇಶನ್‌ನಲ್ಲಿ) ಸಿಐಎನ್ ನಂ. ಯು70109ಕೆಎ2010ಪಿಟಿಸಿ055085, ಮಾಲೀಕತ್ವದಲ್ಲಿರುವ ಸ್ವತ್ತುಗಳನ್ನು ಲಿಕ್ವಿಡೇಶನ್ ಎಸ್ಟೇಟ್‌ನ ಭಾಗವಾಗಿ ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ಮಂಡಳಿ ಬೆಂಗಳೂರು ಪೀಠವು ತನ್ನ ಆದೇಶ ದಿನಾಂಕ 31.07.2024 (ಸ್ವೀಕೃತವಾದುದು 08.08.2024) ರಂತೆ ಸ್ವತ್ತುಗಳ ಮಾರಾಟ.

ಸ್ವತ್ತುಗಳು	ಮೀಸಲು ಬೆಲೆ	ಇಎಂಡಿ	ಹೆಚ್ಚಳ ಮೌಲ್ಯ
ಯೋಜನೆಯ ಹೆಸರು : ಶ್ರೀ ದಿಯಾ ಆರ್ನೇಟ್			
ಶ್ರೀ ದಿಯಾ ಆರ್ನೇಟ್ ಮೂರು ಭಾಗಗಳಾಗಿ ವಿಂಗಡಿತವಾಗಿದೆ. 1. ಸರ್ವೆ ನಂ. 445-ವಿಸ್ತೀರ್ಣ 1 ಎಕರೆ 05 ಗುಂಟೆಗಳು 2. ಸರ್ವೆ ನಂ. 448/1 - ವಿಸ್ತೀರ್ಣ 2 ಗುಂಟೆಗಳು 3. ಸರ್ವೆ ನಂ. 448/1 ವಿಸ್ತೀರ್ಣ 01 ಗುಂಟೆಗಳು ಯೋಜನೆಯ ಸ್ಥಳ : ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು, ಕರ್ನಾಟಕ.	26,67,39,200/-	26,673,920/-	1.00 (ಲಕ್ಷಗಳಲ್ಲಿ) ಅಥವಾ ಗುಣಾಕಾರದಲ್ಲಿ

ಇ-ಹರಾಜು ಸೂಚನೆಯ ನಿಯಮ ಮತ್ತು ನಿಬಂಧನೆಗಳು ಈ ಕೆಳಗಿನಂತಿವೆ.
1. ಇ-ಹರಾಜನ್ನು "ಎಲ್ಲಿ ಹೇಗಿದೆಯೋ "ಹಾಗಿನ ಆಧಾರದ ಮೇಲೆ" , "ಯಾವುದೇ ಅವಲಂಬನೆ ಇಲ್ಲದೆ" ಅನುಮೋದಿತ ಸೇವಾ ಪೂರೈಕೆದಾರ ಅಂದರೆ ರೈಟ್2ವೋಟ್ ಮೂಲಕ ಮಾರಾಟ ಮಾಡಲಾಗುವುದು.
2. ಈ ನೋಟೀಸನ್ನು ಮಾರಾಟ ಪ್ರಕಟಣೆ ಕನ್‌ಜಂಕ್ಷನ್‌ನೊಂದಿಗೆ ಸಂಪೂರ್ಣ ಇ-ಹರಾಜು ಪ್ರಕ್ರಿಯೆ ದಾಖಲೆಯೊಂದಿಗೆ ಓದಿಕೊಳ್ಳಬೇಕು ಸ್ವತ್ತುಗಳ ವಿವರ, ಆನ್‌ಲೈನ್ ಇ-ಹರಾಜು ಬಿಡ್ ನಮೂನೆ, ಇದರಲ್ಲಿ ಆನ್‌ಲೈನ್ ಇ-ಹರಾಜು ಬಿಡ್ ನಮೂನೆ, ಬಿಡ್ ಘೋಷಣೆ ಮತ್ತು ಒಳಗೊಳ್ಳುವಿಕೆ ಮತ್ತು ಇ-ಹರಾಜಿನ ಸಾಮಾನ್ಯ ನಿಯಮ ಮತ್ತು ನಿಬಂಧನೆಗಳು ಇವುಗಳ ವಿವರಗಳು ವೆಬ್‌ಸೈಟ್ https://www.shridiyacirp.n/ ನಲ್ಲಿ ಲಭ್ಯವಿದೆ. ಮತ್ತು ಸಂಪರ್ಕಿಸಿ: ಶ್ರೀ ಅಮರ್‌ಪಾಲ್ ಇ-ಮೇಲ್ ಐಡಿ : cirp.shridiya@gmail.com ಅಥವಾ 9717105008.
3. ಆಸಕ್ತ ಬಿಡ್ಡುದಾರರು ಸ್ವತ್ತಿನ ಟೈಟಲ್ ಬಗ್ಗೆ ಯಾವುದೇ ರೀತಿಯಿಂದ ತಮ್ಮ ಸ್ವಂತ ವೆಚ್ಚದಲ್ಲಿ ತಮಗೆ ತೃಪ್ತಿಕರವಾಗುವಂತೆ ಸ್ವತಃ ಪರಿಶೀಲನೆ ನಡೆಸಬಹುದು
4. ಆಸಕ್ತ ಬಿಡ್ಡುದಾರರು ಅರ್ನೆಸ್ಟ್ ಠೇವಣಿ ಹಣ (ಇಎಂಡಿ) ಯನ್ನು ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ "ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್" ಖಾತೆಯಲ್ಲಿ ಠೇವಣಿಯಾಗಿಡಬೇಕು. ಬ್ಯಾಂಕ್ ಹೆಸರು: ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್, ಖಾತಾ ಸಂ. 52105902663, ಐಎಫ್‌ಎಸ್‌ಸಿ ಕೋಡ್ : ಎಸ್‌ಸಿಬಿಎಲ್0036033.
5. ಮೇಲಿನ ಹರಾಜು ಗೌರವಾನ್ವಿತ ಎನ್‌ಸಿಎಲ್‌ಟಿ ಯ ನಿರ್ದೇಶನದಂತೆ ಆದೇಶ ದಿನಾಂಕ 31.07.2024 (ಸ್ವೀಕೃತವಾಗಿರುವುದು 06.08.2024) ನಡೆಸಲಾಗುವುದು.
ಸಹಿ/-
ಶ್ರೀ ಅಮರ್‌ಪಾಲ್
IBBI/IPA-001/IP-P-01584/2018-2019/12411
ಸ್ಥಳ: ನವದೆಹಲಿ — ಲಿಕ್ವಿಡೇಟರ್, ಮೆ॥ ಶ್ರೀ ದಿಯಾ ಪ್ರಾಜೆಕ್ಟ್ಸ್ ಪ್ರೈ.ಲಿ.
ದಿನಾಂಕ: 20.09.2024 — ಎಎಫ್‌ಎ ಮಾನ್ಯತೆ: 21.11.2024
ಸಂವಹನ ವಿಳಾಸ: 905, 9ನೇ ಮಹಡಿ, ಬಾರ್ಟನ್ ಸೆಂಟರ್, ಎಂಜಿ ರಸ್ತೆ, ಬೆಂಗಳೂರು, ಕರ್ನಾಟಕ -560001
ಇ-ಮೇಲ್ : cirp.shridiya@gmail.com

ಕರ್ನಾಟಕ ಬ್ಯಾಂಕ್ ಲಿಮಿಟೆಡ್
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ
ಶಾಖೆ: ಕೋರಮಂಗಲ
ನಂ. 653, 17ನೇ ಮುಖ್ಯರಸ್ತೆ, 3ನೇ ಬ್ಲಾಕ್ 5ನೇ ಅಡ್ಡರಸ್ತೆ, ಕೋರಮಂಗಲ ಬಡಾವಣೆ, ಕೋರಮಂಗಲ, ಬೆಂಗಳೂರು-560034.
ದೂರವಾಣಿ: 080-22955921, 22955872-873
ಇ-ಮೇಲ್: blr.koramangala@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128
ಲಾಕರ್ ಒಡೆದು ತೆರೆಯುವ ಸಾರ್ವಜನಿಕ ಸೂಚನೆ
ಲಾಕರ್ ಸೌಲಭ್ಯವನ್ನು ಪಡೆದಿರುವ ಈ ಕೆಳಗಿನ ವ್ಯಕ್ತಿಗಳು ನಮ್ಮ ಬೇಡಿಕೆಯ ಸೂಚನೆಯ ಹೊರತಾಗಿಯೂ 4 (ನಾಲ್ಕು) ವರ್ಷಗಳಿಂದ ಲಾಕರ್ ಬಾಡಿಗೆಯನ್ನು ಬ್ಯಾಂಕಿಗೆ ಪಾವತಿಸಿಲ್ಲ. ಆದ್ದರಿಂದ ಲಾಕರ್ ಬಾಡಿಗೆಯನ್ನು ದಿನಾಂಕ 25.09.2024 ರಂದು ಮಧ್ಯಾಹ್ನ 3.00 ಗಂಟೆಗೆ ಅಥವಾ ಅದಕ್ಕೂ ಮೊದಲು ಪಾವತಿಸದಿದ್ದರೆ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕೆಳಗೆ ನಮೂದಿಸಿರುವ ಶಾಖೆಯ ಆವರಣದಲ್ಲಿ ಸೂಚಿಸಲಾದ ದಿನಾಂಕದಂದು ಮಧ್ಯಾಹ್ನ 3.00 ಗಂಟೆಗೆ ಲಾಕರ್ ಅನ್ನು ಒಡೆದು ತೆರೆಯಲು ಬ್ಯಾಂಕ್ ನಿರ್ಧರಿಸಿರುತ್ತದೆ ಎಂಬುದನ್ನು ಗಮನಿಸಿ.
ಬ್ಯಾಂಕ್ ಯಾವುದೇ ಸೂಚನೆಯಿಲ್ಲದೆ ಮತ್ತು ಅದಕ್ಕೆ ಯಾವುದೇ ಕಾರಣಗಳನ್ನು ನೀಡದೆಯೇ ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕ್ರಮ ಸಂಖ್ಯೆ	ಲಾಕರ್ ಸಂಖ್ಯೆ	ಲಾಕರ್ ಪಡೆದ ದಿನಾಂಕ	ಲಾಕರ್ ಪಡೆದವರ ಹೆಸರು	ಲಾಕರ್ ಬಾಡಿಗೆಯ ಬಾಕಿ + ಜಿ.ಎಸ್.ಟಿ. ಮೊತ್ತವು ಸೇರಿ (ರೂ.ಗಳಲ್ಲಿ)	ಸ್ಥಳ ಮತ್ತು ಲಾಕರ್ ಒಡೆಯುವ ದಿನಾಂಕ ಮತ್ತು ಸಮಯ ಮತ್ತು ಸಂಪರ್ಕಿಸಬೇಕಾದ ಸಂಖ್ಯೆ
01	564	14.05.2008	ಕಪಿಲ ಸೈಗಾಲ್ ನಂ. 302, ವರ್ಸ್ ರಾಬಿನ್ ನೆಸ್ಟ್ 1ನೇ 'ಎ' ಮುಖ್ಯರಸ್ತೆ ಎಸ್‌ಟಿ ಬೆಡ್, ಕೋರಮಂಗಲ ಬೆಂಗಳೂರು-560034	ರೂ.65,490/-	ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಶಾಖೆ: ಕೋರಮಂಗಲ ನಂ. 653, 17ನೇ ಮುಖ್ಯರಸ್ತೆ, 3ನೇ ಬ್ಲಾಕ್ 5ನೇ ಅಡ್ಡರಸ್ತೆ, ಕೋರಮಂಗಲ ಬೆಂಗಳೂರು-560034. ಲಾಕರ್ ಒಡೆಯುವ ದಿನಾಂಕ: 25.09.2024 ಮಧ್ಯಾಹ್ನ 3.00 ಗಂಟೆಗೆ ದೂರವಾಣಿ ಸಂಖ್ಯೆ: 080-22955921 / 22955872-873
02	719	10.02.2012	ಆದಿತ್ಯ ಎಮ್. ನಂ. 49, 8ನೇ ಮುಖ್ಯರಸ್ತೆ 5ನೇ ಅಡ್ಡರಸ್ತೆ, 3ನೇ 'ಜೆ' ಬ್ಲಾಕ್ ಕೋರಮಂಗಲ ಬೆಂಗಳೂರು-560034	ರೂ.27,140/-	
03	747	25.07.2013	ಎನ್. ಸತೀಶ್ ಕುಮಾರ್ ಮತ್ತು ಎನ್. ಉಷಾ ರಾಣಿ ನಂ. 812, 6ನೇ ಫೇಸ್ (ಬ್ಲಾಕ್) ಕೋರಮಂಗಲ ಬೆಂಗಳೂರು-560095	ರೂ.13,570/-	

ದಿನಾಂಕ: 20.09.2024 — ಸಹಿ/-
ಸ್ಥಳ: ಬೆಂಗಳೂರು — ಸಹಾಯಕ ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕೋರಮಂಗಲ ಶಾಖೆ, ಬೆಂಗಳೂರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತಕ್ಕೆ ಆಸರೆಯಾದ ಜಡೇಜಾ, ಅಶ್ವಿನ್ ಶತಕದಾಟ

ಆರ್.ಅಶ್ವಿನ್(102) ಹಾಗೂ ರವೀಂದ್ರ ಜಡೇಜಾ(86) ಅವರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಬಾಂಗ್ಲಾದೇಶ ಎದುರಿನ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಕುಸಿತದಿಂದ ಪಾರಾಯಿತು. ಮುರಿಯದ 7ನೇ ವಿಕೆಟ್ ಪಾಲುದಾರಿಕೆಯಲ್ಲಿ 195 ರನ್ ಕಲೆಹಾಕಿರುವ ಈ ಇಬ್ಬರು, ಮೊದಲ ದಿನದಾಟದ ಅಂತ್ಯಕ್ಕೆ ತಂಡದ ಮೊತ್ತವನ್ನು 6 ವಿಕೆಟ್‌ಗೆ 339 ರನ್‌ಗಳಿಗೆ ಏರಿಸಿದರು. ಏಕದಿನ ಶೈಲಿಯಲ್ಲಿ ಬ್ಯಾಟ್ ಬೀಸಿದ ಅಶ್ವಿನ್, ಟೆಸ್ಟ್ ಕ್ರಿಕೆಟ್‌ನಲ್ಲಿ 6ನೇ ಶತಕದ ಸಂಭ್ರಮ ಆಚರಿಸಿದರು.

ಪುಟ ತೆರೆದಂತೆ...

ಇಲ್ಲ, ಬೇಡ, No ಎಂದು ಹೇಳಲು ಹಿಂಜರಿಯಬಾರದು!
ಶಿಶಿರಕಾಲ
ಶಿಶಿರ್ ಹೆಗಡೆ

ಸಂ.ಪುಟ | 6

ಬೆಳದಿಂಗಳನ್ನೇ ಕುಡಿದು ಬದುಕುವ ಪಕ್ಷಿ

ಶಶಾಂಕಣ
ಶಶಿಧರ ಹಾಲಾಡಿ

ಸಂ.ಗಮ | 7

ಮಾತಂದ್ರೆ ಮಾತು

ಹಿಂದಿನ ಸರಕಾರವನ್ನು ಈಗ ಅಧಿಕಾರದಲ್ಲಿರುವವರು 40 ಪರ್ಸೆಂಟ್ ಕಮಿಷನ್ ಸರಕಾರ ಎಂದು ಕರೆದಿದ್ದರು. ಈಗಿನ ಸರಕಾರದಲ್ಲಿ ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರದ ವಿಚಾರಗಳು ಹೊರ ಬಂದಿದೆ. ಭ್ರಷ್ಟಾಚಾರ ಯಾವುದೇ ಒಂದು ಪಕ್ಷಕ್ಕೆ ಸೀಮಿತವಾದುದಲ್ಲ. ಈಗ ಸ್ವಂತ ಲಾಭಕ್ಕಾಗಿ ರಾಜಕೀಯ ಪ್ರವೇಶಿಸುತ್ತಾರೆ. ರಾಜಕೀಯ ವೃತ್ತಿಯಲ್ಲ. ಸೇವೆಗಾಗಿ ಈ ಕ್ಷೇತ್ರವನ್ನು ಪ್ರವೇಶಿಸಬೇಕು ಹೊರತು ಲಾಭಕ್ಕಾಗಿ ಅಲ್ಲ.

- ಸಂತೋಷ್ ಹೆಗ್ಡೆ
ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ

ದಾರಿದೀಪೋಕ್ತಿ

ನಿಮಗೆ ಸುಸ್ತಾದಾಗ ದಣಿವಾರಿಸಿಕೊಳ್ಳಬೇಕೇ ಹೊರತು, ಕೈಗೆತ್ತಿಕೊಂಡ ಕೆಲಸವನ್ನು ನಿಲ್ಲಿಸಬಾರದು. ಕೆಲಸ ಪೂರ್ತಿಯಾದಾಗಲೇ ದಣಿವಾರಿಸಿಕೊಳ್ಳಬೇಕು. ಈ ನಿಯಮವನ್ನು ಪಾಲಿಸಿದ್ದೇ ಆದಲ್ಲಿ, ನೀವು ಕೈಗೆತ್ತಿಕೊಂಡ ಯಾವ ಕೆಲಸವನ್ನೂ ಅರ್ಧಕ್ಕೆ ನಿಲ್ಲಿಸುವುದಿಲ್ಲ.

ವಕ್ರತುಂಡೋಕ್ತಿ

ಎಲ್ಲಾ ಗಂಡಸರಿಗೂ ಅವರವರ ಪತ್ನಿಯೇ ಶಕ್ತಿ. ಉಳಿದವರೇ ವೀಕ್ನೆಸ್.

ತಿರುಪತಿ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬು

ಅಮರಾವತಿ: ಹಿಂದಿನ ವೈಎಸ್‌ಆರ್‌ಸಿಪಿ ಸರಕಾರ ತಿರುಪತಿ ಲಡ್ಡು ತಯಾರಿಸಲು ಗುಣಮಟ್ಟವಿಲ್ಲದ ಪದಾರ್ಥಗಳು ಮತ್ತು ಪ್ರಾಣಿಗಳ ಕೊಬ್ಬನ್ನು ಬಳಸಿತ್ತು. ಆದರೆ, ಈಗ ಶುದ್ಧ ತುಪ್ಪ ಬಳಸಲಾಗುತ್ತಿದೆ. ದೇವಸ್ಥಾನದಲ್ಲಿ ಎಲ್ಲವನ್ನೂ ಶುದ್ಧೀಕರಿಸಲಾಗಿದೆ. ಇದು ಸುಧಾರಿತ ಗುಣಮಟ್ಟಕ್ಕೆ ಕಾರಣವಾಗುತ್ತದೆ ಎಂದು ಆಂಧ್ರಪ್ರದೇಶ ಸಿಎಂ ಎನ್. ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ವಿಧಾನ ಪರಿಷತ್: ಅ.21ಕ್ಕೆ ಮತದಾನ, 24ಕ್ಕೆ ಫಲಿತಾಂಶ

ಬೆಂಗಳೂರು: ಕೋಟ ಶ್ರೀನಿವಾಸ ಪೂಜಾರಿ ರಾಜೀನಾಮೆಯಿಂದ ತೆರವಾಗಿರುವ ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ವಿಧಾನ ಪರಿಷತ್ ಕ್ಷೇತ್ರದ ಉಪಚುನಾವಣೆಗೆ ದಿನಾಂಕ ಪ್ರಕಟಣೆಯಾಗಿದೆ. ಸೆ.26ರಂದು ಅಧಿಸೂಚನೆ ಜಾರಿಗೆ ಬರಲಿದ್ದು, ಅ.3 ನಾಮಪತ್ರ ಸಲ್ಲಿಕೆಗೆ ಕೊನೆ ದಿನ. ಅ.4ರಂದು ನಾಮಪತ್ರ ಪರಿಶೀಲನೆ, ಅ.7 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಅ.21ರಂದು ಮತದಾನ ನಡೆಯಲಿದೆ. ಅ.24ರಂದು ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ಹೊರಬೀಳಲಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪ್ರಧಾನಿ ಮೋದಿಗೆ ಬಂದಿರುವ ಸುಮಾರು 600 ಉಡುಗೊರೆಗಳ ಹರಾಜು
ಸುದ್ದಿ



ಲೈಂಗಿಕ ದೌರ್ಜನ್ಯ, ಹನಿಟ್ರ್ಯಾಪ್ ಆರೋಪದಡಿ ಪ್ರಕರಣ ದಾಖಲು
ಜಾತಿನಿಂದನೆ ಪ್ರಕರಣದಲ್ಲಿ ಜಾಮೀನು ದೊರೆತರೂ ಬಿಡುಗಡೆ ಡೌಟು

ಮುನಿರತ್ನ ಕೊರಳಿಗೆ ಮತ್ತೊಂದು ಉರುಳು

ಬೆಂಗಳೂರು: ಜಾತಿ ನಿಂದನೆ ಪ್ರಕರಣದಲ್ಲಿ ಜೈಲಿನಲ್ಲಿರುವ ಶಾಸಕ ಮುನಿರತ್ನ ಅವರಿಗೆ ಷರತ್ತುಬದ್ಧ ಜಾಮೀನು ದೊರೆತಿರುವ ಮಧ್ಯೆಯೇ, ಮಹಿಳೆಯೊಬ್ಬರನ್ನು ಹೆದರಿಸಿ ಅತ್ಯಾಚಾರ ಮಾಡಿರುವ ದೂರು ಸಂಬಂಧ ಮುನಿರತ್ನ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ. ಇದರೊಂದಿಗೆ ಎಚ್‌ಐವಿ ಪೀಡಿತ ಮಹಿಳೆಯನ್ನು ಬಳಸಿಕೊಂಡು ರಾಜಕೀಯ ಪ್ರತಿಸ್ಪರ್ಧಿಯನ್ನು ಹನಿಟ್ರ್ಯಾಪ್ ಮಾಡಿರುವ ಗಂಭೀರ ಮಾಹಿತಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಯಶವಂತಪುರದ ಮಹಿಳೆಯೊಬ್ಬರು (ಸಮಾಜ ಸೇವಕಿ) ನೀಡಿರುವ ದೂರಿನ ಆಧಾರದ ಮೇರೆಗೆ ರಾಮನಗರ ಜಿಲ್ಲೆಯ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಶಾಸಕ ಮುನಿರತ್ನ, ವಿಜಯ್ ಕುಮಾರ್, ಸುಧಾಕರ, ಕಿರಣ್ ಕುಮಾರ್, ಲೋಹಿತ್ ಗೌಡ, ಮಂಜುನಾಥ, ಲೋಕಿ ಎಂಬುವವರ ವಿರುದ್ಧವೂ ಎಫ್ ಐಆರ್ ದಾಖಲಾಗಿದೆ.

ರಾಮನಗರ ಉಪವಿಭಾಗದ ಡಿವೈಎಸ್‌ಪಿ ದಿನಕರಶೆಟ್ಟಿ ಶೆಟ್ಟಿ ಪ್ರಕರಣದ ತನಿಖೆ ಕೈಗೊಂಡಿದ್ದಾರೆ. ಅತ್ಯಾಚಾರ ಪ್ರಕರಣದ ತನಿಖೆ ತೀವ್ರಗೊಳಿಸಿರುವ ರಾಮನಗರ ಪೊಲೀಸರು ಸಂತ್ರಸ್ತ ಮಹಿಳೆಯನ್ನು ಕೃತ್ಯ ನಡೆದ ನಗರದಲ್ಲಿನ ಗೋಡೌನ್‌ಗೆ ಕರೆತಂದು ಸ್ಥಳ ಮಹಜರು ನಡೆಸಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಮಾಹಿತಿ ಪಡೆದುಕೊಂಡಿದ್ದಾರೆ. ತನಿಖೆ ಮುಗಿದ ನಂತರ ಮುನಿರತ್ನ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮಹಿಳೆಯ ದೂರಿನಲ್ಲಿ ಏನಿದೆ?:

ಕೋವಿಡ್ ಸಂದರ್ಭದಲ್ಲಿ ನಮ್ಮಿಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು. ಆಗಾಗ ವಿಡಿಯೊ ಕಾಲ್ ಮಾಡಿ ಮಾತನಾಡುತ್ತಿದ್ದರು. ನಗ್ನವಾಗಿ ಇರುವಂತೆ ಕರೆ ಮಾಡಿ ಒತ್ತಾಯಿಸಿದಾಗ ಅದನ್ನು ನಿರಾಕರಿಸಿದ್ದೆ. ಒಮ್ಮೆ ಸ್ಥಳವೊಂದಕ್ಕೆ ಬರಲು ಹೇಳಿದ್ದರು. ನಾನು ಅಲ್ಲಿಗೆ ಹೋದಾಗ ತಬ್ಬಿಕೊಳ್ಳಲು ಮುಂದಾಗಿದ್ದರು. ಅದಕ್ಕೆ ಆಕ್ಷೇಪಿಸಿದಾಗ ರಾಜಕೀಯಕ್ಕೆ ಬರಬೇಕಾದರೆ ಇವೆಲ್ಲಾ ಕಾಮನ್ ಎಂದು ಹೇಳಿದ್ದರು. ಬಳಿಕ ಅತ್ಯಾಚಾರವೆಸಗಿದ್ದು, ಈ ವಿಷಯ ಯಾರಿಗಾದರೂ ಹೇಳಿದರೆ ಸಿಸಿ ಟಿವಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿರುವ ವಿಡಿಯೊ ಎಡಿಟ್ ಮಾಡಿ ಹಂಚುತ್ತೇನೆ ಎಂದು ಹೆದರಿಸಿದ್ದರು. ವಿಡಿಯೊ ಇಟ್ಟುಕೊಂಡು ಹಲವು ಬಾರಿ ಮುನಿರತ್ನ ಅತ್ಯಾಚಾರವೆಸಗಿದ್ದಾರೆ ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ಯಾವ್ಯಾವ ಸೆಕ್ಷನ್‌ನಡಿ ಪ್ರಕರಣ ದಾಖಲು?

- 354ಎ-ಲೈಂಗಿಕ ದೌರ್ಜನ್ಯ
- 354ಸಿ-ಮಹಿಳೆಯರ ಇಚ್ಛೆಗೆ ವಿರುದ್ಧವಾಗಿ ಚಿತ್ರೀಕರಣ
- 376ಎನ್(2)-ಸರಕಾರಿ ಸೇವಕನಿಂದ ಅತ್ಯಾಚಾರ
- 506-ಜೀವ ಬೆದರಿಕೆ
- 504-ಉದ್ದೇಶಪೂರ್ವಕವಾಗಿ ನಿಂದನೆ
- 120(ಬಿ)-ಅಪರಾಧಿಕ ಒಳಸಂಚು
- 149-ಕಾನೂನು ಬಾಹಿರ ಸಭೆ
- 406-ನಂಬಿಕೆ ದ್ರೋಹ
- 384-ಸುಲಿಗೆ
- 308-ಹತ್ಯೆ ಮಾಡಲು ಪ್ರಯತ್ನ
- ಐಟಿ ಆಕ್ಟ್-66,66ಇ



ಷರತ್ತುಬದ್ಧ ಜಾಮೀನು

ಬಿಬಿಎಂಪಿ ಮಾಜಿ ಸದಸ್ಯ ವೇಲುನಾಯ್ಕರ್ ಎಂಬುವವರಿಗೆ ಜಾತಿ ನಿಂದನೆ, ಪ್ರಾಣ ಬೆದರಿಕೆ ಒಡ್ಡಿದ ಆರೋಪದಲ್ಲಿ ನ್ಯಾಯಾಂಗ ಬಂಧನಕ್ಕೊಳಗಾಗಿದ್ದ ಶಾಸಕ ಮುನಿರತ್ನ ಅವರಿಗೆ ಷರತ್ತುಬದ್ಧ ಜಾಮೀನು ದೊರೆತಿದೆ. ಜೀವ ಬೆದರಿಕೆ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದ ಮುನಿರತ್ನಗೆ, ಎರಡನೇ ಪ್ರಕರಣವಾದ ಜಾತಿನಿಂದನೆ ಪ್ರಕರಣದಲ್ಲಿ ಜಾಮೀನು ದೊರೆತಿದೆ.
ಷರತ್ತುಗಳೇನು?: ಶಾಸಕ ಮುನಿರತ್ನಗೆ 2 ಲಕ್ಷ ರು. ಬಾಂಡ್, ಇಬ್ಬರ ಶ್ಯೂರಿಟಿ, ಸಾಕ್ಷ್ಯಾಧಾರ ನಾಶಪಡಿಸಬಾರದು ಹಾಗೂ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಎಂದು ಷರತ್ತು ವಿಧಿಸಿ ಕೋರ್ಟ್ ಜಾಮೀನು ಮಂಜೂರು ಮಾಡಿದೆ. ಷರತ್ತುಗಳನ್ನು ಪೂರೈಸಲು ಗುರುವಾರ ನ್ಯಾಯಾಲಯದ ಕಲಾಪ ಅಂತ್ಯವಾದ ಕಾರಣ ಶುಕ್ರವಾರ ನ್ಯಾಯಾಲಯಕ್ಕೆ ಸಲ್ಲಿಸುವ ಸಾಧ್ಯತೆ ಇದ್ದು ಜೈಲಿನಿಂದ ಬಿಡುಗಡೆಯಾಗಬಹುದು.

ಕಳಸಾ ಯೋಜನೆಗೆ ಒಪ್ಪದಿದ್ದರೆ ತಮ್ನಾರ್ ಯೋಜನೆಗೆ ಅನುಮತಿ ಇಲ್ಲ: ಸಿಎಂ
ಬಂಡೂರಿ ಯೋಜನೆಗೆ ಅನುಮತಿ ಕೊಡಿಸಲು ಮೋದಿಗೆ ಸಿದ್ದರಾಮಯ್ಯ ಪತ್ರ

ಗೋವಾ ಅಸಹಕಾರಕ್ಕೆ ಕರ್ನಾಟಕ ತಿರುಗೇಟು

ಬೆಂಗಳೂರು: ಕಳಸಾ ಬಂಡೂರಿ ಯೋಜನೆಗೆ ಗೋವಾ ಪದೇ ಪದೆ ಎತ್ತುತ್ತಿರುವ ಕ್ಯಾತೆಗೆ ರಾಜ್ಯ ಸರಕಾರ ಪ್ರತಿತಂತ್ರ ರೂಪಿಸಿದ್ದು, ನಮ್ಮ ಯೋಜನೆಗೆ ಅನುಮತಿ ನೀಡದಿದ್ದರೆ, ಗೋವಾ-ತಮ್ನಾರ್ ಯೋಜನೆಗೆ ನಮ್ಮ ಅನುಮೋದನೆ ತಡೆಹಿಡಿಯುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಕಳಸಾ ಬಂಡೂರಿ ನಾಲಾ ಕುಡಿಯುವ ನೀರಿನ ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಯ ಅನುಮೋದನೆ ನೀಡಬೇಕಿದೆ. ಅದಕ್ಕೆ ಪ್ರಧಾನಿಗಳೇ ಅಧ್ಯಕ್ಷ ರಾಗಿ ರುವುದರಿಂದ ಸಿಎಂ ಸಿದ್ದ ರಾಮಯ್ಯ ಅವರು ಪ್ರಧಾ ನಿಗೆ ಪತ್ರ ಬರೆದು ಕಳಸಾ ಬಂಡೂರಿ ಯೋಜನೆಗೆ ಪರಿ ಸರ ಇಲಾಖೆಯಿಂದ ಸಿಗಬೇ ಕಿರುವ ಅನುಮತಿ ಕೊಡಿಸು ವಂತೆ ಮನವಿ ಮಾಡಿದ್ದಾರೆ. ಕಳಸಾ ಯೋಜನೆಯನ್ನು ನೀವು ವಿರೋಧಿಸಿದರೆ ಪರಿ ಸರ ಸೂಕ್ಷ್ಮ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹಾದು ಹೋಗ ಲಿರುವ ಗೋವಾ- ತಮ್ನಾರ್ ವಿದ್ಯುತ್ ಪ್ರಸರಣ ಯೋಜ ನೆಗೆ ಕರ್ನಾಟಕ ತನ್ನ ಅನುಮೋದನೆಯನ್ನು ತಡೆ ಹಿಡಿಯಲಿದೆ ಎಂದು ಎಚ್ಚರಿಕೆ ಯನ್ನೂ ನೀಡಿದ್ದಾರೆ.

ಏನಿದು ತಮ್ನಾರ್ ಯೋಜನೆ ?

ಕೇಂದ್ರ ಸರ್ಕಾರದ 'ಒಂದು ರಾಷ್ಟ್ರ-ಒಂದು ಗ್ರಿಡ್' ಯೋಜನೆಯ ಭಾಗವಾಗಿರುವ ಈ ಯೋಜನೆಯು ಛತ್ತೀಸ್‌ಗಢದ ತಮ್ನಾರ್‌ನಿಂದ ಗೋವಾದ ಕ್ಸೆಲ್ಡೆಮ್‌ಗೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಗುರಿಯನ್ನು ಹೊಂದಿದೆ. ಈ ಹೈಟೆನ್ಷನ್ ಲೈನ್ ಕರ್ನಾಟಕದ ವ್ಯಾಪ್ತಿಯಲ್ಲಿ 75 ಕಿಮೀ ಹಾದುಹೋಗಲಿದೆ. ಇದರಲ್ಲಿ 38 ಕಿ.ಮೀ ವ್ಯಾಪ್ತಿಯ ಪ್ರಾದೇಶಿಕ ಅರಣ್ಯ ಮತ್ತು 6.6 ಕಿ.ಮೀ ವ್ಯಾಪ್ತಿಯ ಕಾಳಿ ಹುಲಿ ಸಂರಕ್ಷಿತ ಪ್ರದೇಶ ಸೇರಿದೆ. ಯೋಜನೆ ಜಾರಿಯಾಗಬೇಕಾದರೆ ಹಳಿಯಾಳ ವಿಭಾಗದಲ್ಲಿ 35,445 ಮರಗಳು ಹಾಗೂ ದಾಂಡೇಲಿ ವನ್ಯಜೀವಿ ವಿಭಾಗದಲ್ಲಿ 10,810 ಮರಗಳಿಗೆ ಕೊಡಲಿ ಹಾಕಬೇಕಾಗಿದೆ. ಜತೆಗೆ ಈ ಪ್ರದೇಶದ ಹುಲಿ, ಚಿರತೆ ಸೇರಿ ವನ್ಯಮೃಗಗಳಿಗೂ ತೊಂದರೆಯಾಗಲಿದೆ ಎಂದು ಈ ಹಿಂದೆಯೇ ರಾಜ್ಯ ಸರಕಾರ ಪ್ರಸ್ತಾಪವನ್ನು ತಿರಸ್ಕರಿಸಿತ್ತು. ನಂತರ ಖುದ್ದು ಪ್ರಧಾನಿ ಮೋದಿ ಅವರೇ ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಒಪ್ಪಿಗೆ ನೀಡುವಂತೆ ಮನವಿ ಮಾಡಿದ್ದರು.

ಸಿಎಂ ಬರೆದ ಪತ್ರದಲ್ಲಿ ಏನಿದೆ?

ಉತ್ತರ ಕರ್ನಾಟಕದ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ನಿರ್ಣಾಯಕವಾಗಿರುವ ಯೋಜನೆಯು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ವನ್ಯಜೀವಿ ಮಂಡಳಿಯ ಅನುಮೋದನೆ ಸಿಗದೆ ದೀರ್ಘಕಾಲದಿಂದ ಬಾಕಿ ಉಳಿದಿದೆ. ಆದರೆ ಗೋವಾದ ಮುಖ್ಯ ವನ್ಯಜೀವಿ ವಾರ್ಡನ್ ಕಳಸಾ ಬಂಡೂರಿಯಲ್ಲಿ ಕರ್ನಾಟಕ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳದಂತೆ ಕಾನೂನುಬಾಹಿರ ಆದೇಶ ಹೊರಡಿಸಿದ್ದಾರೆ. 2018ರಲ್ಲಿಯೇ ಮಹದಾಯಿ ನ್ಯಾಯಾಧೀಕರಣ ಪೀಠದಿಂದ ಕರ್ನಾಟಕಕ್ಕೆ 13.42 ಟಿಎಂಸಿ ನೀರು ಹಂಚಿಕೆಯಾಗಿದ್ದು, ಈ ಸಂಬಂಧ 27-02-2020ರಂದು ಕೇಂದ್ರದ ಗೆಜೆಟ್ ಪ್ರಕಟಣೆ ಹೊರಡಿಸಲಾಗಿದೆ. ಹಂಚಿಕೆಯಾಗಿರುವ 13.42 ಟಿಎಂಸಿ ನೀರನ್ನು, 3.9 ಟಿಎಂಸಿ ನೀರನ್ನು ಕುಡಿಯುವ ನೀರಿನ ಉದ್ದೇಶಕ್ಕಾಗಿ ತಿರುಗಿಸಲು ರಾಜ್ಯ ಸರಕಾರ ಯೋಜನೆಗಳು ಮಾರ್ಪಡಿಸಿದ ಪೂರ್ವಕಾರ್ಯಸಾಧ್ಯತಾ ವರದಿಯನ್ನು ಅನುಮೋದನೆಗಾಗಿ ಸಲ್ಲಿಸಿದೆ. ಆದರೆ ಈ ಯೋಜನೆಗೆ ಗೋವಾ ಸರಕಾರ ಪದೇ ಪದೆ ಆಕ್ಷೇಪ ವ್ಯಕ್ತಪಡಿಸುತ್ತಿದೆ. ಈ ವಿಷಯದಲ್ಲಿ ಗೋವಾ ಹಿಂದೆ ಸರಿಯದಿದ್ದರೆ ಅವರ ಗೋವಾ-ತುಮ್ನಾರ್ ವಿದ್ಯುತ್ ಪ್ರಸರಣದ ಯೋಜನೆಯನ್ನು ಪ್ರಶ್ನಿಸಬೇಕಾಗುತ್ತದೆ. ಈ ಹಿಂದೆ ನಾವು ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದೇವು. ಆದರೆ ಆಗಸ್ಟ್ 1ರಂದು ಇಂಧನ ಸಚಿವರು ತಮ್ಮ ಪತ್ರದಲ್ಲಿ 72,817 ಮರಗಳ ಬದಲಿಗೆ 13,954 ಮರಗಳನ್ನು ಮಾತ್ರ ಕಡಿಯಲಾಗುವುದು ಎಂದು ಭರವಸೆ ನೀಡಿದ ನಂತರವೇ ಕರ್ನಾಟಕ ಈ ಯೋಜನೆಗೆ ಒಪ್ಪಿಗೆ ನೀಡಿದೆ. ಪರಿಸರ ಸೂಕ್ಷ್ಮ ವಲಯಗಳಲ್ಲಿ ಯಾವುದೇ ಮರವನ್ನು ಕಡಿಯುವುದು ಅಪೇಕ್ಷಣೀಯವಲ್ಲವಾದರೂ, ರಾಷ್ಟ್ರೀಯ ಅಭಿವೃದ್ಧಿಯ ಹಿತದೃಷ್ಟಿಯಿಂದ ಆನೆ ಕಾರಿಡಾರ್ ದಾಟುವ ಜಮೀನುಗಳ ಹೊರತಾಗಿಯೂ ಕರ್ನಾಟಕವು ತಾತ್ವಿಕವಾಗಿ ಒಪ್ಪಲು ಸಿದ್ಧವಾಗಿದೆ. ಕಳಸಾ ಯೋಜನೆಗೆ ವನ್ಯಜೀವಿ ಮಂಡಳಿಯಿಂದ ಅನುಮೋದನೆ ಸಿಗದಿದ್ದರೆ, ಗೋವಾ-ತಮ್ನಾರ್ ಪ್ರಸರಣ ಯೋಜನೆಗೆ ಅನುಮೋದನೆ ನೀಡುವುದನ್ನು ಖಂಡಿತವಾಗಿಯೂ ಪರಿಶೀಲಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕರ್ನಾಟಕ ಸುವರ್ಣ ಸಂಭ್ರಮ ಅದ್ದೂರಿಯ ಸಮಾರೋಪಕ್ಕೆ ಸಿದ್ಧತೆ

ನ.1ರಂದು ಕನ್ನಡ ಜನೋತ್ಸವ

- ವಿಧಾನಸೌಧ ಆವರಣದಲ್ಲಿ ಭುವನೇಶ್ವರಿದೇವಿ ಪ್ರತಿಮೆ ಅನಾವರಣ
- ರಾಜ್ಯದ ನಾಲ್ಕು ವಲಯಗಳಲ್ಲಿ ವಿಶೇಷ ಕಾರ್ಯಕ್ರಮ ಆಯೋಜನೆ

ಬೆಂಗಳೂರು: ಕರ್ನಾಟಕ ಸುವರ್ಣ ಸಂಭ್ರಮದ ಸಮಾರೋಪವನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಿರುವ ರಾಜ್ಯ ಸರಕಾರ, ಇಡೀ ಕಾರ್ಯಕ್ರಮವನ್ನು ಕನ್ನಡ ಜನೋತ್ಸವದ ರೀತಿ ಆಚರಿಸಲು ನಿರ್ಧರಿಸಿದೆ.

ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ಸುವರ್ಣ ಸಂಭ್ರಮದ ಸಮಾರೋಪಕ್ಕೆ ಸಂಬಂಧಿಸಿದಂತೆ ಗೃಹ ಕಚೇರಿ ಕೃಷ್ಣದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಿತು. ಈ ವೇಳೆ, ಕನ್ನಡ ಜನ ಚಳವಳಿ, ಕನ್ನಡತನದ ವಿಸ್ತಾರ, ಕನ್ನಡದ ಅರಿವು ವಿಸ್ತರಿಸಿದ ಮಾದರಿಗಳು, ಹೋರಾಟದ ಹಾದಿಯಲ್ಲಿ ರೂಪುಗೊಂಡ ಕನ್ನಡ ಚರಿತ್ರೆಯನ್ನು ಇವತ್ತಿನ ಕನ್ನಡ ಯುವಜನ ಸಮೂಹಕ್ಕೆ ತಲುಪಿಸಲು ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ಎಲ್ಲ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಕರ್ನಾಟಕ ಸುವರ್ಣ ಸಂಭ್ರಮ ನಡೆಯುತ್ತಿದ್ದು, ಹಂಪಿಯಿಂದ ಆರಂಭವಾದ ಕನ್ನಡ ರಥಯಾತ್ರೆ ಈಗಾಗಲೇ 28 ಜಿಲ್ಲೆಗಳಲ್ಲಿ ಸಾಗಿದೆ. ರಥ ಯಾತ್ರೆ ಸಮಾರೋಪ ಸಮಾರಂಭ ಉ.ಕ. ಜಿಲ್ಲೆಯ ಸಿದ್ದಾಪುರದಲ್ಲಿ ನಡೆಯಲಿದೆ. ಕರ್ನಾಟಕ ಸುವರ್ಣ ಸಂಭ್ರಮ-50 ಸಮಾರೋಪ ವಿಧಾನಸೌಧದ ಮುಂಭಾಗದಲ್ಲಿ ನಡೆಯಲಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಸಮಗ್ರ ವರದಿ, ದಾಖಲೆ ಸಲ್ಲಿಸಲು ಸಿಎಸ್‌ಗೆ ಸೂಚನೆ

ಸಿಎಂ ವಿರುದ್ಧ ಮತ್ತೊಂದು ದೂರು

ಬೆಂಗಳೂರು: ಮುಡಾ ನಿವೇಶನ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಶನ್‌ಗೆ ಅನುಮತಿ ನೀಡಿದ ಪ್ರಕರಣ ಹೈಕೋರ್ಟ್‌ನಲ್ಲಿರುವಾಗಲೇ ಮುಡಾ ಕಾಮಗಾರಿ ಕುರಿತು ಸಿಎಂ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರಿಗೆ ಮತ್ತೊಂದು ದೂರು ಸಲ್ಲಿಸಲಾಗಿದೆ. ಈ ಸಂಬಂಧ ಸಮಗ್ರ ವಿವರ ಹಾಗೂ ದಾಖಲೆಗಳನ್ನು ಸಲ್ಲಿಸುವಂತೆ ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿದ್ದಾರೆ. ಮುಡಾ ನಿವೃತ್ತ ಸಿಬ್ಬಂದಿ ನಟರಾಜ್ ಎಂಬುವ ವರು ಸಿಎಂ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದು, ನಿಯಮ ಬಾಹಿರವಾಗಿ ನಡೆದಿರುವ ಕಾಮ ಗಾರಿಗಳಿಗೆ ಸಿಎಂ ಸಿದ್ದರಾಮಯ್ಯ ಮೌಖಿಕ ಆದೇಶ ವಿದೆ ಎಂಬ ವಿಚಾರವನ್ನು ದೂರಿನಲ್ಲಿ ಪ್ರಸ್ತಾಪಿಸಿದ್ದು, ಈ ಪ್ರಕರಣ ಸಂಬಂಧ ಸಿಬಿಐ ತನಿಖೆ ನಡೆಯುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ. ಮುಡಾದಲ್ಲಿ 450 ಕೋಟಿಗೂ ಅಧಿಕ ಹಣ ಅಕ್ರಮ ಕಾಮಗಾರಿಗೆ ಪೋಲಾಗಿದೆ. ಸಿಎಂ ಪ್ರತಿನಿಧಿಸುವ ವರುಣಾ ವಿಧಾನಸಭಾ ಕ್ಷೇತ್ರ ಹಾಗೂ ಶ್ರೀರಂಗಟ್ಟಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಿಯಮ ಬಾಹಿರವಾಗಿ ಕಾಮಗಾರಿ ನಡೆಸಲು ಹೊರಟಿದ್ದಾರೆ ಎಂದು ದೂರಿನಲ್ಲಿ ನಟರಾಜ್ ಆರೋಪ ಮಾಡಿದ್ದಾರೆ.

ವರುಣಾಕ್ಕೆ 40, ಶ್ರೀರಂಗಪಟ್ಟಣಕ್ಕೆ 15 ಕೋಟಿ

ವರುಣಾ ವಿಧಾನಸಭಾ ಕ್ಷೇತ್ರಕ್ಕೆ 40 ಕೋಟಿ ಹಣ, ಶ್ರೀರಂಗಪಟ್ಟಣ ಕ್ಷೇತ್ರಕ್ಕೆ 15 ಕೋಟಿ ಹಣಕ್ಕೆ ಸಚಿವ ಸಂಪುಟದಿಂದ ಒಪ್ಪಿಗೆ ಪಡೆಯಲಾಗಿದೆ. ಆಯುಕ್ತರು ಈ ಕಾಮಗಾರಿ ನಡೆಸುವಾಗ ಮುಖ್ಯಮಂತ್ರಿಗಳ ಮೌಖಿಕ ಆದೇಶದ ಮೇರೆಗೆ ನಡೆಸುತ್ತಿರುವ ಕಾಮಗಾರಿಗಳು ಎಂದು ಉಲ್ಲೇಖಿಸಿದ್ದಾರೆ. ಆದರೆ ಇದಕ್ಕೆ ಸಂಪುಟ ಸಭೆಯಲ್ಲಿ ಒಪ್ಪಿಗೆ ಕೊಡಲು ಅವಕಾಶವೇ ಇಲ್ಲ. ಕರ್ನಾಟಕ ನಗರಾಭಿವೃದ್ಧಿ ಕಾಯಿದೆಯಲ್ಲೂ ಇದಕ್ಕೆ ಅವಕಾಶವಿಲ್ಲವೆಂದು ನಟರಾಜ್ ಸ್ಪಷ್ಟಪಡಿಸಿದ್ದಾರೆ.

ಬಿಎಸ್‌ವೈ ಪೋಕ್ಸೊ ವಿಚಾರಣೆ 27ಕ್ಕೆ

ಬೆಂಗಳೂರು: ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದ ವಿಚಾರಣೆಯನ್ನು ಸೆ.27ಕ್ಕೆ ಹೈಕೋರ್ಟ್ ಮುಂದೂಡಿದೆ. ಸಿಐಡಿ ಸಲ್ಲಿಸಿದ್ದ ಚಾರ್ಜ್‌ಶೀಟ್ ರದ್ದು ಮಾಡುವಂತೆ ಕೋರಿ ಹೈಕೋರ್ಟ್‌ಗೆ ಯಡಿಯೂರಪ್ಪ ಮನವಿ ಸಲ್ಲಿಸಿದ್ದರು. ಸಮ ಯದ ಅಭಾವದ ಹಿನ್ನೆಲೆ ವಿಚಾರಣೆ ಮುಂದೂಡಿಕೆ ಮಾಡಲಾಗಿದೆ.

ಕೊನೆಗೂ ದರ್ಶನ್ ತಾಯಿ ಭೇಟಿ

ಬಳ್ಳಾರಿ: ಬಳ್ಳಾರಿ ಸೆಂಟ್ರಲ್ ಜೈಲಿನಲ್ಲಿ ಬಂಧಿಯಾಗಿರುವ ದರ್ಶನ್‌ರನ್ನು ತಾಯಿ ಮೀನಾ ತೂಗುದೀಪ, ಅಕ್ಕ ದಿವ್ಯಾ ಮತ್ತು ದರ್ಶನ್ ಭಾವ ಮಂಜುನಾಥ, ಅಕ್ಕನ ಮಕ್ಕಳು ಸೇರಿ ಐವರು ಗುರುವಾರ ಭೇಟಿಯಾಗಿ ಸಾಂತ್ವನ ಹೇಳಿದರು. ತಾಯಿ, ಅಕ್ಕನ ಕಂಡು ದರ್ಶನ್ ಭಾವುಕನಾದರೆ, ಕುಟುಂಬಸ್ಥರೂ ಗದ್ಗದಿತರಾದರು.

ಕಾಶ್ಮೀರಕ್ಕೆ ಮತ್ತೆ ರಾಜ್ಯ ಸ್ಥಾನಮಾನ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮರುಸ್ಥಾಪಿಸುವ ಭರವಸೆಯನ್ನು ಬಿಜೆಪಿ ಈಡೇರಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿ, ಕಾಶ್ಮೀರದ ಯುವಕರು ಪ್ರಜಾಪ್ರಭುತ್ವದಲ್ಲಿ ಮತ್ತೆ ವಿಶ್ವಾಸ ವಿಟ್ಟಿದ್ದಾರೆ ಮತ್ತು ತಮ್ಮ ಮತವು ಬದಲಾವಣೆ ತರಬಹುದು ಎಂದು ಭಾವಿಸುತ್ತಿದ್ದಾರೆ. ಇದು ಅವರ ಸಬಲೀಕರಣದ ಮೊದಲ ಹೆಜ್ಜೆಯಾಗಿದೆ ಎಂದು ಹೇಳಿದರು.

ಕಸ್ತೂರಿ ರಂಗನ್ ವರದಿ ಸಮ್ಮತಿಸಬಹುದು

ಬೆಂಗಳೂರು: ರಾಜ್ಯದ ವಿವಿಧ ಅರಣ್ಯ ಮತ್ತು ವನ್ಯಜೀವಿ ತಾಣಗಳ ಸುತ್ತ 16,114 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶವನ್ನು ಈಗಾಗಲೇ ಸಂರಕ್ಷಿಸಲಾಗಿದ್ದು, ಈ ಮಿತಿಗೆ ಒಳಪಟ್ಟು ಕಸ್ತೂರಿ ರಂಗನ್ ವರದಿಯನ್ನು ಸಮ್ಮತಿಸಬಹುದು ಎಂದು ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದ್ದಾರೆ. ಪಶ್ಚಿಮಘಟ್ಟ ವ್ಯಾಪ್ತಿಯ 11 ಜಿಲ್ಲೆಗಳ ಸಚಿವರು, ಶಾಸಕರು ಮತ್ತು ಸಂಸತ್ ಸದಸ್ಯರ ಅಭಿಪ್ರಾಯ ಪಡೆಯಲಾಗಿದ್ದು, ಸಂಪುಟದ ಅನುಮೋದನೆ

ಅಡಿಕೆ ಆಮದು: ಕೃಷಿಕರಿಗೆ ಸಂಕಷ್ಟ

ದೆಹಲಿ: ಭೂತಾನ್‌ನಿಂದ ಕನಿಷ್ಠ ಆಮದು ಬೆಲೆಯ ಷರತ್ತು ಇಲ್ಲದೆಯೇ 17 ಸಾವಿರ ಟನ್ ಹಸಿ ಅಡಿಕೆ ಆಮದು ಮಾಡಿಕೊಳ್ಳಲು ಕೇಂದ್ರ ಸರಕಾರ ಅನುಮತಿ ನೀಡಿದೆ. ಒಡಿಶಾದ ಹತಿಸರ್ ಮತ್ತು ಅಸ್ಸಾಂನ ದರ‍್ರಂಗದ ಕಸ್ಟಮ್ಸ್ ಕೇಂದ್ರದ ಮೂಲಕ ಈ ಅಡಿಕೆ ಆಮದಿಗೆ ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಧೀನದಲ್ಲಿ ಬರುವ ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ನೃತ್ಯ ನಿರ್ದೇಶಕ ಜಾನಿ ಮಾಸ್ಟರ್ ಬಂಧನ



ಹೈದರಾಬಾದ್: ಲೈಂಗಿಕ ದೌರ್ಜನ್ಯ ಆರೋಪದ ಮೇಲೆ ತೆಲುಗಿನ ಖ್ಯಾತ ನೃತ್ಯ ನಿರ್ದೇಶಕ ಜಾನಿ ಮಾಸ್ಟರ್ ಅಲಿಯಾಸ್ ಶೇಕ್ ಜಾನಿ ಬಾಷಾರನ್ನು ಗೋವಾದಲ್ಲಿ ಪೊಲೀಸರು ಬಂಧಿಸಿದ್ದಾರೆ. ತನ್ನ ಮೇಲೆ ಜಾನಿ ಮಾಸ್ಟರ್ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಯುವತಿಯೊಬ್ಬರು ದೂರು ನೀಡಿದ್ದರು.

ಸತತ ಸಾವಿರ ಸಂಚಿಕೆ ಪೂರ್ಣಗೊಳಿಸಿದ ಮಾತಿನ ಮಂಟಪ | ಕ್ಲಬ್‌ಹೌಸ್ ಇತಿಹಾಸದಲ್ಲಿ ಹಲವು ದಾಖಲೆ ನಿರ್ಮಿಸಿರುವ ವಿಶ್ವವಾಣಿ

ವಿಶ್ವವಾಣಿ ಕ್ಲಬ್‌ಹೌಸ್‌ಗೆ ಸಹಸ್ರ ಸಂಭ್ರಮ

ಅದು ಕರೋನಾದ ವಿಷಮ ಕಾಲ. ವಿಶ್ವದೆಲ್ಲೆಡೆ ಮನೆಯಿಂದ ಆಚೆ ಬರಲು ಹೆದರುವ ಪರಿಸ್ಥಿತಿ. ಅಂತಹ ಪರಿಸ್ಥಿತಿಯಲ್ಲಿ ಇಡೀ ವಿಶ್ವದಲ್ಲಿ ಮನೆಮನೆಗಳ ನಡುವೆ, ಮನಮನಗಳ ನಡುವೆ ಮಾತಿಗೆ ಬೆಸುಗೆಯಾದದ್ದು 'ಕ್ಲಬ್‌ಹೌಸ್' ಮಾತಿನ ಮನೆ. ಕನ್ನಡದಲ್ಲಿ ಈ ಕ್ಲಬ್ ಹೌಸ್ ಅನ್ನು ಸಮರ್ಥವಾಗಿ ಬಳಸಿಕೊಂಡು ದಾಖಲೆ ಬರೆದದ್ದು 'ವಿಶ್ವವಾಣಿ ಕ್ಲಬ್‌ಹೌಸ್'. ಕೋವಿಡ್ ಕಾಲದ ನಂತರವೂ ಬಹುಕಾಲದಿಂದ ನಿರಂತರತೆ, ಜನಪ್ರಿಯತೆ, ಶ್ರೇಷ್ಠತೆ ಉಳಿಸಿ, ಬೆಳೆಸಿಕೊಂಡು ಬಂದಿದೆ ಈ ಕಾರ್ಯಕ್ರಮ.

ಹೌದು, ಕರೋನಾ ಸಮಯದಲ್ಲಿ ವಿಶ್ವವಾಣಿ ಆರಂಭಿಸಿದ ಕ್ಲಬ್‌ಹೌಸ್ ಗುರುವಾರಕ್ಕೆ 1000 ಸಂವಾದ ಕಾರ್ಯಕ್ರಮಗಳನ್ನು ಪೂರೈಸಿದೆ. ವಿಶ್ವೇಶ್ವರ ಭಟ್ ಅವರ ಸಾರಥ್ಯದಲ್ಲಿ ಆರಂಭಗೊಂಡಿದ್ದ ಶ್ರವಣ ಮಾಧ್ಯಮದ ಈ ಕಾರ್ಯಕ್ರಮ ರಾಜ್ಯದಲ್ಲಿ ಈಗಲೂ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಆರಂಭದಲ್ಲಿ ವಿಶ್ವೇಶ್ವರ ಭಟ್ ಅವರ ಸಾರಥ್ಯದಲ್ಲಿ ಆರಂಭಗೊಂಡ ಈ ಕ್ಲಬ್‌ಹೌಸ್ ಕಾರ್ಯಕ್ರಮಕ್ಕೆ ನಂಜನಗೂಡು ಮೋಹನ್ ಹಾಗೂ ರೂಪಾ ಗುರುರಾಜ್ ಅವರು ಮಾಡರೇಟರ್‌ಗಳಾಗಿ ಯಶಸ್ವಿಯಾಗಿ ನಿರ್ವಹಿಸಿದ್ದರು.

ನಿತ್ಯ ಸಂಜೆ 7 ಗಂಟೆಗೆ ರಾಜ್ಯದ ಸಾವಿರಾರು ಮಂದಿ ಈಗಲೂ ತಮ್ಮ ಮೊಬೈಲ್‌ನಲ್ಲಿ ಕ್ಲಬ್‌ಹೌಸ್ ಆ್ಯಪ್ ಹುಡುಕುತ್ತಾರೆ. ನಿತ್ಯ ಒಂದೊಂದು ನೂತನ ವಿಷಯಗಳೊಂದಿಗೆ ಜನರ ಮುಂದೆ ವಿಶ್ವವಾಣಿ ಕ್ಲಬ್‌ಹೌಸ್ ತಂಡ ಹಾಜರಾಗುತ್ತದೆ. ವಿಶ್ವವಾಣಿ ಕ್ಲಬ್‌ಹೌಸ್‌ನ ಮತ್ತೊಂದು ವಿಶೇಷವೆಂದರೆ, ಸತತ ಸಾವಿರ ಎಪಿಸೋಡುಗಳು ಯಾವುದೇ ಅಡೆತಡೆಯಿಲ್ಲದೇ ನಡೆದಿವೆ.

→ 4

ಕ್ಲಬ್‌ಹೌಸ್ ಸಾರಥಿಗಳಿವರು

- **ವಿಶ್ವೇಶ್ವರ ಭಟ್:** ವಿಶ್ವವಾಣಿ ಕ್ಲಬ್‌ಹೌಸ್ ಪರಿಕಲ್ಪನೆಯ ರೂವಾರಿ, ವಿಶ್ವವಾಣಿ ಕ್ಲಬ್‌ಹೌಸ್‌ನ ಕ್ಯಾಪ್ಟನ್
- **ರೂಪಾ ಗುರುರಾಜ್:** ನಿತ್ಯ ಕಾರ್ಯಕ್ರಮದ ಅತಿಥಿಗಳನ್ನು ಲೈನ್‌ಅಪ್ ಮಾಡುವುದು, ಅವರ ಪ್ರೊಫೈಲ್ ಸಿದ್ಧಪಡಿಸುವವರು.
- **ಶಿಶಿರ್ ಹೆಗಡೆ:** ಕಾರ್ಯಕ್ರಮದ ಮಾಡರೇಟರ್
- **ಕಿರಣ್ ಉಪಾಧ್ಯಾಯ:** ಕಾರ್ಯಕ್ರಮದ ಮಾಡರೇಟರ್
- **ರಾಜೇಶ್ ಪಟವರ್ಧನ್:** ಅತಿಥಿಗಳ ಪರಿಚಯವನ್ನು ಸಿದ್ಧಪಡಿಸುವವರು.

ಅತಿ ಹೆಚ್ಚು ಬಾರಿ ಮಾತನಾಡಿದ ಗಣ್ಯರು

- ಡಿ.ವಿ ಗುರುಪ್ರಸಾದ್-23 ಬಾರಿ
- ನಾ.ಸೋಮೇಶ್ವರ-18 ಬಾರಿ.
- ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ: 12ಕ್ಕಿಂತ ಹೆಚ್ಚು ಬಾರಿ
- ಡಾ.ಭಾನುಪ್ರಕಾಶ್ ಶರ್ಮಾ: 12ಕ್ಕಿಂತ ಹೆಚ್ಚು ಬಾರಿ.

ಸರ್ವರ್ ಕ್ರ್ಯಾಷ್ ಮಾಡಿದ್ದ ಆ ಎಪಿಸೋಡು

ಈಶಾ ಫೌಂಡೇಶನ್‌ನ ಸಂಸ್ಥಾಪಕ ಜಗ್ಗಿ ವಾಸುದೇವ್ ಅವರು ಭಾಗವಹಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವವರ ಸಂಖ್ಯೆ ಎಂಟು ಸಾವಿರ ಜನ ದಾಟಿದ್ದರಿಂದ, ಕ್ಲಬ್‌ಹೌಸ್‌ನ ಮೇನ್ ಸರ್ವರ್ ಕ್ರ್ಯಾಷ್ ಆಗಿದ್ದು ಇತಿಹಾಸ. ಬಳಿಕ ನಡೆದ ಹಲವಾರು ಕಾರ್ಯಕ್ರಮದಲ್ಲಿ ಐದಾರು ಸಾವಿರ ಜನ ಭಾಗವಹಿಸಿದ ಇತಿಹಾಸವಿದೆ.

ಕ್ಲಬ್‌ಹೌಸ್‌ನಲ್ಲಿ ಭಾಗವಹಿಸಿದ್ದ ಈ ಗಣ್ಯರು ನಮ್ಮನ್ನು ಅಗಲಿದವರು

- ಡಾ.ಕೆ.ಸಿ.ರಘು, ಆಹಾರ ತಜ್ಞ
- ನಿತಿನ್ ಜಗತಾಪ್, ಸೈಕಲಿಸ್ಟ್
- ಡಾ.ಶಕುಂತಲಾ ಶ್ರೀಧರ್, ಕೃಷಿ ವಿಜ್ಞಾನಿ
- ಸುಬ್ರಮಣ್ಯ ಧಾರೇಶ್ವರ, ಯಕ್ಷಗಾನ ಭಾಗವತರು
- ಡಾ.ಭುಜಂಗ ಶೆಟ್ಟಿ, ನೇತ್ರ ತಜ್ಞ
- ಆರ್. ಧ್ರುವನಾರಾಯಣ, ಮಾಜಿ ಸಂಸದ
- ಅಪರ್ಣಾ ವಸ್ತಾರೆ, ನಿರೂಪಕಿ

ಕ್ಲಬ್‌ಹೌಸ್‌ನಲ್ಲಿ ಮಾತನಾಡಿದ ಖ್ಯಾತನಾಮರು

- ಡಾ.ಸುಧಾಮೂರ್ತಿ
- ಎಸ್.ಎಲ್.ಭೈರಪ್ಪ
- ಸಿಎಂ ಸಿದ್ದರಾಮಯ್ಯ
- ಬಸವರಾಜ ಬೊಮ್ಮಾಯಿ
- ರೂಪಾ ಮೌದ್ಗಿಲ್
- ವಿನಯ್ ಗುರೂಜಿ
- ತೇಜಸ್ವಿ ಸೂರ್ಯ
- ಡಾ.ಸಿ.ಎನ್. ಮಂಜುನಾಥ್,
- ರಘು ದೀಕ್ಷಿತ್,
- ಸದ್ಗುರು ಜಗ್ಗಿ ವಾಸುದೇವ,
- ಭಾರತಿ ವಿಷ್ಣುವರ್ಧನ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ನಿಧನ

ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ (84) ಅವರು ಗುರುವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಮೂವರು ಪುತ್ರಿಯರು ಹಾಗೂ ಪುತ್ರ ಇದ್ದಾರೆ. ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಕೆಂಪಣ್ಣ ನಿಧನಕ್ಕೆ ಸಿಎಂ, ಡಿಸಿಎಂ ಸೇರಿ ಮತ್ತಿತರ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಭ್ರಷ್ಟಾಚಾರ ತಡೆಗೆ ಹೋರಾಟ ನಡೆಯಲಿ

ಧಾರವಾಡ: ಭ್ರಷ್ಟಾಚಾರದ ಮಾಹಿತಿಗಳು ಬಹಳಷ್ಟು ಹೊರಬರುತ್ತಿವೆ. ಎಲ್ಲ ಪಕ್ಷಗಳಲ್ಲೂ ದುರಾಸೆಯ ರೋಗವನ್ನು ಕಂಡಿದ್ದೇನೆ, ಭ್ರಷ್ಟಾಚಾರ ತಡೆಗೆ ನಿರಂತರ ಹೋರಾಟ ನಡೆಯಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹಗ್ಡೆ ಅಭಿಪ್ರಾಯ ಪಟ್ಟಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರಕಾರ, ಈಗ ಅಧಿಕಾರ ದಲ್ಲಿರುವವರು 40 ಪರ್ಸೆಂಟ್ ಕಮಿಷನ್ ಸರಕಾರ ಎಂದು ಕರೆದಿದ್ದರು. ಈಗಿನ ಸರಕಾರದಲ್ಲಿ ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರದ ವಿಚಾರ ಹೊರಬಂದಿದೆ ಎಂದು ಕಳವಳ ವ್ಯಕ್ತಪಡಿಸಿದರು. ಭ್ರಷ್ಟಾಚಾರ ಯಾವುದೇ ಒಂದು ಪಕ್ಷಕ್ಕೆ ಸೀಮಿತ ವಾದುದಲ್ಲ, ಶ್ರೀಮಂತರಾಗಲು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುತ್ತಾರೆ ಎಂದರು.

ಲಾರಿ ಹರಿದು ಇಬ್ಬರ ಸಾವು

ವಿಜಯನಗರ: ಲಾರಿ ಹರಿದು ಇಬ್ಬರು ಮೃತಪಟ್ಟ ಘಟನೆ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಗಡಿಗ್ರಾಮ ಆಲೂರು ಕ್ರಾಸ್ ಸಮೀಪ ಬುಧವಾರ ರಾತ್ರಿ ನಡೆದಿದೆ. ಸಿದ್ದಲಿಂಗಸ್ವಾಮಿ (39) ಮತ್ತು ಕೊಟ್ರಯ್ಯ (26) ಮೃತಪಟ್ಟಿದ್ದಾರೆ. ಮತ್ತೊಬ್ಬ ಗಾಯಾಳು ಶಿವಕುಮಾರ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೂವರು ಯುವಕರು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಹೋಗುತ್ತಿದ್ದಾಗ ಬೆಂಗಳೂರು ಕಡೆಯಿಂದ ರಾಜಸ್ಥಾನದ ಕಡೆ ಹೊರಟಿದ್ದ ಲಾರಿ ಏಕಾಏಕಿ ಹರಿದಿದ್ದು ಕೂಡಲೇ ಅವರನ್ನು ಹೆದ್ದಾರಿ ಸಹಾಯಕರ ಮೂಲಕ ಟೋಲ್ ಆಂಬ್ಯುಲೆನ್ಸ್‌ನಲ್ಲಿ ಚಿತ್ರದುರ್ಗದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಒಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಮಾರ್ಗಮಧ್ಯೆ ಇನ್ನೊಬ್ಬರು ಮೃತಪಟ್ಟಿದ್ದಾರೆ. ಮೃತರ ಸಂಬಂಧಿ ನಾಗಯ್ಯ ಕಾನಾಹೊಸಹಳ್ಳಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಡಿನೋಟಿಫಿಕೇಷನ್ ದಾಖಲೆ ಬಿಡುಗಡೆ | ಸತ್ತವರ ಹೆಸರಲ್ಲಿ ಕೋಟ್ಯಂತರ ರುಪಾಯಿ ಸರಕಾರಿ ಜಮೀನು ಎತ್ತುವಳಿ: ಕೃಷ್ಣ ಬೈರೇಗೌಡ

ಎಚ್‌ಡಿಕೆ, ಬಿಎಸ್‌ವೈ ವಿರುದ್ಧ ದಾಖಲೆ ಬಿಡುಗಡೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಎಚ್.ಡಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದ ನಡೆದಿರುವ ಅಕ್ರಮ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದ ದಾಖಲೆಗಳನ್ನು ಜಂಟಿ ಸುದ್ದಿಗೋಷ್ಠಿಯಲ್ಲಿ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ಸೇರಿದಂತೆ ವಿವಿಧ ಸಚಿವರು ಬಿಡುಗಡೆಗೊಳಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, ರಾಜ್ಯಪಾಲರು ಕೆಲವು ಪ್ರಕರಣಗಳಲ್ಲಿ ವಿಳಂಬ ಮಾಡುತ್ತಿದ್ದಾರೆ. ತಪ್ಪು ಮಾಡಿದವರಿಗೆ ಅವರು ರಕ್ಷಣೆಗೆ ನಿಂತಿದ್ದಾರೆ. ಕುಮಾರಸ್ವಾಮಿ ಅವರು ಮಾಡಿದ ಅಕ್ರಮ ಒಂದೆರಡಲ್ಲ, ಹಲವಾರು ಇವೆ. ಈಗ ಮೊತ್ತೊಂದು ದಾಖಲೆಯಿದೆ. ಆಸ್ತಿ ಇರುವುದು ಮಠದಹಳ್ಳಿ ಗಂಗೇನಹಳ್ಳಿ ಬಡಾವಣೆ 7/1ಬಿ, ಸಿ ಹಾಗೂ ಡಿ ಸರ್ವೇ ನಂಬರ್‌ನಲ್ಲಿ 1.11 ಎಕರೆ ಜಮೀನು ಬಿಡಿಎಗೆ ಭೂಸ್ವಾಧೀನಗೊಂಡಿದ್ದು, ಇದನ್ನು ಡಿನೋಟಿಫೈ ಮಾಡಬೇಕೆಂದು ದಾರಿಯಲ್ಲಿ ಹೋಗುವ ಯಾರೋ ದಾಸಯ್ಯ ಜಮೀನಿಗೆ ಸಂಬಂಧವೇ ಇಲ್ಲದ ರಾಜಶೇಖರಯ್ಯ ಅನ್ನುವವರು ಅರ್ಜಿ ಕೊಡುತ್ತಾರೆ. 2007 ರಲ್ಲಿ ಅರ್ಜಿ ಬಂದ ಅದೇ ದಿನ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು ಡಿನೋಟಿಫೈ ಮಾಡಲು ಸೂಚಿಸುತ್ತಾರೆ ಎಂದು ಆರೋಪ ಮಾಡಿದರು.

ಜಮೀನಿನ ಅಸಲಿ ಮಾಲೀಕರು 21 ಜನರಿದ್ದಾರೆ. 30 ವರ್ಷಗಳ ಹಿಂದೆಯೇ ಈ ಜಮೀನು ಭೂಸ್ವಾಧೀನ ಆಗಿತ್ತು. ಯಾವುದು ಭೂಸ್ವಾಧೀನ ಆಗಿತ್ತೋ ಆ ಜಮೀನಿಗೆ ಕುಮಾರಸ್ವಾಮಿ ಅತ್ತೆ ಹೆಸರಿಗೆ ಜಿಪಿಎ ಮಾಡಿಕೊಳ್ಳುತ್ತಾರೆ. ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಡಿನೋಟಿಫೈ ಮಾಡಲು ಬರುವುದಿಲ್ಲ ಎಂದು ಫೈಲ್ ತಿರಸ್ಕಾರ ಮಾಡುತ್ತಾರೆ. ಆದರೂ ಅಂದಿನ ಸಿಎಂ ಕುಮಾರಸ್ವಾಮಿ ಡಿನೋಟಿಫೈ ಮಾಡುವಂತೆ ಸೂಚಿಸುತ್ತಾರೆ. ಬಳಿಕ ಸರಕಾರ ಬದಲಾಗಿ ಯಡಿಯೂರಪ್ಪ ಮುಖ್ಯಮಂತ್ರಿ ಆಗುತ್ತಾರೆ. ಆಗ ಮತ್ತೆ ಅದೇ ಫೈಲ್ ಸಿಎಂ ಯಡಿಯೂರಪ್ಪ ಕೈಗೆ ಬರುತ್ತದೆ. ಕಾನೂನು ಗಾಳಿಗೆ ತೂರಿ ಯಡಿಯೂರಪ್ಪ 2009-10 ರಲ್ಲಿ ಭೂಸ್ವಾಧೀನದಿಂದ ಕೈ ಬಿಡುತ್ತಾರೆ ಎಂದು ಹೇಳಿದರು.

ಡಿನೋಟಿಫಿಕೇಷನ್ ಆದ ಒಂದೇ ತಿಂಗಳಿಗೆ ಕುಮಾರಸ್ವಾಮಿ ಬಾಮೈದ ಚನ್ನಪ್ಪ ಎಂಬುವರಿಗೆ ಶುದ್ಧ ಕ್ರಯಪತ್ರ ಆಗುತ್ತದೆ. ಹೀಗೆ ಅಕ್ರಮವಾಗಿ ಡಿನೋಟಿಫೈ ಆದ ಜಮೀನು ಕುಮಾರಸ್ವಾಮಿ ಕುಟುಂಬಕ್ಕೆ ಸೇರಿದೆ. ಇದು ವ್ಯವಸ್ಥಿತ ವಂಚನೆ ಅಲ್ಲವೇ? ಇದು ನೇರವಾಗಿ ಕುಮಾರಸ್ವಾಮಿ ಆದೇಶದಿಂದಲೇ ಆಗಿದೆ. ಕುಮಾರಸ್ವಾಮಿ ಪುಟಪ್ ಮಾಡಿದ ಫೈಲ್‌ಗೆ ಯಡಿಯೂರಪ್ಪ ಸಹಿ ಮಾಡಿದ್ದಾರೆ. ಸಾರ್ವಜನಿಕ ಸ್ವತ್ತನ್ನು ತಂತ್ರಗಾರಿಕೆ ಮಾಡಿ ಲೂಟಿ ಮಾಡಿದ್ದಾರೆ ಎಂದು ದೂರಿದರು.

ಅಕ್ರಮ ಡಿನೋಟಿಫಿಕೇಷನ್‌ಗೆ ಸಂಬಂಧಿಸಿದ ದಾಖಲೆಗಳನ್ನು ಜಂಟಿ ಸುದ್ದಿಗೋಷ್ಠಿಯಲ್ಲಿ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ಸೇರಿದಂತೆ ವಿವಿಧ ಸಚಿವರು ಬಿಡುಗಡೆಗೊಳಿಸಿದರು.

ಇದು ಹಳೆಯ ಕೇಸ್ ಅಲ್ಲ, ಹಾಲಿ ಪ್ರಕರಣ. ನಾವೇನೋ ಸೃಷ್ಟಿ ಮಾಡಿ ಹುಡುಕಾಡಿ ದಾಖಲೆ ಮಾಡಿಲ್ಲ. ಯಡಿಯೂರಪ್ಪಗೆ ಹೈಕೋರ್ಟ್ 25 ಸಾವಿರ ರು. ದಂಡ ವಿಧಿಸಿದೆ. ನಿಮ್ಮ ಬಾಮೈದಂಗೆ ಹೇಗೆ ಜಮೀನು ಸಿಕ್ತು? ಅದಕ್ಕೆ ಕುಮಾರಸ್ವಾಮಿ ಉತ್ತರ ನೀಡಬೇಕು. 60 ಲಕ್ಷಕ್ಕೆ ಹೇಗೆ ಕುಮಾರಸ್ವಾಮಿ ಅತ್ತೆ ಜಮೀನು ಖರೀದಿ ಮಾಡಿದ್ದಾರೆ? ಜಮೀನು ನಿಮ್ಮ ಬಾಮೈದನ ಹೆಸರಲ್ಲಿ ಹೇಗಿದೆ?
–ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ನಾವು ಮಾಡುವ ಆರೋಪಗಳು ದಾಖಲೆಗಳಿವೆ. ಆದರೆ ಬಿಜೆಪಿಯವರ ಆರೋಪಗಳಿಗೆ ಈವರೆಗೆ ದಾಖಲೆ ನೀಡಿಲ್ಲ. ಈ ಹಗರಣದ ಮುಖ್ಯ ರೂವಾರಿ ಕುಮಾರಸ್ವಾಮಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಯಡಿಯೂರಪ್ಪನವರು ಉತ್ತರ ಕೊಡಬೇಕು. ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ನೀಡುವಾಗ ಕೇವಲ 14 ಸೈಟ್ ಗಳ ಮೇಲೆ ಮಾತ್ರ ಏಕೆ ಅನುಮತಿ ನೀಡಿದ್ದಾರೆ. ಅಧಿಕಾರಿಗಳ ಮೇಲೆ ಏಕೆ ಕ್ರಮವಿಲ್ಲ. 125 ಸೈಟ್ ಗಳನ್ನು ಪಡೆದವರ ಮೇಲೆ ಏಕೆ ಕ್ರಮವಿಲ್ಲ?
–ಸಂತೋಷ್ ಲಾಡ್, ಕಾರ್ಮಿಕ ಸಚಿವ

- ರಾಜ್ಯಪಾಲರು ಕೆಲವು ಪ್ರಕರಣಗಳಲ್ಲಿ ವಿಳಂಬ ಮಾಡುತ್ತಿದ್ದಾರೆ
- ತಪ್ಪು ಮಾಡಿದವರ ರಕ್ಷಣೆಗೆ ನಿಂತಿರುವ ರಾಜ್ಯಪಾಲರು
- ಕುಮಾರಸ್ವಾಮಿ ಅವರು ಮಾಡಿದ ಅಕ್ರಮ ಒಂದೆರಡಲ್ಲ, ಹಲವಾರು ಇವೆ
- ಕುಮಾರಸ್ವಾಮಿ, ಯಡಿಯೂರಪ್ಪ ಸಾರ್ವಜನಿಕ ಸ್ವತ್ತನ್ನು ತಂತ್ರಗಾರಿಕೆ ಮಾಡಿ ಲೂಟಿ ಮಾಡಿದ್ದಾರೆ
- ಸುದ್ದಿಗೋಷ್ಠಿಯಲ್ಲಿ ಸಚಿವ ಕೃಷ್ಣಬೈರೇಗೌಡ ಆರೋಪ

ಅರಣ್ಯಾಧಿಕಾರಿ ಲೋಕಾಯುಕ್ತ ಬಲೆಗೆ

ಚಾಮರಾಜನಗರ: ಹನೂರು ತಾಲೂಕಿನ ಪಾಲಾರ್ ಗ್ರಾಮದಲ್ಲಿ ಮನೆ ನಿರ್ಮಾಣ ಮಾಡಲು ಸೋಲಿಗ ಸಮುದಾಯದ ನಿವಾಸಿಗಳಿಂದ ಲಂಚಕ್ಕೆ ಬೇಡಿಕೆಯಿಟ್ಟಿದ್ದ ಪಾಲರ್ ವಲಯ ವ್ಯಾಪ್ತಿಯ ಉಪವಲಯ ಅರಣ್ಯಾ ಧಿಕಾರಿ ಭೋಜಪ್ಪ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಘಟನೆ ವಿವರ: ಮಲೆ ಮಹದೇಶ್ವರದ ಉಪವಲಯ ಅರಣ್ಯಾಧಿಕಾರಿ ಬೋಜಪ್ಪ ಪಾಲಾರ್ ಗ್ರಾಮದಲ್ಲಿ ಆದಿವಾಸಿ ಕುಟುಂಬಗಳಿಗೆ 18 ಮನೆ ಮಂಜೂರಾಗಿದ್ದು ಸರಕಾರದಿಂದ ಮೊದಲ ಕಂತು ಬಿಡುಗಡೆಯಾಗಿದೆ. ಈ ವೇಳೆ ಒಂದು ತಿಂಗಳು ಕಾಲ ಮನೆ ಕಾಮಗಾರಿಗೆ ಅವಕಾಶ ಮಾಡಿಕೊಟ್ಟಿಲ್ಲ. ನಂತರ ನಿವಾಸಿಗಳೆಲ್ಲರೂ ತಲಾ ಒಂದೊಂದು ಸಾವಿರದಂತೆ 18 ಸಾವಿರ ರು. ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಈ ಬಗ್ಗೆ ಪಾಲಾರ್ ಗ್ರಾಮದ ಫಲಾ ನುಭವಿ ಮುರುಗೇಶ್ ಲೋಕಾಯುಕ್ತ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಚಾಮರಾಜನಗರ ಲೋಕಾಯುಕ್ತ ಡಿವೈಎಸ್ಪಿ ಮ್ಯಾಥೂಸ್ ಮಾರ್ಗದರ್ಶನದಲ್ಲಿ ಅಧಿಕಾರಿ ಗಳಾದ ಲೋಹಿತ್, ಶಶಿಕುಮಾರ್ ದಾಳಿ ನಡೆಸಿ ಭೋಜಪ್ಪ ಅವರನ್ನು ಹಣದ ಸಮೇತ ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆ ನಡೆಸಿದ್ದಾರೆ. ದಾಳಿಯಲ್ಲಿ ಪೇದೆ ಗೌತಮ್, ಮಹಾಲಿಂಗ ಸ್ವಾಮಿ, ಮಹಾದೇವ ಸ್ವಾಮಿ ಪಾಲ್ಗೊಂಡಿದ್ದರು.

ವಿಶ್ವವಾಣಿ ಕ್ಲಬ್‌ಹೌಸ್‌ಗೆ ಸಹಸ್ರ ಸಂಭ್ರಮ

← ಮೊದಲಪುಟದಿಂದ

ಆರಂಭಿಕ ದಿನಗಳಲ್ಲಿ ವಾರದ ಏಳು ದಿನವೂ ನಡೆಯುತ್ತಿದ್ದ ಕ್ಲಬ್‌ಹೌಸ್, ಕೆಲ ತಿಂಗಳುಗಳಿಂದ ಭಾನುವಾರ ವಿರಾಮ ಪಡೆಯುತ್ತಿದೆ. ಕ್ಲಬ್‌ಹೌಸ್ ಇತಿಹಾಸದಲ್ಲಿಯೇ ಈ ಪ್ರಮಾಣದಲ್ಲಿ ಸರಣಿ ಕಾರ್ಯಕ್ರಮಗಳು ನಡೆದಿರುವುದು ವಿಶ್ವವಾಣಿ ಕ್ಲಬ್ ಹೌಸ್ ಒಂದರಲ್ಲಿಯೇ ಎನ್ನುವುದು ಒಂದು ದಾಖಲೆಯೂ ಹೌದು.

ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ ನಾಡಿನ ಖ್ಯಾತ ನಾಮರು ಮಾತನಾಡಿದ್ದಾರೆ. ಪ್ರಮುಖವಾಗಿ ಡಾ. ಸುಧಾಮೂರ್ತಿ, ಎಸ್.ಎಲ್.ಬೈರಪ್ಪ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬಸವರಾಜ ಬೊಮ್ಮಾಯಿ, ರೂಪಾ ಮೌದ್ಗಿಲ್, ವಿನಯ್ ಗುರೂಜಿ, ತೇಜಸ್ವಿ ಸೂರ್ಯ, ಡಾ.ಸಿ.ಎನ್.ಮಂಜುನಾಥ್, ರಘು ದೀಕ್ಷಿತ್, ಸದ್ಗುರು ಜಗ್ಗಿ ವಾಸುದೇವ, ಭಾರತಿ ವಿಷ್ಣುವರ್ಧನ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಚರ್ಚೆಯಾಗದ ವಿಷಯವಿಲ್ಲ: 'ಆಡು ಮುಟ್ಟದ ಸೊಪ್ಪಿಲ್ಲ, ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ ಚರ್ಚೆಯಾಗದ ವಿಷಯವಿಲ್ಲ' ಎನ್ನುವುದು ಸತ್ಯ. ವಿಶ್ವವಾಣಿಯ ಈ ಮಾತಿನ ಮಂಟಪಕ್ಕೆ ವಿಷಯದ ಎಲ್ಲೆಯಿಲ್ಲ. ಅಧ್ಯಾತ್ಮ, ಆರೋಗ್ಯ, ಕಲೆ, ಸಂಗೀತದಿಂದ ಶುರುವಾಗಿ ಲೈಂಗಿಕ ಆರೋಗ್ಯದ ಅರಿವಿನ ಕಾರ್ಯಕ್ರಮವೂ ನಡೆದಿದೆ. ಎಡ-ಬಲ ಪಂಥದ ಬೇಧವಿಲ್ಲದೇ, 'ವಿಷಯ'ಕ್ಕೆ ಮಾತ್ರ ಮಹತ್ವ ನೀಡುವ ಅಪರೂಪದ ವೇದಿಕೆ ಎಂದರೆ ತಪ್ಪಾಗುವುದಿಲ್ಲ.

ಇತ್ತೀಚಿನ ಕೆಲ ದಿನಗಳಿಂದ ಕ್ಲಬ್‌ಹೌಸ್‌ನಲ್ಲಿ ಸರಣಿ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಪ್ರಮುಖವಾಗಿ ಪ್ರತಿ ಶನಿವಾರ ಪ್ರೊ. ಪ್ರಶಾಂತ ಹೆಗಡೆ ಮೂಡಲಮನೆ 'ಷಟ್ಪದಿಯಲ್ಲಿ ಭಗವದ್ಗಿತೆ' ಹಾಗೂ ಪ್ರತಿ ಸೋಮವಾರ ನಂದೀಶ್ ಪಿ.ಕೆ ಅವರಿಂದ 'ಕುವೆಂಪು ರಾಮಾಯಣ ದರ್ಶನಂ' ಎನ್ನುವ ಸರಣಿ ಆರಂಭವಾಗಿದೆ. ಇದರೊಂದಿಗೆ ನಾಡಹಬ್ಬ ದಸರಾ ನಿಮಿತ್ತ ಡಾ.ಮೈಸೂರು ನಾಗರಾಜ ಶರ್ಮಾ 'ಮೈಸೂರು ದಸರಾ ಎಷ್ಟೊಂದು ಸುಂದರ' ಎನ್ನುವ ಸರಣಿಯನ್ನು ಆರಂಭಿಸಲಾಗಿದೆ.

ಕಚ್ಚಿದ ಹಾವನ್ನು ಕೊಂದು ಆಸ್ಪತ್ರೆಗೆ ಬಂದ ಭೂಪ

ಹುಬ್ಬಳ್ಳಿ: ತಂದೆಯೊಂದಿಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಯುವಕನಿಗೆ ಹಾವು ಕಚ್ಚಿದ್ದು, ಕೂಡಲೇ ಅದನ್ನು ಕೊಂದು ಹಿಡಿದುಕೊಂಡು ಆತನ ತಂದೆ ಯೊಂದಿಗೆ ಆಸ್ಪತ್ರೆಗೆ ಬಂದ ಘಟನೆ ಬುಧವಾರ ಸಂಜೆ ಇಂಗಳಗಿ ಗ್ರಾವ ಎದಲ್ಲಿ ನಡೆಯಿತು. ಫಕೀರಪ್ಪ ಅಣ್ಣಿಗೇರಿ ಹಾವು ಕಡಿತಕ್ಕೊಳಗಾದವ. ತಂದೆಯೊಂದಿಗೆ ಶೇಂಗಾ ಕೀಳಲು ಹೋಗಿದ್ದಾಗ ಯುವಕನಿಗೆ ಹಾವು ಕಚ್ಚಿದೆ. ಕೂಡಲೇ ಹಾವಿನ ತಲೆ ಜಜ್ಜಿ ಕೊಂದು ಹಾಕಿದ್ದಾನೆ. ನಂತರ ತಂದೆಯ ಜೊತೆ ಬಂದು ಆಸ್ಪತ್ರೆಗೆ ದಾಖಲಾಗಿದ್ದಾನೆ.

ಮರಳು ಗಣಿಗಾರಿಕೆ ಘರ್ಷಣೆ: ವ್ಯಕ್ತಿ ಕೊಲೆ

ನ್ಯಾಮತಿ: ಮರಳು ಗಣಿಗಾರಿಕೆ ಸಂಬಂಧ ತಾಲೂಕಿನ ಚೀಲೂರು ಕಡದಕಟ್ಟೆ ಹಾಗೂ ಮರಿಗೊಂಡನಹಳ್ಳಿ ಗ್ರಾಮಸ್ಥರ ನಡುವೆ ಘರ್ಷಣೆ ನಡೆದಿದೆ. ಘಟನೆಯನ್ನು ವೀಕ್ಷಿಸುತ್ತಿದ್ದ ವ್ಯಕ್ತಿ ಯೊಬ್ಬರು ದುಷ್ಕರ್ಮಿಗಳು ಚಾಕು ಇರಿತದಿಂದ ಮೃತಪಟ್ಟಿದ್ದು, ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಚೀಲೂರು ಕಡದಕಟ್ಟೆಯ ಶಿವರಾಜ ಟಿ. (33) ಮೃತ ವ್ಯಕ್ತಿ. ಭರತ್ ಆರ್. ಎಂಬು ವವರು ಇದೇ ವೇಳೆ ಗಾಯಗೊಂಡಿದ್ದು, ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆಯ ವಿವರ: ಚೀಲೂರು ಕಡದಕಟ್ಟೆ ಗ್ರಾ.ಪಂ. ವ್ಯಾಪ್ತಿಯ ಮರಿಗೊಂಡನಹಳ್ಳಿ ಬಳಿ ಹರಿಯುತ್ತಿರುವ ತುಂಗಭದ್ರಾ ನದಿಯ ದಡದಲ್ಲಿ ಮರಳು ತೆಗೆಯುವುದರ ಸಂಬಂಧ ಎರಡೂ ಗ್ರಾಮಗಳ ಜನರ ಮಧ್ಯೆ ವೈಷಮ್ಯ ಇತ್ತು. ಇದೇ ವಿಷಯಕ್ಕಾಗಿ ಬುಧವಾರ ಮಧ್ಯಾಹ್ನ ಗ್ರಾಮಸ್ಥರ ನಡುವೆ ಗಲಾಟೆಯಾಗಿದೆ. ಚೀಲೂರು ಕಡದಕಟ್ಟೆಯ ಕೆಲವರು, ಮರಿಗೊಂಡನಹಳ್ಳಿ ಬಳಿ ಮರಳು ಗಣಿಗಾರಿಕೆ ಬೇಡ. ಮರಳು ಮಾರಾಟ ಮಾಡಿದ ಹಣ ದಲ್ಲಿ ಗ್ರಾಮದ ದೇವಸ್ಥಾನದ ಅಭಿವೃದ್ಧಿಗಾಗಿ ಪಾಲು ನೀಡಬೇಕು ಎಂದು ಒತ್ತಾಯಿಸಿ ರಸ್ತೆತಡೆ ನಡೆಸಿದ್ದರು. ಆಗ ಮಾತಿನ ಚಕಮಕಿ ನಡೆದು ಘರ್ಷಣೆ ಆರಂಭವಾಗಿದೆ.

ಇದೇ ವೇಳೆ, ಹೊಲದಿಂದ ಮನೆಯತ್ತ ಮರಳುತ್ತಿದ್ದ ಶಿವರಾಜ ಹಾಗೂ ಭರತ್ ಅವರಿಗೆ ದುಷ್ಕರ್ಮಿಗಳು ಚಾಕುವಿನಿಂದ ಇರಿದಿದ್ದಾರೆ. ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎರಡೂ ಗ್ರಾಮಗಳಲ್ಲಿ ಬಿಗುವಿನ ವಾತಾವರಣ ಇದ್ದು, ಬಿಗಿ ಬಂದೋಬಸ್ತ್ ನಿಯೋಜಿಸಲಾಗಿದೆ.

ದೇವಾಲಯದ ಆಡಳಿತ ಮಂಡಳಿಯಿಂದ ಆದೇಶ
ಹೊರನಾಡಲ್ಲೂ ವಸ್ತ್ರ ಸಂಹಿತೆ ಜಾರಿ

ಶೃಂಗೇರಿ: ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಶೃಂಗೇರಿ ಶಾರದಾಂಬ ದೇವಸ್ಥಾನದಲ್ಲಿ ಕೆಲವು ದಿನಗಳ ಇಂದೆ ಅಷ್ಟೇ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟು ದೇವಸ್ಥಾನಕ್ಕೆ ಬರುವ ಆದೇಶವನ್ನು ಜಾರಿಗೆಗೊಳಿಸಿತ್ತು ಯಾವುದೇ ಬೇರೆ ರೀತಿಯ ಹುಡುಗೆಗಳನ್ನು ತೊಟ್ಟು ದೇವಸ್ಥಾನಕ್ಕೆ ಬರುವುದನ್ನು ನಿಷೇಧಿಸಲಾಗಿದೆ ಎಂದು ಆದೇಶ ಹೊರಡಿಸಿದ್ದು ಇದರ ಬಳಿಕ ಕರ್ನಾಟಕದ ಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದಾದ ಕಳಸ ತಾಲೂಕಿನ ಹೊರನಾಡು ಶ್ರೀಅನ್ನಪೂರ್ಣೇಶ್ವರಿ ದೇವಾಲಯದಲ್ಲಿ ಕೂಡ ಡ್ರೆಸ್ ಕೋಡ್ ಅನ್ನು ಜಾರಿಗೊಳಿಸಲಾಗಿದೆ.

ಹೊರನಾಡಿನಲ್ಲಿ ಇರುವ ಅನ್ನಪೂರ್ಣೇಶ್ವರಿ ದೇವರ ದರ್ಶನಕ್ಕೆ ಬರುವ ಭಕ್ತರಿಗೆ ಡ್ರೆಸ್ ಕೋಡ್ ಜಾರಿಗೊಳಿಸಲಾಗಿದೆ ಎಂದು ದೇವಾಲಯದ ಆಡಳಿತ ಮಂಡಳಿಯಿಂದ ಆದೇಶ ಹೊರಡಿಸಲಾಗಿದೆ. ಗಂಡಸರು ಶಲ್ಯ, ಪ್ಯಾಂಟ್, ಪಂಚೆ ಧರಿಸಬೇಕು ಹೆಣ್ಣು ಮಕ್ಕಳು ಸೀರೆ ಹಾಗೂ ಚೂಡಿದಾರ ಧರಿಸುವಂತೆ ಸೂಚನೆ ಹೊರಡಿಸಲಾಗಿದೆ. ಸಾಂಪ್ರದಾಯಿಕ ಉಡುಗೆಯಲ್ಲಿ ಬರದಿದ್ದರೆ ದೇವಸ್ಥಾನದ ಒಳಗೆ ಪ್ರವೇಶವಿಲ್ಲ ಎಂದು ಆದೇಶ ಹೊರಡಿಸಿದ್ದು ಅನ್ನಪೂರ್ಣೇಶ್ವರಿ ದರ್ಶನಕ್ಕೆ ಬರುವ ಭಕ್ತರು ಸಾಂಪ್ರದಾಯಿಕ ಉಡುಗೆ ಕಡ್ಡಾಯವಾಗಿ ತೊಟ್ಟು ಬರಬೇಕೆಂದು ದೇವಾಲಯ ಆಡಳಿತ ಮಂಡಳಿ ಮನವಿ ಮಾಡಿದೆ.

ಲೈಂಗಿಕ ದೌರ್ಜನ್ಯ ಆರೋಪ: ಜ್ಯೋತಿಷಿ ಬಂಧನ

ಸುಳ್ಯ: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದ ಮೇಲೆ ಪೋಕ್ಸೊ ಪ್ರಕರಣದಲ್ಲಿ ಕಾಣಿಯೂರು ಸಮೀಪದ ಜ್ಯೋತಿಷಿ ಪ್ರಸಾದ್ ಪಾಂಗಣ್ಣಾಯ ಎಂಬಾತನನ್ನು ಬೆಳ್ಳಾರೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಮಂಗಳೂರಿನಲ್ಲಿ ಕೌನ್ಸಿಲಿಂಗ್ ಸಂದರ್ಭ ಲೈಂಗಿಕ ದೌರ್ಜನ್ಯ ಎಸಗಿರುವ ಬಗ್ಗೆ ಪ್ರಕರಣ ದಾಖಲಾಗಿದ್ದು, ಬೆಳ್ಳಾರೆ ಪೊಲೀಸರು ಸೆ.19ರ ಬೆಳಗ್ಗಿನ ಜಾವ ಪ್ರಸಾದ್ ಪಂಗಣ್ಣಾಯನನ್ನು ಆತನ ಮನೆಯಲ್ಲಿ ಬಂಧಿಸಿದ್ದಾರೆ ಎಂಬ ಮಾಹಿತಿ ತಿಳಿದು ಬಂದಿದೆ. ಪ್ರಸಾದ್ ಪಾಂಗಣ್ಣಾಯ ಕಾಣಿಯೂರು ಸಮೀಪದ ಬೆಳಂದೂರು ನಿವಾಸಿ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮಘಟ್ಟ ಕುರಿತ ಕಸ್ತೂರಿ ರಂಗನ್ ವರದಿ ಬಗ್ಗೆ ಬಾಧ್ಯಸ್ಥರ ಸಭೆ
16114 ಚ.ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶ ಮಿತಿ ಸೂಕ್ತ :ಈಶ್ವರ ಖಂಡ್ರೆ
ಅರಣ್ಯದಂಚಿನ ಜನರಿಗೆ ವಿಶೇಷ ಪ್ಯಾಕೇಜ್ ಘೋಷಿಸಿ

ಪಶ್ಚಿಮಘಟ್ಟ ವ್ಯಾಪ್ತಿಯ 11 ಜಿಲ್ಲೆಗಳ ಸಚಿವರ, ಶಾಸಕರ ಮತ್ತು ಸಂಸತ್ ಸದಸ್ಯರ ಅಭಿಪ್ರಾಯ ಪಡೆಯುವ ಸಭೆಯಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಭಾಗಿಯಾಗಿದ್ದರು. ಕೆ.ಜೆ.ಜಾರ್ಜ್, ಡಾ.ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಮಧು ಬಂಗಾರಪ್ಪ, ಮಾಂಕಾಳ ವೈದ್ಯ, ವಿಧಾನಪರಿಷತ್ ಉಪ ಸಭಾಪತಿ ಪ್ರಾಣೇಶ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ, ಶಾಸಕರುಗಳಾದ ಆರಗ ಜ್ಞಾನೇಂದ್ರ, ನಯನ ಮೋಟಮ್ಮ, ರಾಜೇಗೌಡ, ಹರೀಶ್ ಪೂಂಜಾ, ಸಂಸದರಾದ ಶ್ರೇಯಸ್ ಪಟೇಲ್ ಮತ್ತಿತರರು ಪಾಲ್ಗೊಂಡಿದ್ದರು.

ಬೆಂಗಳೂರು: ಅರಣ್ಯ ಅಂಚಿನಲ್ಲಿರುವ ಜನರ ಜೀವನೋಪಾಯಕ್ಕೆ ಕೇಂದ್ರ ಸರಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ.

ಪಶ್ಚಿಮ ಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕುರಿತಂತೆ ಕೇಂದ್ರ ಸರಕಾರ ಅ.2ರಂದು 6ನೇ ಅಧಿಸೂಚನೆ ಹೊರಡಿಸಿರುವ ಹಿನ್ನೆಲೆಯಲ್ಲಿ ಈ ಮಾಸಾಂತ್ಯದೊಳಗೆ ರಾಜ್ಯ ಸರಕಾರದ ನಿಲುವು ಸಲ್ಲಿಸಬೇಕಿರುವ ಹಿನ್ನೆಲೆಯಲ್ಲಿ ನಡೆದ 11 ಜಿಲ್ಲೆಗಳ ಜನಪ್ರತಿನಿಧಿಗಳ (ಬಾಧ್ಯಸ್ಥರ) ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಶ್ಚಿಮಘಟ್ಟ ವ್ಯಾಪ್ತಿಯ 11 ಜಿಲ್ಲೆಗಳ ಸಚಿವರ, ಶಾಸಕರ ಮತ್ತು ಸಂಸತ್ ಸದಸ್ಯರ ಅಭಿಪ್ರಾಯ ಪಡೆಯಲಾಗಿದ್ದು, ಶುಕ್ರವಾರ ನಡೆಯಲಿರುವ ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಚರ್ಚಿಸಿ, ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸಿ, ಸಂಪುಟದ ಅನುಮೋದನೆ ಪಡೆದು ಕೇಂದ್ರಕ್ಕೆ ಸಲ್ಲಿಸಲಾಗುವುದು ಎಂದರು.

ವಿಶೇಷ ಪ್ಯಾಕೇಜ್ ಘೋಷಿಸಬೇಕು: ಈಗಾಗಲೇ ಇರುವ 16114 ಚ.ಕಿ.ಪ್ರದೇಶಕ್ಕೆ ಅಂಗೀಕಾರ ನೀಡಿದರೂ ಈ ಪ್ರದೇಶದಲ್ಲಿರುವ 1576 ಗ್ರಾಮಗಳ ಜನರ ಜೀವನೋಪಾಯಕ್ಕೆ ಅನಾನುಕೂಲ ಆಗಲಿದೆ. ಪಶ್ಚಿಮಘಟ್ಟ ಕೇವಲ ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡಿಗೆ ಮಾತ್ರ ಸಂಬಂಧಿಸಿದ್ದಲ್ಲ. ಈ ಘಟ್ಟ ಪ್ರದೇಶ ಹಲವು ನದಿಗಳ ಉಗಮ ಸ್ಥಾನವಾಗಿದೆ ಮಿಗಿಲಾಗಿ ಮಳೆಯ ಮಾರುತಗಳನ್ನು ತಡೆಯುವ ಕಾರಣ ದೇಶಾದ್ಯಂತ ವ್ಯಾಪಕ ಮಳೆಯಾಗುತ್ತದೆ. ಹೀಗಾಗಿ ಈ ಪಶ್ಚಿಮ ಘಟ್ಟ ಸಂರಕ್ಷಣೆಯ ಹೊಣೆ ಕೇಂದ್ರದ್ದೂ ಆಗಿರುವುದರಿಂದ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದರು.

ಬಫರ್ ವಲಯ ಶೂನ್ಯಕ್ಕೆ ತರಬೇಕು

ಹಲವು ಜನಪ್ರತಿನಿಧಿಗಳು ಈಗಾಗಲೇ ರಾಜ್ಯದಲ್ಲಿ 16114 ಚ.ಕಿ.ಮೀ ಪರಿಸರ ಸೂಕ್ಷ್ಮ ಪ್ರದೇಶ ಇದ್ದು, ಇನ್ನು ಹೆಚ್ಚಳ ಮಾಡಿದರೆ ಅರಣ್ಯದಂಚಿನ ಜನರ ಬದುಕೇ ದುಸ್ತರವಾಗುತ್ತದೆ. ಹೀಗಾಗಿ ಬಫರ್ ವಲಯವನ್ನು ಶೂನ್ಯಕ್ಕೆ ತರಬೇಕು ಎಂದು ಸಲಹೆ ನೀಡಿದ್ದಾರೆ. ಹಾಲಿ ಇರುವ 16114 ಚ.ಕಿ.ಮೀ. ಮಿತಿಗೆ ಸಮ್ಮತಿಸಿದರೆ ಶೂನ್ಯ ಬಫರ್ ಆಗುತ್ತದೆ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ಕಸ್ತೂರಿ ರಂಗನ್ ಸಮಿತಿ ವರದಿಯಲ್ಲಿ ರಾಜ್ಯದಲ್ಲಿ 20,668 ಚದರ ಕಿ.ಮೀ ಪರಿಸರ ಸೂಕ್ಷ್ಮ ವಲಯ ಗುರುತಿಸಲಾಗಿದೆ. ಈ ಬಗ್ಗೆ ಭೌತಿಕ ಸರ್ವೇ ನಡೆಸಿದರೆ ಈ ಪ್ರದೇಶ ಇನ್ನೂ ಹೆಚ್ಚಳವಾಗಲಿದೆ ಎಂಬ ಅಭಿಪ್ರಾಯವನ್ನೂ ಜನಪ್ರತಿನಿಧಿಗಳು ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ತಲೆಮಾರುಗಳಿಂದ ಅರಣ್ಯ ಪ್ರದೇಶದಲ್ಲೇ ಜೀವನ ನಡೆಸುತ್ತಿರುವವರನ್ನು ಒಕ್ಕಲೆಬ್ಬಿಸುವುದು ಸೂಕ್ತವಲ್ಲ. ಅವರಿಗೆ ಬೇರೆ ಕಡೆ ಪುನರ್ವಸತಿ ಕಲ್ಪಿಸಿದರೂ ಅವರು ಅಲ್ಲಿಗೆ ಹೋಗುವುದಿಲ್ಲ. 3 ಎಕರೆಗಿಂತ ಮೇಲ್ಪಟ್ಟ ದೊಡ್ಡ ಒತ್ತುವರಿ ತೆರವು ಮಾಡಲಾಗುತ್ತಿದ್ದು, ಬಡ ರೈತರ ಒತ್ತುವರಿಯನ್ನು (ಪಟ್ಟಾಭೂಮಿ ಮತ್ತು ಒತ್ತುವರಿ ಸೇರಿ 3 ಎಕರೆ) ತೆರವು ಮಾಡಿಸುವುದಿಲ್ಲ.
ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ: ಅಇಂ(ವಿ)/ಪ್ರ(ನಿ)/ಬೆಂಮಕ್ಷೇವ(ದ)/ಸಕಾನಿಇಂ-(ಕಾ)/2024-25/4514-15 ದಿ: 18.09.2024
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (KPP ಪೋರ್ಟಲ್ ಮುಖಾಂತರ)
ಕವಿಪ್ರನಿನಿಯು ಅರ್ಹ ಬಿಡ್ಡರ್‌ಗಳಿಂದ ವಿವಿಧ ರಿಪೇರಿ ಮತ್ತು ನಿರ್ವಹಣೆ ಸಿವಿಲ್ ಕಾಮಗಾರಿಗಳನ್ನು ಹೂಡಿ ಮತ್ತು ಸೋಮನಹಳ್ಳಿ ವಿಭಾಗದ ವ್ಯಾಪ್ತಿಯಲ್ಲಿ ನಿರ್ವಹಿಸಲು KPP ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ.
ಟೆಂಡರ್‌ನಲ್ಲಿ ಭಾಗವಹಿಸಲು ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 20.09.2024ರ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು.
ಸಹಿ/- ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತ, ನೆಲಮಹಡಿ, ಕವಿಪ್ರನಿನಿ ಕಚೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು-560 009. ದೂ: 080-22386686/85.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/3054 ಜಿ.ಮು.ರ/ 2024-25/1937 ದಿನಾಂಕ: 19.09.2024
ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)(2ನೇ & 3ನೇ ಕರೆ)
ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 5 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ 3 ಕಾಮಗಾರಿಗಳು ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಕ್ಕೆ ಸೇರಿದ ಗುತ್ತಿಗೆದಾರರಿಗೆ ಮೀಸಲಿಡಲಾಗಿದೆ ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 69.19 ಲಕ್ಷಗಳು ಹಾಗೂ ರೂ. 50.73 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 69,200/- ರೂ.ಗಳು ಹಾಗೂ 50,800/- ರೂಗಳು. ಸರ್ಕಾರದ ಪತ್ರ ಸಂಖ್ಯೆ. ಎಫ್.ಡಿ:876:ಇಎಕ್ಷಪಿ-12/2017 ಬೆಂಗಳೂರು ದಿನಾಂಕ:-10-10-2017 ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಇ.ಎಂ.ಡಿ ರಿಯಾಯಿತಿ ಒದಗಿಸಲಾಗಿದೆ. ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:27.09.2024 ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 30.09.2024 ರ ಸಂಜೆ 4.31 ಘಂಟೆಯ ನಂತರ ಮತ್ತು. ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 01.10.2024 ರ ಮುಂಜಾನೆ 4.30 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/254/ಕೆಎಸ್‌ಎಂಸಿಎ/2024-25

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ. ತುಮಕೂರು-572 103,
ಸಂಖ್ಯೆ:ತುವಿ:ಅ.ವಿ:ಅ.ಉ.ನೇ:2024-25/2110 ದಿನಾಂಕ: 19.09.2024
ಅಧಿಸೂಚನೆ
ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಪದವಿ ತರಗತಿಗಳಿಗೆ ವಿಷಯವಾರು ಬೋಧನೆ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.
ವಿಷಯಗಳು: ಪತ್ರಿಕೋದ್ಯಮ & ಸಮೂಹ ಸಂವಹನ, ಸಮಾಜಕಾರ್ಯ, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ವಾಣಿಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ (ತಿಪಟೂರು) ವಾಣಿಜ್ಯಶಾಸ್ತ್ರ(ಮಾಹಿತಿ ವ್ಯವಸ್ಥೆ), ಪ್ರಾಣಿಶಾಸ್ತ್ರ, ಆಹಾರ & ಪೋಷಣೆ, ಸಾವಯವ ರಸಾಯನಶಾಸ್ತ್ರ, ಮನೋವಿಜ್ಞಾನ, ರಸಾಯನಶಾಸ್ತ್ರ, ಭೌತಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ಗಣಕ ವಿಜ್ಞಾನ (M.Sc in Computer Science, M.Sc in Data Science) ಗಣಿತಶಾಸ್ತ್ರ (ಸಿರಾ), ಜೀವರಸಾಯನಶಾಸ್ತ್ರ, ಜೀವಾವರಣಶಾಸ್ತ್ರ & ಪರಿಸರ ವಿಜ್ಞಾನ, ಕಾನೂನು (Business Law and Criminology) ಹಾಗೂ PG Diploma in Coconut Plantation.
ಸೂಚನೆ ಎಲ್ಲಾ ಸ್ನಾತಕೋತ್ತರ ವಿಜ್ಞಾನ ವಿಭಾಗಗಳು ವಿಶ್ವವಿದ್ಯಾನಿಲಯದ ನೂತನ ಬಿದರಕಟ್ಟೆ ಕ್ಯಾಂಪಸ್‌ಗೆ ಸ್ಥಳಾಂತರಗೊಳ್ಳಲಿದೆ.
ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾನಲಯದ ವೆಬ್‌ಸೈಟ್ www.tumkuruniversity.ac.in ರಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಅಭ್ಯರ್ಥಿಗಳು ಆನ್‌ಲೈನ್ ಮುಖೇನ ದಿನಾಂಕ: 29.09.2024 ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸುವುದು.
ಸಹಿ/-ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು - 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ-3/ಟೆಂಡರ್/20/2024-25 ದಿನಾಂಕ: 19-09-2024
ಕೆಪಿಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ ಕರ್ನಾಟಕ ಪಬ್ಲಿಕ್ ಶಾಲೆ ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 26-09-2024 ರಂದು ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: https://www.kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/2070/ಅಡ್ವರ್ಟೋರ್/2024-25

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ಇ-ಟೆಂಡರ್ ಪ್ರಕಟಣೆ ಸಂಖ್ಯೆ: ಸಂಖ್ಯೆ: ಕಾಯೋಮೋಶಿ/ಎ2/ಮೋಜಣಿ/ಇ-ಟೆಂಡರ್/ಸಿಆರ್-16/2024-25E-1515215 ದಿನಾಂಕ: 17.09.2024
ಇ-ಪ್ರೊಕ್ಯೂರ್ ಮೆಂಟ್ ಮುಖಾಂತರ ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ
2024-25 ನೇ ಸಾಲಿನಲ್ಲಿ ಶಿವಮೊಗ್ಗ, ಸಾಗರ, ಭದ್ರಾವತಿ, ಶಿವಮೊಗ್ಗ, ವನ್ಯಜೀವಿ ವಿಭಾಗ, ಮಂಗಳೂರು, ಕುಂದಾಪುರ ಮತ್ತು ಕುದುರೆಮುಖ ವನ್ಯಜೀವಿ ವಿಭಾಗಗಳಲ್ಲಿನ ವಿವಿಧ ವಲಯಗಳ ಅಧಿಸೂಚಿತ ಅರಣ್ಯ ಪದೇಶಗಳ ಮೋಜಣಿ/ಮರುಮೋಜಣಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಒಟ್ಟು ಅಂದಾಜು ರೂ. 176.865 ಲಕ್ಷಗಳ ಒಟ್ಟು 57 ಕಾಮಗಾರಿಗಳಿಗೆ ಅಲ್ಪಾವಧಿ ಮರು ಇ-ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅರಣ್ಯ ಗುತ್ತಿಗೆದಾರರು ದಿನಾಂಕ:25.09.2024 ರ ಸಂಜೆ as per E-Portal ಟೆಂಡರನ್ನು ಸಲ್ಲಿಸಬಹುದಾಗಿದೆ.
ಇ-ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್ ನಲ್ಲಿ ಬಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182-250785 ಅಥವಾ ಮೊಬೈಲ್ ಸಂಖ್ಯೆ: 9481990223 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/- (ಜ್ಞಾನಾನಂದ.ಎಸ್) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕಾರ್ಯಯೋಜನೆ ಮತ್ತು ಮೋಜಣಿ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/24-25/92/09/705

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತುಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕೊಪ್ಪಳ.
ದೂರವಾಣಿ :08539-220054
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2024-25/2840 ದಿ:1709.2024
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕೊಪ್ಪಳ ಜಿಲ್ಲೆಯ 02 ಟೆಂಡರ ಕಾಮಗಾರಿಗಳಿಗಾಗಿ 2702 ಏತ ನೀರಾವರಿ ಯೋಜನೆಯ ವಾರ್ಷಿಕ ನಿರ್ವಾಹಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 88.87 ಮತ್ತು ಗರಿಷ್ಠ ಮೊತ್ತ ರೂ. 165.03 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 20.09.2024 ರಿಂದ ದಿನಾಂಕ: 27.09.2024 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ 25.09.2024 ರಂದು ಬೆಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 30-09-2024 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 01-10-2024 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಇ-ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ http:// eproc. karntaka. gov.in/ e-portal/ index.seam ನಲ್ಲಿ ಪಡೆಯಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ.ಕೊಪ್ಪಳ.
ಡಿಐಪಿಆರ್/ಕೊಪ್ಪಳ/393/ಕೆಎಸ್‌ಎಂಸಿಎ/2024-25

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಉತ್ತರ ಕರ್ನಾಟಕ ಜನತೆಯ ಅಭಿವೃದ್ಧಿಗೆ ಅತ್ಯಗತ್ಯವಾಗಿರುವ ಕಳಸಾ-ಬಂಡೂರಿ ಯೋಜನೆಗೆ ತಕ್ಷಣವೇ ಅನುಮತಿ ನೀಡಬೇಕೆಂದು ನಾನು ಪ್ರಧಾನಿಗೆ ಪತ್ರ ಬರೆದಿದ್ದೇನೆ. ನೀರಿನ ಅಗತ್ಯ ಪೂರೈಸಲು ಅಂತರರಾಜ್ಯ ಸಹಕಾರ ಮಹತ್ವದ್ದು. ನಮ್ಮ ಜನರ ಅಗತ್ಯಗಳಿಗೆ ಆದ್ಯತೆ ನೀಡೋಣ.

ಆರ್.ಎನ್.ಸತ್ಯನಾರಾಯಣರಾವ್, ನವದೆಹಲಿ

ಹುಬ್ಬಳ್ಳಿ-ಧಾರವಾಡ ಸುತ್ತಮುತ್ತಲಿನ ಜನರು ಇನ್ನೆಂದೂ ನೀರು ಬೇಕು ಎಂದು ಕಾಂಗ್ರೆಸ್ ಸರಕಾರವನ್ನು ಕೇಳುವುದಿಲ್ಲ. ಕಾಲು, ಕೈ , ತೊಡೆಗಳ ಬಾಸುಂಡೆಗಳನ್ನು ಹೆಂಗಸರು ಮರೆತಿಲ್ಲ.ಕ್ಯೂನಲ್ಲಿ ನಿಲ್ಲಿಸಿ ಒಬ್ಬರ ನಂತರ ಇನ್ನೊಬ್ಬರು ಎಂದು ಲಾಠಿಯೇಟಿನ ರುಚಿ ಮರೆತಿಲ್ಲ.

ಕಳೆಗಟ್ಟಿದ ಸಾವಿರದ ಸಂಭ್ರಮದ ಒಮ್ಮತದ ದನಿ | ಕೇಳುವ ಸಂಸ್ಕೃತಿಯನ್ನು ಉಳಿಸಿ ,ಬೆಳೆಸಬೇಕಿದೆ: ವಿಶ್ವೇಶ್ವರ ಭಟ್ ಅಭಿಮತ

ವಿಶ್ವವಾಣಿ ಕ್ಲಬ್‌ಹೌಸ್ ಈ ಕಾಲದ ಅನುಭವ ಮಂಟಪ

ಬೆಂಗಳೂರು: ವಿಶ್ವವಾಣಿ ಕ್ಲಬ್ ಹೌಸ್ ಒಂದು ರೀತಿಯ ಅನುಭವ ಮಂಟಪ. ಶರಣ ಚಳವಳಿಯ ಕಾಲದ ಅನುಭವ ಮಂಟಪದ ಬಗ್ಗೆ ನಾವು ಕೇಳಿದ್ದೇವೆ. ವಿಶ್ವವಾಣಿ ಕ್ಲಬ್‌ಹೌಸ್ ಕೂಡ ಅದೇ ರೀತಿ ಆಧುನಿಕ ಕಾಲದ ಮಾತಿನ ಮಂಟಪವಾಗಿ ಹೊರ ಹೊಮ್ಮಿದೆ. ಇಂದು ಇದರ ಮೂಲಕ ಕೇಳುವ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಿದೆ ಎಂಬುದು ಈ ಕ್ಲಬ್‌ಹೌಸ್‌ನ ಪ್ರವರ್ತಕ, ವಿಶ್ವವಾಣಿ ಸಂಪಾದಕರಾದ ವಿಶ್ವೇಶ್ವರ ಭಟ್ ಅವರ ಮಾತು.

ಗುರುವಾರ ನಡೆದ ವಿಶ್ವವಾಣಿ ಕ್ಲಬ್‌ಹೌಸ್‌ನ ಸಹಸ್ರ ಎಪಿಸೋಡ್‌ಗಳ ಸಂಭ್ರಮದಲ್ಲಿ ಅವರು ಈ ಕ್ಲಬ್‌ಹೌಸ್ ಸಾಂಗತ್ಯ ಸಾಗಿಬಂದ ದಾರಿಯನ್ನು ಬಿಚ್ಚಿಟ್ಟರು. ಸಾವಿರ ಎಪಿಸೋಡ್‌ಗ ಳಲ್ಲಿ ಚರ್ಚೆಯಾಗದೇ ಇರುವ ವಿಷಯಗಳೇ ಇಲ್ಲ. ಇಂದು ನೋಡಿದರೆ ಇಷ್ಟೆಲ್ಲ ವಿಷಯಗಳನ್ನು ನಾವು ಕವರ್ ಮಾಡಿದೆವಾ ಎಂದು ಆಶ್ಚರ್ಯವಾಗುತ್ತದೆ. ಇಲ್ಲಿ ಸಾಕಷ್ಟು ಬಿಸಿಬಿಸಿ ಚರ್ಚೆ, ವಿಚಾರ ವಿನಿಮಯ, ಸಂವಾದ ಆಗಿವೆ. ಜ್ಞಾನ ವಿನಿಮಯ ಆಗಿದೆ. ಅನುಭವ ಮಂಟಪ ಇಲ್ಲಿ ಸಾಕ್ಷಾತ್ಕಾರವಾಗಿದೆ ಎಂದರು.

ಶ್ರವಣಶಕ್ತಿಗೆ ವಿಶೇಷ ಹೊಳಪು: ಕೋವಿಡ್ ಕಾಲದಲ್ಲಿ ಸಕ್ರಿಯವಾಗಿ ಆರಂಭಗೊಂಡ ಕ್ಲಬ್‌ಗಳು ನಿಧಾನವಾಗಿ ನಿಷ್ಕ್ರಿಯಗೊಂಡವು. ಆಗ ನಾನು ಅವುಗಳನ್ನು ಉಳಿಸಿಕೊಳ್ಳಲು ಕೇಳಿಕೊಳ್ಳುತ್ತಿದ್ದೆ. ಯಾಕೆಂದರೆ ನಾವು ಕೇಳಿಸಿಕೊಳ್ಳುವುದನ್ನು ಹೆಚ್ಚು ಮಾಡಬೇಕಿದೆ. ಇದನ್ನು ಕ್ಲಬ್‌ಹೌಸ್ ಸಾಧ್ಯ ಮಾಡಿತ್ತು. ಇಂದು ರೀಲ್ಸ್ ಯುಗ. ಅವುಗಳನ್ನು ನೋಡ್ತಾ ಇದ್ದರೆ ಅಂತಿಮವಾಗಿ ನಮಗೆ ಏನೂ ಸಿಗುವುದಿಲ್ಲ. ಆ ಸಮಯ ನಿರ್ಥಕವಾಗುತ್ತದೆ. ರೀಲ್ಸ್ ನಮ್ಮ ಓದುವ, ಕೇಳುವ ಆಸಕ್ತಿಯನ್ನು ಕೊಲ್ಲುತ್ತಿದೆ. ಟಿವಿ, ಯುಟ್ಯೂಬ್ ನೋಡಲು ಏನೂ ಶ್ರಮ ಬೇಕಿಲ್ಲ. ಕೇಳಲು ಭಾಷೆ, ವಾಕ್ಯ ಗೊತ್ತಿರಬೇಕು. ಒಂದು ವಾಕ್ಯ ಬಿಟ್ಟುಹೋದರೆ ಮುಂದಿನದು ಅರ್ಥವಾಗುವುದಿಲ್ಲ. ಕ್ಲಬ್‌ಹೌಸ್ ಶ್ರವಣಶಕ್ತಿಗೆ ವಿಶೇಷ ಹೊಳಪನ್ನು ತಂದುಕೊಟ್ಟಿತು ಎಂದು ವಿಶ್ವೇಶ್ವರ ಭಟ್ ಗುರುತಿಸಿದರು.

ಅಸಂಖ್ಯ ಜನರಿಗೆ ಜ್ಞಾನ ಹಂಚಿಕೆ: ಸಾವಿರ ಕ್ಲಬ್‌ಹೌಸ್ ಎಪಿಸೋಡ್‌ಗಳನ್ನು ನಡೆಸಿಕೊಡುತ್ತಾ ನಾನೂ ಬದಲಾಗಿದ್ದೇನೆ. ಒಂದು ಬಗೆಯ ಮಾಗಿದ ಮನಸ್ಥಿತಿ ನನ್ನದಾಗಿದೆ. ಇದರಿಂದ ತುಂಬಾ ಜನರ ಸಾಂಗತ್ಯ ದೊರೆತಿದೆ. ಸಾವಿರಾರು ಮಂದಿಯ ಜ್ಞಾನವನ್ನು ಹಂಚಿಕೊಳ್ಳುವ ಭಾಗ್ಯ ನಮ್ಮದಾಗಿದೆ. ಇಂದು ನಾನೂ ಬೆಳೆದಿದ್ದೇನೆ. ಯಾವುದೇ ಕ್ಷಣದಲ್ಲಿ ಯಾವುದೇ ವಿಷಯ ನೀಡಿದರೂ ಮಾತನಾಡುವ, ಕಾರ್ಯಕ್ರಮವನ್ನು ಯಾವುದೇ ಎಡವಟ್ಟಿಲ್ಲದೆ ನಿರ್ವಹಿಸುವ ಛಲ ಹಾಗೂ ಸಾಮರ್ಥ್ಯವನ್ನು ಇದು ನೀಡಿದೆ ಎಂದು ಲೇಖಕಿ, ನಿರೂಪಕಿ ರೂಪಾ ಗುರುರಾಜ್ ಹೇಳಿದರು.

ಇದೊಂದು ಸಾವು ಇರದ ಕಾರ್ಯಕ್ರಮ. ವಿಶ್ವೇಶ್ವರ ಭಟ್ ಅವರು ಇದಕ್ಕಾಗಿ ತಮ್ಮ ಸಮಯ, ಇಡೀ ದಿನದ ಕಾರ್ಯಕ್ರಮಗಳನ್ನು ಇದಕ್ಕಾಗಿ ಶೆಡ್ಯೂಲ್ ಮಾಡುವ ರೀತಿ ಇದನ್ನೆಲ್ಲ ಕಂಡು ಬೆರಗಾಗಿದ್ದೇನೆ. ಇದರ ಅನೇಕ ಹಳೆಯ ಎಪಿಸೋಡ್‌ಗಳು ಜ್ಞಾನದ ಖನಿಗಳಾಗಿವೆ .

-**ರವಿಹೆಗಡೆ,** ಕನ್ನಡಪ್ರಭ ಸಂಪಾದಕ

ಸದ್ಗುರು ಜಗ್ಗಿ ವಾಸುದೇವ್ ಅವರು ಬಂದಾಗ ಕ್ಲಬ್‌ಹೌಸ್ ಕೇಳುಗರ ಮಿತಿಮೀರಿತ್ತು. ಅದು ಅತಿ ಕಡಿಮೆ ಹೊತ್ತು, ಅಂದರೆ ಒಂದು ಗಂಟೆಗಿಂತ ಕಡಿಮೆ ಕಾಲ ನಡೆದ ಕಾರ್ಯಕ್ರಮ. ಸಾಹಿತಿ ಎಸ್ ಎಲ್ ಭೈರಪ್ಪ, ಸುಧಾಮೂರ್ತಿ ಅವರು ಬಂದಾಗಲೂ ಎರಡೂವರೆ, ಮೂರು ಗಂಟೆ ಮಾತುಕತೆ ನಡೆದಿತ್ತು.

ವಿಶ್ವೇಶ್ವರ ಭಟ್, ವಿಶ್ವವಾಣಿ ಪತ್ರಿಕೆ ಸಂಪಾದಕ

ಎತ್ತರಕ್ಕೆ ಬೆಳೆದಿದೆ: ವಿಶ್ವವಾಣಿ ಕ್ಲಬ್‌ಹೌಸ್ ಎಲ್ಲ ಬಗೆಯ ಕೇಳುಗರಲ್ಲಿ ಮಾತನಾಡುವ ಉತ್ಸಾಹ, ಸಾಮರ್ಥ್ಯವನ್ನು ತುಂಬಿದೆ. ಇದು ಒಂದು ದೊಡ್ಡ ಸಾಧನೆ. ಸಣ್ಣದಾಗಿ ಆರಂಭವಾದ ಈ ಕ್ಲಬ್ ಇಂದು ಸಾವಿರದ ಎತ್ತರಕ್ಕೆ ಬೆಳೆದು ನಿಂತಿದೆ. ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವ ಕಾರ್ಯಕ್ರಮಗಳನ್ನು ಕೊಟ್ಟಿದೆ ಎಂದು ನಂಜನಗೂಡು ಮೋಹನ್ ಹೇಳಿದರು.

ನಟಿ ಜಯಮಾಲ ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ ಬಂದು ಮಾತನಾಡಿದ ಗಣ್ಯರನ್ನು ಸ್ಮರಿಸಿಕೊಂಡು, ಅವರಿಂದ ಪಡೆದ ತಿಳಿವಳಿಕೆ ಹಾಗೂ ಇದನ್ನು ನಡೆಸಿಕೊಂಡು ಬಂದವರ ಕರ್ತೃತ್ವಶಕ್ತಿ, ಸ್ಫೂರ್ತಿಗಳನ್ನು ಸ್ಮರಿಸಿಕೊಂಡರು.

ಛಲಬಿಡದ ತ್ರಿವಿಕ್ರಮ: ಕರೋನಾ ನಂತರ ತುಂಬಾ ಮಂದಿ ಕ್ಲಬ್‌ಹೌಸ್‌ನಲ್ಲಿ ಆಸಕ್ತಿ ಕಳೆದುಕೊಂಡರು. ಆದರೆ ವಿಶ್ವವಾಣಿ ಛಲಬಿಡದ ತ್ರಿವಿಕ್ರಮನಂತೆ ಬೆನ್ನಟ್ಟಿ ಹೋಗಿ ಸಾವಿರ ಎಪಿಸೋಡ್ ಸಾಧಿಸಿರುವುದು ದೊಡ್ಡ ಸಾಧನೆಯೇ ಸರಿ. ಇಷ್ಟು ದಿನ, ಇಷ್ಟು ಮಂದಿ ಆಸಕ್ತಿ ಇರುವ ಕೇಳುಗರನ್ನು ಉಳಿಸಿಕೊಂಡಿರುವುದು ಬಹಳ ಕಷ್ಟದ ಸಾಧನೆ. ರೀಲ್ಸ್, ಟಿವಿ ಎಲ್ಲ ಇತರ ಆಮಿಷ, ಅಡೆತಡೆಗಳ ನಡುವೆ ಇಷ್ಟು ಕೇಳುಗರನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿರುವುದು ಸಾಧನೆ ಎಂದು ಕತೆಗಾರ, ಪತ್ರಕರ್ತ ಜೋಗಿ ಅಭಿನಂದಿಸಿದರು.

- ಕ್ಲಬ್ ಹೌಸ್‌ನಲ್ಲಿ ಚರ್ಚೆಯಾಗದ ವಿಷಯಗಳೇ ಇಲ್ಲ
- ನಿರಂತರ ಚರ್ಚೆ, ವಿಚಾರ,ಜ್ಞಾನ ವಿನಿಮಯ
- ಕರೋನಾ ವೇಳೆ ಇತರ ಕ್ಲಬ್‌ಹೌಸ್‌ಗಳು ನಿಷ್ಕ್ರಿಯಗೊಂಡರೂ ವಿಶ್ವವಾಣಿ ಕ್ಲಬ್ ಸಕ್ರಿಯ
- ರೀಲ್ಸ್ ಯುಗ ಕೇಳುಗರ ಆಸಕ್ತಿಗೆ ಮಾರಕ
- ಶ್ರವಣಶಕ್ತಿಗೆ ಕ್ಲಬ್‌ಹೌಸ್‌ನಿಂದ ವಿಶೇಷ ಶಕ್ತಿ
- ವಿಶ್ವವಾಣಿ ಕ್ಲಬ್‌ಹೌಸ್ ಸಂವಾದಗಳಲ್ಲಿ ಪಾಲ್ಗೊಂಡ ಗಣ್ಯರಿಂದ ಗುಣಗಾನ
- ಶ್ರೋತೃಗಳ ಮನಮುಟ್ಟಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎಪಿಸೋಡ್

ಅಗಲಿದ ಗಣ್ಯರಿಗೆ ನಮನ

ವಿಶ್ವವಾಣಿ ಕ್ಲಬ್‌ಹೌಸ್‌ನ ಎಪಿಸೋಡ್‌ಗಳಲ್ಲಿ ಭಾಗವಹಿಸಿ, ಈಗ ಅಗಲಿರುವ ಅಪರ್ಣಾ ವಸ್ತಾರೆ, ಕೆ.ಸಿ ರಘು, ಭುಜಂಗಶೆಟ್ಟಿ ಮುಂತಾದ ಗಣ್ಯರು, ಸಂಪನ್ಮೂಲ ವ್ಯಕ್ತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ರೂಪಾ ಗುರುರಾಜ್, ಕಿರಣ್ ಉಪಾಧ್ಯಾಯ, ಶಿಶಿರ ಹೆಗ್ಡೆ ಕಾರ್ಯಕ್ರಮ ನಡೆಸಿಕೊಟ್ಟರು. ಮೇಜರ್ ಗಣಪತಿ, ಕ್ಯಾಪ್ಟನ್ ಸುದರ್ಶನ್ ಮುಂತಾದವರು ಮಾತನಾಡಿದರು.

ಸಿಎಂ ಎಪಿಸೋಡ್ ಹೃದಯಸ್ಪರ್ಶಿ

ವಿಶ್ವವಾಣಿ ಕ್ಲಬ್‌ಹೌಸ್‌ಆರಂಭದ ನೂರು ಕಾರ್ಯಕ್ರಮಗಳು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂಥವು. ಆ ಸಂದರ್ಭದಲ್ಲಿ ಒಂದು ಸಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆಸಲಾಗಿತ್ತು. ಅವರು ಸಂಜೆ ಏಳು ಗಂಟೆಗೆ ಬಂದು ಹನ್ನೊಂದು ಗಂಟೆಯವರೆಗೆ ಸತತ ನಾಲ್ಕು ಗಂಟೆ ಮಾತನಾಡಿದರು. ಅವರ ಬಾಳಿನ ಎಲ್ಲ ಕತೆಯನ್ನೂ ಬಿಚ್ಚಿಟ್ಟರು. ಅದನ್ನು ದಾಖಲಿಸಿದರೆ ಒಂದು ಹೃದಯಸ್ಪರ್ಶಿ ಪುಸ್ತಕ ಆಗುತ್ತದೆ. ಅದು ವಿಶ್ವವಾಣಿ ಇತಿಹಾಸದಲ್ಲೇ ಅತಿ ದೀರ್ಘಕಾಲದ ಎಪಿಸೋಡ್ ಎಂದು ವಿಶ್ವೇಶ್ವರ ಭಟ್ ಗುರುತಿಸಿದರು.

ಕೇಳುಗರ ಪ್ರೋತ್ಸಾಹ ಹಿರಿದು

ಈ ಕ್ಲಬ್‌ಹೌಸ್ ಎಪಿಸೋಡ್‌ಗಳು ಸಾವಿರ ಕಂತು ಕಾಣುವಲ್ಲಿ ನೆರವು ನೀಡಿದ ರೂಪಾ ಗುರುರಾಜ್, ಕಿರಣ್ ಉಪಾಧ್ಯಾಯ, ಶಿಶಿರ ಹೆಗ್ಡೆ ಹಾಗೂ ನಂಜನಗೂಡು ಮೋಹನ್ ಅವರ ಕೊಡುಗೆಯನ್ನು ಭಟ್ ಸ್ಮರಿಸಿಕೊಂಡರು. ಈ ಕ್ಲಬ್‌ಗೆ ಕೇಳುಗರಿಂದ ಸಿಕ್ಕ ಪ್ರೋತ್ಸಾಹ ದೊಡ್ಡದು. ರಾಜ್ಯದಿಂದ ಹಿಡಿದು ವಿದೇಶಗಳವರೆಗೆ ನಮ್ಮ ಕೇಳುಗರು ಹಬ್ಬಿದ್ದಾರೆ. ಇಂದು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸಿಕ್ಕಿದ ಒಬ್ಬರು ಅವರ ಅನುಭವ ಹಂಚಿಕೊಂಡರು. ಕರ್ನಾಟಕದ ಅವರು ಲಂಡನ್‌ನಲ್ಲಿದ್ದು, ಹಿಂದಿನ ದಿನದ ವಿಶ್ವವಾಣಿ ಕ್ಲಬ್‌ಹೌಸ್ ಎಪಿಸೋಡ್‌ನ ರಿಪ್ಲೇ ಕೇಳುತ್ತಾರಂತೆ. ಆಗ ನನ್ನ ಊರಿನಲ್ಲಿ ಇದ್ದ ಭಾವನೆ ಬರುತ್ತದೆ ಎಂದು ಹಂಚಿಕೊಂಡರು ಎಂದರು.

ಸಮಾಚಾರ ಸಣ್ಣದಲ್ಲ

ಗಣೇಶ ವಿಸರ್ಜನೆ ವೇಳೆ ಹಲ್ಲೆ: ಯುವಕನ ಕಿವಿ ಕಟ್

ಚಿಕ್ಕಮಗಳೂರು: ಗಣಪತಿ ವಿಸರ್ಜನೆ ವೇಳೆ ಕುಣಿಯುವ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಯುವಕನೊಬ್ಬನ ಮೇಲೆ ಬ್ಲೇಡ್‌ನಿಂದ ಹಲ್ಲೆ ನಡೆಸಿದ ಘಟನೆ ಗವನಗಳ್ಳಿಯಲ್ಲಿ ನಡೆದಿದೆ. ಗೌತಮ್ ಹಲ್ಲೆಗೊಳಗಾದ ಯುವಕ. ತಿಮ್ಮರಾಜ್ ಅರಸ್ ಎಂಬಾತ ಹಲ್ಲೆ ನಡೆಸಿದ್ದು, ಯುವಕನ ಕಿವಿ ಕತ್ತರಿಸಿ ಹೋಗಿದೆ. ಅಲ್ಲದೇ ಮುಖದಿಂದ ಕತ್ತಿನ ಭಾಗದವರೆಗೆ ತೀವ್ರ ಗಾಯ ವಾಗಿದೆ. ಗಣಪತಿ ವಿಸರ್ಜನೆ ವೇಳೆ ಕುಣಿಯುವ ವೇಳೆ ಗುಂಪಿನ ಮಧ್ಯೆ ತಳ್ಳಿದ್ದಕ್ಕೆ ಗಲಾಟೆ ನಡೆದಿದೆ. ಈ ವೇಳೆ ಯುವಕನ ಮುಖದ ಮೇಲೆ ಬ್ಲೇಡ್‌ನಿಂದ ಮನಬಂದಂತೆ ಹಲ್ಲೆ ನಡೆಸಲಾಗಿದೆ. ಗಾಯಾಳು ಗೌತಮ್‌ಗೆ ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಅನುಮಾನಾಸ್ಪದವಾಗಿ 5 ವರ್ಷದ ಬಾಲಕಿ ಸಾವು

ಚಿಕ್ಕಮಗಳೂರು: ಮನೆಯಲ್ಲಿ ಯಾರು ಇಲ್ಲದ ವೇಳೆ ಐದು ವರ್ಷದ ಬಾಲಕಿ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಅಜ್ಜಂಪುರ ತಾಲೂಕು ಶಿವನಿ ಗ್ರಾಮದ ರೈಲ್ವೇ ಸ್ಟೇಷನ್ ಬಳಿ ನಡೆದಿದೆ. ಬಾಲಕಿಯ ಕೆನ್ನೆ ಹಾಗೂ ಮುಖದ ಮೇಲೆ ಗಾಯದ ಗುರುತುಗಳಿದ್ದು, ಕಿವಿಯಲ್ಲಿದ್ದ ಓಲೆ, ಕಾಲಿನಲ್ಲಿದ್ದ ಚೈನು ನಾಪತ್ತೆಯಾಗಿವೆ. ಅಜ್ಜಂಪುರ ತಾಲೂಕಿನ ಶಿವನಿ ಗ್ರಾಮದ ಮಂಜುನಾಥ ಮತ್ತು ಮಂಗಳ ದಂಪತಿಯ ಐದು ವರ್ಷದ ಮಗಳು ಸಾವನ್ನಪ್ಪಿದ ಬಾಲಕಿ. ತಂದೆ ತಾಯಿ ಇಬ್ಬರೂ ಕೆಲಸಕ್ಕೆ ತೆರಳಿದ್ದ ವೇಳೆ ಘಟನೆ ನಡೆದಿದ್ದು, ತೆಂಗಿನಕಾಯಿ ಮಂಡಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಮಂಜುನಾಥ ಹಾಗೂ ಮಂಗಳ ದಂಪತಿಗಳು ಮಗುವಿಗೆ ಜ್ವರವಿದ್ದ ಹಿನ್ನೆಲೆ ಮಗುವನ್ನು ಮನೆಯಲ್ಲಿ ಬಿಟ್ಟು ಕೆಲಸಕ್ಕೆ ತೆರಳಿದ್ದರು. ಮಧ್ಯಾಹ್ನ ಊಟಕ್ಕೆ ಬಂದ ವೇಳೆ ಮಗಳು ಮೃತಪಟ್ಟಿರುವುದು ತಿಳಿದಿದೆ. ಬಾಲಕಿಯ ಸಾವು ಅನುಮಾನದಿಂದ ಕೂಡಿದ್ದು, ಸ್ಥಳಕ್ಕೆ ಅಜ್ಜಂಪುರ ಪೊಲೀಸ್ ಠಾಣೆ ಈ ಸಂಬಂಧ ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೋಜ್ ಕುಮಾರ್ ಮಂಗಳೂರು ಮೇಯರ್

ಮಂಗಳೂರು: ಮಹಾನಗರ ಪಾಲಿಕೆಯ ಮುಂದಿನ ಅವಧಿಗೆ ಮೇಯರ್ ಆಗಿ ವಾರ್ಡ್ ನಂಬರ್ 17ರ ಸದಸ್ಯ ಮನೋಜ್ ಕುಮಾರ್ ಕೋಡಿಕಲ್ ಹಾಗೂ ಉಪಮೇಯರ್ ಆಗಿ ವಾರ್ಡ್ ನಂಬರ್ 58ರ ಸದಸ್ಯೆ ಭಾನುಮತಿ ಪಿ.ಎಸ್. ಆಯ್ಕೆಯಾಗಿದ್ದಾರೆ. ಗುರುವಾರ ಮಂಗಳೂರು ಪಾಲಿಕೆಯಲ್ಲಿ ಚುನಾವಣೆ ನಡೆಯಿತು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ವೇದವ್ಯಾಸ ಕಾಮತ್, ಡಾ.ವೈ.ಭರತ್ ಶೆಟ್ಟಿ ಭಾಗವಹಿಸಿದ್ದರು. ಮೇಯರ್ ಹುದ್ದೆಗೆ ಎಸ್ ಸಿ ಮೀಸಲಾತಿಯಡಿ ಕಾಂಗ್ರೆಸ್ ಅಭ್ಯರ್ಥಿಗಳು ಇಲ್ಲದ ಕಾರಣದಿಂದ ಮನೋಜ್ ಕುಮಾರ್ ಆಯ್ಕೆ ಅವಿರೋಧವಾಗಿ ನಡೆಯಿತು. ಪಾಲಿಕೆಯಲ್ಲಿ ಪ್ರಸಕ್ತ ಬಿಜೆಪಿ ಆಡಳಿತ ಮುಂದಿನ ವರ್ಷದ ಫೆ. 27 ರವರೆಗೆ ಇರುವ ಕಾರಣದಿಂದ ಐದೂವರೆ ತಿಂಗಳು ಮಾತ್ರ ಮೇಯರ್, ಉಪಮೇಯರ್ ಅಧಿಕಾರಾವಧಿ ಇರಲಿದೆ.

{**ಚಲುವರಾಯಸ್ವಾಮಿ** } ಸಚಿವ

ಗಂಗಾರತಿಯ ಶೈಲಿಯಲ್ಲಿಯೇ ಕಾವೇರಿ ಆರತಿಯನ್ನು ಕೆಆರ್‌ಎಸ್‌ನಲ್ಲಿ ಆರಂಭಿಸಲಾಗುವುದು. ಈ ಬಾರಿಯ ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮದಲ್ಲೇ ಆರಂಭಿಸಲು ಚಿಂತನೆ ನಡೆಸಲಾಗುತ್ತಿದೆ. ಈ ಬಗ್ಗೆ ಅಧ್ಯಯನ ನಡೆಸಲು ಶುಕ್ರವಾರ 28 ಸದಸ್ಯರ ನಿಯೋಗ ಹರಿದ್ವಾರ ಮತ್ತು ವಾರಾಣಸಿಗೆ ತೆರಳಲಿದೆ.



ಕೋಟ್ಯಂತರ ಹಣ ಗುಳುಂ | 13 ಆರೋಪಿಗಳ ವಿರುದ್ಧ ಕೇಸ್

ಗೋಕಾಕ್ ಮಹಾಲಕ್ಷ್ಮೀ ಬ್ಯಾಂಕ್‌ನಲ್ಲಿ ಗೋಲ್ಮಾಲ್

ಗೋಕಾಕ್: ಗೋಕಾಕ್‌ನ ಮಹಾಲಕ್ಷ್ಮೀ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ ಭಾರಿ ಅವ್ಯವಹಾರ ನಡೆದಿದ್ದು, ಸಿಬ್ಬಂದಿಯೇ ಕೋಟ್ಯಂತರ ರು. ಲಪಟಾಯಿಸಿದ ಘಟನೆ ಗುರುವಾರ ಬೆಳಕಿಗೆ ಬಂದಿದೆ.

ನಗರದ ಗುರುವಾರಪೇಟೆಯಲ್ಲಿರುವ ಮಹಾಲಕ್ಷ್ಮೀ ಪಟ್ಟಣ ಸಹಕಾರಿ ಬ್ಯಾಂಕಿನಲ್ಲಿ ಸಾರ್ವಜನಿಕರು ಇಟ್ಟಿದ್ದ 6 ಕೋಟಿಗೂ ಅಧಿಕ ಮೊತ್ತದ ಠೇವಣಿ ಹಣದ ಮೇಲೆ 70 ಕೋಟಿ ರು. ಸಾಲ ಪಡೆಯುವ ಮೂಲಕ ಜನರನ್ನು ಮೋಸದ ಬಲೆಗೆ ಬೀಳಿಸಿರುವ ಆರೋಪ ಕೇಳಿಬಂದಿದ್ದು 13 ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಬ್ಯಾಂಕ್‌ನ ಅಧ್ಯಕ್ಷ ಜೀತೇಂದ್ರ ಮಂಗಲೇಕರ್ ಗೋಕಾಕ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. 2021 ರಿಂದ 2024ರ ವರೆಗೆ ಬ್ಯಾಂಕ್ ನ ಒಬ್ಬ ಸಿಬ್ಬಂದಿ ಹಾಗೂ ಆತನ ಸಂಬಂಧಿಕರು ಸೇರಿ 13 ಜನರಿಂದ ಈ ಅಕ್ರಮ ನಡೆದಿದ್ದು ಕೋಟ್ಯಂತರ ರು. ಕೊಳ್ಳೆ ಹೊಡೆದಿದ್ದಾರೆ ಎಂದು ಮಂಗಲೇಕರ್ ದೂರಿದ್ದಾರೆ.

ಪ್ರಕರಣದ ತನಿಖೆ ಸಿಐಡಿಗೆ: ಈ ಕುರಿತು ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೇದ್ ಮಾತನಾಡಿ, 2021 ರಿಂದ 2024ರ ಅವಧಿಯಲ್ಲಿ ಕೆಲವರು ಅಕ್ರಮವಾಗಿ ಸಾಲ ಪಡೆದಿದ್ದಾರೆ. ಸಾಲ ತಿರುಗಿಸಲಾಗದೇ ಒಬ್ಬರ ಜೊತೆಗೆ ಒಬ್ಬರು ಶಾಮೀಲಾಗಿ ವಂಚನೆ ಮಾಡಿದ್ದಾರೆ. ಈ ಬ್ಯಾಂಕ್ ಗೆ ಸಂಬಂಧಿಸಿದಂತೆ ಆರು ಶಾಖೆಗಳಿವೆ. ಮೂರು ಸಾವಿರ ಗ್ರಾಹಕರು ಬ್ಯಾಂಕ್ ನಲ್ಲಿ ಠೇವಣಿ ಇಟ್ಟಿದ್ದಾರೆ. ಏಪ್ರಿಲ್ ನಲ್ಲಿ ಬ್ಯಾಂಕ್ ನವರಿಗೆ ಮಾಹಿತಿ ಗೊತ್ತಾಗಿದ್ದರೂ ಪೊಲೀಸ್ ಇಲಾಖೆ ಗಮನಕ್ಕೆ ತಂದಿಲ್ಲ. 14 ಆರೋಪಿಗಳು ಸಿಗದಿದ್ದಾಗ ದೂರು ನೀಡಿದ್ದಾರೆ. ಪ್ರಕರಣ ಸಂಬಂಧ ಮೂರು ತಂಡ ರಚಿಸಲಾಗಿದ್ದು, ಹತ್ತು ಕೋಟಿ ವಂಚನೆ ಮೇಲ್ಪಟ್ಟಿರುವ ಕಾರಣಕ್ಕೆ ಸಿಐಡಿ ತನಿಖೆಗೆ ವಹಿಸಲಾಗುತ್ತದೆ. ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ರಾಜ್ಯ ಸರಕಾರದಿಂದ ಟಾರ್ಗೆಟ್ ರಾಜಕಾರಣ

ಹೊಸಪೇಟೆ: ರಾಜ್ಯ ಸರಕಾರ ಟಾರ್ಗೆಟ್ ರಾಜಕಾರಣ ಮಾಡುತ್ತಿದೆ, ಮುನಿರತ್ನ ಬಂಧನ ಪ್ರಕರಣ ಅದಕ್ಕೆ ಸ್ಪಷ್ಟ ನಿದರ್ಶನ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ದೂರಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ, ಸರಕಾರ ತನ್ನ ವರ್ತನೆ ಬದಲಿಸಿಕೊಳ್ಳಬೇಕು

ಭ್ರಷ್ಟಾಚಾರದಲ್ಲಿ ಸಂಪೂರ್ಣ ಮುಳುಗಿರುವ ಸರಕಾರ ಜನರ ಗಮನ ಬೇರೆಡೆಗೆ ಸೆಳೆಯಲು ಯತ್ನಿಸುತ್ತಿದೆ, ಇದಕ್ಕೆ ಫಲ ಸಿಗುವುದಿಲ್ಲ ಎಂದು ಎಚ್ಚರಿಕೆ ಕೊಟ್ಟರು.

ಚೆನ್ನಾರೆಡ್ಡಿಯನ್ನೇಕೆ ಬಂಧಿಸಿಲ್ಲ..?: ಶಾಸಕ ಮುನಿರತ್ನ ವಿರುದ್ಧ ಆರೋಪ ಬಂದ ತಕ್ಷಣ ಬಂಧಿಸುತ್ತೀರಿ, ಪರಶುರಾಮ ಸಾವು ಸಂಭವಿಸಿ ಎರಡೂವರೆ ತಿಂಗಳು ಕಳೆದರೂ ಶಾಸಕ ಚೆನ್ನಾರೆಡ್ಡಿ ಮತ್ತು ಅವರ ಪುತ್ರನನ್ನು ಬಂಧಿಸಿಲ್ಲ, ಇದು ಟಾರ್ಗೆಟ್ ರಾಜಕಾರಣದ ಸ್ಪಷ್ಟ ನಿದರ್ಶನ ಎಂದು ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು. ಕಾಂಗ್ರೆಸ್ ಸರಕಾರದ ಹಲವು ಹಗರಣಗಳು ಮತ್ತೆ ಮತ್ತೆ ಬೆಳಕಿಗೆ ಬರುತ್ತಲೇ ಇವೆ, ವಾಲ್ಮೀಕಿ ಹಗರಣದಲ್ಲಿ ಎಸ್‌ಐಟಿ ಶಾಸಕರಾದ ನಾಗೇಂದ್ರ ಮತ್ತು ದದ್ದಲ್‌ಗೆ ಕ್ಲೀನ್‌ಚಿಟ್ ಕೊಟ್ಟಿತ್ತು. ಆದರೆ ಇ.ಡಿ ತನಿಖೆಯಲ್ಲಿ ನಾಗೇಂದ್ರ ಅವರೇ ಮೊದಲನೇ ಆರೋಪಿ ಎಂಬುದನ್ನು ಕಂಡುಕೊಂಡಿತು. ಹೀಗಾಗಿ ಸಿಬಿಐ ತನಿಖೆ ಆಗಬೇಕು ಎಂಬ ಒತ್ತಾಯವನ್ನು ಬಿಜೆಪಿ ಮಾಡುತ್ತಿದೆ ಎಂದರು.

ಭ್ರಷ್ಟಾಚಾರ ವಿಚಾರದಲ್ಲಿ ಸರಕಾರ ಕಪ್ಪುಕಾಗೆ ಆಗಿಬಿಟ್ಟಿದೆ. ಅದರಲ್ಲಿ ಪ್ರಧಾನಿ ಮೋದಿ ಮತ್ತು ಡಿ.ಕೆ. ಶಿವಕುಮಾರ್ ಭೇಟಿಯಿಂದ ರಾಜ್ಯ ಸರಕಾರಕ್ಕೆ ಧಕ್ಕೆಯಾಗುವುದಿಲ್ಲ, ಅವರು ಆಡಳಿತ ವಿಚಾರದಲ್ಲಿ ಮಾತನಾಡಿರಬಹುದು.

-**ಛಲವಾದಿ ನಾರಾಯಣ ಸ್ವಾಮಿ,** ಮೇಲ್ಮನೆ ಪ್ರತಿಪಕ್ಷ ನಾಯಕ

ಅಶೋಕ್, ಶೋಭಾ ಸುಳ್ಳು ಮಾಹಿತಿ ಹಂಚಿಕೊಂಡಿದ್ದಕ್ಕೆ ಎಫ್‌ಐಆರ್

ರಾಜ್ಯ ಸರಕಾರದಿಂದ ದ್ವೇಷದ ರಾಜಕಾರಣವಿಲ್ಲ: ಪರಮೇಶ್ವರ್

ಬೆಂಗಳೂರು: ಕಾನೂನುಬಾಹಿರ ಚಟುವಟಿಕೆಯಲ್ಲಿ ಯಾರೆಲ್ಲ ಭಾಗವಹಿಸಿದ್ದಾರೋ ಅವರ ವಿರುದ್ಧ ಕ್ರಮವಹಿಸಲಾಗುತ್ತದೆ. ರಾಜ್ಯ ಸರಕಾರ ಯಾರ ವಿರುದ್ಧವೂ ದ್ವೇಷದ ರಾಜಕಾರಣ ಮಾಡುತ್ತಿಲ್ಲವೆಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜರಾಜೇಶ್ವರಿ ನಗರ ಶಾಸಕ ಮುನಿರತ್ನ ಕಾನೂನುಬಾಹಿರ ಕೆಲಸ ಮಾಡಿದ್ದರೆ ಕ್ರಮ ಕೈಗೊಳ್ಳಲಾಗುತ್ತದೆ. ಆದರೆ, ಈ ವಿಚಾರದಲ್ಲಿ ಬಿಜೆಪಿ ನಾಯಕರ ವಿರುದ್ಧ ಕಾಂಗ್ರೆಸ್ ಸರಕಾರ ಯಾವುದೇ ದ್ವೇಷ ರಾಜಕಾರಣ ಮಾಡುತ್ತಿಲ್ಲ ಎಂದರು.

ಬಿಜೆಪಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಿರುವ ವಿಚಾರವಾಗಿ ಮಾತನಾಡಿದ್ದಾರೆ. ನಾಗಮಂಗಲ ಗಲಭೆ ಕುರಿತಂತೆ ಸುಳ್ಳು ಮಾಹಿತಿ ಹಂಚಿಕೊಂಡ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಪ್ರತಿಪಕ್ಷ ನಾಯಕ ಆರ್. ಅಶೋಕ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ನಮ್ಮ ಸರಕಾರ ದ್ವೇಷ ರಾಜಕಾರಣ ಮಾಡುತ್ತಿಲ್ಲ. ದ್ವೇಷ ರಾಜಕಾರಣ ಮಾಡುತ್ತಿರುವವರು ಬಿಜೆಪಿ ಎಂದು ತಿರುಗೇಟು ನೀಡಿದರು.

ಕಾನೂನು ಪ್ರಕಾರ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ ಬಿಜೆಪಿಯವರು ಇದನ್ನು ಕಾನೂನು ಬಾಹಿರ ಎಂದು ಹೇಳುತ್ತಿರಲಿ. ಮತದಾರರು ಕಾಂಗ್ರೆಸ್ ಸರಕಾರಕ್ಕೆ ಆರ್ಶೀವಾದ ಮಾಡಿದ್ದಾರೆ. ನಾವು ಕೆಲಸ ಮಾಡುತ್ತಿದ್ದೇವೆ. ಇದನ್ನು ಬಿಟ್ಟು ದ್ವೇಷ ರಾಜಕಾರಣ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಶಾಸಕ ಮುನಿರತ್ನ ವಿರುದ್ಧ ಅತ್ಯಾಚಾರ ಪ್ರಕರಣ ಕುರಿತಂತೆ ಮಹಿಳೆ ದೂರು ಕೊಟ್ಟಿರುವ ಬಗ್ಗೆ ಪೊಲೀಸರು ತನಿಖೆ ಮಾಡಿ ಕಾನೂನಿನನ್ವಯ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ, ಈ ಬಗ್ಗೆ ತಮ್ಮ ಬಳಿ ಹೆಚ್ಚಿನ ಮಾಹಿತಿ ಇಲ್ಲ.ಕಾನೂನುಬಾಹಿರವಾಗಿದ್ದರೆ ಕ್ರಮ ಕೈಗೊಳ್ಳುತ್ತೇವೆ ಎಂದರು.

ಒಂದು ದೇಶ ಒಂದು ಚುನಾವಣೆ ಕುರಿತು ಸಾಕಷ್ಟು ವಿವರಣೆ ಬರಬೇಕಾಗಿದೆ. ಕನಿಷ್ಟ 2/3ರಷ್ಟು ರಾಜ್ಯಗಳು ಇದಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ. ಈಗಷ್ಟೆ ಮಾಜಿ ರಾಷ್ಟ್ರಪತಿ ರಾಮ್ನಾ ಥ್ಕೋವಿಂದ್ ವರದಿ ಕೊಟ್ಟಿದ್ದಾರೆ. ವರದಿಯನ್ನು ಅಧಿವೇಶನದಲ್ಲಿ ಮಂಡಿಸುತ್ತಾರೆ. ಮುಂದಿನ ಬೆಳವಣಿಗೆಯನ್ನು ಕಾದು ನೋಡೋಣ.

– **ಡಾ.ಜಿ. ಪರಮೇಶ್ವರ,** ಗೃಹ ಸಚಿವ

ಈದ್ ಮೆರವಣಿಗೆಯಲ್ಲಿ ಪ್ಯಾಲೆಸ್ತೀನ್ ಧ್ವಜ ಹಾರಾಟ

ಬಾಗಲಕೋಟೆ: ಈದ್ ಮಿಲಾದ್ ಅಂಗವಾಗಿ ನಗರದಲ್ಲಿ ನಡೆದ ಮೆರವಣಿಗೆಯಲ್ಲಿ ಯುವಕನೊಬ್ಬ ಪ್ಯಾಲೆಸ್ತೀನ್ ಧ್ವಜ ಪ್ರದರ್ಶಿಸಿದ್ದು ವಿವಾದಕ್ಕೆ ಕಾರಣವಾಗಿದೆ.

ನವನಗರದ ಎಲ್‌ಐಸಿ ವೃತ್ತದಿಂದ ಅಂಬೇಡ್ಕರ್ ಭವನಕ್ಕೆ ಸಾಗುವ ಮಾರ್ಗದಲ್ಲಿ ಯುವಕನೊಬ್ಬ ಬೃಹದಾಕಾರದ ಧ್ವಜವನ್ನು ಮೆರವಣಿಗೆಯಲ್ಲಿ ಗಮನಸೆಳೆಯುವಂತೆ ಪ್ರದರ್ಶಿಸಿದ್ದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಪ್ಯಾಲೆಸ್ತೀನ್ ಧ್ವಜ ಹಾರಾಟದ ವಿಡಿಯೊ ಲಭ್ಯವಾಗಿದ್ದು, ಮೆರವಣಿಗೆಗೆ ಅನುಮತಿ ಪಡೆದವರು ಹಾಗೂ ಧ್ವಜಹಿಡಿದವನ ವಿರುದ್ಧ ನವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೆರವಣಿಗೆಗೆ ಅನುಮತಿ ಕೋರಿದ್ದ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಮುಖಂಡರಾದ ಜಿ.ಎ.ಡಲಾಯತ್, ಯೂಸೂಫ್ ಬಿಳೇಕುದರಿ, ಆಸೀಫ್ ಬೇನೂರ ಹಾಗೂ ಸಿಕಂದರ್ ಗೊಳಸಂಗಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇನ್ನೂ ಧ್ವಜಹಾರಿಸಿದ್ದ ಯುವಕನಿಗಾಗಿ ಪೊಲೀಸರು ಹುಡುಕಾಟ ಪ್ರಾರಂಭಿಸಿದ್ದಾರೆ.

ಚಿಕ್ಕಮಗಳೂರು, ಕೋಲಾರ ಘಟನೆಗಳಿಗೆ ಜಮೀರ್ ಸಮರ್ಥನೆ

ಪ್ಯಾಲೆಸ್ತೀನ್ ಧ್ವಜ ಹಿಡಿದರೆ ತಪ್ಪೇನಿಲ್ಲ

ಕಲಬುರಗಿ: ಪ್ಯಾಲೆಸ್ತೀನ್ ಧ್ವಜ ಹಿಡಿದು ಮೆರವಣಿಗೆ ಮಾಡಿದರೆ ತಪ್ಪೇನಿಲ್ಲ ಎನ್ನುವ ಮೂಲಕ ಸಚಿವ ಜಮೀರ್ ಅಹ್ಮದ್ ಖಾನ್ ಪ್ಯಾಲೆಸ್ತೀನ್ ಧ್ವಜ ಮೆರವಣಿಗೆಯನ್ನು ಸಮರ್ಥಿಸಿಕೊಂಡು ಚರ್ಚೆ ಗ್ರಾಸವಾಗಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ಯಾಲೆಸ್ತೀನ್‌ಗೆ ಕೇಂದ್ರ ಸರಕಾರವೇ ಬೆಂಬಲ ಕೊಟ್ಟಿದ್ದು, ವಿ ಆರ್ ವಿತ್ ಪ್ಯಾಲೆಸ್ತೀನ್ ಅಂದಿದೆ. ಕೇಂದ್ರ ಹೇಳಿದ ಮೇಲೆ ತಾನೇ ಯಾರೋ ಧ್ವಜ ಹಿಡಿದು ಮೆರವಣಿಗೆ ಮಾಡಿದ್ದಾರೆ. ಧ್ವಜ ಹಿಡಿದಿದರೆ ತಪ್ಪೇನಿದೆ ಎಂದು ಪ್ರಶ್ನಿಸುವ ಮೂಲಕ ಚಿಕ್ಕಮಗಳೂರು ಮತ್ತು ಕೋಲಾರದ ಘಟನೆಗಳನ್ನು ಸಚಿವ ಜಮೀರ್ ಸಮರ್ಥಿಸಿಕೊಂಡರು. ಬೇರೆ ದೇಶದ ಪರ ಘೋಷಣೆ ಕೂಗಬಾರದು. ಘೋಷಣೆ ಕೂಗಿದರೆ ಅಂತವರು ದೇಶದ್ರೋಹಿ ಕೆಲಸ ಮಾಡಿದಂತೆ ಆಗುತ್ತದೆ. ಘೋಷಣೆ ಕೂಗಿದವರು ಯಾರೇ ಇರಲಿ ಗಲ್ಲುಶಿಕ್ಷೆಯಾಗಬೇಕು. ನಾನು ಮೊದಲು ಹಿಂದೂಸ್ತಾನಿ, ಆಮೇಲೆ ಕನ್ನಡಿಗ. ಅದಾದ ಮೇಲೆ ಮುಸ್ಲಿಂ. ಯಾರೇ ಆದರೂ ಬೇರೆ ದೇಶದ ಪರ ಘೋಷಣೆ ಕೂಗಬಾರದು ಎಂದು ಸಚಿವರು ಸ್ಪಷ್ಟಪಡಿಸಿರು.

ಬೆಂಕಿ ಹಚ್ಚುವವರ ವಿರುದ್ಧ ಕ್ರಮ: ಬಿಜೆಪಿಯವರಿಗೆ ಮಾಡೋಕೆ ಬೇರೆ ಕೆಲಸವಿಲ್ಲ. ಅದಕ್ಕಾಗಿ ನಾಗಮಂಗಲ ಕೇಸ್‌ನಲ್ಲಿ ಬಿಜೆಪಿ ನಾಯಕರು ಬೆಂಕಿ ಹಚ್ಚೋ ಕೆಲಸ ಮಾಡುತ್ತಿದ್ದಾರೆ. ಯಾರೇ ಬೆಂಕಿ ಹಚ್ಚೋ ಕೆಲಸ ಮಾಡಿದರೆ ಅವರ ಮೇಲೆ ಕ್ರಮ ಆಗಬೇಕು. ಎರಡೂ ಬಾರಿ ಸಿಎಂ ಆಗಿರುವ ಕುಮಾರಸ್ವಾಮಿ ಏನ್ ಮಾತನಾಡಿದ್ದಾರೆ. ರಾಜಕಾರಣಿಗಳು ಬೆಂಕಿ ಹಚ್ಚೋ ಕೆಲಸ ಮಾಡಬಾರದು. ನಾವು ಜಾತಿ,ಧರ್ಮ ಬಿಡಬೇಕು. ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.



ನೂರು ವಿಜಯೇಂದ್ರ, ನೂರು ಯಡಿಯೂರಪ್ಪ, ಇನ್ನೂರು ಕುಮಾರಸ್ವಾಮಿ ಬಂದರು ಸಿದ್ದರಾಮಯ್ಯ ಅವರನ್ನು ಏನು ಮಾಡಕ್ಕೆ ಆಗಲ್ಲ. ಸಿದ್ದರಾಮಯ್ಯ ಟೈಗರ್ ಇದ್ದಂತೆ. ಐದು ವರ್ಷ ಸಿದ್ದರಾಮಯ್ಯರನ್ನ ಅಲುಗಾಡಿಸೋಕೆ ಸಾಧ್ಯವಿಲ್ಲ.

-**ಜಮೀರ್ ಅಹ್ಮದ್ ಖಾನ್,** ಸಚಿವ

ಮಗನನ್ನು ಕಂಡು ಭಾವುಕರಾದ ಮೀನಾ ತೂಗುದೀಪ

ದರ್ಶನ್ ಭೇಟಿಯಾದ ತಾಯಿ ಮೀನಾ, ಅಕ್ಕ-ಬಾವ

ಬಳ್ಳಾರಿ: ರೇಣುಕಾಸ್ವಾಮಿ ಕೊಲೆ ಆರೋಪ ಪ್ರಕರಣದಲ್ಲಿ ಬಳ್ಳಾರಿ ಸೆಂಟ್ರಲ್ ಜೈಲಿನಲ್ಲಿ ಬಂಧಿಯಾಗಿರುವ ದರ್ಶನ್ ಅವರನ್ನು ತಾಯಿ ಮೀನಾ ತೂಗುದೀಪ, ಅಕ್ಕ ದಿವ್ಯಾ ಭೇಟಿಯಾಗಿ ಸಾಂತ್ವನ ಹೇಳಿದರು. ಗುರುವಾರ ಬೆಳಗ್ಗೆ ಜೈಲಿಗೆ ಆಗಮಿಸಿದ ಮೀನಾ, ದಿವ್ಯ ಜತೆಗೆ ದರ್ಶನ್ ಬಾವ ಮಂಜುನಾಥ, ಅಕ್ಕನ ಮಕ್ಕಳು ಸೇರಿ ಐವರು ಕುಟುಂಬಸ್ಥರು ಭೇಟಿಯಾದರು.

11.34ಕ್ಕೆ ಜೈಲು ಸಿಬ್ಬಂದಿ ಬಿಗಿಭದ್ರತೆಯ ಸಂದರ್ಶಕರ ಕೊಠಡಿಗೆ ದರ್ಶನ್‌ನನ್ನು ಕರೆತಂದರು. ಅರ್ಧ ಗಂಟೆಗೂ ಹೆಚ್ಚು ಕಾಲ ದರ್ಶನ್ ಜೊತೆ ಕುಟುಂಬದವರು ಮಾತುಕತೆ ನಡೆಸಿದರು. ತಾಯಿ, ಅಕ್ಕನ ಕಂಡು ದರ್ಶನ್ ಭಾವುಕನಾದರೆ, ಕುಟುಂಬಸ್ಥರೂ ಗದ್ಗದಿತರಾದರು. ಇದೇ ವೇಳೆ ತಂದಿದ್ದ ಬಟ್ಟೆ, ಬೇಕರಿ ತಿನಿಸುಗಳನ್ನು ದರ್ಶನ್‌ಗೆ ನೀಡಲಾಯಿತು.

ಕೊಲೆ ಆರೋಪ ಪ್ರಕರಣದಲ್ಲಿ ಜೈಲು ಪಾಲಾಗಿರುವ ದರ್ಶನ್ ಮೊದಲು ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿದ್ದು, ಜೈಲಿನ ಫೋಟೊ ವೈರಲ್ ಆದ ಬೆನ್ನಲ್ಲೇ ದರ್ಶನ್ ಸೇರಿ ಪ್ರಕರಣದ ಆರೋಪಿಗಳನ್ನು ರಾಜ್ಯದ ಬೇರೆ ಬೇರೆ ಜೈಲುಗಳಿಗೆ ಸ್ಥಳಾಂತರಗೊಳಿಸಲಾಯಿತು. ದರ್ಶನ್ ಬಳ್ಳಾರಿ ಸೆಂಟ್ರಲ್ ಜೈಲಿಗೆ ಬಂದ ನಂತರ ಗುರುವಾರ ತಾಯಿ ಮೀನಾ ತೂಗುದೀಪ ಅವರು ಮಗನನ್ನು ಭೇಟಿ ಮಾಡಿದರು.

ದ್ವೇಷದಿಂದ ನನ್ನ ಮೇಲೆ ಎಫ್‌ಐಆರ್

ಚಿಕ್ಕಬಳ್ಳಾಪುರ: ನಾಗಮಂಗಲದ ಪ್ರಕರಣದ ಕುರಿತು ನಾನು ಮಾಡಿದ್ದ ಟ್ವೀಟ್ ಮಾಡಿದ್ದೆ. ಅದನ್ನೇ ದ್ವೇಷವಾಗಿ ತೆಗೆದುಕೊಂಡು ನನ್ನ ಹಾಗೂ ಶೋಭಾ ಕರಂದ್ಲಾಜೆ ಮೇಲೆ ಎಫ್ ಐಆರ್ ಮಾಡಿದ್ದಾರೆ ಎಂದು ರಾಜ್ಯ ಸರಕಾರದ ನಡೆಯನ್ನು ಪ್ರತಿಪಕ್ಷ ನಾಯಕ ಆರ್. ಅಶೋಕ ಖಂಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೇರಳದಿಂದ ಬಂದು ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದ್ದರು. ಅದೇ ರೀತಿ ನಾಗಮಂಗಲದಲ್ಲಿ ಘೋಷಣೆ ಕೂಗಿದ್ದರು. ವಿಧಾನಸೌಧದಲ್ಲಿ ಕೂಗಿದ್ದನ್ನು ಆ ರೀತಿ ಕೂಗೇ ಇಲ್ಲ ಎಂದು ಕಾಂಗ್ರೆಸ್ ನಾಯಕರು ಸುಳ್ಳು ಹೇಳಿದರು. ಹಾಗಾದರೆ ನಿಮ್ಮ ಮೇಲೆ ಯಾಕೆ ಕೇಸ್ ಹಾಕಿಲ್ಲ ಎಂದು ಪ್ರಶ್ನಿಸಿದರು.

ಸ್ವಯಂಪ್ರೇರಿತ ದೂರು

ನನ್ನ ವಿರುದ್ಧ ಈಗ ಪೊಲೀಸರೇ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದಾರೆ. ಸಾರ್ವಜನಿಕರಾರೂ ದೂರು ಕೊಟ್ಟಿಲ್ಲ. ಮುಂದೆ ನಮ್ಮ ಸರಕಾರ ಬರುತ್ತದೆ. ಆಗ ಏನು ಎಂದು ಗೊತ್ತಾಗುತ್ತದೆ. ಪೊಲೀಸ್ ಇಲಾಖೆ ಕಾಂಗ್ರೆಸ್ ಸರಕಾರದ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿದೆ ಎಂದು ಅಶೋಕ ಟೀಕಿಸಿದರು.

ಕೇಂದ್ರ ಸಂಪುಟ ನಿರ್ಧಾರಕ್ಕೆ ಸಚಿವ ಎಂ.ಬಿ.ಪಾಟೀಲ ತರಾಟೆ

ಒಂದು ದೇಶ, ಒಂದು ಚುನಾವಣೆ ತರಾತುರಿ ನಿರ್ಣಯ

ವಿಜಯಪುರ: ಒಂದು ದೇಶ ಒಂದು ಚುನಾವಣೆ ನಡೆಸುವ ಕೇಂದ್ರದ ವಿಧೇಯಕಕ್ಕೆ ಸಚಿವ ಎಂ.ಬಿ. ಪಾಟೀಲ್ ವಿರೋಧ ವ್ಯಕ್ತಪಡಿಸಿದ್ದಾರೆ.

ಗುರುವಾರ ಪ್ರತಿಕ್ರಿಯೆ ನೀಡಿದ ಅವರು, ಈ ವಿಧೇಯಕ ಪ್ರಚಾರಕ್ಕಾಗಿ ತರಾತುರಿಯಲ್ಲಿ ಮಾಡಿದ ನಿರ್ಣಯವಾಗಿದೆ. ದೇಶದಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸುವ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಮಾಡಿ ಸರ್ವಪಕ್ಷಗಳ ಸಭೆ ಕರೆದು ಎಲ್ಲರ ಒಪ್ಪಿಗೆ ಪಡೆದು ನಿರ್ಣಯ ಕೈಗೊಳ್ಳಬೇಕಿತ್ತು. ಆದರೆ ಈ ಕಾನೂನು ನಮ್ಮ ದೇಶದಲ್ಲಿ ವಾಸ್ತವಾಗಿ, ವೈಜ್ಞಾನಿಕವಾಗಿ ಅಸಾಧ್ಯ, ಇದೊಂದು ಕೇವಲ ರಾಜಕೀಯ ಘೋಷಣೆಗಷ್ಟೇ ಸೀಮಿತವಾಗುತ್ತದೆ ಎಂದರು.

ವೈಜ್ಞಾನಿಕ ಚಿಂತನೆ ಅಗತ್ಯ

ದೇಶದಲ್ಲಿ ಒಂದು ದೇಶ ಒಂದು ಚುನಾವಣೆ ಜಾರಿ ಕುರಿತು ವೈಜ್ಞಾನಿಕ ಚಿಂತನೆ ಅವಶ್ಯವಾಗಿದೆ. ಇದರಿಂದ ಕೆಲವು ರಾಜ್ಯಗಳ ಅಧಿಕಾರವಧಿ ಕಡಿತಗೊಳಿಸಿದರೆ, ಕೆಲವು ರಾಜ್ಯಗಳ ಅಧಿಕಾರಾವಧಿ ವಿಸ್ತರಿಸಬೇಕಾಗುತ್ತದೆ. ಮೇಲಾಗಿ ನಮ್ಮಲ್ಲಿರುವ ಸೈನ್ಯ, ವಿವಿಪ್ಯಾಟ್ ಯಂತ್ರಗಳು, ಮೂಲ ಸೌಕರ್ಯ ಎಲ್ಲವನ್ನೂ ನೋಡಿಕೊಂಡು ಏಕಕಾಲದಲ್ಲಿ ಇಷ್ಟೆಲ್ಲಾ ಚುನಾವಣೆ ನಡೆಸಲು ಸಿದ್ಧರಿದ್ದೇವಾ, ಅತಂತ್ರ ವಿಧಾನಸಭೆ ರಚನೆಯಾದರೆ ಆಗುವ ಪರಿಣಾಮ ಹೀಗೆ ಅನೇಕ ಸವಾಲುಗಳ ಬಗ್ಗೆ ಪರಿಶೀಲಿಸಿಕೊಳ್ಳಬೇಕು. ರಾಮನಾಥ ಕೋವಿಂದ ಅವರ ಸಮಿತಿ ನೀತಿ ಆಯೋಗ ಉಲ್ಲೇಖಿಸಿ ಮಾತನಾಡುತ್ತಾರೆ, ನೀತಿ ಆಯೋಗ ಶಾಸನಬದ್ಧವಲ್ಲದ ಸಂಸ್ಥೆ. ಸಮಿತಿಯೇ ಯೋಚನೆ ಮಾಡಿ ನಿರ್ಧಾರ ಕೈಗೊಳ್ಳಬೇಕಿತ್ತು ಎಂದು ಖರ್ಗೆಯವರು ತಿಳಿಸಿದ್ದಾರೆ ಎಂದು ಸಚಿವರು ತಿಳಿಸಿದರು.

ಸಿದ್ದರಾಮಯ್ಯ ಕುರ್ಚಿ ಭದ್ರ

ಸಿಎಂ ಸಿದ್ದರಾಮಯ್ಯ ಕುರ್ಚಿ ಅಲುಗಾಡುತ್ತಿದೆ ಎಂಬ ಆರೋಪಕ್ಕೆ ಸಚಿವರು ಮಾತನಾಡಿ, ನಾನು ನೀರಾವರಿ ಮಂತ್ರಿ ಇದ್ದ ಸಂದರ್ಭದಲ್ಲೂ ಇಂತಹ ಸಚಿವ ಸಂಪುಟ ಸಭೆ ಈ ಹಿಂದೆಯೂ ಮಾಡಿದ್ದೇವೆ. ಆಗಲೂ ನಮ್ಮ ಕುರ್ಚಿ ಅಲ್ಲಾಡಿಲ್ಲ, ಈಗಲೂ ಅಲ್ಲಾಡುತ್ತಿಲ್ಲ. ಸಿದ್ದರಾಮಯ್ಯ ಅವರು ಗಟ್ಟಿಯಾಗಿದ್ದಾರೆ, ಅವರ ಕುರ್ಚಿಯೂ ಗಟ್ಟಿ ಇದೆ. ಒಂದು ಬಿಜೆಪಿ 20 ಪಕ್ಷಗಳಂತೆ ಬಣಗಳಾಗಿವೆ. ಬಿಜೆಪಿಯವರ ಕುರ್ಚಿ ಅಲ್ಲಾಡುತ್ತಿದೆ. ಹಾಗಾಗಿ ವಿಜಯೇಂದ್ರ ಅವರಿಗೆ ಬೇರೆಯವರ ಕುರ್ಚಿ ಬಗ್ಗೆ ಯೋಚಿಸದೇ, ಕಾಲು ಕಳೆದುಕೊಂಡಿರುವ ತಮ್ಮ ಕುರ್ಚಿ ಭದ್ರ ಮಾಡಿಕೊಳ್ಳಲು ಹೇಳಿ ಎಂದು ಸಚಿವ ಎಂ.ಬಿ.ಪಾಟೀಲ್ ತಿರುಗೇಟು ನೀಡಿದರು.

- ದೇಶದಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸುವ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಮಾಡಲಿ
- ಮಾಡಿ ಸರ್ವಪಕ್ಷಗಳ ಸಭೆ ಕರೆದು ಎಲ್ಲರ ಒಪ್ಪಿಗೆ ಪಡೆದು ನಿರ್ಣಯ ಕೈಗೊಳ್ಳಬೇಕಿತ್ತು.
- ಇದೊಂದು ಕೇವಲ ರಾಜಕೀಯ ಘೋಷಣೆಗಷ್ಟೇ ಸೀಮಿತ

ಲಕ್ಷ್ಮೀ ಹೆಬ್ಬಾಳ್ಕರ್ ಆಪ್ತನ ಮೇಲೆ ಹಲ್ಲೆ

ಬೆಳಗಾವಿ: ಸಮುದಾಯ ಭವನಕ್ಕೆ ಕೊಟ್ಟ ಜಾಗದ ಕಾರಣಕ್ಕೆ ಬಸ್ತವಾಡ ಗ್ರಾ.ಪಂ ಉಪಾಧ್ಯಕ್ಷ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಆಪ್ತ ವಿಠಲ್ ಸಾಂಬ್ರೇಕರ್ ಸೇರಿದಂತೆ ನಾಲ್ವರ ಮೇಲೆ ಮಾರಣಾಂತಿಕವಾಗಿ ಹಲ್ಲೆ ನಡೆಸಲಾಗಿದೆ.



ತಾಲೂಕಿನ ಕೊಂಡಸ್ಕೊಪ್ಪ ಗ್ರಾಮದಲ್ಲಿ ಗುರುವಾರ ಹಲ್ಲೆ ಘಟನೆ ನಡೆದಿದ್ದು ಗಂಭೀರವಾಗಿ ಗಾಯಗೊಂಡಿರುವ ವಿಠಲ ಸಾಂಬ್ರೇಕರ್ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಲ್ಲೆ ನಡೆಸಿರುವ ಸಂಪೂರ್ಣ ಘಟನಾವಳಿ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಕೊಂಡಸ್ಕೊಪ್ಪ ಗ್ರಾಮದ ಸಮುದಾಯ ಭವನಕ್ಕೆ ಸಾಂಬ್ರೇಕರ್ ಕುಟುಂಬದಿಂದ ಜಾಗ ನೀಡಲಾಗಿತ್ತು. ಇದಕ್ಕೆ ಪ್ರತಿಯಾಗಿ ಗ್ರಾಮದ ಜನರ ಸಹಮತದ ಮೇರೆಗೆ ಪಂಚಾಯಿತಿ ಜಾಗ ಪಡೆದಿದ್ದಕ್ಕೆ ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಇದೇ ಕಾರಣಕ್ಕೆ ಕಿಡಿಗೇಡಿಗಳು ವಿಠಲ್ ಮನೆಗೆ ನುಗ್ಗಿ ಹಲ್ಲೆ ಮಾಡಿದ್ದಾರೆ. ಕಟ್ಟಡ ನಿರ್ಮಾಣ ಮಾಡುವಾಗಲೇ ಇಟ್ಟಿಗೆಯಿಂದ ಇದೇ ಗ್ರಾಮದ ಪುಂಡಲೀಕ ಕುಡಚೇಕರ್, ಭೀಮಾ ದೇಮನ್ನವರ, ನಾಗಪ್ಪ ವಾಳಕೆ ಎಂಬುವರು ಹಲ್ಲೆ ಮಾಡಿದ್ದಾರೆ ಎಂದು ಪ್ರಕರಣ ದಾಖಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಏಕಕಾಲದ ಚುನಾವಣೆ ಸವಾಲಿನ ಕೆಲಸ

ದೇಶದಲ್ಲಿ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳನ್ನು ಏಕಕಾಲಕ್ಕೆ ಚುನಾವಣೆ ನಡೆಸುವ ಮಹತ್ವದ ಪ್ರಸ್ತಾಪಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಸಂಬಂಧ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ನೇತೃತ್ವದ ಸಮಿತಿ ನೀಡಿದ ವರದಿಯನ್ನು ಮೋದಿ ಸರಕಾರ ಸ್ವೀಕರಿಸಿದೆ. ಈ ಪ್ರಸ್ತಾಪ ಸಂಸತ್ತಿನ ಅನುಮೋದನೆ ಪಡೆದು ಜಾರಿಗೆ ಬಂದರೆ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಚುನಾವಣಾ ಪ್ರಕ್ರಿಯೆ ಮತ್ತು ಆಡಳಿತ ಪ್ರಕ್ರಿಯೆಯಲ್ಲಿ ಗಮನಾರ್ಹ ಬದಲಾವಣೆ ಆಗಲಿದೆ. ಮುಂದಿನ ಅಧಿವೇಶನದಲ್ಲಿಯೇ ಈ ಸಂಬಂಧ ವಿಧೇಯಕ ಮಂಡಿಸುವುದಾಗಿ ಗೃಹಸಚಿವ ಅಮಿತ್ ಶಾ ತಿಳಿಸಿದ್ದಾರೆ. ಆದರೆ ಇದು ಕೇವಲ ಪ್ರಚಾರ ಗಿಮಿಕ್ ಆಗಿದ್ದು, ರಾಜ್ಯಸಭೆಯಲ್ಲಿ ಸ್ಪಷ್ಟ ಬಹುಮತವಿಲ್ಲದ ಸರಕಾರ ಇದನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂದು 'ಇಂಡಿಯ' ಒಕ್ಕೂಟದ ಪ್ರತಿಪಕ್ಷ ನಾಯಕರ ವಾದ. ಏಕಕಾಲದ ಚುನಾವಣೆ ಭಾರತಕ್ಕೆ ಹೊಸದೇನೂ ಅಲ್ಲ. ಸ್ವಾತಂತ್ರ್ಯಾನಂತರ 1952ರಲ್ಲಿ ದೇಶದಲ್ಲಿ ನಡೆದ ಮೊದಲ ಚುನಾವಣೆಯಿಂದ ಹಿಡಿದು 1967ರ ಚುನಾವಣೆಯ ತನಕವೂ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆದಿತ್ತು. ಆದರೆ ಸ್ವಾತಂತ್ರ್ಯೋತ್ತರ ದಿನಗಳ ಅಂದಿನ ಆದರ್ಶ ಇಂದಿಲ್ಲ. ಇಂದು ಗ್ರಾಮ ಪಂಚಾಯಿತಿ ಚುನಾವಣೆಗೂ ಅಭ್ಯರ್ಥಿಗಳು ಲಕ್ಷಾಂತರ ರು. ವ್ಯಯಿಸುವ ಸನ್ನಿವೇಶವಿದೆ. 4 ತಿಂಗಳ ಹಿಂದಷ್ಟೇ ನಡೆದ ಲೋಕಸಭೆ ಚುನಾವಣೆಗೆ ಬರೋಬ್ಬರಿ 1.35 ಲಕ್ಷ ಕೋಟಿ ರು ವ್ಯಯಿಸಲಾಗಿದೆ. ಇನ್ನು ಎಲ್ಲ 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ಖರ್ಚನ್ನು ಲೆಕ್ಕಹಾಕಿದರೆ ನಮ್ಮ ಒಂದು ವರ್ಷದ ಕೇಂದ್ರ ಬಜೆಟ್ ಮೊತ್ತವನ್ನು ಮೀರುವುದು ಖಚಿತ. ಅಂದರೆ 5 ವರ್ಷಗಳ ಅವಧಿಗೆ ಜನಪ್ರತಿನಿಧಿಗಳನ್ನು ಆರಿಸಲು ಸಂಪನ್ಮೂಲದ ಬಹುಭಾಗ ವ್ಯಯವಾಗುತ್ತಿದೆ. ಆದರೆ 150 ಕೋಟಿ ಜನಸಂಖ್ಯೆಯ ದೇಶದಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸುವುದು, ಇದಕ್ಕೆ ಅಗತ್ಯವಿರುವ ಮತಯಂತ್ರಗಳು, ಭದ್ರತೆ, ಚುನಾವಣೆ ಉಸ್ತುವಾರಿ ಸಿಬ್ಬಂದಿಯನ್ನು ಒದಗಿಸುವುದು ಸುಲಭದ ಕೆಲಸವಲ್ಲ. ಮುಖ್ಯವಾಗಿ ಸಂಸತ್ತಿನಲ್ಲಿ ಈ ವಿಧೇಯಕ ಅಂಗೀಕಾರ ಗೊಳ್ಳಬೇಕಾದರೆ 365ನೇ ವಿಧಿ ಸೇರಿ ಕನಿಷ್ಠ 5 ಸಂವಿಧಾನ ತಿದ್ದುಪಡಿ ಪ್ರಸ್ತಾವಗಳಿಗೆ ಸಂಸತ್ತಿನ ಒಪ್ಪಿಗೆ ಅಗತ್ಯ. ಮೋದಿ ಸರಕಾರಕ್ಕೆ ಇದು ಸಾಧ್ಯವಾಗಲಿದೆಯೇ ಎನ್ನುವುದು ಸದ್ಯದ ಪ್ರಶ್ನೆ.

ಸೊಂಪಾದಕೀಯ

'ಇವಿ' ನಮ್ಮವ, 'ಇವಿ' ನಮ್ಮವ

ಪರಿಸರ ಸಂರಕ್ಷಣೆ ಅನ್ನೋದನ್ನು ನಾವು ಸಣ್ಣ ವಯಸ್ಸಿನಿಂದ ನಮ್ಮ ಪಠ್ಯಪುಸ್ತಕಗಳಲ್ಲಿ ನೋಡ್ತಾ ಬಂದಿದ್ದೇವೆ. ಆದ್ರೆ ಈ ಸಂರಕ್ಷಣೆಯ ಕೆಲಸ ಬರೀ ಪಠ್ಯಪುಸ್ತಕಕ್ಕೆ ಸೀಮಿತ ಆಗಿದ್ದೇ ಹೆಚ್ಚು. ಉಳಿದಂತೆ ಸರಕಾರಿ ಕಾರ್ಯಕ್ರಮಗಳ ವೇದಿಕೆಗಳಲ್ಲಿ, ವಿಶ್ವ ಪರಿಸರ ದಿನದಂದು ಭಾಷಣಗಳಿಗೆ ಈ ಪರಿಸರ ಸಂರಕ್ಷಣೆ ಅನ್ನೋದು ಮಾತಾಡೋಕೆ ವೇದಿಕೆ ಆಗಿದೆ. ಆದರೆ ಈಗೀಗ ನಮ್ಮ ಪರಿಸರ ಸಂರಕ್ಷಣೆಯ ವಿಷಯದಲ್ಲಿ ಕೆಲಸಗಳೂ ಆಗ್ತಾ ಇವೆ ಅನ್ನೋದು ಸಂತಸದ ವಿಷಯ. ಇತ್ತೀಚೆಗೆ ಇಲೆಕ್ಟ್ರಿಕಲ್ ವೆಹಿಕಲ್‌ಗಳ (ಇವಿ) ಸಂಖ್ಯೆ ಹೆಚ್ಚುತ್ತಿದೆ. ಟೂ ವೀಲರ್‌ಗಳಲ್ಲಂತೂ ಗಣನೀಯವಾಗಿ ಎಲ್ಲಾ ಪ್ರಮುಖ ವಾಹನ ತಯಾರಕಾ ಸಂಸ್ಥೆಗಳೂ ಈಗ 'ಇವಿ'ಗೆ ಮೊರೆಹೋಗಿವೆ. ಅದಕ್ಕೆ ಕಾರಣ 'ಇವಿ'ಗಳ ಬೆಲೆ ಹೆಚ್ಚಾದರೂ ನಂತರ ಅವುಗಳಿಂದ ಖರ್ಚು ಕಡಿಮೆ ಅನ್ನೋದು. ಹೆಚ್ಚಾಗ್ತಿರೋ ಪೆಟ್ರೋಲ್ ಬೆಲೆಯ ಕಾಣಿಕೆ ಕೂಡಾ ಇದರಲ್ಲಿದೆ. ಹಾಗಾಗಿ ಸಾಮಾನ್ಯ ಜನ ಈಗ 'ಇವಿ' ನಮ್ಮವ 'ಇವಿ' ನಮ್ಮವ ಎಂದು ಅದನ್ನು ಅಪ್ಪಿಕೊಂಡಿದ್ದಾರೆ. ಎಲ್ಲೋ ಅಲ್ಲೊಂದು ಇಲ್ಲೊಂದು ಅಪಸ್ವರಗಳೂ 'ಇವಿ'ಗಳ ಬಗ್ಗೆ ಕೇಳಿಬರುತ್ತಿವೆ. ರಸ್ತೆ ಮಧ್ಯದಲ್ಲೇ ಉರಿದು ಹೋದ ಇಲೆಕ್ಟ್ರಿಕ್ ವೆಹಿಕಲ್ ಅಂತ ಸುದ್ದಿಗಳನ್ನು ಓದಿದಾಗ 'ಇವಿ'ಗಳ ಸುರಕ್ಷತೆಯ ಬಗ್ಗೆ ಅನುಮಾನ ಮೂಡುತ್ತದೆ. ಆದರೆ 'ಇವಿ'ಗಳ ಭರಾಟೆ ಮಾತ್ರ ಕಮ್ಮಿ ಆಗಿಲ್ಲ. ಅಂದಹಾಗೆ 'ಇವಿ'ಗಳು ಈಗ ಕೇವಲ ಟೂ ವೀಲರ್‌ಗಳಿಗೆ ಮಾತ್ರ ಸೀಮಿತ ಆಗದೆ, ನಮ್ಮ ಬಿಎಂಟಿಸಿಯಲ್ಲೂ ಕಾಣಸಿಗುತ್ತಿವೆ. ಪ್ರಸ್ತುತ 1027 ಇಲೆಕ್ಟ್ರಿಕಲ್ ಬಸ್ಸುಗಳು ನಮ್ಮ ಬೆಂಗಳೂರಿನ ರಸ್ತೆಗಳಲ್ಲಿ ಇವೆ. ಇಂಗಾಲ ಹೊರಬಿಡುವ ಡೀಸೆಲ್ ಬಸ್ಸುಗಳನ್ನು ಬಿಟ್ಟು ಇಲೆಕ್ಟ್ರಿಕಲ್ ಬಸ್ಸುಗಳನ್ನು ಹೆಚ್ಚಿಸಲು ಬಿಎಂಟಿಸಿ ಕೂಡಾ ಈಗ ಮುಂಗಾಲ ಮೇಲೆ ನಿಂತಿದೆ. ಇದರಿಂದಾಗಿ ಬೆಂಗಳೂರಿನಂಥ ಮಹಾನಗರಗಳಲ್ಲಿ ಜನರಿಗೆ ಡೀಸೆಲ್ ಗಾಡಿಗಳು ಹೊರಬಿಡುವ ವಿಷಕಾರಿ ಅನಿಲಗಳಿಂದ ಮುಕ್ತಿ ಸಿಕ್ಕು ಅನೇಕ ರೋಗಗಳಿಂದ ನರಳುವುದು ತಪ್ಪುತ್ತದೆ ಎನ್ನುತ್ತಿದೆ ಬಿಎಂಟಿಸಿ. ಒಟ್ಟಿನಲ್ಲಿ ಇಲೆಕ್ಟ್ರಿಕ್ ವೆಹಿಕಲ್‌ಗಳು ಪೆಟ್ರೋಲ್ ಮತ್ತು ಡೀಸೆಲ್ ಗಾಡಿಗಳಿಗೆ ಕರೆಂಟ್ ಶಾಕ್ ಕೊಡುತ್ತಿವೆ. ಹಾಗಾಗಿ ಇವು ರಸ್ತೆಯಲ್ಲಿ ಓಡುವಾಗ ಹೆಚ್ಚು ಸದ್ದು ಮಾಡದೇ ಇದ್ದರೂ ಮಾರುಕಟ್ಟೆಯಲ್ಲಂತೂ ಭಾರಿ ಸದ್ದು ಮಾಡುತ್ತಿವೆ.

ಸಂಪಾದಕರ ಸದ್ಯಶೋಧನೆ

ಇಂದಿರಾ ನಿವೃತ್ತಿ ಚಿಂತನೆ

'ನಾನು ಹಿಮಾಚಲ ಪ್ರದೇಶದ ಗುಡ್ಡದ ತಪ್ಪಲಲ್ಲಿ ಮನೆ ಮಾಡಿ, ಅಲ್ಲಿಯೇ ನನ್ನ ನಿವೃತ್ತ ಜೀವನವನ್ನು ಕಳೆಯಬಯಸಿದ್ದೇನೆ'. ಹಾಗೆಂದು ಹೇಳಿದವರು ಮಾಜಿ ಪ್ರಧಾನಿ ಇಂದಿರಾ ಗಾಂಧಿ. ಅಂದು ಅವರು ತಮ್ಮ ಸಫ್ದರ್‌ಜಂಗ್ ನಿವಾಸದ ಮರದ ಕೆಳಗೆ ಕುಳಿತು ತಮ್ಮನ್ನು ಭೇಟಿ ಮಾಡಲು ಬಂದ ಇಬ್ಬರು ಅತಿಥಿಗಳ ಜತೆ ಮಾತಾಡುತ್ತಿದ್ದರು. 'ನಾನು ಅಲ್ಲಿ ಸಣ್ಣ ಕಾಟೇಜನ್ನು ಖರೀದಿಸಿ, ಅಲ್ಲಿ ನನ್ನ ಆತ್ಮಕಥೆಯನ್ನು ಬರೆಯುತ್ತೇನೆ' ಎಂದು ಇಂದಿರಾ ಹೇಳಿದರು. 'ಅಷ್ಟಕ್ಕೂ ನನಗೆ ಏನು ಬೇಕು? ನನಗೆ ಏನು ಖರ್ಚಿದೆ? ನಾನು ಅಲ್ಲಿ ಸರಳ ಜೀವನವನ್ನು ನಡೆಸಲು ನಿರ್ಧರಿಸಿದ್ದೇನೆ' ಎಂದು ಅವರು ಓಲ್ಡ್ ಮಾಂಕ್ ತಯಾರಿಸುವ ಮೋಹನ್ ಮೇಕಿನ್ ಲಿಕ್ಕರ್ ಕಂಪನಿಯ ಕಪಿಲ್ ಮೋಹನ್ ಮತ್ತು ಅನಿಲ್ ಬಾಲಿ ಅವರಿಗೆ ಹೇಳಿದರು. ಅವರಿಬ್ಬರೂ ಇಂದಿರಾ ಜತೆ ನಿಕಟ ಸಂಪರ್ಕವನ್ನು ಹೊಂದಿದ್ದರು. ಮೋಹನ್ ಕುಟುಂಬಿಕರು ಅರವತ್ತರ ದಶಕದ ಆರಂಭದಿಂದ ಇಂದಿರಾ ಜತೆ ಗಟ್ಟಿಯಾಗಿ ನಿಂತು, ದೇಶಾದ್ಯಂತ ಅವರಿಗೆ ರಾಜಕೀಯ ಬೆಂಬಲ ದೊರಕಿಸಿಕೊಡಲು ಶ್ರಮಿಸಿದವರು. ಹಾಗೆಯೇ ಇಂದಿರಾ ಅವರಿಂದ ದೊಡ್ಡ ಪ್ರಮಾಣದಲ್ಲಿ ಉಪಕೃತರಾದವರು. ಎರಡು ವಾರಗಳ ಮೊದಲು (1977ರ ಏಪ್ರಿಲ್) ಅವರು ಭಾರತದ ಪ್ರಧಾನಿಯಾಗಿದ್ದರು. ಆದರೆ ಅಂದು ಅವರು ಸಂಸತ್ತಿನ ಸದಸ್ಯೆಯೂ ಆಗಿರಲಿಲ್ಲ. ಮಾರ್ಚ್‌ನಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ದಯನೀಯವಾಗಿ ಸೋತುಹೋಗಿತ್ತು. ಇಂದಿರಾ ಅಂಥ ಪರಾಭವವನ್ನು ಕನಸು-ಮನಸಿನಲ್ಲೂ ನಿರೀಕ್ಷಿಸಿರಲಿಲ್ಲ. ಚುನಾವಣೆಯ ಫಲಿತಾಂಶದಿಂದ ಅವರು ಆಘಾತಕ್ಕೊಳಗಾಗಿದ್ದರು. ಸ್ವಂತ ಕ್ಷೇತ್ರವಾದ ರಾಯ್‌ಬರೇಲಿಯಲ್ಲಿ ಅವರು ಸೋತುಹೋಗಿದ್ದರು. ಸೋಲು ಸಹ ಅವರಿಗೆ ಕನಿಕರ ತೋರಿರಲಿಲ್ಲ. ಸ್ವಾತಂತ್ರ್ಯಾನಂತರ ದೇಶವನ್ನು ನಿರಂತರ 30 ವರ್ಷಗಳ ತನಕ ಆಳಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಉತ್ತರ ಭಾರತದಲ್ಲಿ ಧೂಳೀಪಟವಾಗಿತ್ತು. ಜನತಾ ಪಕ್ಷ ಮತ್ತು ಮಿತ್ರಪಕ್ಷಗಳು 345 ಸ್ಥಾನಗಳಲ್ಲಿ ಅಭೂತಪೂರ್ವ ಜಯ ಸಾಧಿಸಿದ್ದವು. 11 ವರ್ಷಗಳ ಕಾಲ ದೇಶದ ಪ್ರಧಾನಿಯಾಗಿದ್ದ ಇಂದಿರಾ, 1977ರ ಮಾರ್ಚ್ 22ರಂದು ರಾಜೀನಾಮೆ ನೀಡಿದರು. ಈ ಸೋಲು ಅವರನ್ನು ಹಿಂಜಿಪ್ಪಲಿ ಮಾಡಿತ್ತು. ರಾಜಕೀಯ ನಿವೃತ್ತಿ ಘೋಷಿಸಿ ದಿಲ್ಲಿ ಬಿಟ್ಟು ದೂರ ಹೋಗುವ ನಿರ್ಧಾರಕ್ಕೆ ಬಂದಿದ್ದರು. 'ನಾನು ಎಂಥ ಜಾಗವನ್ನು ಆರಿಸಿಕೊಳ್ಳುತ್ತೇನೆ ಅಂದ್ರೆ, ಸುತ್ತಲೂ ಹಸಿರು, ಮರಗಳಿರಬೇಕು. ನಾನು ನನ್ನ ಉಳಿದ ದಿನಗಳನ್ನು ಅಲ್ಲಿಯೇ ಕಳೆಯುತ್ತೇನೆ. ಪುಸ್ತಕಗಳನ್ನು ಓದುತ್ತಾ ಇದ್ದುಬಿಡುತ್ತೇನೆ' ಎಂದು ಹೇಳಿದರು. 'ಮೇಡಂ, ನೀವು ಪುಸ್ತಕ ಬರೆಯುತ್ತೀರಾ?' ಎಂದು 29 ವರ್ಷದ ಅನಿಲ್ ಬಾಲಿ ಉತ್ಸಾಹದಿಂದ ಕೇಳಿದ. 'ಬರೆದರೂ ಬರೆದೇನು. ಅಷ್ಟಕ್ಕೂ ನನ್ನ ಆತ್ಮಕಥೆಯನ್ನು ಯಾರು ಓದಲು ಬಯಸುತ್ತಾರೆ?' ಎಂದು ವಿಷಾದದಿಂದ ನುಡಿದರು. ತಾನು ಈ ದೇಶದ ಜನರಿಂದ ತಿರಸ್ಕಾರಕ್ಕೊಳಗಾದವಳು ಎಂಬುದು ಅವರಿಗೆ ಮನವರಿಕೆಯಾಗಿತ್ತು. 'ಮೋಹನ್-ಬಾಲಿ, ನನಗಾಗಿ ಒಂದು ಉತ್ತಮ ಕಾಟೇಜ್ ಅನ್ನು ಹುಡುಕಿ. ನನಗೆ ಈ ರಾಜಕೀಯ ಸಾಕಾಗಿದೆ. ನಾನು ತುಂಬಾ ದಣಿದಿದ್ದೇನೆ. ನನಗೆ ವಿಶ್ರಾಂತಿ ಬೇಕು ಎಂದು ಅನಿಸುತ್ತಿದೆ' ಎಂದು ಇಂದಿರಾ ಹೇಳಿದರು. ತಕ್ಷಣ ಅವರಿಗೆ ಅದೇನೋ ಹೊಳೆದಂತಾಗಿ, 'ನನಗೆ ಗೊತ್ತಿತ್ತು, ನಾನು ಸೋಲುತ್ತೇನೆಂದು' ಎಂದು ಹೇಳಿದರು. ಈ ಮಾತನ್ನು ಕೇಳಿ ಮೋಹನ್ ಮತ್ತು ಬಾಲಿ ಮುಖಮುಖ ನೋಡಿಕೊಂಡರು. ಕಾರಣ ಗುಪ್ತಚರ ಇಲಾಖೆ ಅಧಿಕಾರಿಗಳು, 'ನೀವೇ ಗೆಲ್ಲುತ್ತೀರಿ ಮತ್ತು 340 ಸ್ಥಾನಗಳಲ್ಲಿ ಜಯಗಳಿಸುತ್ತೀರಿ' ಎಂದು ಹೇಳಿದ್ದರು. ಆ ಸಂಗತಿ ಮೋಹನ್-ಬಾಲಿಗೆ ಗೊತ್ತಿತ್ತು. ಅಷ್ಟೇ ಅಲ್ಲ, ಕಾಂಗ್ರೆಸ್ಸಿನ ಹಿರಿಯ ನಾಯಕರೂ ತಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಭಾವಿಸಿದ್ದರು. ಚುನಾವಣಾ ಫಲಿತಾಂಶ ಪ್ರಕಟವಾಗುವುದಕ್ಕಿಂತ ಎರಡು ದಿನ ಮೊದಲು, ಉತ್ತರ ಪ್ರದೇಶ ಮುಖ್ಯಮಂತ್ರಿ ನಾರಾಯಣ ದತ್ತ ತಿವಾರಿ ಬಂದು, 'ನಾವು ಉತ್ತರ ಪ್ರದೇಶದ 85 ಸ್ಥಾನಗಳ ಪೈಕಿ 70 ಸ್ಥಾನಗಳಲ್ಲಿ ಜಯ ಗಳಿಸುತ್ತೇವೆ' ಎಂದು ಹೇಳಿದ್ದರು. 'ಹಾಗಾದರೆ ನಾವು ಎಡವಿದ್ದು ಎಲ್ಲಿ?' ಎಂದು ಇಂದಿರಾ ಸುಮ್ಮನಾಗಿಬಿಟ್ಟರು.

ಇಲ್ಲ, ಬೇಡ, No ಎಂದು ಹೇಳಲು ಹಿಂಜರಿಯಬಾರದು!

ಶಿಶಿರಕಾಲ

ಶಿಶಿರ್ ಹೆಗಡೆ
vveditoped@gmail.com

ಆಂಗ್ಲರು ನಮ್ಮನ್ನಾಳುತ್ತಿದ್ದ ಸಮಯದಲ್ಲಿ ಇಲ್ಲಿದ್ದ ಬ್ರಿಟಿಷ್ ಅಧಿಕಾರಿಗಳಲ್ಲಿ ಹಲವು ಸಾಹಿತಿಗಳು, ಬರಹಗಾರರು ಕೂಡ ಇದ್ದರು. ಅವರು ಬರೆದದ್ದೆಲ್ಲ ಪುಸ್ತಕಗಳಾಗಿಲ್ಲ. ಅಲ್ಲಲ್ಲಿ, ಚಿಕ್ಕ ಲೇಖನಗಳನ್ನು, ಪ್ರಬಂಧಗಳನ್ನು, ವಿವರಣೆಗಳನ್ನು ಅಸಂಖ್ಯ ಬ್ರಿಟಿಷರು ಬರೆದುಕೊಂಡಿದ್ದಾರೆ. ಅವರು ಬರೆದ ಇತಿಹಾಸ ಸುಳ್ಳೇ ಇದ್ದರೂ ಈ ರೀತಿ ಬರೆದ ಹಲವು ಪ್ರಬಂಧಗಳು ಪ್ರತ್ಯೇಕವಾಗಿ ನಿಲ್ಲುತ್ತವೆ. ಅಂದು ಆ ಅಧಿಕಾರಿಗಳಿಗಿದ್ದ ಅನಿವಾರ್ಯತೆ, ಸಮಸ್ಯೆಗಳು, ಮಾನಸಿಕ ಸ್ಥಿತಿ, ನಿರಂತರ ಭಯ ಇವುಗಳ ಬಗ್ಗೆ ಅಲ್ಲಲ್ಲಿ ಬೆಳಕು ಚೆಲ್ಲುತ್ತವೆ. ಅಂತಹುದೇ ಪ್ರಬಂಧವೊಂದರ ವಿವರಣೆಯನ್ನು ಇತ್ತೀಚೆಗೆ ರೇಡಿಯೋ ಕಾರ್ಯಕ್ರಮವೊಂದರಲ್ಲಿ ಕೇಳುತ್ತಿದ್ದೆ.

1920ರ ಸಮಯ. ಬ್ರಿಟಿಷ್ ಪೊಲೀಸ್ ಅಧಿಕಾರಿಯೊಬ್ಬನ ಅನುಭವದ ಕಥೆ. ಆತ ಊರೊಂದರಲ್ಲಿ ಅಂದಿನ ಇಂಡಿಯನ್ ಇಂಪೀರಿಯಲ್ ಪೊಲೀಸ್ ಫೋರ್ಸ್ ಅಧಿಕಾರಿಯಾಗಿದ್ದ. ಯಾವ ಭಾರತೀಯರಿಗೂ ಬ್ರಿಟಿಷ್ ಪೊಲೀಸ್ ಅಧಿಕಾರಿಗಳನ್ನು ಕಂಡರಾಗುತ್ತಿರಲಿಲ್ಲ. ಅವರು ಅದೆಷ್ಟು ಶೋಷಿಸುತ್ತಿದ್ದರೆಂದರೆ ಅವರನ್ನು, ಕುಟುಂಬದವರನ್ನು ಕಂಡರೆ ಊರಿನಲ್ಲಿರುವವರಿಗೆಲ್ಲ ದ್ವೇಷವಿತ್ತು. ಅಂತೆಯೇ ಆ ಬ್ರಿಟಿಷ್ ಅಧಿಕಾರಿಯನ್ನು ಕೂಡ ಊರಿನವರೆಲ್ಲ ದ್ವೇಷಿಸುತ್ತಿದ್ದರು. ಆತನ ಹೆಂಡತಿ, ಮಕ್ಕಳು ಸಂತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ ಜನರು ಶಿಳ್ಳೆ ಹೊಡೆಯುತ್ತಿದ್ದರು, ಚುಡಾಯಿಸುತ್ತಿದ್ದರು. ಮಕ್ಕಳು ಕಲ್ಲುತೂರುತ್ತಿದ್ದರು. ಒಬ್ಬೊಬ್ಬರೇ ನಡೆದು ಹೋಗುವಾಗ ಗುಂಪಿನಿಂದ ಬಂದು ಬ್ರಿಟಿಷ್ ಹೆಂಗಸರ ಬಿಳಿಯ ಬಟ್ಟೆಯ ಎಲೆ ಅಡಿಕೆ ಉಗುಳಿ ಹೋಗುತ್ತಿದ್ದರು.

ಹೀಗಿರುವಾಗ ಒಂದು ದಿನ ಆ ಊರಿನ ಸಂತೆಯೊಳಕ್ಕೆ ಕಾಡಾನೆಯೊಂದು ನುಗ್ಗಿಬಿಟ್ಟಿತು. ತಕ್ಷಣ ಆ ಸಂತೆಯ ಇನ್ನೊಂದು ತುದಿಯಲ್ಲಿದ್ದ ಪೊಲೀಸ್ ಸ್ಟೇಷನ್ನಿಗೆ, ಅಲ್ಲಿನ ಅಧಿಕಾರಿಯಾದ ಈ ಬ್ರಿಟಿಷ್ ಯುವಕನಿಗೆ ಆ ಸುದ್ದಿ ಹೋಗಿ ಮುಟ್ಟಿತು. ಅಂಥ ಸಮಯದಲ್ಲಿ ಸಾರ್ವಜನಿಕರ ರಕ್ಷಣೆ ಮಾಡಬೇಕಲ್ಲ, ಪೊಲೀಸ್ ಅಧಿಕಾರಿ ನೋಡೋಣ ಎಂದು ಅತ್ತ ದೌಡಾಯಿಸಿದ. ಅಧಿಕಾರಿಗೂ ಈ ಜನರನ್ನು ಕಂಡರಾಗುತ್ತಿರಲಿಲ್ಲ. ದ್ವೇಷ ಎರಡೂ ಕಡೆಯಿಂದಿತ್ತು. ಆದರೆ ಆ ಕ್ಷಣಕ್ಕೆ ಎಲ್ಲರೂ ಆ ಅಧಿಕಾರಿಯನ್ನು ನೋಡುತ್ತಾ, ಕೇಕೆ ಹಾಕುತ್ತ, ಇವನೇನು ಮಾಡಿಯಾನು ಎಂಬಂತೆ ಉಡಾಫೆ ಮಾಡಿದರು. ತಕ್ಷಣ ಅಧಿಕಾರಿ ಕೈಯಲ್ಲಿದ್ದ ಪಿಸ್ತೂಲನ್ನು ಆನೆಯತ್ತ ಗುರಿ ಮಾಡಿದ. ಆ ಕ್ಷಣಕ್ಕೆ ಅಲ್ಲಿ ನೆರೆದಿದ್ದ ಸುಮಾರು ಎರಡು ಸಾವಿರ ಮಂದಿ 'ಹೋ' ಎಂದು ಕೂಗಿದರು. ಆತನ ಮೇಲೆ ಎಲ್ಲಿಲ್ಲದ ಮಾನಸಿಕ ಒತ್ತಡ ನಿರ್ಮಾಣವಾಯಿತು. ಆತ ಫೈರ್ ಮಾಡಿದ, ಬೃಹದಾಕಾರದ ಆನೆ ನೆಲಕ್ಕೆ ಕುಸಿದು ಬಿತ್ತು. ಆ ಬ್ರಿಟಿಷ್ ಅಧಿಕಾರಿ ಆ ಸಮಯದಲ್ಲಿನ ತನ್ನ ಮಾನಸಿಕತೆಯನ್ನು ಪ್ರಬಂಧದಲ್ಲಿ ವಿವರಿಸುತ್ತಾನೆ. ಅಸಲಿಗೆ ಆ ಅಧಿಕಾರಿಗೆ ಈ ಸಂತೆಯಲ್ಲಿರುವ ಜನರನ್ನು ರಕ್ಷಿಸುವ ಯಾವುದೇ ಮನಸ್ಸಿರುವುದಿಲ್ಲ. ಅವರಲ್ಲಿ ಒಂದಿಷ್ಟು ಮಂದಿ ಸತ್ತರೆ ಸಾಯಲಿ ಎಂದೇ ಇರುತ್ತದೆ. ಅದಲ್ಲದೆ ಅವನಿಗೆ ಆನೆ, ಕಾಡುಪ್ರಾಣಿಗಳ ಬಗ್ಗೆ ಮಮತೆಯಿರುತ್ತದೆ. ಆತ ಪ್ರಾಣಿಪ್ರಿಯ! ಆದರೆ ಆ ಕ್ಷಣದ ಒತ್ತಡ ಆನೆಯತ್ತ ಗುಂಡು ಹರಿಸಲು, ಕೊಲ್ಲಲು ಮುಂದಾಗುವಂತೆ ಪ್ರೇರೇಪಿಸಿರುತ್ತದೆ. ಒಂದು ವೇಳೆ ಕೊಲ್ಲದಿದ್ದರೆ, ಹೇಡಿ, ನಾಮರ್ದ ಎಂದಾಗುತ್ತೇನೆ ಎನ್ನುವ ಒತ್ತಡ. ಜನರು ತನ್ನನ್ನು ಇನ್ನಷ್ಟು ತಿರಸ್ಕರಿಸುವ ಹೆದರಿಕೆ. ಒಟ್ಟಾರೆ ಆನೆಯನ್ನು ಕೊಲ್ಲಲು ಮನಸ್ಸೇ ಇಲ್ಲದ ಅಧಿಕಾರಿ ಆ ದಿನ ಆನೆಯ ತಲೆಗೆ ಗುಂಡಿಟ್ಟು ಶೂಟ್ ಮಾಡಿಬಿಡುತ್ತಾನೆ.

ಅಲ್ಲಿಂದ ಮುಂದೆ ಆ ಪ್ರಬಂಧ ಆ ಬ್ರಿಟಿಷ್ ಅಧಿಕಾರಿಯ ಅಂತರ್ಯದತ್ತ ತಿರುಗಿಕೊಳ್ಳುತ್ತದೆ. ಒಂದು ಕ್ಷಣ ಇದೆಲ್ಲ ಘಟನೆಯನ್ನು ಕಣ್ಣ ಮುಂದೆ ತಂದು ಕಲ್ಪಿಸಿಕೊಳ್ಳಿ. ಇಲ್ಲಿ ಬ್ರಿಟಿಷ್ ಅಧಿಕಾರಿಯ ಕ್ರೌರ್ಯ, ಉದ್ದೇಶ ಅಥವಾ ಯುರೋಪಿಯನ್ನರೆಡೆಗಿನ ಭಾರತೀಯರ ದ್ವೇಷ, ಅಂದಿನ ಶೋಷಣೆ ಇವೆಲ್ಲವನ್ನೂ ಪಕ್ಕದಲ್ಲಿಡೋಣ. ಆ ಅಧಿಕಾರಿಯ ಆ ಕ್ಷಣದ ಮಾನಸಿಕ ಸ್ಥಿತಿಯನ್ನಷ್ಟೇ ಇಲ್ಲಿ ವಿವೇಚಿಸೋಣ. ಎದುರಾಗುವ, ನಿರ್ಮಾಣವಾಗುವ ಪರಿಸ್ಥಿತಿಗಳು ನಮ್ಮಿಂದ ಅದೆಷ್ಟೋ ಬೇಡದ, ಮನಸ್ಸೇ ಇಲ್ಲದ ಕೆಲಸವನ್ನು ಮಾಡಿಸುತ್ತವೆ. ಆತನಿಗೆ ಆ ಜನರನ್ನು ಕಂಡರಾಗದು. ಅಷ್ಟಕ್ಕೂ ಆ ಆನೆ ಸಂತೆಯಲ್ಲಿ ಯಾರನ್ನೂ ಕೊಂದಿಲ್ಲ, ಗಾಯಗೊಳಿಸಿಲ್ಲ. ಅದು ನಡೆಯುವಾಗ ಅಲ್ಲಿರುವ ಬಿದಿರಿನ ಅಂಗಡಿಯೊಂದು ಮುರಿದದ್ದು ಬಿಟ್ಟರೆ ಆ ಆನೆಯೇ ಅಲ್ಲಿನ ಜನರಿಗಿಂತ ಹೆಚ್ಚಿಗೆ ಗಾಬರಿಯಾಗಿತ್ತು. ಪ್ರಾಣಿ ಮುಗ್ಧವೆಂಬ ಭಾವ ಅವನೊಳಗಿದ್ದರೂ ಅದೆಲ್ಲವನ್ನೂ ಮೀರಿ ಅವನು ವರ್ತಿಸುವಂಥ ಸ್ಥಿತಿ ಅಂದು ನಿರ್ಮಾಣವಾಗಿತ್ತು. ತನ್ನ ಮನಸ್ಸು ಬಯಸಿದ್ದಕ್ಕೆ ತದ್ವಿರುದ್ಧವಾಗಿ ಆತ ನಡೆದುಕೊಂಡಿದ್ದ. ಸುತ್ತಲೂ ಇದ್ದವರು ತನಗಾಗದವರೇ ಆಗಿದ್ದರೂ, ಆನೆಯನ್ನು ಕೊಲ್ಲಬೇಕೆಂಬ ಅವರೆಲ್ಲರ ಕೋರಿಕೆಗೆ 'ನೋ, ನಾನು ಶೂಟ್ ಮಾಡುವುದಿಲ್ಲ' ಎನ್ನಲಾರದಾದ.

ಜನರು, ಸಮಾಜ, ಕುಟುಂಬ ವ್ಯವಸ್ಥೆಯ ನಡುವೆ ಬದುಕುವಾಗ, ಮಕ್ಕಳನ್ನು ಬೆಳೆಸುವಾಗ, ಸ್ನೇಹವನ್ನು ಸಾಕುವಾಗ, ವೃತ್ತಿಯಲ್ಲಿ ಹೀಗೆ ನಮ್ಮೆಲ್ಲರ ಬದುಕಿನ ಬೇರೆ ಬೇರೆ ಛದ್ಮವೇಷದ ಪಾತ್ರಗಳಲ್ಲಿ, ಏಕಪಾತ್ರಾಭಿನಯ ಸ್ಥಿತಿಗಳಲ್ಲಿ ಹಲವು ರೀತಿಯ ಕೋರಿಕೆಗಳು, ಆಹ್ವಾನಗಳು, ಆದೇಶಗಳು- ಅವುಗಳಿಂದ ಒತ್ತಡಗಳು ಎದುರಾಗುತ್ತಲೇ ಇರುತ್ತವೆ. ಮಗಳು, ಮಗ ಕೇಳುವ ಚಿಕ್ಕ ಆಟಿಕೆ ಸಾಮಾನಿನಷ್ಟು ಮುಗ್ಧವಾದ ಬೇಡಿಕೆಯಿಂದ ಹಿಡಿದು, ಅಸಾಧ್ಯವೆನ್ನುವುದನ್ನು ಮಾಡಬೇಕೆನ್ನುವ ಬಾಸ್, ಸಾಲ ಕೇಳುವ, ಶೂರಿಟಿ ಕೊಡು ಎನ್ನುವ ಸ್ನೇಹಿತ, ಗಣಪತಿ ಪೆಂಡಾಲಿಗೆ ಕೇಳಿ ಬರುವ ಚಂದಾ ವರೆಗೆ ಏನೇನೋ ಕೋರಿಕೆ, ಬೇಡಿಕೆಗಳು. ಅವೆಲ್ಲ ಸಾಮಾಜಿಕ ಒತ್ತಡದ ಭಾಗವಾಗಿ ಎದುರಾದಾಗ ಇಲ್ಲ, ಸಾಧ್ಯವಿಲ್ಲ, ಆಗೋಲ್ಲ, ಬೇಡ, ನೋ ಇತ್ಯಾದಿ ಹೇಳಿ ತಿರಸ್ಕರಿಸಬೇಕೆಂದರೂ ಸಾಧ್ಯವಾಗುವುದಿಲ್ಲ.



ನನ್ನ ಐದನೇ ಕ್ಲಾಸಿನ ಮಗಳು ಒಂದು ದಿನ ಶಾಲೆಯಿಂದ ಬರುವಾಗ ಬಹಳ ಹಸಿದಿದ್ದಳು. ಸಾಮಾನ್ಯವಾಗಿ ಮನೆಗೆ ಬಂದಾಕ್ಷಣ ತಿನ್ನಲು ಏನೂ ಬೇಡವೆಂದು ಹೇಳುವವಳು. ಮನೆಯಿಂದ ಬುತ್ತಿ ಒಯ್ಯುವವಳು ಪೂರ್ತಿ ತಿಂದು ಬಂದದ್ದು ಅಪರೂಪ. ಆದರೆ ಆ ದಿನ ಬುತ್ತಿ ಕೂಡ ಖಾಲಿಯಾಗಿತ್ತು. ಕೇಳಿದಾಗ ಶಾಲೆಯಲ್ಲೊಬ್ಬಳು ಹೊಸತಾಗಿ ಸ್ನೇಹಿತೆಯಾಗಿದ್ದಾಳೆ. ಅವಳಿಗೆ ಭಾರತೀಯ ಆಹಾರ ಎಂದರೆ ಎಲ್ಲಿಲ್ಲದ ಪ್ರೀತಿ. ಆಕೆ ಬಂದು ಕೇಳಿದಳು. ಹಾಗಾಗಿ ನನ್ನ ಎಲ್ಲ ತಿಂಡಿ ಅವಳಿಗೆ ಕೊಟ್ಟದ್ದರಿಂದ ಈಗ ಹಸಿವೆಯಾಗಿದೆ. ನನಗೆ ಕೊಡಲು ಸಾಧ್ಯವಿರಲಿಲ್ಲ, ಅಷ್ಟು ಹಸಿವೆಯಾಗಿತ್ತು. ಆದರೆ It is an Acquaintance Trap. ಹಾಗಾಗಿ ಕೊಟ್ಟೆ ಎಂದಳು. ಮಕ್ಕಳ ಬಾಯಲ್ಲಿ ಅವರ ವಯಸ್ಸಿಗೆ ಮೀರಿದ ಶಬ್ದಗಳನ್ನು ಕೇಳಿದಾಗ ಆಶ್ಚರ್ಯವಾಗುವುದು ನಿಜ. ಅಮೆರಿಕದ ಮಕ್ಕಳಿಗೆ ಎದುರಾಗುವ ಒತ್ತಡಗಳ ಬಗ್ಗೆ ಪಾಠಮಾಡಲೆಂದೇ ಒಂದು ಕ್ಲಾಸಿರುತ್ತದೆ. ಈ ಕ್ಲಾಸಿನಲ್ಲಿ ಬೇರೆ ಬೇರೆ ರೀತಿಯ ಒತ್ತಡಗಳು, ಅವುಗಳ ಹೆಸರುಗಳನ್ನು ಪರಿಚಯಿಸಲಾಗುತ್ತದೆ. ನಮಗೆಲ್ಲರಿಗೂ ಇಂಥ Acquaintance Trap ಸ್ಥಿತಿ ಸಾಮಾನ್ಯ ಅನುಭವ. ಯಾರೋ ಹೊಸತಾಗಿ ಪರಿಚಯವಾದವರು, ಅಥವಾ ಅಷ್ಟೊಂದು ಆಪ್ತರಲ್ಲದವರು ಏನೋ ಒಂದನ್ನು, ಹಿಂದೆ ಮುಂದಿಲ್ಲದೆ ಬಂದು ಕೇಳಿದರೆ ಆ ಕ್ಷಣಕ್ಕೆ ಇಲ್ಲವೆನ್ನಲಾಗುವುದಿಲ್ಲ. ಬೇಡವೆಂದು ಹೇಳಬೇಕೆಂದರೂ 'ಆಯ್ತು, ಓಕೆ' ಎಂದುಬಿಡುತ್ತೇವೆ. ನಮಗೆ ತೊಂದರೆಯಾದರೂ ಸರಿ, ಹೊಸ ಸ್ನೇಹಿತನಿಗೆ, ದೂರದ ಸಂಬಂಧಿಗೆ 'ಬೇಡ, ಇಲ್ಲ, ಸಾಧ್ಯವಿಲ್ಲ' ಎಂದು ಹೇಳಲು ಸಾಧ್ಯವಾಗದೇ ನಾವೇ ಹಿಂಸೆ ಅನುಭವಿಸುತ್ತೇವೆ. 'ಇಲ್ಲ' ಎಂದುಬಿಟ್ಟರೆ ಸಂಬಂಧ ಹಾಳಾಗಿ ಬಿಡಬಹುದು, ವೈಮನಸ್ಸು ಬೆಳೆಯಬಹುದು! ನಮ್ಮೊಳಗೆ ಎಲ್ಲರೂ ನಮ್ಮನ್ನು ಪ್ರೀತಿಸಬೇಕೆಂಬ, ಮೆಚ್ಚಬೇಕೆಂಬ ಬಯಕೆ ಅದೆಷ್ಟೋ ಬಾರಿ ನಮ್ಮಿಂದ ಅನವಶ್ಯ 'ಓಕೆ' ಅನ್ನಿಸಿಬಿಡುತ್ತದೆ. ಸಾಮಾನ್ಯವಾಗಿ 'ನೋ' ಅನ್ನುವಾಗ ನಮ್ಮಲ್ಲೊಂದು ತಪ್ಪಿತಸ್ಥ ಭಾವ ಅನಾಮತ್ತಾಗಿ ಅದೆಲ್ಲಿಂದಲೋ ಬಂದು ವಕ್ಕರಿಸಿಕೊಳ್ಳುತ್ತದೆ. ಆ ಭಾವ ನಮ್ಮನ್ನು ಒತ್ತಾಯಕ್ಕೊಳಪಡಿಸುತ್ತದೆ. ಕೆಲವೊಮ್ಮೆ 'ಇಲ್ಲ, ಬೇಡ' ಎಂದುಬಿಟ್ಟರೆ ಏನೋ ನಾನು ಗುಂಪಿನಲ್ಲಿ ಸೇರದಿರುವವನಾಗಿ ಬಿಡುತ್ತೇನೆ ಎಂಬ ಭಯದಿಂದ ಒಪ್ಪಿಗೆ ಸೂಚಿಸುವ ಅನಿವಾರ್ಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ.

ಗೆಳೆಯರ ಗುಂಪಿನಲ್ಲಿ ಹೊಸತಾಗಿ ಸೇರಿಕೊಂಡವನೊಬ್ಬ ಕುಡಿಯುವುದಿಲ್ಲವಾದಲ್ಲಿ ಉಳಿದ ಗೆಳೆಯರು ಒತ್ತಾಯಮಾಡುವುದು ಗುಂಡುಪ್ರಿಯರ ಸೌಜನ್ಯ. ಸಾಮಾನ್ಯವಾಗಿ ಇಂಥ ಸಂದರ್ಭ ಎದುರಾದಾಗ ಅದನ್ನು ಕುಡಿಯದ ವ್ಯಕ್ತಿ ಎದುರಿಸುವ ಎರಡು ಬೇರೆ ಬೇರೆ ರೀತಿಯನ್ನು ಗಮನಿಸಿದ್ದೇನೆ. ಮೊದಲನೆಯವನು 'ಇವತ್ತು ಬೇಡ, ಸಂಕಷ್ಟಿ' ಎಂಬ ರೀತಿಯ ಒಂದು ಹುಸಿಕಾರಣ ಕೊಟ್ಟು ತಪ್ಪಿಸಿಕೊಳ್ಳುವವನು. ಅವನು ಎಂದೂ ಕುಡಿದವನೇ ಅಲ್ಲ ಮತ್ತು ಅವನಿಗೆ ಕುಡಿಯುವುದು ಬೇಕಾಗಿಯೂ ಇಲ್ಲ, ಆದರೆ ಆ ಕ್ಷಣಕ್ಕೆ, ಆ ಪಾರ್ಟಿಯಲ್ಲಿ ತಪ್ಪಿಸಿಕೊಂಡರೆ ಮುಂದೆ ನೋಡಿದರಾಯಿತು. ಅಂಥವರು ಒಂದಿಲ್ಲೊಂದು ದಿನ ಒತ್ತಾಯಕ್ಕೆ ಕುಡಿಯಲೇಬೇಕಾದ ಸ್ಥಿತಿ ಎದುರಾಗುತ್ತದೆ. ಏಕೆಂದರೆ ಅವರು ಸಮಸ್ಯೆಯನ್ನು, ನಕಾರವನ್ನು ಆ ಕ್ಷಣವಷ್ಟೇ ಮುಂದೆ ಹಾಕಿರುತ್ತಾರೆ. ಇನ್ನೊಂದು ವರ್ಗದ ಕುಡಿಯದವರಿದ್ದಾರೆ. ಅವರನ್ನು ಯಾವುದೇ ಸನ್ನಿವೇಶದಲ್ಲಿಯೇ ಕೇಳಿ, 'ನನ್ನದು ಕುಡಿಯುವ ವ್ಯಕ್ತಿತ್ವವೇ ಅಲ್ಲ' ಎಂದು ಹೇಳಿಬಿಡುತ್ತಾರೆ. ಸ್ಪಷ್ಟ, ನೇರ. ಯಾವುದೇ 'ಇಲ್ಲ, ಸಾಧ್ಯವಿಲ್ಲ, ನೋ' ವ್ಯಕ್ತಿತ್ವದ ಜತೆಯಲ್ಲಿ ಸೇರಿಕೊಂಡಾಗ ಅದು ಬಹಳ ಗಟ್ಟಿಯೆನಿಸುತ್ತದೆ. ನಾನು ಅಂಥ ಕೆಲಸವನ್ನು ಮಾಡುವವನೇ ಅಲ್ಲ, ಅದು ನನ್ನ ಪ್ರಿನ್ಸಿಪಲ್ ಅಲ್ಲ ಎನ್ನುವ ಸ್ಪಷ್ಟತೆಯಲ್ಲಿ ಇಲ್ಲವೆಂದಾಗ ಅದನ್ನು ಯಾರೂ ಪ್ರಶ್ನಿಸಲು ಮುಂದಾಗುವುದಿಲ್ಲ. ಸಾಮಾನ್ಯವಾಗಿ 'ಇಲ್ಲ' ಎನ್ನುವಾಗ ಬಹಳಷ್ಟು ಕಾರಣಗಳನ್ನು ಕೊಟ್ಟರೆ, ಸಬೂಬು ಹೇಳಿದರೆ ಅದು ಗಟ್ಟಿ ನಿಲ್ಲುವುದಿಲ್ಲ, ಆದರೆ ಆ ವ್ಯಕ್ತಿತ್ವವೇ ನನ್ನದಲ್ಲ ಎಂದು ಹೇಳಿದಾಗ ವ್ಯಕ್ತಿತ್ವವನ್ನು ಯಾರು ಕೂಡ ಪ್ರಶ್ನಿಸುವುದಿಲ್ಲ.

ನಾವು ಸಾಮಾಜಿಕ ಜೀವಿಗಳು. ಇಲ್ಲಿ ಒತ್ತಡಗಳು ನಾನಾ ರೀತಿಯವು ಮತ್ತು ನಿರಂತರ. ಈ ಒತ್ತಡ ಮನುಷ್ಯನನ್ನು ಯಾವ ಹಂತಕ್ಕೂ ಒಯ್ಯಬಹುದು. ಕೆಲವೊಮ್ಮೆ ಜೀವ ಕಳೆಯುವುದಕ್ಕೂ ಹಿಂದೆ ಮುಂದೆ ನೋಡದ ಹಂತಕ್ಕೆ. ಎರಡನೇ ವಿಶ್ವಯುದ್ಧದ ಸಮಯದಲ್ಲಿ ಜಪಾನಿಗರಲ್ಲಿ ಅವರ ಮದ್ದುಗುಂಡುಗಳೆಲ್ಲ ಖಾಲಿಯಾಗಿ ಹೋಗಿದ್ದವಂತೆ. ಜಪಾನಿ ಸೈನಿಕರಿಗೂ ಅದಾಗಲೇ ಸುಸ್ತಾಗಿ ಹೋಗಿದ್ದ ಸಮಯ. ಯಾರಿಗೂ ದೇಶಕ್ಕಾಗಿ ಪ್ರಾಣ ಬಿಡುವಷ್ಟು ದೇಶಪ್ರೇಮ ಉಳಿದಿರಲಿಲ್ಲ. ಅಂಥ ಸಮಯದಲ್ಲಿ ಅಲ್ಲಿನ ಏರ್‌ಫೋರ್ಸ್ ತನ್ನಲ್ಲಿದ್ದ ವಿಮಾನವನ್ನೇ ಆತ್ಮಾಹುತಿಯಾಗಿ ಬಳಸಿ ಶತ್ರುಗಳ ಮೇಲೆ ದಾಳಿ ಮಾಡಲು ಮುಂದಾಗಬೇಕೆಂದು ನಿರ್ಧರಿಸಿತು. ಆ ಸುದ್ದಿ ಬ್ಯಾರಕ್‌ಗಳಲ್ಲಿ ಹಬ್ಬಿ ಪ್ರತಿಯೊಬ್ಬ ಪೈಲಟ್, ತಾನು ಮಾತ್ರ ಈ ಆತ್ಮಾಹುತಿಯ ವಿಮಾನದ ಚಾಲಕನಾಗಿ ಹೋಗುವುದಿಲ್ಲ ಎಂದು ಗಲಾಟೆಯೆಬ್ಬಿಸಿದ. ಆಗ ಅಲ್ಲಿನ ಮುಖ್ಯಸ್ಥ ಎಲ್ಲರನ್ನೂ ಜತೆಯಲ್ಲಿ ಸಾಲಿನಲ್ಲಿ ನಿಲ್ಲಿಸಿ, ಯಾರು ದೇಶಕ್ಕಾಗಿ ಪ್ರಾಣ ಕೊಡಲು ಸಿದ್ಧರಿಲ್ಲವೋ ಅವರು ಮುಂದೆ ಬರಬಹುದು, ಅವರನ್ನು ಹೇಡಿಯೆಂದು ಕರೆದು, ಮಿಲಿಟರಿಯಿಂದ ಬಿಡುಗಡೆಗೊಳಿಸಲಾಗುವುದು ಎಂದ. ಅಷ್ಟು ಕಾಲ ಪ್ರತಿರೋಧಿಸುತ್ತಿದ್ದ ಸೈನಿಕರಲ್ಲಿ ಒಬ್ಬರೂ ತಾವು ಆತ್ಮಾಹುತಿ ದಾಳಿಗೆ ಹೋಗುವುದಿಲ್ಲ ಎಂದು ಮುಂದೆ ಬಂದು ಬರಲೇ ಇಲ್ಲ. ಹೀಗೆ ಮಾಡಿದರೆ ಗುಂಪಿನಲ್ಲಿ ಸಲ್ಲದವನಾಗುತ್ತೇನೆ ಎಂಬ ಭಯ ಆ ಪೈಲಟ್‌ಗಳನ್ನು ಆತ್ಮಾಹುತಿ ಮಾಡಿಕೊಳ್ಳುವಂತೆ- ಸಾಯುವಂತೆ ಮಾಡಿತು.

ಅದೆಂಥದ್ದೇ ಸ್ಥಿತಿಯಿರಲಿ, ಇಲ್ಲವೆಂದು ಹೇಳುವುದು ಸಿದ್ಧಿಸಿಕೊಳ್ಳಬಹುದಾದ ಕಲೆ. ಅದು ನಮ್ಮ ಶ್ರೇಯೋಭಿವೃದ್ಧಿಗೆ ಅತ್ಯವಶ್ಯ. ಸರಿಯಾದ ಸಮಯದಲ್ಲಿ 'ಇಲ್ಲ' ಎಂದು ಹೇಳುವ ಕಲೆ ಹೊಂದಿದರೆ ಜೀವನದ ಅರ್ಧಕ್ಕರ್ಧ ವಿಘ್ನ, ರಗಳೆಗಳನ್ನು ತಪ್ಪಿಸಿಕೊಂಡಂತೆ. ಆದರೆ 'ಇಲ್ಲ, ನೋ' ಎಂದು ಹೇಳುವುದು ಸುಲಭವಲ್ಲ. ಏಕೆಂದರೆ ಅದನ್ನು ಸ್ವೀಕರಿಸುವ ಇನ್ನೊಬ್ಬ ವ್ಯಕ್ತಿ ಅದನ್ನು ಹೇಗೆ ಬೇಕಾದರೂ ವ್ಯವಹರಿಸಬಹುದು. ಏಕೆಂದರೆ ಆತ ಇಲ್ಲಿ ನಷ್ಟದಲ್ಲಿದ್ದಾನೆ. ಪ್ರೀತಿ ಕೇಳಿದ ಹುಚ್ಚನೊಬ್ಬನಿಗೆ ಇಲ್ಲವೆಂದರೆ ಆಸಿಡ್ ದಾಳಿ ಮಾಡಬಹುದು. ಆಸ್ತಿ ಇಲ್ಲವೆಂದಿದ್ದಕ್ಕೆ ತಂದೆಯನ್ನೇ ಮಗ ಕೊಲ್ಲಬಹುದು. ಇವೆಲ್ಲ ಅತಿರೇಕಗಳು. ಸಾಮಾನ್ಯವಾಗಿ ನಿತ್ಯ ಜೀವನದಲ್ಲಿ 'ನೋ' ಎಂದಾಗ ಅದನ್ನು ಹಲವರು ಸಮಚಿತ್ತದಿಂದ ಸ್ವೀಕರಿಸುವುದಿಲ್ಲ. ಕೆಲವೊಮ್ಮೆ ನೀವು ಅದೆಷ್ಟೋ ಸಹಾಯ ಮಾಡಿದ ಸ್ನೇಹಿತನಿರಬಹುದು, ಆತ ಇನ್ನೊಂದು ಸಹಾಯ ಕೇಳಿದಲ್ಲಿ, ಅದೊಂದಕ್ಕೆ ನೀವು 'ಇಲ್ಲ' ಎಂದಲ್ಲಿ ಆತ ಹಿಂದೆ ಮಾಡಿದ ಉಪಕಾರವನ್ನೆಲ್ಲ ಮರೆತು ಇದೊಂದೇ ಕಾರಣಕ್ಕೆ ದ್ವೇಷಿಸಲು ಶುರುಮಾಡಬಹುದು. ಸಂಬಂಧ ತುಂಡಾಗಿ ಹೋಗಬಹುದು. ಆ ಅಸಮ್ಮತಿಯನ್ನು ಹಲವರ ಎದುರಿಗೆ ಹೇಳಿದಲ್ಲಿ ಅದನ್ನು ಅವಮಾನವೆಂದು ಆ ಎರಡನೇ ವ್ಯಕ್ತಿ ಗ್ರಹಿಸಬಹುದು. ಒಂದು ಚಿಕ್ಕ 'ನೋ' ಮತ್ಸರ, ಸೇಡು, ಪ್ರತೀಕಾರಕ್ಕೆ ಎಡೆಮಾಡಿಕೊಡಬಹುದು. ನೋ ಅನ್ನುವುದೊಂದು ನಾಜೂಕಿನ ಕೆಲಸ. ಸಾಧ್ಯವಿಲ್ಲ ಎಂದು ಬೇಸರವಾಗದಂತೆ ಹೇಳುವುದು ಸಾಧ್ಯ.

'ನೋ, ಇಲ್ಲ' ಎನ್ನುವ ಸನ್ನಿವೇಶ ಎದುರಾದಾಗ 'ಯಸ್, ಓಕೆ' ಎನ್ನುವ ಬಳಗ ಆಫೀಸುಗಳಲ್ಲಿ, ಕಾರ್ಪೊರೇಟ್‌ಗಳಲ್ಲಿ ಸಾಮಾನ್ಯ. ಬಾಸ್ ಅನ್ನು ಮೆಚ್ಚಿಸಬೇಕೆಂದು ಏನು ಹೇಳಿದರೂ, ಕೆಲಸ ಕೊಟ್ಟರೂ 'ಸರಿ' ಎನ್ನುವವರು ಕ್ರಮೇಣ ತಾವೇ ನೂರೆಂಟು ಸಮಸ್ಯೆಗಳಿಗೆ ಸಿಲುಕಿಹಾಕಿಕೊಳ್ಳುತ್ತಾರೆ. ಐಟಿ ಕೆಲಸಗಳಲ್ಲಿ ಹಗಲು ರಾತ್ರಿ ಕೆಲಸ ಮಾಡುವ ಟೆಕ್ಕಿಗಳಲ್ಲಿ ಬಹುತೇಕರದ್ದು ಇದೇ ಸಮಸ್ಯೆ. ಅವರಿಗೆ 'ನೋ' ಎಂದು ಹೇಳಲು ಬರುವುದಿಲ್ಲ. ಕೆಲಸ, ಸಂಬಂಧ, ಆತ್ಮೀಯತೆ, ಸಲಿಗೆ, ಸ್ನೇಹ ಇವೆಲ್ಲದರ ಮಿತಿಯನ್ನು ನಿರ್ಧರಿಸಲು ಸಮರ್ಥವಾದ ಏಕೈಕ ಶಬ್ದವೆಂದರೆ 'ನೋ'. ಸರಿಯಾದ ಸಮಯದಲ್ಲಿ 'ಬೇಡ, ಸಾಕು' ಎಂದು ಹೇಳದಿದ್ದರೆ ನಂತರದಲ್ಲಿ ಅವು ಸಮಸ್ಯಾರೂಪವನ್ನು ಪಡೆದು ಹತೋಟಿ ತಪ್ಪಿಬಿಡುತ್ತವೆ.

ನಕಾರಾತ್ಮಕ ಪ್ರತ್ಯುತ್ತರವನ್ನು ಸಮಾಜ ಅಷ್ಟು ಸುಲಭದಲ್ಲಿ ಸ್ವೀಕರಿಸುವುದಿಲ್ಲ, ಮನೆಯಲ್ಲಿಯೇ ಒಬ್ಬರ ನಕಾರ ಇನ್ನೊಬ್ಬರಲ್ಲಿ ವಿಕಾರ ಹುಟ್ಟಿಸುತ್ತದೆ. ಹಾಗಾಗಿ 'ಇಲ್ಲ' ಎಂದು ಹೇಳುವ ಸನ್ನಿವೇಶ ಎದುರಾದಾಗ ಒಂದು ಕ್ಷಣ ಯೋಚಿಸಿ ವ್ಯವಹರಿಸುವುದು ಉತ್ತಮ. ಅದೆಷ್ಟೋ ಬಾರಿ ಐದು ಸೆಕೆಂಡಿನ ಮೌನವೇ ಅಸಮ್ಮತಿಯ ಮುಕ್ಕಾಲು ಭಾಗವನ್ನು ಪ್ರದರ್ಶಿಸಿಬಿಡುತ್ತದೆ. ಸುಮ್ಮನೆ, ಮೌನವಾಗಿ ಕೆಲವು ಕ್ಷಣ ಉತ್ತರಿಸದಿದ್ದರೂ ಸಾಕು. ಅಂಥ ಸಮಯದಲ್ಲಿ ಎದುರಿಗಿನವರಿಗೆ ನಮ್ಮ ಆದ್ಯತೆಯನ್ನು ಸ್ಪಷ್ಟಪಡಿಸುವುದು ಉತ್ತಮ. ಅದೆಷ್ಟೋ ಬಾರಿ ಸ್ಪಷ್ಟ ಮಾತು, ನೇರ ನಡೆ, ನುಡಿ ಅದೆಷ್ಟೋ ಇಂಥ ಬೇಡದ ಕೋರಿಕೆಗಳು ನಮ್ಮ ಹತ್ತಿರ ಬಾರದಂತೆ ನೋಡಿಕೊಳ್ಳುತ್ತವೆ.

'ಇಲ್ಲ, ಬೇಡ, ಸಾಧ್ಯವಿಲ್ಲ, ನೋ' ಎಂದು ಹೇಳಲೇಬೇಕಿರುವಾಗ, ಅವಶ್ಯವಿರುವಾಗ ಹೇಳುವ ಕ್ರಿಯೆ ನಮ್ಮೊಳಗೊಂದು ಶಕ್ತಿಯನ್ನು ತುಂಬುತ್ತದೆ. ಇಲ್ಲವೆಂದು ಹೇಳುವಲ್ಲಿ 'ಆಯ್ತು' ಎಂದು ಹೇಳಿಬರುವಾಗ ನಾವು ಬೇಸರದಿಂದ ಕುಗ್ಗುತ್ತೇವೆ. ನಮಗೆ ನಾವೇ ಶಪಿಸಿಕೊಳ್ಳುತ್ತೇವೆ. ಆದರೆ ಇದೆಲ್ಲದರಿಂದ ಸುಲಭಕ್ಕೆ ಪಾಠ ಕಲಿಯುವುದಿಲ್ಲ, ಇನ್ನೆಲ್ಲೋ ಒಮ್ಮೆ ಬೇಡದ್ದಕ್ಕೆ ಒಪ್ಪಿಕೊಂಡು ಮತ್ತೆ ಮರುಗುತ್ತೇವೆ.

ಕೋರಿಕೆಗಳು ಹೊತ್ತು ತರುವ ಒತ್ತಡಗಳನ್ನು ನಿಭಾಯಿಸುವುದು ಕಷ್ಟ ಹೌದು. ಸರಿಯಾದ ಸಮಯದಲ್ಲಿ 'ನೋ' ಎಂದು ಹೇಳಲು ಬಾರದಿರುವವರು ಬದುಕಿನಲ್ಲಿ ಬಹಳಷ್ಟು ಕಷ್ಟಗಳನ್ನು ಅನವಶ್ಯ ಅನುಭವಿಸಬೇಕಾಗುತ್ತದೆ. ಎಲ್ಲರೂ ಸರಿಯಾದ ಸಮಯದಲ್ಲಿ, ರೀತಿಯಲ್ಲಿ 'ಇಲ್ಲ', 'ಬೇಡ' ಎಂದರೆ ಪ್ರಪಂಚದ ಅರ್ಧದಷ್ಟು ಬೇಸರಗಳು, ವೈಮನಸ್ಸುಗಳು, ಹಾನಿ, ಶೋಷಣೆ ಇರುತ್ತಿರಲಿಲ್ಲವಂತೆ. 'ಇಲ್ಲ' ಎನ್ನುವುದಕ್ಕೆ 'ಆಮೇಲೆ ನೋಡೋಣ', 'ಮತ್ತೆ ಹೇಳುತ್ತೇನೆ', 'ಈಗ ಬೇಡ', 'ಇನ್ನೊಮ್ಮೆ', 'ಓಕೆ ಬಟ್' ಇವೆಲ್ಲ ಪರ್ಯಾಯಗಳಲ್ಲ. ಅಂತೆಯೇ 'ಇಲ್ಲ'ವೆಂದು ಹೇಳುವಾಗ ಆ ಕ್ಷಣದ ಎಚ್ಚರಿಕೆ, ಎದುರಿನವನ ಸ್ವೀಕಾರ ಸಾಧ್ಯತೆ, ಪ್ರತಿಕ್ರಿಯೆ ಇವೆಲ್ಲವನ್ನೂ ಗ್ರಹಿಸಿ ವ್ಯವಹರಿಸುವುದು ತೀರಾ ಅವಶ್ಯಕ. ಏನಂತೀರಿ?

ಈ ಧೀಮಂತ, ಮಾತೃಹೃದಯದ ಸಂತ

ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ 50ನೇ ವರ್ಷದ ಪಟ್ಟಾಭಿಷೇಕದ ಸಂಭ್ರಮಾಚರಣೆಯು ಸೆಪ್ಟೆಂಬರ್ 22ರಂದು ನಡೆಯಲಿದೆ. ಶ್ರೀಗಳನ್ನು ಪ್ರಾರ್ಥಿಸಲು, ಆರಾಧಿಸಲು ಇದು ಪರ್ವಕಾಲವಾಗಲಿ.



ಸಂಸ್ಮರಣೆ

ನಂಜೇಗೌಡ ನಂಜುಂಡ
vveditoped@gmail.com

ನಾಥ ಸಂಪ್ರದಾಯದ ಮೂಲಕ ಸನಾತನ ಸಂಸ್ಕೃತಿಯನ್ನು ಪ್ರಕಾಶಮಾನಗೊಳಿಸಿದ ಶತಮಾನದ ಸಂತ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಅನ್ನ, ಅಕ್ಷರ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿನ ಸೇವೆಯನ್ನು ತಮ್ಮ ಮೂಲಮಂತ್ರವಾಗಿಸಿಕೊಂಡು, ರೈತರಿಗೆ, ದೀನ-ದಲಿತರಿಗೆ ನೀಡಿದ ಸೇವೆ ಅವಿಸ್ಮರಣೀಯ. ಕುವೆಂಪು ಅವರಂತೆ 'ವಿಶ್ವಮಾನವ' ಪರಿಕಲ್ಪನೆಯನ್ನು, ಬಸವಣ್ಣನವರಂತೆ 'ಸರ್ವರಿಗೂ ಸಮಬಾಳು' ಎಂಬ ಆಶಯವನ್ನು ಹಾಗೂ ಮದರ್ ಥೆರೆಸಾ ಅವರಂತೆ 'ಮಾತೃಹೃದಯದ ಸೇವೆ'ಯ ಸಂಕಲ್ಪವನ್ನು ಸಾಕಾರಗೊಳಿಸಿ, ಸರ್ವರಿಗೂ ಸೇವೆ ಸಲ್ಲಿಸಿದ ಧೀಮಂತ ಸಾಧಕರು ಜಗದ್ಗುರುಗಳಾದ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 72ನೇ ಪೀಠಾಧ್ಯಕ್ಷರಾಗಿದ್ದ ಶ್ರೀಗಳು ನಿಷ್ಕಾಮ ಕರ್ಮಯೋಗಿಗಳು. ಅವರು ಶ್ರೀಮಠದ ಸಿದ್ಧ ಸಿಂಹಾಸನವನ್ನೇರಿದ ಆ ಅಮೃತ ಗಳಿಗೆಯು ಹೊಸ ಮನ್ವಂತರಕ್ಕೆ ನಾಂದಿಯಾಯಿತು. ಭೈರವನ ಭಕ್ತರಿಗಷ್ಟೇ ಸೀಮಿತವಾಗಿದ್ದ ಶ್ರೀಕ್ಷೇತ್ರವನ್ನು ಕೇವಲ ಮೂರೂವರೆ ದಶಕಗಳಲ್ಲಿ ಮಹಾಕ್ಷೇತ್ರವನ್ನಾಗಿಸಿದ್ದು ಶ್ರೀಗಳ ಸಂಕಲ್ಪಶಕ್ತಿಗೆ ಹಿಡಿದ ಕೈಗನ್ನಡಿ. ಜನಮಾನಸದಲ್ಲಿ 'ತ್ರಿವಿಧ ದಾಸೋಹಿ' ಎಂದೇ ಚಿರಸ್ಥಾಯಿಯಾಗಿರುವ ಶ್ರೀಗಳು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಗಳು ಸೇರಿದಂತೆ ಹತ್ತು ಹಲವು ವಲಯಗಳಲ್ಲಿ ಅವಿಸ್ಮರಣೀಯ ಸೇವೆಗೈದಿದ್ದಾರೆ. ಬರಿಗಾಲಲ್ಲಿ ನಡೆದೇ ಭಕ್ತ ಜನರನ್ನು ಭೇಟಿ ಮಾಡುವ ಮೂಲಕ ಹಾಗೂ ಭಿಕ್ಷಾಟನೆಗೈಯುವ ಮೂಲಕ ದವಸ-ಧಾನ್ಯಗಳು ಸೇರಿದಂತೆ ಆದಿಚುಂಚನಗಿರಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಿರುವ ಸಂಪನ್ಮೂಲಗಳನ್ನು ಕ್ರೋಡೀಕರಿಸಿ, ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿ ಅದನ್ನೊಂದು ಪುಣ್ಯಕ್ಷೇತ್ರವನ್ನಾಗಿ ರೂಪಿಸಿದ್ದು ಶ್ರೀಗಳ ಹೆಗ್ಗಳಿಕೆ.

ಅಪ್ರತಿಮ ಶಿಕ್ಷಣಪ್ರೇಮಿ

Education is the most powerful weapon, which you can use to change the world ಎಂಬ ಮಾತನ್ನು ಸಮರ್ಥವಾಗಿ ಗ್ರಹಿಸಿದ್ದ ಶ್ರೀಗಳು ಪ್ರಾರಂಭದ ದಿನಗಳಲ್ಲಿ ಎಲ್ಲೂ ದೇವಾಲಯಗಳನ್ನು ಕಟ್ಟಲಿಲ್ಲ. ಜ್ಞಾನಪ್ರಸಾರದಿಂದ ಮಾತ್ರವೇ ಸಮಾಜದ ಉನ್ನತಿ ಸಾಧ್ಯ ಎಂಬುದನ್ನು ಮನಗಂಡು ಶಿಕ್ಷಣವನ್ನು ಆದ್ಯತಾ ಕ್ಷೇತ್ರವನ್ನಾಗಿ ಆರಿಸಿಕೊಂಡರು. ಗ್ರಾಮೀಣ ಜನರ ಉದ್ಧಾರ ಆಗಬೇಕೆಂದರೆ, ಮೊದಲಿಗೆ ಅಂಥ ಪ್ರದೇಶಗಳ ಬಡಮಕ್ಕಳು ವಿದ್ಯಾವಂತರಾಗಬೇಕು ಎಂಬ ದೃಷ್ಟಿಯಿಟ್ಟುಕೊಂಡು ಹಳ್ಳಿ ಹಳ್ಳಿಗಳಲ್ಲೂ ವಿದ್ಯಾಸಂಸ್ಥೆಗಳನ್ನು ತೆರೆದರು. ನಾಡಿನಾದ್ಯಂತ 550ಕ್ಕೂ ಹೆಚ್ಚು ಶಾಲಾ-ಕಾಲೇಜುಗಳು ಮತ್ತು ವಿದ್ಯಾರ್ಥಿ ನಿಲಯಗಳು ಸ್ಥಾಪನೆಗೊಂಡಿದ್ದು ಅವರ ಈ ಸಂಕಲ್ಪ ಶಕ್ತಿಯ ಕಾರಣದಿಂದಲೇ. ಪ್ರಸ್ತುತ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳಲ್ಲಿ 1.45 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ಇಲ್ಲಿ ಶಿಕ್ಷಣ ಪಡೆದ ಅನೇಕರು ಇಂದು ಉನ್ನತ ಸ್ಥಾನಗಳಲ್ಲಿದ್ದಾರೆ.

ಮಮತಾಮಯಿ ಹಾಗೂ ಪರಿಸರ ಪ್ರೇಮಿ

ರೈತಾಪಿ ವರ್ಗದವರ ನೋವನ್ನು ಹತ್ತಿರದಿಂದ ಕಂಡಿದ್ದ ಶ್ರೀಗಳು, ಬರಪೀಡಿತ ಪ್ರದೇಶಗಳಿಂದ ಜಾನುವಾರುಗಳು ಕಸಾಯಿಖಾನೆಗೆ ಹೋಗುವುದನ್ನು ತಪ್ಪಿಸಲು ಮಂಡ್ಯ, ಬೆಂಗಳೂರು ಮತ್ತು ಚಿತ್ರದುರ್ಗದಂಥ ಊರುಗಳಲ್ಲಿ ಅತ್ಯಾಧುನಿಕ ಗೋಶಾಲೆಗಳನ್ನು ತೆರೆದರು. ಶ್ರೀಗಳು ತಮ್ಮ ಜೀವನದಲ್ಲಿ ಕಂಡ ನೋವು, ಹಸಿವು, ಅವಮಾನಗಳು



ಮುಂದೆ ಅವರು ಅಂಧಮಕ್ಕಳ ವಸತಿಶಾಲೆ, ಅನಾಥಾಲಯ, ವೃದ್ಧಾಶ್ರಮ, ಮಹಿಳಾ ಸೇವಾಶ್ರಮಗಳನ್ನು ಸ್ಥಾಪಿಸಲು ಕಾರಣವಾದವು. ಪರಿಸರ ಸಂರಕ್ಷಣೆಗಾಗಿ ಹತ್ತು ಹಲವು ಕಾರ್ಯಕ್ರಮ ಗಳನ್ನು ಹಮ್ಮಿಕೊಂಡ ಶ್ರೀಗಳು, ನಾಡಿನ ವಿವಿಧ ಮಠಾಧಿಪತಿಗಳು ಹಾಗೂ ಧರ್ಮಗುರುಗಳನ್ನು ಒಳಗೊಂಡ 'ಕರ್ನಾಟಕ ವನಸಂವರ್ಧನ ಟ್ರಸ್ಟ್' ಅನ್ನು ತಮ್ಮ ಅಧ್ಯಕ್ಷತೆಯಲ್ಲಿ ರಚಿಸಿ, ಐದು ಕೋಟಿಗೂ ಹೆಚ್ಚು ಸಸಿಗಳನ್ನು ನೆಟ್ಟು ವನಸಂವರ್ಧನೆಗೆ ನೀಡಿದ ಕೊಡುಗೆ ಅನುಪಮವಾದುದು.

ನಿಜಾರ್ಥದ ಧರ್ಮಗುರು

ಚಿತ್ರದುರ್ಗದ ಶ್ರೀ ಕಬೀರಾನಂದ ಆಶ್ರಮ, ಹಿರಿಯೂರಿನ ಆದಿಜಾಂಬವ ಮಠ, ಪಟ್ಟನಾಯಕನ ಹಳ್ಳಿಯ ಶ್ರೀ ಗುರುಗುಂಡ ಬ್ರಹ್ಮಾಂಡೇಶ್ವರ ಮಠ, ಮಳವಳ್ಳಿಯ ಶ್ರೀ ರಾಮಾರೂಢ ಮಠ, ಬೆಂಗಳೂರಿನ ಶ್ರೀ ಗೋಸಾಯಿ ಮಠ ಮುಂತಾದ ಹಿಂದುಳಿದ ವರ್ಗಗಳ ಮಠಗಳ ಸ್ಥಾಪನೆಯಲ್ಲಿ ಹಾಗೂ ಆ ಮಠಗಳಿಗೆ ಗುರುಗಳನ್ನು ನೇಮಿಸುವಲ್ಲಿ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮಿಗಳು ನೀಡಿದ ಸಹಕಾರ, ಪ್ರೋತ್ಸಾಹಗಳು ಸ್ಮರಣೆಗೆ ಅರ್ಹವಾಗಿವೆ.

ತಮಿಳುನಾಡಿನಲ್ಲಿ ಸುನಾಮಿ ಬಂದಾಗ, ಕಲಬುರ್ಗಿ ಮುಂತಾದೆಡೆ ನೆರೆಹಾವಳಿ ಸಂಭವಿಸಿದಾಗ, ಶಿವಮೊಗ್ಗದಲ್ಲಿ ಉಂಟಾದ ಕಾಡ್ಗಿಚ್ಚಿನಿಂದಾಗಿ ಜನರು ತೊಂದರೆಗೆ ಸಿಲುಕಿದಾಗ, ಉತ್ತರ ಕರ್ನಾಟಕದ ಜನರು ನೆರೆಹಾವಳಿಯಿಂದ ತತ್ತರಿಸಿ ನೆಲೆ ಕಳೆದುಕೊಂಡಾಗ- ಹೀಗೆ ವಿವಿಧ ತೆರನಾದ ಸಂಕಷ್ಟಗಳ ಸಂದರ್ಭದಲ್ಲಿ ಶ್ರೀಮಠದ ವತಿಯಿಂದ ಕ್ಷಿಪ್ರವಾಗಿ ಸ್ಪಂದಿಸಿದ ಶ್ರೀಗಳು, ಸಂಕಷ್ಟಕ್ಕೀಡಾದವರನ್ನು ಸ್ವತಃ ಭೇಟಿಮಾಡಿ ನೆರವು ನೀಡುವ ಮೂಲಕ ಮಾನವೀಯತೆಯನ್ನು ಮೆರೆದರು. ತನ್ಮೂಲಕ, ಸಕಲ ಮಾನವ ಕುಲಕ್ಕೆ ಲೇಸನ್ನೇ ಬಯಸಿದ ಮಹಾನ್ ಮಾನವತಾವಾದಿ ಎನಿಸಿಕೊಂಡರು.

ಹಿಂದುಳಿದ ವರ್ಗದ ಜನರೊಂದಿಗೆ ನಿಂತು ನ್ಯಾಯಕ್ಕಾಗಿ ಹೋರಾಡಿರುವ ಶ್ರೀಗಳು, ರೈತರ ಕಲ್ಯಾಣಕ್ಕಾಗಿ ತಮ್ಮ ಇಡೀ ಜೀವನವನ್ನೇ ತೇಯ್ದಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ. ಹಸಿವಿನ ಸಂಕಟವನ್ನು ಅರಿತಿದ್ದ ಶ್ರೀಗಳು ಬಡಮಕ್ಕಳಿಗೆ, ಅನಾಥರಿಗೆ ಜಾತಿ-ಧರ್ಮದ ಭೇದವಿಲ್ಲದೆ ಉಚಿತ ಹಾಸ್ಟೆಲ್‌ಗಳನ್ನು ಪ್ರಾರಂಭಿಸಿದರು. ಇಂದಿಗೂ ಆದಿಚುಂಚನಗಿರಿ ಮಹಾಸಂಸ್ಥಾನದ ಮಠದ ವತಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಭಕ್ತರಿಗೆ ಉಚಿತ ಅನ್ನಪ್ರಸಾದವನ್ನು ನೀಡಲಾಗುತ್ತಿದೆ. ನಾಥ ಸಂಪ್ರದಾಯದ ಪರಿಪಾಲನೆಯ ಜತೆಜತೆಗೆ ಸನಾತನ ಧರ್ಮದ ಸಂಸ್ಕಾರಗಳನ್ನು ಜನರಿಗೆ ತಿಳಿಸಲು ಕಟಿಬದ್ಧರಾದ ಶ್ರೀಗಳು, ಹತ್ತು ಹಲವು ಕಾರ್ಯಕ್ರಮಗಳ ಮೂಲಕ ಇಂದಿನ ಯುವಜನಾಂಗಕ್ಕೆ ನಮ್ಮ ದೇಶದ ಸಂಸ್ಕೃತಿ ಮತ್ತು ಪರಂಪರೆಗಳನ್ನು ತಿಳಿಸಿದ್ದಾರೆ, ಧರ್ಮದ ಪ್ರವರ್ತನೆಗಾಗಿ ಹಲವಾರು ಉಪಶಾಖೆಗಳನ್ನು ತೆರೆದಿದ್ದಾರೆ.

ಶ್ರೀಗಳ ಮಾನವೀಯ ಮೌಲ್ಯದ ಸೇವೆಗಳನ್ನು ಗುರುತಿಸಿದ ಕೇಂದ್ರ ಸರಕಾರವು 'ಪದ್ಮಭೂಷಣ' ಪುರಸ್ಕಾರವನ್ನು ಅವರಿಗೆ ಸಮರ್ಪಿಸಿ ಗೌರವಿಸಿದೆ. ಮಾತ್ರವಲ್ಲದೆ, ಶಿಕಾಗೋ ಧರ್ಮಸಂಸತ್ತಿನಿಂದ 'ಅಭಿನವ ವಿವೇಕಾನಂದ', ಕರ್ನಾಟಕ ಸರಕಾರದಿಂದ 'ಪರಿಸರ ರತ್ನ', ಜೈನ ಸಮಾಜದಿಂದ 'ವಿದ್ಯಾರತ್ನ' ಹಾಗೂ ನಿವಾರಣ ಸಂಸ್ಥೆಯಿಂದ 'ಸೇವಾರತ್ನ' ಪ್ರಶಸ್ತಿಗಳಿಗೆ ಶ್ರೀಗಳು ಪಾತ್ರರಾಗಿದ್ದಾರೆ.

(ಲೇಖಕರು ಒಕ್ಕಲಿಗ ಯುವ ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಯುವಜನರು ಹೀಗೇಕೆ?

ಜಗತ್ತಿನಲ್ಲಿ ನಿರುದ್ಯೋಗ, ಬಡತನ, ಅಸಹನೆ, ಅಶಾಂತಿ, ಅರಾಜಕತೆ ಹೆಚ್ಚುತ್ತಿರುವಂತೆಯೇ ಆತ್ಮಹತ್ಯೆ ಪ್ರಕರಣಗಳು (ಅದರಲ್ಲೂ ಯುವಜನರಲ್ಲಿ) ಕೂಡ ಹೆಚ್ಚಾಗುತ್ತಿವೆ. ಪರೀಕ್ಷೆಯಲ್ಲಿ ನಪಾಸು, ಪ್ರೇಮ ವೈಫಲ್ಯ, ಅಂತರ್ಜಾತಿ ವಿವಾಹದಿಂದ ಉಂಟಾಗುವ ಸಮಸ್ಯೆ ಹೀಗೆ ಹತ್ತು ಹಲವು ಕೋಟಲೆಗಳು ದುರ್ಬಲ ಮನಸ್ಸಿನ ಎಳೆಯರನ್ನು ಆತ್ಮಹತ್ಯೆಯಂಥ ದುಡುಕಿನ ಹೆಜ್ಜೆಯೆಡೆಗೆ ದೂಡುತ್ತಿವೆ ಎನ್ನಬೇಕು. 'ಈಸಬೇಕು, ಇದ್ದು ಜೈಸಬೇಕು' ಎಂಬ ದಾಸವಾಣಿಯ ಅರ್ಥವನ್ನು ಇವರೆಲ್ಲ ಗ್ರಹಿಸದೆ, ತಮ್ಮ ಸಮಸ್ಯೆಗೆ ಆತ್ಮಹತ್ಯೆಯೊಂದೇ ಪರಿಹಾರ ಎಂದು ಪರಿಗಣಿಸಿ, ಶ್ರೇಷ್ಠವಾದ ಮಾನವ ಜನ್ಮವನ್ನು ಹೀಗೆ ಕೊನೆಗೊಳಿಸಿಕೊಂಡರೆ ಅದಕ್ಕೆ ಏನನ್ನುವುದು?!

2021ರ ಅಂಕಿ-ಅಂಶದ ಪ್ರಕಾರ ಇಡೀ ದೇಶದಲ್ಲಿ ಒಟ್ಟು 13,089 ಮತ್ತು ಕರ್ನಾಟಕದಲ್ಲಿ 855 ಆತ್ಮಹತ್ಯೆಗಳಾಗಿವೆ. ಆತ್ಮಹತ್ಯೆಗೆ ಕಾರಣಗಳೂ ಹಲವು. ಮೊಬೈಲ್ ನೋಡಬೇಡ ಎಂದಿದ್ದಕ್ಕೆ ಮೊಮ್ಮಗ ಆತ್ಮಹತ್ಯೆ ಮಾಡಿಕೊಂಡರೆ, ಇನ್ನೊಂದೆಡೆ ಮನೆಮಗನು ರಾತ್ರಿ 11 ಗಂಟೆಯಾದರೂ ಮನೆಗೆ ಬಾರದೆ ಗಣಪತಿ ಪೆಂಡಾಲ್‌ನಲ್ಲಿ ನೃತ್ಯ ಮಾಡುತ್ತಿದ್ದನೆಂದು ಮನೆಯ ವರು ಬೈದಿದ್ದಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಾಲೇಜಿನಲ್ಲಿ ಉಪನ್ಯಾಸಕರು ನಿಂದಿಸಿದ್ದಕ್ಕೆ 3ನೇ ಮಹಡಿಯಿಂದ ಹಾರಿ ಪ್ರಾಣಬಿಟ್ಟ ವಿದ್ಯಾರ್ಥಿಯ ಕಥೆಯೂ ವರದಿಯಾಗಿದೆ.

ಇನ್ನು ಇಂದಿನ ಬಿಸಿರಕ್ತದ ಯುವಜನರ ಕ್ರೈಮ್ ವೈವಿಧ್ಯ ಹೀಗಿದೆ ನೋಡಿ: ಮಧ್ಯಪ್ರದೇಶದ ಉಜ್ಜಯಿನಿಯ ಯುವಕನೊಬ್ಬ ಚಿಂದಿ ಆರಿಸುವ ಬಡ ಯುವತಿಯೊಬ್ಬಳಿಗೆ ಮದ್ಯ ಕುಡಿಸಿ ಬಲಾತ್ಕರಿಸಿ ಕೊಂದಿದ್ದಾನೆ. ಇನ್ನೊಬ್ಬಾತ, ತನಗೆ ಮಾರಿದ ಬೈಕ್ ಅನ್ನು ರಿಪೇರಿ ಮಾಡಿಸಿಕೊಡುವುದಕ್ಕೆ ನಿರಾಕರಿಸಿದ ಷೋರೂಂಗೆ ಬೆಂಕಿ ಹಚ್ಚಿ ಆನಂದಿಸಿದ್ದಾನೆ. ಮತ್ತೊಂದೆಡೆ ಧೂರ್ತನೊಬ್ಬ ಪಕ್ಕದ ಮನೆಯ ಮಗುವನ್ನು ಅಪಹರಿಸಿ 2 ಲಕ್ಷ ರು. ಹಣಕ್ಕಾಗಿ ಒತ್ತಾಯಿಸಿದನಂತೆ. ಷೇರುಪೇಟೆಯಲ್ಲಿ ಸಕಲವನ್ನೂ ಕಳೆದುಕೊಂಡ ಹುಬ್ಬಳ್ಳಿಯ ಯುವಕನೊಬ್ಬ ಬ್ಯಾಂಕಿನಲ್ಲಿ ಕ್ಯಾಷಿಯರ್‌ನ ಕುತ್ತಿಗೆಗೆ ಚಾಕು ಹಿಡಿದು ಹಣ ದೋಚಲು ಯತ್ನಿಸಿ ಪೊಲೀಸರ ಅತಿಥಿಯಾದ. ಮಧ್ಯಪ್ರದೇಶದ ಧಾರ್ ಎಂಬಲ್ಲಿ 5 ವರ್ಷದ ಪೋರನೊಬ್ಬ ಪೊಲೀಸ್ ಠಾಣೆಗೆ ಬಂದು, 'ನನ್ನ ತಂದೆ ನನ್ನನ್ನು ಹೊರಗೆ ತಿರುಗಾಡಲು ಬಿಡುತ್ತಿಲ್ಲ, ಅವರನ್ನು ಜೈಲಿಗೆ ಹಾಕಿ' ಎಂಬ ವಿಲಕ್ಷಣ ದೂರು ಕೊಟ್ಟನಂತೆ. ಈ ಬಿಡಿಬಿಡಿ ಪ್ರಸಂಗಗಳನ್ನು ಅವಲೋಕಿಸಿದಾಗ, ಇಂದಿನ ಯುವಜನರು ಹೀಗೇಕೆ? ಅವರಿಗೆ ಮಾರ್ಗದರ್ಶನ ನೀಡುವವರು ಯಾರೂ ಇಲ್ಲವೇ? ಎಂಬ ಪ್ರಶ್ನೆಗಳು ಮನದಲ್ಲಿ ಮೂಡಿದರೆ ಅಚ್ಚರಿಯಿಲ್ಲ.

– ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ನಿತ್ಯಾನಂದ ಪರಪ್ಪನವರ, ಹೊಸಕೋಟೆ**
ಸರ್, ದೇವರಿಗೆ ಎಲ್ಲಾ ಭಾಷೆಗಳೂ ಬರುತ್ತವಾ?
- ಇಲ್ಲದಿದ್ದರೆ ಆತ ಗೂಗಲ್ ಟ್ರಾನ್ಸ್‌ಲೇಟರ್ ಯಾಕೆ ಕಂಡುಹಿಡಿಯುತ್ತಿದ್ದ?!

- **ಬನ್ನಾಡಿ ಗೋಪಿ, (ಇಮೇಲ್ ಮೂಲಕ)**
ಸರ್, ಪುರುಷರಿಗೆ ಯಾವಾಗ ಉಚಿತ ಪ್ರಯಾಣ?
- ಪೊಲೀಸರು ಜೀಪಿನಲ್ಲಿ ಉಚಿತವಾಗಿ ಕರೆದೊಯ್ಯುವುದನ್ನು ನೋಡಿಯೂ ಈ ಪ್ರಶ್ನೆಯಾ?!

- **ನೀರಜ್ ಶೆಟ್ಟಿ, ಬೆಂಗಳೂರು**
ಭಟ್ರೇ, ಹುಡುಗಿಯರಿಗೆ ಪಾನಿಪುರಿ ಅಂದ್ರೆ ಏಕೆ ಇಷ್ಟ?
- ತಲೆ ಮೇಲೆ ಮೊಟಕಿ, ಪೂರಿ ಮುಳುಗಿಸುವುದೆಂದ್ರೆ ಅವರಿಗೆ ಇಷ್ಟ!

- **ಕಾವೇರಿ ಬಸವಯ್ಯ, ದಾವಣಗೆರೆ**
ಭಟ್ರೇ, ನಿಮ್ಮ ಪುಸ್ತಕಗಳನ್ನು ಹಿಡಿದು ಹೋಗುವುದು ಪ್ರೆಸ್ಟೀಜ್ ಅಂತಾರಲ್ವ?
- ಅದು ನಿಜ, ಕೈ ಹಿಡಿದು ಹೋಗಲು ಸಾಧ್ಯವಾಗದವರ ಸಾಂತ್ವನ!

- **ನಂದಿನಿ (ಇಮೇಲ್ ಮೂಲಕ)**
ಭಟ್ರೇ, ಭೈರಪ್ಪನವರೂ ಭಟ್ಟರ್ ಸ್ಕಾಚ್ ಅಭಿಮಾನಿಯಂತೆ, ಹೌದಾ?
- ಮೇಲಿಂದವರಿಗೆ ಕನ್ನಡ ಓದಲು ಬರುತ್ತಿದ್ದರೆ, ಕಥೆಯೇ ಬೇರೆ ಇತ್ತು!

- **ಅನಂತ ಉಡಾಳ, ಸಾಗರ**
ಸರ್, ಕೈದಿಗಳು ಬಿಡುಗಡೆಯಾದಾಗ ಸೇಬುಹಾರ ಹಾಕಿ ಸ್ವಾಗತಿಸುತ್ತಾರಲ್ವ?
- ಜೈಲಿಗೆ ಹಾಕುವಾಗ ಒಳಗಿದ್ದವರು ಕಬ್ಬಿಣ ಹಾರ ಹಾಕಿ ಸ್ವಾಗತಿಸುವುದಿಲ್ಲವಲ್ಲ ಅಂತ ನಿನ್ನ ತಕರಾರ?!

- **ಲಿಂಗಯ್ಯ ಹಿರೇಮಠ, ಬಾಗಲಕೋಟೆ**
ಸರ್, ಬೆಳಗ್ಗೆ ಎದ್ದು ಸ್ವಾಮೀಜಿ ಮಾತು ಕೇಳಿದರೂ ಮೂಡು ಕೆಡುತ್ತದಲ್ಲ?
- ನೀನು ಹೋಗಿ ಹೋಗಿ ಆ ನಿತ್ಯಾನಂದ ಸ್ವಾಮೀಜಿ ಪ್ರವಚನ ಕೇಳಿರಬೇಕು!

- **ಎಸ್.ಜಿ.ಹೆಗಡೆ, ಶಿರಸಿ**
ಭಟ್ರೇ, ಪೊಲೀಸರು ಮನೆಯಲ್ಲೂ ಸರಿಯಾಗಿ ಡ್ಯೂಟಿ ಮಾಡ್ತಾರಾ?
- ಆಗ ಮನೆಯಲ್ಲಿರುವ ಜೀಬುಗಳನ್ನು ಒಬ್ಬ ಒಳಗೆ ಹಾಕಬೇಕಾಗುತ್ತದೆ!

- **ಸಂದೇಶ್ ಭಟ್ರೇ, ಹೊನ್ನಾವರ**
ಭಟ್ರೇ, ಹೆಣ್ಣಿನ ಮನಸ್ಸನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಂತೆ?
- ಜೀವನದಲ್ಲಿ ಕಷ್ಟಪಡಬೇಕು ಎಂದು ಬುದ್ಧ ಹೇಳಿದ್ದಾನಲ್ಲ!

- **ಉಜ್ವಲ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಹೆಂಡತಿಯ ತಪ್ಪನ್ನು ಎತ್ತಿ ಹಿಡಿಯುವ ಗಂಡಂದಿರು ಈಗಲೂ ಇದ್ದಾರಾ?
- ಇದ್ದಾರೆ.. ಆದರೆ ಅದಕ್ಕೂ ಹೆಂಡತಿಯ ಪರ್ಮಿಷನ್ ಪಡೆಯಬೇಡವೇ?!

ಬೆಳದಿಂಗಳನ್ನೇ ಕುಡಿದು ಬದುಕುವ ಪಕ್ಷಿ

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಸುಂದರವಾದ ಬೆಳದಿಂಗಳ ರಾತ್ರಿ. ಮನೆಯ ಮುಂದೆ ಹರಡಿರುವ ವಿಶಾಲದ ಗದ್ದೆ ಬೈಲಿನುದ್ದಕ್ಕೂ ಚೆಲ್ಲಿದ ತಿಂಗಳ ಬೆಳಕಿನ ಸ್ನಿಗ್ಧ ಸೌಂದರ್ಯ. ಬಾನಿನಿಂದ ಸಣ್ಣಗೆ ಸುರಿವ ಇಬ್ಬನಿಯ ತಂಪು, ಆ ಬೆಳದಿಂಗಳ ಪಾನಕ್ಕೆ ಮಧುವಿನ ರುಚಿಯನ್ನು ಸೇರಿಸಿದಂತಿತ್ತು. ಮೋಡ-ನಾಳೆಯಿಲ್ಲದ ಶುಭ್ರ ಆಗಸದಲ್ಲಿ ಚಂದಿರನ ಬಿಳಿ ಬಿಂಬವು ರಾಜನಂತೆ ರಾರಾಜಿಸುತ್ತಿತ್ತು. ಅಂಬರದ ವೈಶಾಲ್ಯದುದ್ದಕ್ಕೂ ಅಲ್ಲಲ್ಲಿ ಮಿನುಗುತ್ತಿದ್ದ ನಕ್ಷತ್ರದ ಹೊಳಪು, ಚಂದಿರನ ಸೊಗಸಿಗೆ ಪ್ರಭಾವಳಿಯನ್ನು ಹೊದಿಸಿದಂತಿತ್ತು.

ಇಂಥ ಕಾವ್ಯಾತ್ಮಕ ಇರುಳಿನ ಅನುಭವದ ನಡುವೆ, ಒಮ್ಮೆಗೇ 'ಟ್ರ್ಯಾಂಟ್ ಟ್ರ್ಯಾಂಟ್' ಎಂಬ, ತುಸು ತೀಕ್ಷ್ಣ ದನಿಯ ಕೂಗನ್ನು ಹೊರಡಿಸಿ, ನಮ್ಮನ್ನು ಸಣ್ಣಗೆ ಬೆಚ್ಚಿಬೀಳಿಸುವ ಹಕ್ಕಿಯೇ ಟಿಟ್ಟಿಭ. ಈ ಹಕ್ಕಿಗೆ ಬೆಳದಿಂಗಳ ರಾತ್ರಿ ಎಂದರೆ ಬಹಳ ಇಷ್ಟ. ಆದರೆ, ಅದರ ಸೊಬಗನ್ನು ಸವಿಯಲು ಅಲ್ಲ, ಬದಲಿಗೆ ತೀಕ್ಷ್ಣ ಮತ್ತು ದೊಡ್ಡ ದನಿಯಲ್ಲಿ ಕೂಗಿ, ಎಲ್ಲರನ್ನೂ ಬೆಚ್ಚಿಬೀಳಿಸಲು! ಬಯಲಿನುದ್ದಕ್ಕೂ ಸುರಿವ ಬೆಳದಿಂಗಳ ರಾಶಿಯನ್ನೇ ನೋಡುತ್ತಾ ಮೌನವಾಗಿರುವ ಹಕ್ಕಿ, ಅದೆಲ್ಲಿಂದಲೋ ಸ್ಫೂರ್ತಿ ಪಡೆದು ಬಂದಂತೆ, ಒಮ್ಮೆಗೇ ತೀಕ್ಷ್ಣ ದನಿಯಲ್ಲಿ ಕೂಗಿದಂತೆ ಅನಿಸುತ್ತದೆ! ಅದೇನು ಬೆಳದಿಂಗಳನ್ನೇ ಕುಡಿಯಿತೆ? ಆಗಸದಿಂದ ಇಳಿವ ಇಬ್ಬನಿಯ ಜತೆಗೆ, ಅದರ ಕಲ್ಪನಾವಿಲಾಸವನ್ನು ಗರಿಗೆದರಿಸಿತೆ? ನಮ್ಮ ಪುರಾತನ ಕವಿಗಳು ಟಿಟ್ಟಿಭವನ್ನು ಕಂಡೇ, ಚಕೋರ-ಚಕ್ರವಾಕ ಎಂಬ ಹಕ್ಕಿಗಳನ್ನು ವರ್ಣಿಸಿರಬೇಕು; ಚಕೋರವು ಬೆಳದಿಂಗಳನ್ನು ಕುಡಿದು ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತದೆ ಎಂಬ ಆ 'ಕವಿಸಮಯ' ಅದೆಷ್ಟು ಸೊಗಸು! 'ಚಕೋರಂಗೆ ಚಂದ್ರಮನ ಬೆಳ(ಕಿ)ನ ಚಿಂತೆ' ಎಂದು ವಚನಕಾರರು ನುಡಿದಾಗಲೂ, ಬೆಳದಿಂಗಳ ರಾತ್ರಿಯಲ್ಲಿ ಬಯಲ ನಡುವೆ ಕುಳಿತು ಆಗಾಗ ಕೂಗುವ ಟಿಟ್ಟಿಭವನ್ನೇ ನೆನಪಿಸಿಕೊಂಡಿರಬಹುದು.

ಟಿಟ್ಟಿಭ (ರೆಡ್ ವಾಟಲ್ಡ್ ಲ್ಯಾಪ್‌ವಿಂಗ್) ಎಂಬುದು ನಮ್ಮ ರಾಜ್ಯದ ಎಲ್ಲೆಡೆ ಕಾಣಸಿಗುವ ಹಕ್ಕಿ. ಬಯಲು ಪ್ರದೇಶ, ಕೆರೆಯಂಗಳ, ಹೊಲದ ಬದು, ಗುಡ್ಡಗಾಡು ಪ್ರದೇಶಗಳಲ್ಲಿ ಇರುವ ಇದು ಚುರುಕಾಗಿ ಓಡುವ, ವೇಗವಾಗಿ ಹಾರಬಲ್ಲ ಹಕ್ಕಿ. ನಮ್ಮ ಹಳ್ಳಿಯಲ್ಲಿ ಇದನ್ನು ಕರೆಯುವುದು 'ಟ್ರ್ಯಾಂಟ್ರಕ್ಕಿ' ಎಂದು! ವರ್ಷದ ಕೆಲವು ಸಮಯದಲ್ಲಿ ಹಗಲು-ರಾತ್ರಿಯ ವ್ಯತ್ಯಾಸವಿಲ್ಲದೇ ಎಡೆಬಿಡದೆ 'ಟ್ರ್ಯಾಂ ಟ್ರ್ಯಾಂ' ಎಂದು ಕೂಗುವ ಇದರ ಗಟ್ಟಿಯ ಶಬ್ದವನ್ನು ಕಂಡೇ 'ಟ್ರ್ಯಾಂಟ್ರಕ್ಕಿ' ಎಂದು ಹೆಸರಿಟ್ಟಿರಬೇಕು, ನಮ್ಮ ಹಳ್ಳಿಯವರು. ಉದ್ದನೆಯ ಕಾಲುಗಳು, ಪಾರಿವಾಳದ ಗಾತ್ರ, ಬೂದು ದೇಹ, ಹೊಟ್ಟೆಯ ಭಾಗ ಬಿಳಿ, ತಲೆ ಮತ್ತು ಕುತ್ತಿಗೆಯ ಭಾಗ ಕಪ್ಪು, ಕಣ್ಣಿನ ಕೆಳಭಾಗದಲ್ಲಿ ಕೆಂಪನೆಯ ಚರ್ಮದ ಬೆಳವಣಿಗೆ ಹೊಂದಿರುವ ಈ ಹಕ್ಕಿಯನ್ನು ತೀರಾ ಸುಂದರ ಹಕ್ಕಿ ಎನ್ನಲಾಗದು. ಸಾಮಾನ್ಯವಾಗಿ ಎರಡು ಅಥವಾ ಮೂರು ಹಕ್ಕಿಗಳು ಗದ್ದೆ ಕೊಯ್ಲಾದ ನಂತರ ಬಯಲಿನುದ್ದಕ್ಕೂ ಓಡಾಡುತ್ತಾ, ಹಾರಾಡುತ್ತಾ ಇರುತ್ತವೆ.

'ಟ್ರ್ಯಾಂಟ್ ಟ್ರ್ಯಾಂಟ್' ಎಂದು ಟಿಟ್ಟಿಭಗಳು ಬೆದರಿದಂತೆ ಕೂಗುವುದಕ್ಕೆ ವಿಶೇಷ ಕಾರಣವೂ ಉಂಟು. ಬೇಸಿಗೆಯ ಕಾಲದ ನಂತರ, ಇವು ಗೂಡು ಕಟ್ಟಿ, ಮೊಟ್ಟೆಯಿಟ್ಟು, ಮರಿ ಮಾಡುವ ಕಾಲ. ಆದರೆ, ಇವುಗಳ ಗೂಡು ಬಹಳ ವಿಚಿತ್ರ- ನೆಲದ ಮೇಲಿನ ತಗ್ಗು, ಒಂದೆರಡು ಕಸಕಡ್ಡಿಯ ಬೇಲಿ, ಅಷ್ಟೆ! ನಮ್ಮೂರಿನ ಗದ್ದೆಗಳಲ್ಲಿ ಬತ್ತದ ಕೊಯ್ಲಾದ ನಂತರ, ಒಣಗಿದ ಗದ್ದೆಯ ನಡುವಿನ ಯಾವುದೋ ಒಂದು ಜಾಗದಲ್ಲಿ, ಬತ್ತದ ಕೂಳೆ, ಮಣ್ಣು ಹೆಂಟೆಯ ನಡುವೆಯೇ ಗೂಡಿನ ಸ್ವರೂಪ ನಿರ್ಮಿಸಿ, ಮೊಟ್ಟೆ ಇಡುತ್ತದೆ. ಈ ಮೊಟ್ಟೆಗಳ ಬಣ್ಣವು ಹೇಗಿರುತ್ತದೆಂದರೆ, ಅದೇ ಗದ್ದೆನೆಲದ ತದ್ರೂಪು- ಒಣಗಿದ ನೆಲದ ಬಣ್ಣಕ್ಕೆ ಹೊಂದುವ ಬಣ್ಣ ಆ ಮೊಟ್ಟೆಗಳದ್ದು. ಮರಿಯಾದ ಮೇಲಂತೂ, ಇನ್ನಷ್ಟು ಹೋಲಿಕೆ. ಯಾರೇ ಹತ್ತಿರ ಹೋದರೂ, ಬೇಗನೆ ಕಣ್ಣಿಗೆ ಬೀಳದಂಥ ರೆಕ್ಕೆಯ ವಿನ್ಯಾಸ ಆ ಮರಿಗಳದ್ದು. ಸುತ್ತಲಿನ ಬಣ್ಣದ ಶೇ.90ರಷ್ಟು ಹೋಲಿಕೆ ಇರುವ ಟಿಟ್ಟಿಭನ ಮರಿಗಳಿರುವ ಗೂಡನ್ನು ಬರಿಗಣ್ಣಿನಿಂದ ಸಾಮಾನ್ಯವಾಗಿ ಪತ್ತೆ ಮಾಡಲು ಅಸಾಧ್ಯ!

ಆದರೆ, ಮನುಷ್ಯರಾಗಲಿ, ಬೇರಾವುದೇ ಪ್ರಾಣಿಯಾಗಲೀ ಗೂಡಿನ ಬಳಿ ಸುಳಿದ ತಕ್ಷಣ, ಟಿಟ್ಟಿಭ ಹಕ್ಕಿಗಳು ಒಂದೇ ಸಮನೆ 'ಟ್ರ್ಯಾಂಟ್ ಟ್ರ್ಯಾಂಟ್' ಎಂದು ಕೂಗಲು ಆರಂಭಿಸುತ್ತವೆ. ತಮ್ಮ ಗೂಡಿನಿಂದ ತುಸು ದೂರ ನಿಂತು, ಬೇರೆಲ್ಲೋ ನೋಡುತ್ತಾ, ಒಂದೇ ಸಮನೆ ಕೂಗುತ್ತಾ, ಅತ್ತಿತ್ತಾ ಹಾರಾಡುತ್ತಾ, ಸನಿಹ ಸುಳಿದವರ ಏಕಾಗ್ರತೆಗೆ ಭಂಗ ತರಲು ಯತ್ನಿಸುತ್ತವೆ, ತಲೆ ತಿನ್ನುತ್ತವೆ, ಅವರ ಗಮನವನ್ನು ಬೇರೆಡೆ ಸೆಳೆಯಲು ಪ್ರಯತ್ನಿಸುತ್ತವೆ. ಆ ಮೂಲಕ, ತಮ್ಮ ಗೂಡನ್ನು, ಮರಿಗಳನ್ನು ರಕ್ಷಿಸಿಕೊಳ್ಳುತ್ತವೆ. ಗೂಡನ್ನು ರಕ್ಷಿಸುವ ಕಾಯಕದಲ್ಲಿ, ಈ ಟಿಟ್ಟಿಭಗಳು ಎಷ್ಟು ಹೊತ್ತು ಬೇಕಾದರೂ, ಕರ್ಕಶವಾಗಿ ಕೂಗುತ್ತಾ, ಅತ್ತಿತ್ತ ಹಾರಾಡುತ್ತಾ ಇರಬಲ್ಲವು. ಇವುಗಳ ಇಂಥ ವಿಚಿತ್ರ ವರ್ತನೆಯನ್ನು ಕಂಡು, ನಮ್ಮೂರಿನ ಗಂಟಿ ಮೇಯಿಸುವ ಮಕ್ಕಳು, ಒಂದು ನುಡಿಗಟ್ಟನ್ನು ರೂಪಿಸಿದ್ದಾರೆ- 'ಟ್ರ್ಯಾಂಡ್ರಕ್ಕಿ ಮೊಟ್ಟೆ ಮುಟ್ತೆ, ಟ್ರ್ಯಾಂಡ್ರಕ್ಕಿ ಮೊಟ್ಟೆ ಮುಟ್ತೆ' ಎಂದು. ನಾಲಗೆ ಹೊರಳಿಸುವ ವ್ಯಾಯಾಮ ಬಿಟ್ಟರೆ, ಈ ನುಡಿಗಟ್ಟಿಗೆ ಬೇರೆ ವಿಶೇಷ ಅರ್ಥವಿದ್ದಂತಿಲ್ಲ.

ಬೇಸಗೆಯ ಕಾಲದ ಬೆಳದಿಂಗಳ ರಾತ್ರಿಯಲ್ಲಂತೂ, ಇವುಗಳ ಕೂಗು ಇನ್ನಷ್ಟು ಜಾಸ್ತಿ. ಆದರೆ ಇವು ಹಗಲಿನ ಹಕ್ಕಿಗಳು, ನಿಶಾಚರಿಗಳಲ್ಲ. ಆದರೂ, ರಾತ್ರಿ ಹತ್ತರ ಸಮಯದಲ್ಲೂ ಟ್ರ್ಯಾಂಟ್ರಕ್ಕಿ ಕೂಗನ್ನು ಕೇಳಿದರೆ ಅಚ್ಚರಿಯಿಲ್ಲ, ಬಹುಶಃ, ನರಿಯೋ, ಯಾವುದಾದರೂ ಹಾವೋ ಅದರ ಗೂಡಿನ ಹತ್ತಿರ ಸುಳಿದಿರಬೇಕು; ಎಡೆಬಿಡದೆ ತೀಕ್ಷ್ಣವಾಗಿ ಕೂಗುತ್ತಾ, ಅವುಗಳನ್ನು ದೂರ ಓಡಿಸುವ ಉಪಾಯವನ್ನು ಟಿಟ್ಟಿಭ ಅನುಸರಿಸಿರಬಹುದು. ಬೇಸಗೆಯಲ್ಲೇ ಅವು ಗೂಡು ಮಾಡಿ, ಮರಿ ಮಾಡುವುದರಿಂದಾಗಿ, ಆ ಸಮಯದಲ್ಲಿ ಅವುಗಳ ಕೂಗನ್ನು ರಾತ್ರಿಯಲ್ಲೋ, ಬೆಳಗಿನ ಜಾವದಲ್ಲೋ ಕೇಳಬಹುದು. ಬೇರೆ ಸಮಯದಲ್ಲಿ ಕಡಿಮೆ.

ಬೆಳದಿಂಗಳ ರಾತ್ರಿಯಲ್ಲಿ, ನಮ್ಮ ಹಳ್ಳಿಯಲ್ಲಿ ಪದೇ ಪದೇ ಕೂಗುವ ಇನ್ನೊಂದು ಹಕ್ಕಿ ಎಂದರೆ ನೆತ್ತಿಂಗ (ನೈಟ್‌ಜಾರ್). ಟಿಟ್ಟಿಭ ಹಕ್ಕಿಯನ್ನು ನಿಶಾಚರಿ ಎನ್ನುವಂತಿಲ್ಲ; ಆದರೆ, ನೆತ್ತಿಂಗಗಳು ಅವಶ್ಯವಾಗಿ ನಿಶಾಚರಿ ಹಕ್ಕಿಗಳು. ಎಷ್ಟರ ಮಟ್ಟಿಗೆ ಎಂದರೆ, ನೆತ್ತಿಂಗವನ್ನು ಜನಸಾಮಾನ್ಯರು ನೋಡಿರುವ ಸಾಧ್ಯತೆಯೇ ಕಡಿಮೆ. ರಾತ್ರಿಯಿಡೀ ಹಾರಾಡುತ್ತಾ, ನೂರಾರು ಕೀಟಗಳನ್ನು ಹಿಡಿದು ತಿನ್ನುವ ನೆತ್ತಿಂಗಗಳು, ರೈತರ ಮಿತ್ರರು ಎಂದೇ ಹೇಳಬಹುದು.

ನೆತ್ತಿಂಗಗಳ ಕುರಿತಾದ ಇನ್ನೊಂದು ಕುತೂಹಲಕಾರಿ ವಿಚಾರವಿದೆ. ಬಹುಶಃ ಇದು ಅವುಗಳ ನಿಶಾಚರ ಜೀವನಕ್ರಮಕ್ಕೆ ಸಂಬಂಧಿಸಿದ್ದೂ ಆಗಿರಬಹುದು. ನೆತ್ತಿಂಗಗಳಲ್ಲಿ ಹಲವು ಪ್ರಭೇದಗಳಿದ್ದರೂ, ಮೇಲ್ನೋಟಕ್ಕೆ ಅವೆಲ್ಲವೂ ಒಂದೇ ರೀತಿ ಕಾಣುತ್ತವೆ! ಅಂದರೆ, ಎರಡು ಪ್ರಭೇದದ ನೆತ್ತಿಂಗಗಳನ್ನು ಅಕ್ಕಪಕ್ಕದಲ್ಲಿಟ್ಟರೆ, ಒಂದೇ ಸ್ವರೂಪ, ಒಂದೇ ದೇಹವಿನ್ಯಾಸ. ಹಾಗಿದ್ದರೆ, ಅವುಗಳ ಭಿನ್ನತೆಯನ್ನು ಪತ್ತೆ ಮಾಡುವುದು ಹೇಗೆ ಎಂದು ನೀವು ಕೇಳಬಹುದು.

ನೆತ್ತಿಂಗಗಳ ಧ್ವನಿ ಮತ್ತು ಅವು ಕೂಗುವ ರೀತಿಯೇ ಅವುಗಳ ಪ್ರತ್ಯೇಕತೆಯ ಪ್ರಮುಖ ಗುರುತು. ನಮ್ಮ ಹಳ್ಳಿಯಲ್ಲಿ, ಬೆಳದಿಂಗಳ ರಾತ್ರಿಯಲ್ಲಿ, ಗದ್ದೆಬಯಲಿನ ಪಕ್ಕದ ಪೊದೆಗಳಲ್ಲಿ, ಹಕ್ಕಲಿನ ಅಂಚಿನಲ್ಲಿ, ಸಣ್ಣ ತೋಡಿನ ಪಕ್ಕದಲ್ಲಿ ಕುಳಿತು, ಆಗಾಗ, ನಿರಂತರವಾಗಿ ಕೂಗುವ ನೆತ್ತಿಂಗವೊಂದಿದೆ. ಅದು ಕೂಗುವ ರೀತಿಯನ್ನು 'ಚುಂ ಚುಳಕ್' ಎಂದು ಬರೆಯಬಹುದೇನೋ. ಒಂದೆರಡು ನಿಮಿಷಗಳ ಅಂತರದಲ್ಲಿ, ನಿರಂತರವಾಗಿ ಆ ರೀತಿ ಕೂಗುತ್ತಲೇ ಇರುವ ಈ ನೆತ್ತಿಂಗದ ಧ್ವನಿಯು ಕರ್ಕಶವೇನಲ್ಲ; ಬದಲಿಗೆ ತುಸು ಇಂಪಾಗಿದೆ ಎಂತಲೇ ಹೇಳಬಹುದು. ಈ ರೀತಿಯ ಧ್ವನಿಯನ್ನು ಹೊರಡಿಸುವುದು 'ಜೆರ್ಡಾನ್ಸ್ ನೈಟ್‌ಜಾರ್' ಎಂದು ಪತ್ತೆ ಮಾಡಲು, ನನಗೆ ಹಲವು ವರ್ಷಗಳೇ ಬೇಕಾದವು! ಆಗೆಲ್ಲಾ ಪುಸ್ತಕಗಳಲ್ಲಿರುವ ವರ್ಣನೆಯ ಸಹಾಯದಿಂದಲೇ ಈ ರೀತಿಯ ಹವ್ಯಾಸವನ್ನು ಮುಂದುವರಿಸುವ ಅನಿವಾರ್ಯತೆ ಇತ್ತಲ್ಲ. ಈಗಿನ ದಿನಗಳಲ್ಲಿ, ಅಂತರ್ಜಾಲದಲ್ಲಿ ಲಭ್ಯವಿರುವ ಹಕ್ಕಿಗಳ ಕೂಗಿನ ಡಾಟಾಬೇಸ್‌ನಿಂದಾಗಿ, ಸುಲಭವಾಗಿ ವಿವಿಧ ಪ್ರಭೇದಗಳನ್ನು ಗುರುತಿಸಲು ಸಾಧ್ಯ.

ನಮ್ಮ ಹಳ್ಳಿಮನೆಯ ಸರಹದ್ದಿನಲ್ಲೇ ವಾಸಿಸುವ 'ಜೆರ್ಡಾನ್ಸ್ ನೈಟ್‌ಜಾರ್', ಸಾಮಾನ್ಯವಾಗಿ ಹಸಿರು ಜಾಸ್ತಿ ಇರುವ ಗದ್ದೆ, ತೋಟ, ಕಾಡಂಚಿನ ಪ್ರದೇಶಗಳಲ್ಲಿ ವಾಸುಸುವಂಥದ್ದು. ರಾತ್ರಿ ಮಾತ್ರ ಕೇಳಸಿಗುವ ಈ ಹಕ್ಕಿಯನ್ನು, ಒಮ್ಮೊಮ್ಮೆ ನೋಡುವ ಅವಕಾಶ ಸಿಗುತ್ತಿತ್ತು. ಮನೆಯ ಹತ್ತಿರದ ಪೇರಳೆ ಮರಕ್ಕೆ ಅದು ಬಂದಾಗ, ವಿದ್ಯುತ್ ದೀಪದ ಬೆಳಕಿನಲ್ಲಿ ಒಮ್ಮೊಮ್ಮೆ ಕಾಣಿಸುತ್ತಿತ್ತು. ಹಗಲಿನಲ್ಲಿ ಅದನ್ನು ನೋಡುವ ಸಾಧ್ಯತೆ ತೀರಾ ಎಂದರೆ ತೀರಾ ಕಡಿಮೆ; ಏಕೆಂದರೆ, ಅದರ ದೇಹದ ವಿನ್ಯಾಸವು, ಅದು ವಿಶ್ರಾಂತಿ ತೆಗೆದುಕೊಳ್ಳುವ ಮರದ ಕೊಂಬೆಯ ವಿನ್ಯಾಸದೊಂದಿಗೆ ಹೊಂದಿಕೊಂಡು, ಒಂದು ರೀತಿಯಲ್ಲಿ ಅದು ಹಗಲಿನಲ್ಲಿ 'ಅದೃಶ್ಯ'ವಾಗಿಬಿಡುತ್ತದೆ! ಇದಕ್ಕೇ ಇರಬೇಕು, ಈ ನೆತ್ತಿಂಗಕ್ಕೆ ನಮ್ಮ ಹಳ್ಳಿಯವರು ಹೆಸರನ್ನೇ ಇಟ್ಟಿಲ್ಲ! ಯಾವ್ಯಾವುದೋ ಜೀವಿಗಳಿಗೆ ಚಿತ್ರವಿಚಿತ್ರ ಹೆಸರನ್ನಿಟ್ಟಿರುವ ನಮ್ಮ ಜನಪದರು, ನೆತ್ತಿಂಗಕ್ಕೆ ಸ್ಥಳೀಯ ಹೆಸರನ್ನಿಟ್ಟಿಲ್ಲ ಎಂದರೆ, ಅದು ಅವರಿಗೆ ತೀರಾ ಅಪರಿಚಿತ ಎಂದೇ ಅರ್ಥ. ಅದಕ್ಕೆ ಮುಖ್ಯ ಕಾರಣ ಅದರ ರಾತ್ರಿಯ ದಿನಚರಿ ಮತ್ತು ಹಗಲಿನಲ್ಲಿ ಸುತ್ತಲಿನ ಗಿಡಮರಗಳ ವಿನ್ಯಾಸದೊಂದಿಗೆ ಸಂಪೂರ್ಣ ಮಿಳಿತಗೊಳ್ಳುವ ದೇಹ ವಿನ್ಯಾಸ.

ನಮ್ಮ ರಾಜ್ಯದ ಬಯಲು ಸೀಮೆಯಲ್ಲಿ ಸಾಮಾನ್ಯವಾಗಿ ವಾಸಿಸುವ ನೆತ್ತಿಂಗದ ಪ್ರಭೇದವನ್ನು 'ಇಂಡಿಯನ್ ನೈಟ್‌ಜಾರ್' ಎಂದು ಹೆಸರಿಸಿದ್ದಾರೆ. ಇದರ ಕೂಗು ಸಹ ತುಸು ವಿಶಿಷ್ಟ. ಅದನ್ನು ಸಲೀಂ ಅಲಿಯವರು 'ಹಿಮಗಟ್ಟಿದ ನೆಲದ ಮೇಲೆ ಚಿಕ್ಕ ಕಲ್ಲನ್ನು ಉರುಳಿಸಿಬಿಟ್ಟಾಗ ಉಂಟಾಗುವ ಸದ್ದು' ಎಂದು ಹೋಲಿಸಿ, ವರ್ಣಿಸಿದ್ದಾರೆ. ಇಂಥ ಖಚಿತವಾದ, ಚಿತ್ರಕ ಭಾಷೆಯ ವರ್ಣನೆಗೆ ಸಲೀಂ ಅಲಿಯವರು ಪ್ರಸಿದ್ಧರು ಮತ್ತು ಅವರಿಂದ ಮಾತ್ರ ಅದು ಸಾಧ್ಯ! ಅರಸೀಕೆರೆ ಸುತ್ತಲಿನ ಪ್ರದೇಶದಲ್ಲಿ ಇಂಡಿಯನ್ ನೈಟ್‌ಜಾರ್ ಪ್ರಭೇದದ ನೆತ್ತಿಂಗದ ಕೂಗನ್ನು ನಾನು ಕೇಳಿದ್ದುಂಟು. ಹಿಮದ ನೆಲದ ಮೇಲೆ ಎಂದು ಸಲಿಂ ಅಲಿಯವರು ವರ್ಣಿಸಿದ್ದನ್ನು ಕಲ್ಪಿಸಿಕೊಂಡು, ಸಣ್ಣ ದುಂಡುಗಲ್ಲನ್ನು ಇನ್ನೊಂದು ವಿಶಾಲವಾದ ಕಲ್ಲಿನ ಮೇಲೆ ಉರುಳಿಸಿಬಿಟ್ಟಂತೆ ಆ ಸದ್ದು ಇರುತ್ತದೆಂಬುದನ್ನು ಗಮನಿಸಿದೆ.

ನಮ್ಮ ರಾಜ್ಯದ ಕಾಡು ಪ್ರದೇಶದಲ್ಲಿ 'ಜಂಗಲ್ ನೈಟ್‌ಜಾರ್' ಎಂಬ ಇನ್ನೊಂದು ಪ್ರಭೇದದ ನೆತ್ತಿಂಗವೂ ಇದೆ. ಆದರೆ, ಈ ಎಲ್ಲಾ ನೆತ್ತಿಂಗಗಳು ಕಟ್ಟಾ ನಿಶಾಚರಿಗಳು ಮತ್ತು ಜನಸಾಮಾನ್ಯರ ಅರಿವಿನಿಂದ ದೂರವಿರುವ ಜೀವಿಗಳು. ರಾತ್ರಿಯ ಹೊತ್ತಿನಲ್ಲಿ ಅವು ಕೂಗುವುದನ್ನು ಕೇಳಿಸಿಕೊಂಡೇ, ನೆತ್ತಿಂಗಗಳ ಇರವನ್ನು ತಿಳಿದುಕೊಳ್ಳಬೇಕು.

ನಮ್ಮ ಹಳ್ಳಿಯ ಬೆಳದಿಂಗಳ ರಾತ್ರಿಯಲ್ಲಿ ತೀರಾ ಸಾಮಾನ್ಯವಾಗಿ 'ಕಾಣ ಸಿಗುವ' ಮತ್ತು ಧ್ವನಿ ಹೊರಡಿಸುವ ಹಕ್ಕಿಗಳೆಂದರೆ ಗೂಬೆಗಳು. ದೊಡ್ಡ ಗಾತ್ರದ ದೇಹವನ್ನು ಹೊತ್ತು, ಅವು ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರಾಡುವುದನ್ನು ಸಹ ಬೆಳದಿಂಗಳ ರಾತ್ರಿಯಲ್ಲಿ ಕಾಣಬಹುದು. ಅವುಗಳನ್ನು ನೋಡುವುದಕ್ಕಿಂತಲೂ ಹೆಚ್ಚಾಗಿ, ಅವುಗಳ ದನಿಯು ಹೆಚ್ಚು ಪರಿಚಿತ. ಬೆಳದಿಂಗಳು ಇಲ್ಲದ ಸಮಯದಲ್ಲೂ ನಮ್ಮ ಮನೆ ಸುತ್ತಲೂ ಮೀನು ಗೂಬೆಗಳು ಕೂಗುವುದನ್ನು ಕೇಳಬಹುದು. 'ಊಂ ಹೂಂ ಊಂ' ಎಂಬ ಮೂರು ಭಾಗದ ಆಳವಾದ ದನಿಯ 'ಮೀನು ಗೂಬೆ' (ಬ್ರೌನ್ ಫಿಶ್ ಔಲ್)ಯ ಕೂಗು, ನಮ್ಮ ಹಳ್ಳಿಯ ಜನರಿಗೆ ತೀರಾ ಚಿರಪರಿಚಿತ. ಗೂಬೆ ನೆತ್ತಿಂಗಗಳ ಲೋಕ ನಿಜಕ್ಕೂ ನಿಗೂಢ.

ಸುದ್ದಿಗಿಷ್ಟು ಒಗ್ಗರಣೆ

ಯಗಟಿ ರಘು ನಾಡಿಗ್

- **ಅಕ್ಟೋಬರ್ ಮೊದಲ ವಾರದಿಂದಲೇ ಮದ್ಯದ ದರ ಏರಿಕೆಯಾಗುವ ಸಾಧ್ಯತೆ: ಸುದ್ದಿ**
– ''ಈ ಕಡೆ ನೋಡಿದ್ರೆ ಒಬ್ಬರು 'ಕುಡಿಯೋಣು ಬಾರಾ' ಅಂತ ಕರೀತಾರೆ, ಆ ಕಡೆ ನೋಡಿದ್ರೆ ಸರಕಾರದೋರು ದರ ಏರಿಸ್ತಾರೆ. ಹಿಂಗಾದ್ರೆ ಹೆಂಗೆ?'' ಎಂದು ಗುಂಡುಪ್ರಿಯರು ಹುಸಿಮುನಿಸು ತೋರಿದರಂತೆ!!

- **ಪ್ರೇಯಸಿಯ ಮೇಲೆ ಕಣ್ಣು ಹಾಕಿದ ಮಾಲೀಕನಿಗೆ ಚಾಕು ಇರಿತ: ಸುದ್ದಿ**
– ಆ ಮಾಲೀಕ ಮಹಾಶಯರು 'ರಾಬರ್ಟ್' ಚಿತ್ರದ 'ಕಣ್ಣು ಹೊಡೆಯಾಕ, ಮೊನ್ನೆ ಕಲತೇನಿ' ಎಂಬ ಹಾಡನ್ನ ಪ್ರಾಕ್ಟಿಕಲ್ ಆಗಿ ಟ್ರೈ ಮಾಡೋಕ್ಕೆ ಹೋಗಿರಬೇಕು!!

- **ರಾಹುಲ್ ಗಾಂಧಿಯವರಿಗೆ ಮಾತಾಡಲು ಹಾಗೂ ತೀರ್ಮಾನ ಕೈಗೊಳ್ಳಲು ಬರಲ್ಲ; ಮಕ್ಕಳಂತೆ ಆಟವಾಡುತ್ತಿರುವ ಅವರಿಗೆ ಪ್ರಬುದ್ಧತೆ ಇಲ್ಲ: ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ**
– ವಿಧಾನಸಭೆಯ ಪ್ರತಿಪಕ್ಷ ನಾಯಕರು ಹೀಗೆ ಲೋಕಸಭೆಯ ಪ್ರತಿಪಕ್ಷ ನಾಯಕರ 'ಕಾಲು' ಎಳೆದಿದ್ದಕ್ಕೆ 'ಕೈ' ಪಕ್ಷದವರು ಏನಂದಿದ್ದಾರೆ ಎಂಬುದಿನ್ನೂ ಗೊತ್ತಾಗಿಲ್ಲ!

- **ಹಗರಣ ಮರೆಮಾಚಲು ಸರಕಾರದಿಂದ 'ಗಣೇಶ ಗಲಾಟೆ': ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪ**
– ಹಿಂದೆ 'ಗಣೇಶನ ಗಲಾಟೆ' ಎಂಬ ಚಿತ್ರ ನಿರ್ದೇಶಿಸಿದ್ದ ಫಣಿ ರಾಮಚಂದ್ರ ಅವರು ಅದರ 'ಭಾಗ-2'ನ್ನು ನಿರ್ದೇಶಿಸಲು ಉತ್ಸುಕರಾಗಿದ್ದು, ಗಲಾಟೆಯ ವಿವರ ಹಂಚಿಕೊಳ್ಳುವಂತೆ ನಿಖಿಲ್‌ರನ್ನು ಕೇಳಲಿದ್ದಾರಂತೆ!

- **ಬಿಜೆಪಿಯಲ್ಲಿ ಮುಗಿಯದ ಟಾಕ್‌ವಾರ್: ಸುದ್ದಿ**
– ಒಂದು ಕಡೆ ರಷ್ಯಾ-ಉಕ್ರೇನ್ ವಾರ್, ಮತ್ತೊಂದು ಕಡೆ ಇಸ್ರೇಲ್-ಪ್ಯಾಲೆಸ್ತೀನ್ ವಾರ್, ನಮ್ಮಲ್ಲಿ ನೋಡಿದ್ರೆ ಹೀಗೆ ಟಾಕ್ ವಾರ್; ಒಟ್ನಲ್ಲಿ, 'ವಾರ'ವೆಲ್ಲಾ 'ವಾರ್' ಸುದ್ದಿಗಳನ್ನ ಕೇಳಿ ಕೇಳಿ ಸಾಕಾಗ್ತಿದೆ ಕಣ್ರೀ ಎಂದು ಅದ್ಯಾರೋ 'ವಾರ್'ಗಿತ್ತಿಯರು ನೊಂದುಕೊಂಡ್ರಂತೆ!!

- **ಟೇಕ್-ಆಫ್ ಆಗದ ಸದಸ್ಯತ್ವ ಅಭಿಯಾನ; ಎಚ್ಚೆತ್ತ ರಾಜ್ಯ ಬಿಜೆಪಿ ಘಟಕ: ಸುದ್ದಿ**
– 'ಅಭಿಯಾನ' ಎಂಬ ವಿಮಾನದೊಳಗೆ ಇಂಧನವೇ ಇಲ್ಲದಿದ್ರೆ, ಹೇಗೆ 'ಟೇಕ್-ಆಫ್' ಆಗುತ್ತೆ?

- **'ಒಂದು ದೇಶ ಒಂದು ಚುನಾವಣೆ' ಜಾರಿಗೊಳಿಸಿ ಮೋದಿ ನೇತೃತ್ವದ ಕೇಂದ್ರ ಸರಕಾರ ದೇಶದ ಒಕ್ಕೂಟ ವ್ಯವಸ್ಥೆಯನ್ನು ನಾಶಮಾಡಲು ಹೊರಟಿದೆ. ಆಗಾಗ್ಗೆ ಚುನಾವಣೆ ನಡೆಯುವುದರಿಂದ ಮೋದಿ ಮತ್ತು ಅಮಿತ್ ಶಾಗೆ ಮಾತ್ರ ಸಮಸ್ಯೆಯಾಗುತ್ತಿದೆ: ಎಐಎಂಐಎಂ ಪಕ್ಷದ ಅಸಾದುದ್ದೀನ್ ಒವೈಸಿ ಆರೋಪ**
– ಅಸಾದುದ್ದೀನ್ ಒವೈಸಿ ಪ್ರಯತ್ನಪಟ್ಟರೆ ಒಬ್ಬ ಅದ್ಭುತ 'ಸ್ಟ್ಯಾಂಡ್-ಅಪ್ ಕಮೆಡಿಯನ್' ಆಗಬಹುದು!

- **ರಾಹುಲ್ ಗಾಂಧಿಯವರ ವರ್ಚಸ್ಸು ಹೆಚ್ಚುತ್ತಿರುವುದು ಶಿವಸೇನೆ ಮತ್ತು ಬಿಜೆಪಿಯವರಿಗೆ ಸಹಿಸಲಾಗುತ್ತಿಲ್ಲ: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್**
– ಈ ಮಾತು ಕೇಳಿ ಗಹಗಹಿಸಿ ನಗಬೇಕೋ ಅಥವಾ ಬಿಕ್ಕಿಬಿಕ್ಕಿ ಅಳಬೇಕೋ ಎಂದು ಗೊತ್ತಾಗದೆ ಡಿಎಂಕೆಯ ಕಾರ್ಯಕರ್ತರು ಕಂಗಾಲಾದರಂತೆ!!

ಬಿಗಡಾಯಿಸುತ್ತಿದೆ ಭಿನ್ನಮತ, ಕನಸಾಗುತ್ತಿದೆ ಸಹಮತ

ರಾಜ್ಯ ಬಿಜೆಪಿಯಲ್ಲಿನ ಭಿನ್ನಮತ ಕಳೆದ ಕೆಲ ವರ್ಷಗಳಿಂದ ಸಾಕಷ್ಟು ಸದ್ದು ಮಾಡುತ್ತಿದೆ. ಕಳೆದೊಂದು ವರ್ಷದಲ್ಲಿ ಇದು ತಾರಕಕ್ಕೇರಿ ಪಕ್ಷಕ್ಕೆ ಮರ್ಮಾಘಾತ ನೀಡುವ ಸಾಧ್ಯತೆಗಳು ಕಾಣುತ್ತಿವೆ. ವಿಚಿತ್ರವೆಂದರೆ, ಶಿಸ್ತು ಉಲ್ಲಂಘನೆಯಂಥ ವಿಚಾರವನ್ನು ಗಂಭೀರವಾಗಿ ಪರಿಗಣಿಸುತ್ತಿದ್ದ ಪಕ್ಷದ ವರಿಷ್ಠರು ಈ ಭಿನ್ನಮತಕ್ಕೆ ಮದ್ದು ಅರೆಯುವುದನ್ನು ಆದ್ಯತಾ ವಿಷಯವಾಗಿ ಪರಿಗಣಿಸಿದಂತಿಲ್ಲ.

ವಿಶ್ಲೇಷಣೆ
ರಮಾನಂದ ಶರ್ಮಾ
vveditoped@gmail.com

ಶಿಸ್ತಿನ ಪಕ್ಷ' ಎಂಬ ಹಣೆಪಟ್ಟಿ ಲಗತ್ತಿಸಿಕೊಂಡಿರುವ ಮತ್ತು ಲಾಗಾಯ್ತಿನಿಂದ ಆರಂಭಿಸಿ ತೀರಾ ಇತ್ತೀಚಿನವರೆಗೆ ಅದನ್ನು ಜತನದಿಂದ ಕಾಯ್ದುಕೊಂಡು ಬಂದ ಪಕ್ಷವೆಂದೇ ಹೇಳಲಾಗುವ ಬಿಜೆಪಿಯ ರಾಜ್ಯ ಘಟಕದಲ್ಲಿ ಶಿಸ್ತು ಎಂಬುದು ಇಂಚಿಂಚಾಗಿ ಕಳೆದುಹೋಗುತ್ತಿದೆ, 'ಶಿಸ್ತು ಎಂದರೇನು?' ಎಂದು ಕೇಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕರ್ನಾಟಕದ ಬಿಜೆಪಿ ಇತಿಹಾಸದಲ್ಲಿ ಯಡಿಯೂರಪ್ಪನವರ 'ಕರ್ನಾಟಕ ಜನತಾಪಕ್ಷ' (ಕೆಜೆಪಿ) ಎಂಬ ದುಸ್ಸಾಹಸವನ್ನು ಹೊರತುಪಡಿಸಿದರೆ, ಇಂಥ ಭಿನ್ನಮತ ಕಂಡುಬಂದಿದ್ದು ವಿರಳ.

ರಾಜ್ಯ ಬಿಜೆಪಿಯಲ್ಲಿನ ಭಿನ್ನಮತವು ವಾಸ್ತವದಲ್ಲಿ ಒಂದು ದಿಢೀರ್ ಬೆಳವಣಿಗೆಯಾಗಿರದೆ ಬಹುಕಾಲದಿಂದ ಬೂದಿಮುಚ್ಚಿದ ಕೆಂಡದಂತಿದ್ದ ಅಪಸವ್ಯವಾಗಿದೆ. ಯಡಿಯೂರಪ್ಪನವರ ಪುತ್ರ ವಿಜಯೇಂದ್ರರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿದ ಮೇಲೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದ ಟಿಕೆಟ್ ಅನ್ನು ಯಡಿಯೂರಪ್ಪರ ಮತ್ತೊಬ್ಬ ಪುತ್ರ ರಾಘವೇಂದ್ರರಿಗೆ ನೀಡಿದ ಮೇಲೆ ಸದರಿ ಭಿನ್ನಮತ ಹೆಚ್ಚಿದ್ದು, ದಿನದಿಂದ ದಿನಕ್ಕೆ ತಾರಕಕ್ಕೇರುತ್ತಲೇ ಇದೆ. ಸದ್ಯೋಭವಿಷ್ಯದಲ್ಲಿ ಅದು ತಣ್ಣಗಾಗುವ ಯಾವ ಲಕ್ಷಣವೂ ಗೋಚರಿಸುತ್ತಿಲ್ಲ. ರಾಜಕೀಯ ಪಕ್ಷಗಳಲ್ಲಿ ಭಿನ್ನಮತ ಸಹಜ. ಇದು ಬಹುತೇಕ ಸಂದರ್ಭಗಳಲ್ಲಿ ಸಿದ್ಧಾಂತದ ಆಧಾರದ ಮೇಲೆ ಹುಟ್ಟಿಕೊಳ್ಳುತ್ತದೆ; ಆದರೆ ಬಿಜೆಪಿಯ ಸದ್ಯದ ಬಿಕ್ಕಟ್ಟಿನಲ್ಲಿ ಭಿನ್ನಮತಕ್ಕೆ ಕಾರಣವಾಗಿರುವುದು ಸಿದ್ಧಾಂತವಲ್ಲ, ಬದಲಿಗೆ ವ್ಯಕ್ತಿಗತ ಮೇಲುಗೈ ವಿಷಯ. ಈ ವಿಷಯವೇ ತಾಂಡವ ನೃತ್ಯವನ್ನು ಆಡಿಸುತ್ತಿದ್ದು, ಅದಕ್ಕೆ ಒಂದಷ್ಟು ಪಕ್ಕವಾದ್ಯಗಳೂ ದೊರಕುತ್ತಿರುವುದು ವಿಶೇಷ.

ಬಿಜೆಪಿಯು ಪೂರ್ಣ ಬಹುಮತದೊಂದಿಗೆ 2014ರಲ್ಲಿ ಕೇಂದ್ರದಲ್ಲಿ ಗದ್ದುಗೆಯೇರಿದ ನಂತರ, ಪ್ರಧಾನಿ ಮೋದಿಯವರಿಂದ ಮೊದಲ್ಗೊಂಡು ಪಕ್ಷದ ಬಹುತೇಕ ಧುರೀಣರು ವಿರೋಧ ಪಕ್ಷಗಳ, ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ಪಕ್ಷದ ಕುಟುಂಬ ರಾಜಕಾರಣವನ್ನು ಟೀಕಿಸುವುದು ಅವ್ಯಾಹತವಾಗಿ ನಡೆದಿದೆ. ಆದರೆ ಇದೇ ಕುಟುಂಬ ರಾಜಕಾರಣಕ್ಕೆ ಕರ್ನಾಟಕದ ಬಿಜೆಪಿಯು ಬಲಿಯಾಗುತ್ತಿರುವುದು ವಿಪರ್ಯಾಸ. ಕಳೆದ ಕೆಲ ವರ್ಷಗಳಿಂದ ಇದು ಸಾಕಷ್ಟು ಸದ್ದು ಮಾಡುತ್ತಿದ್ದರೂ, ಕಳೆದೊಂದು ವರ್ಷದಲ್ಲಿ ಇದು ತಾರಕಕ್ಕೇರಿ ಪಕ್ಷಕ್ಕೆ ಮರ್ಮಾಘಾತ ನೀಡುವ ಸಾಧ್ಯತೆಗಳು ಕಾಣುತ್ತಿವೆ. ವಿಚಿತ್ರವೆಂದರೆ, ಶಿಸ್ತು ಉಲ್ಲಂಘನೆಯಂಥ ವಿಚಾರವನ್ನು ಗಂಭೀರವಾಗಿ ಪರಿಗಣಿಸುತ್ತಿದ್ದ ಪಕ್ಷದ ವರಿಷ್ಠರು ಕರ್ನಾಟಕದಲ್ಲಿ ಹೊಗೆಯಾಡುತ್ತಿರುವ ಭಿನ್ನಮತಕ್ಕೆ ಮದ್ದು ಅರೆಯುವುದನ್ನು ಆದ್ಯತಾ ವಿಷಯವಾಗಿ ಪರಿಗಣಿಸಿರುವಂತೆ ಕಾಣುತ್ತಿಲ್ಲ. ಭಿನ್ನಮತೀಯ ಚಟುವಟಿಕೆಗಳು ಮತ್ತು ಪಕ್ಷದ ಭವಿಷ್ಯಕ್ಕೆ ಮಾರಕವಾಗಿರುವ ಕೆಲ ಧುರೀಣರ ಹೇಳಿಕೆಗಳು ರಾಷ್ಟ್ರೀಯ ಮಾಧ್ಯಮದಲ್ಲಿ ಸುದ್ದಿಯಾಗುತ್ತಿದ್ದಂತೆ, ಕೆಲವರನ್ನು ವರಿಷ್ಠರು ದೆಹಲಿಗೆ ಕರೆಸಿಕೊಂಡು ಮಾತನಾಡುತ್ತಾರೆ. ಬಿಕ್ಕಟ್ಟು ಬಗೆಹರಿಯಲಿದೆ ಎಂಬ ಗ್ರಹಿಕೆಯಲ್ಲಿ ಭಿನ್ನಮತೀಯರ ದನಿ ಮತ್ತು ಕೆಲ ನಾಯಕರ ವಿವಾದಾತ್ಮಕ ಹೇಳಿಕೆಗಳು ಒಂದೆರಡು ದಿನ ಬಂದ್ ಆಗುತ್ತವೆ; 'ಶಿಸ್ತಿನ ಪಕ್ಷದ ಸಿಪಾಯಿಗಳು ಸರಿದಾರಿಗೆ ಬಂದರು' ಎಂದು ಜನರು ನಿಟ್ಟುಸಿರು ಬಿಡುತ್ತಿರುವಂತೆ, 'ಹೋದೆಯಾ ಪಿಶಾಚಿ ಅಂದರೆ, ಬಂದೆ ಗವಾಕ್ಷೀಲಿ' ಎನ್ನುವಂತೆ ಒಂದೆರಡು ದಿನದಲ್ಲಿ ಭಿನ್ನದನಿ ಮತ್ತೆ ಭುಗಿಲೇಳುತ್ತದೆ!



ರಾಜ್ಯ ಬಿಜೆಪಿಯಲ್ಲಿನ ಭಿನ್ನಮತ ಅದೆಷ್ಟು ತಾರಕಕ್ಕೇರಿದೆಯೆಂದರೆ, ಅದರ 'ಮಾತೃಸಮಾನ' ಸಂಘಟನೆಯಾದ ಆರ್‌ಎಸ್‌ಎಸ್‌ನ ರಾಜ್ಯ ನಾಯಕರು ಎಲ್ಲರನ್ನೂ ಕರೆದು ಕೂರಿಸಿ ಸಂಧಾನ ನಡೆಸಿ ತೇಪೆ ಹಚ್ಚುವ ಕೆಲಸ ಮಾಡಿದರೂ ಗಿಟ್ಟಲಿಲ್ಲ. ಈ ಸಂಧಾನ ನಡೆದ 24 ಗಂಟೆಯೊಳಗಾಗಿ, ಬಸನಗೌಡ ಪಾಟೀಲ್ ಯತ್ನಾಳರ ಗುಂಪು ಪ್ರತ್ಯೇಕವಾಗಿ ರಾಜ್ಯಪಾಲರನ್ನು ಭೇಟಿಯಾಗಿ ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ಮನವಿ ಸಲ್ಲಿಸಿದೆ ಮತ್ತು 'ಬಳ್ಳಾರಿ ಚಲೋ' ಪಾದಯಾತ್ರೆಗೆ ಸಿದ್ಧವಾಗುತ್ತಿದೆ. ಇದನ್ನು ಅಶಿಸ್ತು ಎಂದು ಪರಿಗಣಿಸಬೇಕೇ ಎಂದು ಪಕ್ಷ ಚಿಂತನ-ಮಂಥನ ನಡೆಸುತ್ತಿರುವಾಗಲೇ ಹಿರಿಯ ಶಾಸಕರೊಬ್ಬರು, ''ಬಿಜೆಪಿಗೆ 'ಭ್ರಷ್ಟ' ಎಂಬ ಲೇಬಲ್ ಅಂಟಿಕೊಳ್ಳುವಂತೆ ಮಾಡಿದವರು ಬಿ.ವೈ.ವಿಜಯೇಂದ್ರ, ಅವರಿಗೆ ಪಕ್ಷದ ಸಿದ್ಧಾಂತಗಳೇ ಗೊತ್ತಿಲ್ಲ. ಅವರನ್ನು ನಮ್ಮ ನಾಯಕ ಎಂದು ಒಪ್ಪಲು ಸಾಧ್ಯವೇ ಇಲ್ಲ. ಬಿಜೆಪಿಯಲ್ಲಿ ಒಬ್ಬರ ಕೈಯಲ್ಲಿ/ಕಪಿಮುಷ್ಟಿಯಲ್ಲಿ ಆಡಳಿತ ಇರಬಾರದು, ಸಾಮೂಹಿಕ ನಾಯಕತ್ವ ಬರಬೇಕು'' ಎಂದು ಗುಡುಗಿದ್ದಾರೆ. ಅವರಿಗೆ ವಿಜಯೇಂದ್ರರ ಬಗ್ಗೆ ಒಲವು ಇಲ್ಲದಿರುವುದು ಎಲ್ಲರಿಗೂ ತಿಳಿದ ವಿಷಯ; ಆದರೆ ಅವರಿಬ್ಬರ ಸಂಬಂಧ ಇಷ್ಟೊಂದು ಹಳಸಿದೆ ಎಂಬುದು ಗೊತ್ತಾಗಿದ್ದು ಈ ಹೇಳಿಕೆಯಿಂದಲೇ. ಸದರಿ ಹಿರಿಯ ಶಾಸಕರ ಹೇಳಿಕೆಯಿಂದ ವರಿಷ್ಠರು ಚಕಿತಗೊಂಡಿದ್ದಾರಂತೆ. ಈ ನೇರ-ನಿಷ್ಠುರ ಮಾತಿನ ವೈಖರಿ ನೋಡಿದರೆ ವಿಜಯೇಂದ್ರರನ್ನು ಬದಲಾಯಿಸುವುದನ್ನು ಬಿಟ್ಟು ಪಕ್ಷಕ್ಕೆ ಬೇರೆ ದಾರಿಯಿಲ್ಲ ಎಂಬ ಖಡಕ್ ಸಂದೇಶ ವರಿಷ್ಠರಿಗೆ ರವಾನೆಯಾದಂತೆ ತೋರುತ್ತದೆ. ಈ ಬಿಕ್ಕಟ್ಟನ್ನು ಶೀಘ್ರವಾಗಿ ಪರಿಹರಿಸದಿದ್ದರೆ, ಅದು ಮತ್ತಷ್ಟು ಬಿಗಡಾಯಿಸಿ ಒಬ್ಬ ನಾಯಕನಿಗಾಗಿ ಇಡೀ ಪಕ್ಷಕ್ಕೇ ಲಕ್ವ ಬಡಿಯುವುದನ್ನು ನೋಡಬೇಕಾಗುತ್ತದೇನೋ ಎಂಬ ಆತಂಕ ಹಲವರಲ್ಲಿ ಮನೆಮಾಡಿದೆ.

ಕರ್ನಾಟಕದಲ್ಲಿ ಕುಟುಂಬ ರಾಜಕಾರಣದ ವಿರುದ್ಧ ಹೋರಾಟ ಆರಂಭಿಸಿದಾಗ ಯತ್ನಾಳರು ಒಬ್ಬಂಟಿಯಾಗಿದ್ದರು, ಆದರೆ ಅವರ ಏಕಾಂಗಿತನವೀಗ ದೂರವಾಗಿದೆ. ಕಾರಣ, ಅವರ ಬೆನ್ನಿಗೆ ಪ್ರತಾಪ ಸಿಂಹ, ಜೊಲ್ಲೆ, ಸಿದ್ದೇಶ್ವರ್, ಲಿಂಬಾವಳಿ, ಕುಮಾರ್ ಬಂಗಾರಪ್ಪ ಬಿ.ಪಿ.ಹರೀಶ್ ಮುಂತಾದವರಿದ್ದಾರೆ. ಅವರೆಂದೂ ತಮ್ಮ ಹಿಂದಿರುವ ಸಂಖ್ಯಾಬಲಕ್ಕೆ ತಲೆ ಕೆಡಿಸಿಕೊಂಡಂತೆ ಕಾಣುವುದಿಲ್ಲ. ಇನ್ನು ಕೆಲವರು ಪರದೆಯ ಹಿಂದಿನಿಂದ ಇಣುಕುತ್ತಿದ್ದು, ಕಾಲ ಪಕ್ವವಾದಾಗ ಹೊರಬರಬಹುದು. 'ನೀವು ಮುಂದೆ ಹೋಗಿ, ನಾವು ಹಿಂದಿನಿಂದ ಬರುತ್ತೇವೆ' ಎನ್ನುವವರೂ ಇಲ್ಲದಿಲ್ಲ. ಮತ್ತೆ ಕೆಲವರು, ರಾಜಕೀಯದಲ್ಲಿ ತೀರಾ ಮಾಮೂಲಾಗಿರುವ 'ಕಾದುನೋಡುವ ತಂತ್ರ'ಕ್ಕೆ ಶರಣಾಗಿರಬಹುದು.

ವಿಜಯೇಂದ್ರರ ನಾಯಕತ್ವಕ್ಕೆ ಎಲ್ಲರೂ ಸಮ್ಮತಿಸಿದ್ದಾರೆ ಎನ್ನಲಾಗದು; ಪರಿಸ್ಥಿತಿಯ ಒತ್ತಡದಿಂದಾಗಿ ಕೆಲವರು ಹಾಗೆ ಗೋಣುಹಾಕಿರಬಹುದು, ಪಕ್ಷದ ಶಿಸ್ತಿನ ಹೆಸರಲ್ಲಿ ತಲೆಬಾಗಿರಬಹುದು. ತಮ್ಮ ಹೇಳಿಕೆಗೆ ಬದ್ಧರಾಗಿರುವ ಭಿನ್ನಮತೀಯರು ಇದಕ್ಕೆ ಹೊರತಾಗಿ ಬೇರಾವುದೇ ಸೂತ್ರಕ್ಕೆ ಒಪ್ಪುವ ಸಾಧ್ಯತೆ ಕಾಣುತ್ತಿಲ್ಲ. ಯತ್ನಾಳರ ಹೋರಾಟಕ್ಕೆ ಈಗಾಗಲೇ ವರ್ಷಗಳು ಸಂದಿವೆ. ಅವರ ಹೋರಾಟವಿನ್ನೂ ನಿರೀಕ್ಷಿತ ಯಶಸ್ಸನ್ನು ಕಂಡಿಲ್ಲವಾದರೂ, ಛಲಬಿಡದ ತ್ರಿವಿಕ್ರಮನಂತೆ ತಮ್ಮ ಹೋರಾಟವನ್ನು ಅವರು ಏಕಾಗ್ರತೆಯಿಂದ ಮುಂದುವರಿಸಿದ್ದಾರೆ. ಪಕ್ಷದ ವರಿಷ್ಠರ ಎಚ್ಚರಿಕೆ, ರಾಜ್ಯ ನಾಯಕರ ದೂರುಗಳು ಮತ್ತು ಸಂಭಾವ್ಯ ಶಿಸ್ತುಕ್ರಮಗಳೂ ಅವರನ್ನು ವಿಚಲಿತರನ್ನಾಗಿ ಮಾಡದಿರುವುದು ಆಶ್ಚರ್ಯಕರ (ಅದರ ಬಗೆಗೆ ಅವರು ತಲೆಕೆಡಿಸಿಕೊಳ್ಳುವುದಿಲ್ಲ ಎನ್ನಿ!). ವಿಪರ್ಯಾಸವೆಂದರೆ, ಅವರಿಗೆ ಈವರೆಗೂ ಒಂದೇ ಒಂದು ನೋಟಿಸ್ ಜಾರಿಯಾಗಿಲ್ಲವಂತೆ. ತಮ್ಮ ನೇರಾನೇರ ಮಾತು ಹಾಗೂ ಖಡಕ್ ವರ್ತನೆಯ ಹೊರತಾಗಿಯೂ ಯತ್ನಾಳರು ಪಕ್ಷದ ವರಿಷ್ಠರಿಂದ ಶಿಸ್ತುಕ್ರಮಕ್ಕೆ ಒಳಗಾಗದಿರುವುದನ್ನು ಕಂಡು ರಾಜ್ಯದ ಕೆಲ ನಾಯಕರು ಚಕಿತಗೊಂಡಿದ್ದಾರೆ ಎನ್ನಲಾಗುತ್ತದೆ. ಬಹುಶಃ ಇದೇ ಕಾರಣಕ್ಕೋ ಏನೋ ಯತ್ನಾಳರ ವಿರುದ್ಧ ಯಾವ ನಾಯಕರೂ ಬಾಯಿ ಬಿಡುತ್ತಿಲ್ಲ; 'ಸಮಯ ಬಂದಾಗ ವರಿಷ್ಠರು ಕ್ರಮ ಕೈಗೊಳ್ಳುತ್ತಾರೆ' ಎಂದು ಹೇಳಿ ಅವರು ವಿಷಯವನ್ನು ಅಲ್ಲಿಗೇ ಮೊಟಕುಗೊಳಿಸುತ್ತಾರೆ.

ಯತ್ನಾಳರ ಹೋರಾಟದ ಬಗ್ಗೆ ವರಿಷ್ಠರಲ್ಲಿ ಹಲವರಿಗೆ ಸಹಾನುಭೂತಿ ಇರುವುದರಿಂದಲೇ ಅವರ ಮೇಲೆ ಕ್ರಮ ಕೈಗೊಳ್ಳಲು ಮೀನ-ಮೇಷ ಎಣಿಸುತ್ತಾರೆ ಎನ್ನುವವರೂ ಇದ್ದಾರೆ. ತಮ್ಮ ಹೋರಾಟಕ್ಕೆ ತಾರ್ಕಿಕ ಅಂತ್ಯ ಕಾಣಿಸುವ ಯತ್ನಾಳರ ದೃಢನಿಲುವಿನ ಬಗೆಗೆ ಹಲವರಲ್ಲಿ ಮೆಚ್ಚುಗೆ/ಅಚ್ಚರಿ ಇದ್ದರೂ, ಈ ವಿಷಯದಲ್ಲಿ ನಿರ್ಧಾರ ಕೈಗೊಳ್ಳುವುದಕ್ಕೆ ವರಿಷ್ಠರು ಮಾಡುತ್ತಿರುವ ವಿಳಂಬದಿಂದಾಗಿ ಮುಂಬರುವ ದಿನಗಳಲ್ಲಿ ಪಕ್ಷಕ್ಕೆ ಮರ್ಮಾಘಾತವಾಗಬಹುದು ಎಂಬ ಆತಂಕವೂ ಅವರಲ್ಲಿ ಮನೆಮಾಡಿದೆ. ವಿಳಂಬಿಸಿದಷ್ಟೂ ಭಿನ್ನಮತೀಯರ ಸಂಖ್ಯೆ ಹೆಚ್ಚುತ್ತದೆ, ಅದರಿಂದಾಗಿ ಪಕ್ಷದ ತಳಹದಿ ಅಲುಗಾಡಬಹುದು ಎಂಬ ಗ್ರಹಿಕೆ ಅವರ ಈ ಆತಂಕಕ್ಕೆ ಕಾರಣ. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದ ಕಾಲಘಟ್ಟದಲ್ಲಿ, ಸಂಪುಟ ವಿಸ್ತರಣೆ/ಪುನಾರಚನೆಯ ವಿಷಯದಲ್ಲಿ ಸುದೀರ್ಘವಾಗಿ ನಡೆದ 'ಇಂದಲ್ಲ ನಾಳೆ' ಎಂಬ ಪ್ರಹಸನದಿಂದಾಗಿ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಿ ಅಧಿಕಾರ ಕೈತಪ್ಪಿತು; ಇದನ್ನು ಗಮನದಲ್ಲಿಟ್ಟುಕೊಂಡು ವರಿಷ್ಠರು ಈ ಬಿಕ್ಕಟ್ಟಿಗೆ ಶೀಘ್ರವಾಗಿ ಅಂತ್ಯಹಾಡಬೇಕು ಎಂಬುದು ಇಂಥವರ ಆಗ್ರಹ.

ಯತ್ನಾಳರಂತೂ ತಾವು ಮುಂದಿಟ್ಟ ಕಾಲನ್ನು ಯಾವುದೇ ಸಂದರ್ಭದಲ್ಲಿ ಹಿಂತೆಗೆದುಕೊಳ್ಳುವ ಸಾಧ್ಯತೆ ಕಮ್ಮಿ. ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿಯ ಅಸ್ತಿತ್ವಕ್ಕೆ ಆತಂಕ ಎದುರಾದರೆ ಅದಕ್ಕೆ ಕಾರಣರಾಗುವುದು ಬಹುಶಃ ವರಿಷ್ಠರೇ ಹೊರತು ರಾಜ್ಯದ ನಾಯಕರಲ್ಲ. 'ನಾಳೆ ಮಾಡುವುದನ್ನು ಇಂದು ಮಾಡು, ಇಂದು ಮಾಡುವುದನ್ನು ಈ ಕ್ಷಣ ಮಾಡು' ಎಂಬ ಗಾಂಧಿ ತತ್ವವನ್ನು ಮರೆತರೆ ಅದು ಪಕ್ಷಕ್ಕೆ ದುಬಾರಿಯಾಗಬಹುದು.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಸಂಚುಕೋರರ ಹೆಡೆಮುರಿ ಕಟ್ಟಿ

ಅಭಿಮತ
ಆದರ್ಶ್ ಶೆಟ್ಟಿ

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಇತ್ತೀಚೆಗೆ ಗಣೇಶನ ಮೆರವಣಿಗೆಯ ಸಂದರ್ಭದಲ್ಲಿ ನಡೆದ ಗಲಭೆಯಲ್ಲಿ ಕೇರಳದ ನಿಷೇಧಿತ ಸಂಘಟನೆಯೊಂದರ ಪಾತ್ರವಿರುವುದರ ಬಗ್ಗೆ ಅನುಮಾನಗಳು ಮೂಡಿವೆ. ಪೆಟ್ರೋಲ್ ಬಾಂಬ್ ಎಸೆದು ಸಿಕ್ಕ ಸಿಕ್ಕ ಅಂಗಡಿಯ ಆಸ್ತಿಪಾಸ್ತಿಗಳಿಗೆ ಹಾನಿಯುಂಟುಮಾಡಿರುವುದು, ಹಿಂದೂಗಳ ಮೇಲೆ ಹಲ್ಲೆ ನಡೆಸಿರುವುದು ಇವೆಲ್ಲವೂ ಪೂರ್ವನಿಯೋಜಿತ ಕೃತ್ಯಗಳೆಂದೇ ಮೇಲ್ನೋಟಕ್ಕೆ ಹೇಳಬಹುದು.

ಗಣೇಶನ ಮೆರವಣಿಗೆಗೆ ಹತ್ತಾರು ಷರತ್ತು/ನಿಬಂಧನೆಗಳನ್ನು ವಿಧಿಸುವುದರ ಜತೆಗೆ ಬಾಂಡ್ ಪಡೆಯುವ ಸರಕಾರ/ಇಲಾಖೆಗಳು, ಶಾಂತಿಯುತ ಮೆರವಣಿಗೆಗೆ ಸೂಕ್ತ ಬಂದೋಬಸ್ತ್ ಮಾಡಬೇಕಲ್ಲವೇ? ಅದು ಅವುಗಳ ಹೊಣೆಗಾರಿಕೆಯಲ್ಲವೇ?

ಇಷ್ಟೆಲ್ಲ ಘಟನೆಗಳು ಪೂರ್ವತಯಾರಿಯೊಂದಿಗೆ ನಡೆದಿರಬೇಕಾದರೆ ಜಿಲ್ಲೆಯ ಗುಪ್ತಚರ ಇಲಾಖೆ ಗಾಢನಿದ್ರೆಯಲ್ಲಿತ್ತೇ?

ಮಂಗಳೂರಿನಲ್ಲಿ ಕೆಲ ವರ್ಷಗಳ ಹಿಂದೆ ಸಿಎಎ ಕಾಯ್ದೆಯ ವಿರುದ್ಧ ನಡೆದ ಪ್ರತಿಭಟನಾ ಸಭೆಯಲ್ಲಿ ಗಲಭೆ ಸೃಷ್ಟಿಸಿ, ಪೊಲೀಸ್ ಇಲಾಖೆಯ ವಿರುದ್ಧ ಬಲ ಪ್ರಯೋಗಿಸಲು ಕೆಲ ವರ್ಷಗಳ ಹಿಂದೆ ಕೇಂದ್ರ ಸರಕಾರ ನಿಷೇಧಿಸಿದ ಪಿಎಫ್‌ಐ ಸಂಘಟನೆ ಹೊಂಚುಹಾಕಿತ್ತು. ಪುಂಡರ ಗುಂಪು ಅಂದು ಕೈಗೆ ಸಿಕ್ಕ ವಸ್ತುಗಳನ್ನು ಬಳಸಿ ಬೀದಿಕಾಳಗಕ್ಕೆ ನಿಂತು, ಮಂಗಳೂರು ಬಂದರು ಬಳಿಯಿರುವ ಶಸ್ತ್ರಾಸ್ತ್ರ ಮಳಿಗೆಯ ಬೀಗ ಮುರಿದು, ಪೊಲೀಸ್ ಇಲಾಖೆಯ ಮೇಲೆ ಪ್ರಯೋಗಿಸಲು ಮುಂದಾಗಿತ್ತು. ಆದರೆ ಮಂಗಳೂರಿನ ಅಂದಿನ ಕಮಿಷನರ್‌ರವರ ಸಮಯಪ್ರಜ್ಞೆಯಿಂದಾಗಿ ಪರಿಸ್ಥಿತಿ ಹತೋಟಿಗೆ ಬಂದಿತ್ತು.

ಇದಾದ ಬಳಿಕ ಬೆಂಗಳೂರಿನ ಡಿ.ಜೆ.ಹಳ್ಳಿ ಮತ್ತು ಕೆ.ಜೆ.ಹಳ್ಳಿ ಗಲಭೆಯ ಹಿಂದೆ ಕೂಡ ಇದೇ ಪಿಎಫ್‌ಐ ಸಂಘಟನೆಯ ಕರಿನೆರಳು ಬಿದ್ದಿದೆ. ಅಂದು ಪೊಲೀಸ್ ಠಾಣೆಗೆ ಮತ್ತು ಸ್ಥಳೀಯ ಶಾಸಕರ ಮನೆಗೆ ಬೆಂಕಿ ಹಚ್ಚುವ ಮಟ್ಟಕ್ಕೆ ಗಲಭೆಯ ಸ್ವರೂಪ ತೀವ್ರಗೊಂಡು, ಅದೆಷ್ಟೋ ವಾಹನಗಳು, ಸಾರ್ವಜನಿಕ ಆಸ್ತಿಪಾಸ್ತಿಗಳು ಪುಂಡರ ಆಟಾಟೋಪಕ್ಕೆ, ಬೆಂಕಿಗೆ ಆಹುತಿಯಾಗಿದ್ದವು. ಮಾತ್ರವಲ್ಲದೆ. ಮೈಸೂರಿನ ಕ್ಯಾತಮಾರನಹಳ್ಳಿ, ಉದಯಗಿರಿಯಲ್ಲಿ ನಡೆದ ಪುಂಡಾಟಗಳು, ಶಿವಮೊಗ್ಗ ಮತ್ತು ಗಂಗೊಳ್ಳಿಯಲ್ಲಿನ ಗಲಭೆಗಳು ಇವೆಲ್ಲವೂ ಸಮಾಜದಲ್ಲಿ ಅಶಾಂತಿ, ಹಿಂಸೆ, ಭಯದ ವಾತಾವರಣ ಸೃಷ್ಟಿಸುವಂಥ ಕೃತ್ಯಗಳಾಗಿದ್ದು ಒಂದಕ್ಕೊಂದು ಸಾಮ್ಯತೆಯನ್ನು ಪಡೆದುಕೊಳ್ಳುತ್ತಿವೆ.

ಮಂಗಳೂರಿನಲ್ಲಿ ಐಸಿಸ್ ಉಗ್ರವಾದ ಬೆಂಬಲಿಸಿ ಪತ್ತೆಯಾದ ವಿವಾದಿತ ಗೋಡೆ ಬರಹ, ಕರಾವಳಿಯ ಪ್ರಮುಖ ದೇಗುಲಗಳನ್ನು ಸ್ಫೋಟಿಸಲು ಕುಕ್ಕರ್‌ನಲ್ಲಿ ಬಾಂಬ್ ಹೊತ್ತು ತಂದಿದ್ದು, ಆ ಸಂಚು ಕೈತಪ್ಪಿ ಬೇರೊಂದು ಸ್ಥಳದಲ್ಲಿ ಸ್ಫೋಟಗೊಂಡಿದ್ದು, ಕೃತ್ಯದಲ್ಲಿ ಭಾಗಿಯಾದ ಆರೋಪಿಗೆ ಉಗ್ರ ಸಂಘಟನೆಗಳೊಂದಿಗೆ ನಂಟು ಇದ್ದ ವಿಷಯ ತನಿಖೆಯ ವೇಳೆ ಬಯಲಾಗಿದ್ದು, ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟದ ಜತೆಗೆ ರಾಜ್ಯ ಬಿಜೆಪಿ ಕಾರ್ಯಾಲಯವನ್ನೂ ಸ್ಫೋಟಿಸುವ ಗುರಿ ಬಂಧಿತ ಉಗ್ರರಿಗೆ ಇದ್ದುದು ಇತ್ಯಾದಿ ಘಟನೆಗಳನ್ನು ತಾಳೆಹಾಕಿದಾಗ ದೇಶದ ಮೂಲೆಮೂಲೆಗಳಲ್ಲಿ ಇಂಥ ಉಗ್ರ ಸಂಘಟನೆಗಳು ಬೇರೂರಿರುವ ಸಂಗತಿ ಅರಿವಾಗುತ್ತದೆ. ದೇಶದ ವಿವಿಧೆಡೆ ನಡೆದ ಕೋಮುಗಲಭೆ ಹಾಗೂ ಅದರ ಸೃಷ್ಟಿಯ ಹಿಂದೆ 'ಪಿಎಫ್‌ಐ' ಮತ್ತು ಸಮಾಜಸೇವೆಯ ಹೆಸರಿನಲ್ಲಿ ಜನ್ಮತಳೆದ 'ಕೆಎಫ್‌ಡಿ' ಸಂಘಟನೆಗಳ ಪಾತ್ರವಿರುವುದು ತಿಳಿದುಬಂದಿದೆ. ದೇಶದಲ್ಲಿ ಮತೀಯ ಭಾವನೆಗಳನ್ನು ಕೆರಳಿಸಿ, ಗಲಭೆ ಸೃಷ್ಟಿಸಿ, ಅರಾಜಕತೆ ಉಂಟುಮಾಡುವುದು ಈ ಸಂಘಟನೆಗಳ ಅಜೆಂಡಾ ಆಗಿದ್ದುದು ಬಯಲಾಗಿದೆ.

ಹೀಗಾಗಿ, ನಮ್ಮ ಆಳುಗ ವ್ಯವಸ್ಥೆ ಎಷ್ಟು ಜಾಗ್ರತೆ ವಹಿಸಿದರೂ ಸಾಲದು. ಸಮಾಜದ ಶಾಂತಿ-ನೆಮ್ಮದಿಗಳಿಗೆ ಭಂಗ ತರುವವರನ್ನು ಅದು ಹೆಡೆಮುರಿ ಕಟ್ಟಲು ಇದು ಸಕಾಲ.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 270

ಸಮಾಚಾರ ಸಣ್ಣದಲ್ಲ

ಆತಿಶಿ ಜತೆ ಐವರ ಪ್ರಮಾಣವಚನ

ದೆಹಲಿ: ದೆಹಲಿ ಮುಖ್ಯಮಂತ್ರಿಯಾಗಿ ಆತಿಶಿ ಮರ್ಲೆನಾ ಶನಿವಾರ ಪ್ರಮಾಣವಚನ ಸ್ವೀಕರಿಸಲಿದ್ದು, ಜತೆಗೆ ಐವರು ಹಿರಿಯ ಶಾಸಕರೂ ಸಚಿವರಾಗಿ ಪ್ರತಿ ಜ್ಞಾವಿಧಿ ಸ್ವೀಕರಿಸಲಿದ್ದಾರೆ ಎಂದು ಆಮ್ ಆದ್ಮಿ ಪಾರ್ಟಿ(ಎಎಪಿ) ಗುರುವಾರ ತಿಳಿಸಿದೆ. ಆತಿಶಿ ನೇತೃತ್ವದ ನೂತನ ಸಂಪುಟದಲ್ಲಿ ಸಚಿವರಾಗಿ ಸೌರಬ್ ಭಾರದ್ವಾಜ್, ಕೈಲಾಶ್ ಗೆಹ್ಲೋಟ್, ಗೋಪಾಲ ರೈ, ಇಮ್ರಾನ್ ಹುಸೇನ್, ಮುಖೇಶ್ ಅಹ್ಲಾವತ್ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಸಂಪುಟಕ್ಕೆ ಮುಖೇಶ್ ಅಹ್ಲಾವತ್ ಹೊಸ ಸೇರ್ಪಡೆ. ಇನ್ನೊಂದು ಸ್ಥಾನ ಖಾಲಿ ಉಳಿಯಲಿದೆ.

ಮಹಿಳೆಗೆ ₹2100: ಬಿಜೆಪಿ ಪ್ರಣಾಳಿಕೆ

ಚಂಡೀಗಢ: ಹರಿಯಾಣ ವಿಧಾನಸಭಾ ಚುನಾವಣೆಗೆ ಬಿಜೆಪಿ 'ಸಂಕಲ್ಪ ಪತ್ರ'(ಪ್ರಣಾಳಿಕೆ)ವನ್ನು ಗುರುವಾರ ಬಿಡುಗಡೆ ಮಾಡಿದೆ. 'ಲಾಡೋ ಲಕ್ಷ್ಮಿ' ಯೋಜನೆ ಮೂಲಕ ಮಹಿಳೆಗೆ ಮಾಸಿಕ 2100 ರು. ಆರ್ಥಿಕ ನೆರವು, 24 ಬೆಳೆಗಳಿಗೆ ಎಂಎಸ್‌ಪಿ ನಿಗದಿ ಸೇರಿ ಹಲವು ಭರವಸೆಗಳನ್ನು ನೀಡಿದೆ. ರೋಹ್ಟಕ್ ಕಾರ್ಯಕ್ರಮದಲ್ಲಿ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಸಂಕಲ್ಪಪತ್ರ ಪ್ರಕಟಿಸಿದರು. ಪ್ರತಿ ಕುಟುಂಬಕ್ಕೆ ಚಿರಾಯು-ಆಯುಷ್ಮಾನ್ ಯೋಜನೆಯಡಿ 10 ಲಕ್ಷ ರು.ವರೆಗೆ ಉಚಿತ ಚಿಕಿತ್ಸೆ, 70 ವರ್ಷ ಮೇಲ್ಪಟ್ಟವರಿಗೆ 5 ಲಕ್ಷ ರು.ವರೆಗೆ ಉಚಿತ ಚಿಕಿತ್ಸೆ, 2 ಲಕ್ಷ ಯುವಕರಿಗೆ ಸರಕಾರಿ ನೌಕರಿ, ಪ್ರತಿ ಜಿಲ್ಲೆಯಲ್ಲಿ ಒಲಿಂಪಿಕ್ಸ್ ಕ್ರೀಡಾ ನರ್ಸರಿ, ಹರಿಯಾಣದ ಅಗ್ನಿವೀರರಿಗೆ ಗ್ಯಾರಂಟಿ ಸರಕಾರಿ ನೌಕರಿ, ದಕ್ಷಿಣ ಹರಿಯಾಣದಲ್ಲಿ ಅಂತರಾಷ್ಟ್ರೀಯ ಮಟ್ಟದ ಅರಾವಳಿ ಜಂಗಲ್ ಸಫಾರಿ ಪಾರ್ಕ್, ಹರ್‌ಘರ್ ಗೃಹಿಣಿ ಯೋಜನೆಯಡಿ 500 ರು.ಗೆ ಸಿಲಿಂಡರ್ ಸೇರಿ ಹಲವು ಯೋಜನೆಗಳನ್ನು ಬಿಜೆಪಿ ಘೋಷಿಸಿದೆ.

ಲೈಂಗಿಕ ದೌರ್ಜನ್ಯ: ಜಾನಿ ಮಾಸ್ಟರ್ ಸೆರೆ

ಹೈದರಾಬಾದ್: ಲೈಂಗಿಕ ದೌರ್ಜನ್ಯ ಆರೋಪದಡಿ ಖ್ಯಾತ ಚಲನಚಿತ್ರ ನೃತ್ಯ ಸಂಯೋಜಕ ಶೇಖ್ ಜಾನಿ ಬಾಶಾ ಅಲಿಯಾಸ್ ಜಾನಿ ಮಾಸ್ಟರ್‌ನನ್ನ ಸೈಬರಾಬಾದ್ ಪೊಲೀಸರು ಗುರುವಾರ ಗೋವಾದಲ್ಲಿ ಬಂಧಿಸಿದ್ದಾರೆ. ಪೊಲೀಸರಿಂದ ತಲೆಮರೆಸಿಕೊಂಡು ಓಡಾಡುತ್ತಿದ್ದ ಆರೋಪಿಯನ್ನು ಬಂಧಿಸಿ ಹೈದರಾಬಾದ್‌ಗೆ ಕರೆತರಲಾಗಿದೆ. ಜಾನಿ ಮಾಸ್ಟರ್‌ನ ಮಾಜಿ ಅಸಿಸ್ಟೆಂಟ್, 21 ವರ್ಷದ ಯುವತಿ ರಾಯದುರ್ಗಂ ಪೊಲೀಸ್ ಠಾಣೆಯಲ್ಲಿ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದರು. ಅಪ್ರಾಪ್ತೆ ಆಗಿದ್ದಾಗಿನಿಂದ ಆರಂಭಿಸಿ 5 ವರ್ಷ ಕಾಲ ಅತ್ಯಾಚಾರ ನಡೆಸಲಾಗಿದೆ ಎಂದು ಯುವತಿ ಆರೋಪಿಸಿದ್ದರು.

ಶ್ರೀನಗರ ಚುನಾವಣಾ ಪ್ರಚಾರದಲ್ಲಿ ಪ್ರಧಾನಿ ಭರವಸೆ | ಭಯೋತ್ಪಾದನೆ ಮುಕ್ತ ರಾಜ್ಯವಾಗಿ ಜಮ್ಮು-ಕಾಶ್ಮೀರ ಅಭಿವೃದ್ಧಿ

ಮತ್ತೆ ರಾಜ್ಯವಾಗಲಿದೆ ಜಮ್ಮು-ಕಾಶ್ಮೀರ: ಮೋದಿ

ಶ್ರೀನಗರ: ಜಮ್ಮು-ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಮರುಸ್ಥಾಪನೆ ಮಾಡುವ ಭರವಸೆಯನ್ನು ಬಿಜೆಪಿ ಖಂಡಿತಾ ಈಡೇರಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಶ್ರೀನಗರದ ಶೇರ್-ಎ-ಕಾಶ್ಮೀರ ಸ್ಟೇಡಿಯಂನಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಗುರುವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಮೋದಿ, ಜಮ್ಮು-ಕಾಶ್ಮೀರವನ್ನು ಭಯೋತ್ಪಾದನೆ ಮುಕ್ತ ರಾಜ್ಯವಾಗಿ ಅಭಿವೃದ್ಧಿಪಡಿಸಲಾಗುವುದು. ಭಯೋತ್ಪಾದನೆ ಮರಳಿ ಆರಂಭವಾಗಲೆಂದು ಕೆಲವರು ಸಂಚು ಹೂಡುತ್ತಿದ್ದು, ಅಂತಹವರನ್ನು ಮಟ್ಟಹಾಕಲಾಗುವುದು ಎಂದು ಕಾಶ್ಮೀರ ಜನತೆಗೆ ಭರವಸೆ ನೀಡಿದರು. ಜಮ್ಮು-ಕಾಶ್ಮೀರ ಜನತೆ ಪ್ರಜಾಪ್ರಭುತ್ವ ದಲ್ಲಿ ಈಗ ವಿಶ್ವಾಸವಿಟ್ಟಿದ್ದಾರೆ. ತಮ್ಮ ಮತ ಬದಲಾವಣೆ ತರಬಹುದು ಎಂದು ಭಾವಿಸುತ್ತಿದ್ದಾರೆ. ಜನರು ಸಬಲೀಕರಣದೆಡೆಗೆ ಮೊದಲ ಹೆಜ್ಜೆ ಇಟ್ಟಿದ್ದಾರೆ ಎಂದು ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು. ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ ರಾಜಕೀಯ ಪಕ್ಷಗಳು ಕುಟುಂಬ ರಾಜಕಾರಣವನ್ನೇ ಹಾಸಿಹೊದ್ದಿವೆ. ತಮ್ಮ ಕುಟುಂಬಗಳ ಲಾಭಕ್ಕಾಗಿ ಪ್ರಜಾಪ್ರಭುತ್ವ ಮತ್ತು ಕಾಶ್ಮೀರವನ್ನು ತುಳಿದು ಹಾಕಿವೆ ಎಂದು ಮೋದಿ ಕಿಡಿಕಾರಿದರು.

ಸ್ವಾರ್ಥದ ಫಲವಾಗಿ ಮೂರು ಕುಟುಂಬಗಳಷ್ಟೇ ಅಧಿಕಾರದಲ್ಲಿ ಇರುತ್ತವೆ ಎಂಬ ಕಾರಣಕ್ಕೇ ಕಾಶ್ಮೀರದ ಯುವಜನತೆ ಈ ಮೊದಲು ಪ್ರಜಾಪ್ರಭುತ್ವದ ಮೇಲಿನ ನಂಬಿಕೆಯನ್ನೇ ಕಳೆದುಕೊಂಡಿದ್ದರು. ಆದರೆ ಕಳೆದ ಐದು ವರ್ಷಗಳಲ್ಲಿ ಜಮ್ಮು-ಕಾಶ್ಮೀರದ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. ಜಮ್ಮು-ಕಾಶ್ಮೀರ ಯುವಕರು ಇನ್ನು ಅಸಹಾಯಕರಲ್ಲ. ಅವರು ಈಗ ತಮ್ಮದೇ ಸರಕಾರ ರಚಿಸಿಕೊಳ್ಳುತ್ತಿದ್ದಾರೆ ಎಂದು ಪ್ರಧಾನಿ ಮಾತಿನಲ್ಲೇ ಕಾಶ್ಮೀರ ಯುವಜನರ ಬೆನ್ನುತಟ್ಟಿದರು.

ಇಲ್ಲಿನ ಯುವಜನರ ಉದ್ಯೋಗಕ್ಕಾಗಿ ಬಿಜೆಪಿ ಬೃಹತ್ ಘೋಷಣೆಗಳನ್ನು ಮಾಡಿದೆ. ಅವರ ಕೌಶಲ ಅಭಿವೃದ್ಧಿಯಾಗಲಿ ಎಂದು ಆಶಿಸಿದರು.

ಶ್ರೀನಗರದಲ್ಲಿ ಗುರುವಾರ ಆಯೋಜಿತವಾಗಿದ್ದ ಬಿಜೆಪಿ ಚುನಾವಣಾ ಪ್ರಚಾರ ರ‍್ಯಾಲಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪಕ್ಷದ ಮುಖಂಡರು ಕಾಶ್ಮೀರಿ ಶಾಲು ಹೊದಿಸಿ ಸ್ವಾಗತಿಸಿದರು.

3 ಕುಟುಂಬಗಳ ಕಪಿಮುಷ್ಟಿ

1980ರ ದಶಕದಲ್ಲಿ ಈ ರಾಜಕೀಯ ಪಕ್ಷಗಳು ಮಾಡಿದ್ದೇನು? ಅದು ನೆನಪಿದೆಯೇ? ಜಮ್ಮು-ಕಾಶ್ಮೀರದ ರಾಜಕೀಯವನ್ನು ಸ್ವಂತ ಲಾಭಕ್ಕಾಗಿ ಬಳಸಿಕೊಂಡವು. ಗಾಂಧಿ, ಅಬ್ದುಲ್ಲಾ, ಮುಫ್ತಿ ವಂಶದವರು ತಮ್ಮ ಕುಟುಂಬದ್ದೇ ನಡೆಯುವಂತೆ ಸಂಚು ಹೂಡಿದರು. ಅವರ ಹೊರತು ಬೇರೆ ಯಾರೂ ರಾಜಕೀಯವಾಗಿ ಇಲ್ಲಿ ಬೆಳೆಯುವುದನ್ನು ಮೂರೂ ಪಕ್ಷಗಳ ಮುಖಂಡರು ಇಚ್ಛಿಸಲಿಲ್ಲ. ಹಾಗಾಗಿಯೇ ಪಂಚಾಯತ್, ಡಿಡಿಸಿ ಮತ್ತು ಬಿಡಿಸಿ ಚುನಾವಣೆಗಳು ನಡೆಯದಂತೆ ಮಾಡಿದರು ಎಂದು ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ಇಡೀ ಜಗತ್ತೇ ಗಮನಿಸುತ್ತಿದೆ

ಈಗ ಇಡೀ ವಿಶ್ವವೇ ಜಮ್ಮು-ಕಾಶ್ಮೀರದತ್ತ ಗಮನ ಹರಿಸಿದೆ. ಕಣಿವೆ ಪ್ರದೇಶದ ಜನತೆ ಚುನಾವಣೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗಿಯಾಗುವರೆ ಎಂಬ ಕುತೂಹಲದಿಂದ ನೋಡುತ್ತಿದೆ. ಜಮ್ಮು-ಕಾಶ್ಮೀರದ ಜನತೆ ಅತ್ಯಧಿಕ ಪ್ರಮಾಣದಲ್ಲಿ ಮತದಾನ ನಡೆಸುವ ಮೂಲಕ ಭಾರತದ ಪ್ರಜಾಪ್ರಭುತ್ವವನ್ನು ಎತ್ತಿ ತೋರಲಿದ್ದಾರೆ. ಜಗತ್ತಿನ ಜನರಿಗೆ ಪ್ರಜಾಪ್ರಭುತ್ವದ ಸೌಂದರ್ಯವನ್ನು ತೋರಿಸಿಕೊಡಲಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಕಿಶ್ತ್ವಾರ್ ಜಿಲ್ಲೆಯಲ್ಲಿ ಅತ್ಯಧಿಕ ಮತ

ಜಮ್ಮು-ಕಾಶ್ಮೀರದ ಮೊದಲ ಹಂತದಲ್ಲಿ 7 ಜಿಲ್ಲೆಗಳ 24 ಕ್ಷೇತ್ರಗಳಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಸದ್ಯದ ದತ್ತಾಂಶ ಪ್ರಕಾರ ಶೇ.61ರಷ್ಟು ಮತದಾನವಾಗಿದೆ. ಜಮ್ಮುವಿನ ಚೆನಾಬ್ ಕಣಿವೆ ಪ್ರದೇಶದ ಕಿಶ್ವಾರ್ ಜಿಲ್ಲೆಯಲ್ಲಿ ಅತ್ಯಧಿಕ ಪ್ರಮಾಣದಲ್ಲಿ(ಶೇ.80.14) ಮತದಾನವಾಗಿದೆ ಎಂದು ಚುನಾವಣಾ ಆಯೋಗ ಗುರುವಾರ ಅಂಕಿ ಅಂಶ ಪ್ರಕಟಿಸಿದೆ. ಏಳೂ ಜಿಲ್ಲೆಗಳಲ್ಲಿಯೂ ಜನತೆ ಮತಗಟ್ಟೆಗೆ ಹುರುಪಿನಿಂದ ಬಂದು ಗಂಟೆಗಟ್ಟಲೆ ಸಾಲಿನಲ್ಲಿ ನಿಂತು ಮತದಾನ ಮಾಡಿದರು. ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುತ್ತಿದ್ದ ಸಂವಿಧಾನದ 370ನೇ ವಿಧಿ 2019ರ ಆಗಸ್ಟ್‌ನಲ್ಲಿ ರದ್ದಾದ ನಂತರ ಮೊದಲ ಬಾರಿಗೆ ವಿಧಾನಸಭಾ ಚುನಾವಣೆ ನಡೆಯುತ್ತಿದೆ. ಇನ್ನೂ 2 ಹಂತಗಳಲ್ಲಿ ಮತದಾನವಾಗಲಿದೆ. ಈ ಮೊದಲು ವಿಧಾನಸಭಾ ಚುನಾವಣೆ 2014ರಲ್ಲಿ ನಡೆದಿತ್ತು.

ಜಿಲ್ಲೆ	ಮತದಾನ(ಶೇ.)
ಕಿಶ್ತ್ವಾರ್	80.14
ದೋಡಾ	71.34
ರಂಬಾನ್	70.55
ಕುಲ್ಗಾಂ	62.46
ಅನಂತನಾಗ್	57.84
ಶೋಪಿಯಾನ್	55.96
ಪುಲ್ವಾಮ	46.65

ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಹೇಳಿಕೆ

370ನೇ ವಿಧಿ: ಪಾಕ್, ಎನ್‌ಸಿ ಕಾಂಗ್ರೆಸ್ ಉದ್ದೇಶ ಒಂದೇ !

ದೆಹಲಿ: ಜಮ್ಮು-ಕಾಶ್ಮೀರ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲೇ ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ '370ನೇ ವಿಧಿ ರದ್ದಾದ ವಿಚಾರವಾಗಿ ಸ್ಫೋಟಕ ಹೇಳಿಕೆ' ನೀಡಿದ್ದಾರೆ. ಜಮ್ಮು-ಕಾಶ್ಮೀರದಲ್ಲಿ 370ನೇ ವಿಧಿ ಮತ್ತು 35 (ಎ) ಮರುಸ್ಥಾಪನೆ ವಿಚಾರದಲ್ಲಿ ಪಾಕಿಸ್ತಾನ, ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಒಂದೇ ಉದ್ದೇಶ ಹೊಂದಿವೆ ಎಂದು ಆಸೀಫ್ ಹೇಳಿದ್ದಾರೆ.

ಪಾಕ್ ರಕ್ಷಣಾ ಸಚಿವರ ಈ ಹೇಳಿಕೆಗೆ ಬಿಜೆಪಿ ನಾಯಕರು ಕೆಂಡಾಮಂಡಲವಾಗಿದ್ದು ಕಾಂಗ್ರೆಸ್ ವಿರುದ್ಧ ಹರಿಹಾಯ್ದಿದ್ದಾರೆ. ಚುನಾವಣೆ ಪ್ರಣಾಳಿಕೆಯಲ್ಲಿಯೂ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿ ಮರುಸ್ಥಾಪನೆ ಮಾಡುವುದಾಗಿ ನ್ಯಾಷನಲ್ ಕಾನ್ಫರೆನ್ಸ್ ಘೋಷಿಸಿತ್ತು.

ಕಾಂಗ್ರೆಸ್ ನಿಜ ಬಣ್ಣ ಮತ್ತೆ ಬಯಲು: ಪಾಕಿಸ್ತಾನ ಸಚಿವರ ಹೇಳಿಕೆಗೆ ಗೃಹ ಸಚಿವ ಅಮಿತ್ ಶಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್‌ನ ನಿಜ ಬಣ್ಣ ಮತ್ತೊಮ್ಮೆ ಬಯಲಾಗಿದೆ ಎಂದು ಟೀಕಿಸಿದ್ದಾರೆ. ಪಾಕಿಸ್ತಾನ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಸದಾ ದೇಶ ವಿರೋಧಿ ಶಕ್ತಿಗಳ ಜತೆಗೇ ಕೆಲಸ ಮಾಡುತ್ತಿದೆ. ಭಾರತದ ಸೈನಿಕರು ಪಾಕಿಸ್ತಾನಕ್ಕೆ ನುಗ್ಗಿ ಸರ್ಜಿಕಲ್ ಸ್ಟ್ರೈಕ್ ನಡೆಸಿದಾಗಲೂ ಅದನ್ನು ಮೆಚ್ಚಲು ಸಿದ್ಧವಿಲ್ಲದ ಕಾಂಗ್ರೆಸ್, ಕಾರ್ಯಾಚರಣೆಗೆ ಸಾಕ್ಷ್ಯ ನೀಡುವಂತೆ ಕೇಳಿತ್ತು. ಅಲ್ಲದೇ, ಭಾರತದ ಸೇನೆಯ ಬಗೆಗೇ ಆಕ್ಷೇಪಾರ್ಹ ಹೇಳಿಕೆ ನೀಡಿತ್ತು. ಪಾಕಿಸ್ತಾನ ಮತ್ತು ರಾಹುಲ್ ಗಾಂಧಿಯ ಕಾಂಗ್ರೆಸ್ ಪಕ್ಷದ ಮನಸ್ಥಿತಿ ಒಂದೇ ಇದೆ ಎಂದು ಕಿಡಿಕಾರಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಈಗಾಗಲೇ ರದ್ದುಪಡಿಸಿರುವ 370ನೇ ವಿಧಿ ಮತ್ತೆಂದಿಗೂ ಜಮ್ಮು-ಕಾಶ್ಮೀರ ಪ್ರವೇಶಿಸುವುದಿಲ್ಲ ಎಂದು ಶಾ ಗುಡುಗಿದ್ದಾರೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚೌಗ್ ಕೂಡ, ಕಾಂಗ್ರೆಸ್ ಮತ್ತು ನ್ಯಾಸನಲ್ ಕಾನ್ಫರೆನ್ಸ್ ಪಾಕಿಸ್ತಾನದ ಅಜೆಂಡಾವನ್ನು ಜಮ್ಮು-ಕಾಶ್ಮೀರ ಚುನಾವಣೆಯಲ್ಲಿ ಬಳಸುತ್ತಿವೆ ಎಂದು ಟೀಕಿಸಿದ್ದಾರೆ. ಕೇಂದ್ರಾಡಳಿತ ಪ್ರದೇಶದಲ್ಲಿ ಅಶಾಂತಿ ಸೃಷ್ಟಿಸಲು ಗಾಂಧಿ ಕುಟುಂಬ ಮತ್ತು ಅಬ್ದುಲ್ಲಾ ಕುಟುಂಬ ಪಾಕಿಸ್ತಾನದ ನಿರ್ದೇಶನದಂತೆ ನಡೆದುಕೊಳ್ಳುತ್ತಿವೆ ಎಂದು ಆರೋಪಿಸಿದ್ದಾರೆ. ಜಮ್ಮು - ಕಾಶ್ಮೀರದ ಜನತೆ ಇಂಥ ದೇಶ ವಿರೋಧಿಗಳ ಸುಳ್ಳಿನ ಬಲೆಗೆ ಬೀಳಬಾರದು ಎಂದೂ ಕಿವಿಮಾತು ಹೇಳಿದ್ದಾರೆ.

ಹಣ 'ನಮಾಮಿ ಗಂಗೆ'ಗೆ ಬಳಕೆ

ಸ್ಮರಣಿಕೆ ಇ-ಹರಾಜು ಭಾಗಿಯಾಗಿ: ಮೋದಿ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿವಿಧ ಕಾರ್ಯಕ್ರಮಗಳಲ್ಲಿ ನೀಡಲಾದ ಉಡುಗೊರೆ, ಸ್ಮರಣಿಕೆಗಳನ್ನು ಈ ವರ್ಷವೂ ಹರಾಜಿಗಿಡಲಾಗಿದೆ. ಆಸಕ್ತರು ಹರಾಜಿನಲ್ಲಿ ಭಾಗವಹಿಸಬೇಕು ಎಂದು ಖುದ್ದು ಮೋದಿ ಅವರೇ ಮನವಿ ಮಾಡಿದ್ದಾರೆ. ಈ ಬಗ್ಗೆ ಮೋದಿ 'ಎಕ್ಸ್' ಖಾತೆಯಲ್ಲಿ ಗುರುವಾರ ಮಾಹಿತಿ ಹಂಚಿಕೊಂಡಿದ್ದಾರೆ.

ಪ್ರಧಾನಿ ಜನ್ಮದಿನವಾದ ಸೆ.17ರಿಂದಲೇ ಹರಾಜು ಪ್ರಕ್ರಿಯೆ ಆರಂಭವಾಗಿದ್ದು ಗಾಂಧಿ ಜಯಂತಿಯ ದಿನವಾದ ಅ.2ರವರೆಗೂ ನಡೆಯಲಿದೆ. ಒಟ್ಟು 600 ಸ್ಮರಣಿಕೆಗಳನ್ನು ಹರಾಜಿಗಿಡಲಾಗಿದೆ. ಹರಾಜಿನಿಂದ ಸಂಗ್ರಹವಾದ ಹಣವನ್ನು 'ನಮಾಮಿ ಗಂಗೆ'(ಗಂಗಾ ನದಿ ಶುದ್ಧೀಕರಣ) ಯೋಜನೆಗೆ ಬಳಸಲಾಗುತ್ತದೆ ಎಂದು ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮಾಹಿತಿ ನೀಡಿದ್ದಾರೆ. ಮೊದಲ ಇ-ಹರಾಜು ಪ್ರಕ್ರಿಯೆ 2019ರ ಜನವರಿಯಲ್ಲಿ ನಡೆದಿತ್ತು. ಬಳಿಕ ಪ್ರತಿವರ್ಷವೂ ಹರಾಜು ನಡೆಯುತ್ತಾ ಬಂದಿದೆ. ಕಳೆದ 5 ವರ್ಷಗಳಲ್ಲಿ 50 ಕೋಟಿ ರು.ಗೂ ಅಧಿಕ ಹಣ ಸಂಗ್ರಹವಾಗಿದೆ. ಇ ಹರಾಜಿನಿಂದ ಜನತೆಗೆ ಇತಿಹಾಸವನ್ನು ಸಂರಕ್ಷಿಸುವ ಅವಕಾಶದ ಜತೆಗೇ ಒಂದು ಉದಾತ್ತ ಕಾರ್ಯದಲ್ಲಿ ಭಾಗಿಯಾಗುವ ಅವಕಾಶವೂ ಸಿಗುತ್ತದೆ. ಹರಾಜಿಗಿಟ್ಟಿರುವ ವಸ್ತುಗಳನ್ನು ಸದ್ಯ ದೆಹಲಿಯ ಜೈಪುರ ಹೌಸ್‌ನಲ್ಲಿ ಪ್ರದರ್ಶನಕ್ಕಿಡಲಾಗಿದೆ. ಸಾರ್ವಜನಿಕರು ಬಂದು ನೇರ ವೀಕ್ಷಿಸಬಹುದು ಎಂದು ಸಚಿವರು ಹೇಳಿದ್ದಾರೆ. ರಾಮಮಂದಿರದ ಪ್ರತಿಕೃತಿ, ಪ್ಯಾರಾ ಒಲಿಂಪಿಕ್ ವಿಜೇತರು ನೀಡಿದ ಸ್ಮರಣಿಕೆಗಳು, ವಿವಿಧ ರೀತಿಯ ಪೇಟಗಳು ಸೇರಿ ಹಲವು ವಸ್ತುಗಳನ್ನು ಹರಾಜಿಗಿಟ್ಟಿದ್ದು, ವಸ್ತುಗಳ ಮೂಲ ಬೆಲೆಯನ್ನು ಸರಕಾರದ ಸಮಿತಿಯೇ ನಿರ್ಧರಿಸಿದೆ. ಆಸಕ್ತರು ಬಿಡ್‌ನಲ್ಲಿ ಭಾಗವಹಿಸಲು https://pmmementos.gov.in ನಲ್ಲಿ ನೋಂದಾಯಿಸಿಕೊಳ್ಳಬೇಕಿದೆ. ಈ ಹರಾಜಿನಲ್ಲಿ ವಸ್ತುಗಳನ್ನು ಖರೀದಿಸಬಹುದಾಗಿದೆ.

'ಕೆಲಸದೊತ್ತಡ'ಕ್ಕೆ ಯುವತಿ ಬಲಿ: ಕೇಂದ್ರದಿಂದ ತನಿಖೆ

ದೆಹಲಿ: ಪುಣೆಯ ಎರ್ನೆಸ್ಟ್ ಆ್ಯಂಡ್ ಯಂಗ್ (ಇ-ವೈ) ಕಂಪನಿಯ ಯುವ ಉದ್ಯೋಗಿ, 26 ವರ್ಷದ ಆನಾ ಸೆಬಾಸ್ಟಿಯನ್, 'ವಿಪರೀತ ಎಂಬಷ್ಟಿದ್ದ ಕೆಲಸದೊತ್ತಡ'ದಿಂದಲೇ ಸಾವನ್ನಪ್ಪಿದ್ದು, ಪ್ರಕರಣದ ತನಿಖೆಗೆ ಕೇಂದ್ರ ಸರಕಾರ ನಿರ್ಧರಿಸಿದೆ. ಈ ಬಗ್ಗೆ ಕೇಂದ್ರದ ಕಾರ್ಮಿಕ ಸಚಿವಾಲಯದ ಸಹಾಯಕ ಸಚಿವೆ ಶೋಭಾ ಕರಂದ್ಲಾಜೆ ಗುರುವಾರ ಮಾಹಿತಿ ನೀಡಿದ್ದಾರೆ.

'ಆನಾ ಸೆಬಾಸ್ಟಿಯನ್ ಪೆರಾಯಿಲ್ ದುರಂತ ಸಾವಿನಿಂದ ಆಘಾತವಾಗಿದೆ. ಅಸುರಕ್ಷಿತ ಮತ್ತು ಶೋಷಣೆಯಿಂದ ಕೂಡಿದ ಕೆಲಸದ ವಾತಾವರಣದ ಆರೋಪ ಬಗ್ಗೆ ಕೂಲಂಕುಶ ತನಿಖೆ ನಡೆಸಲು ನಿರ್ಧರಿಸಲಾಗಿದೆ. ಅಧಿಕೃತವಾಗಿ ದೂರು ದಾಖಲಿಸಿಕೊಳ್ಳಲಾಗಿದೆ. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಲು ಬದ್ಧರಾಗಿದ್ದೇವೆ' ಎಂದು ಸಚಿವೆ ಕರಂದ್ಲಾಜೆ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ. ಮೃತ ಯುವತಿ ಆನಾ ಸೆಬಾಸ್ಟಿಯನ್‌ರ ತಾಯಿ 'ಇ-ವೈ' ಕಂಪನಿಯ ಅಧ್ಯಕ್ಷ ರಾಜೀವ್ ಮೆಮಾನಿ ಅವರಿಗೆ ದೀರ್ಘ ಪತ್ರ ಬರೆದು, 'ಮಗಳ ಸಾವಿಗೆ ಕಂಪನಿಯ ಕಚೇರಿಯಲ್ಲಿನ ತೀವ್ರ ಕೆಲಸದೊತ್ತಡವೇ ಕಾರಣ' ಎಂದು ಆರೋಪಿಸಿದ್ದರು. ಎದೆ ನೋವಿನಿಂದ ಬಳಲುತ್ತಿದ್ದ ಆನಾಳನ್ನು ವೈದ್ಯರು ಪರೀಕ್ಷಿಸಿದಾಗ ಆಕೆ ಸಮರ್ಪಕ ಪ್ರಮಾಣದ ನಿದ್ರೆ ಇಲ್ಲದೇ ಒದ್ದಾಡುತ್ತಿದ್ದಾಳೆ. ಸಮಯಕ್ಕೆ ಸರಿಯಾಗಿ ಆಹಾರ ಸೇವಿಸದೇ ಬಹಳ ತಡ ಮಾಡುತ್ತಾಳೆ ಎಂದು ಮಾಹಿತಿ ನೀಡಿದ್ದರು. ವಾರದ ರಜಾ ದಿನದಲ್ಲೂ ಮನೆಯಿಂದಲೇ ಕೆಲಸ ಮಾಡುತ್ತಿದ್ದಳು. ಅಷ್ಟರ ಮಟ್ಟಿಗೆ ಸಂಸ್ಥೆ ಆಕೆಯನ್ನು ಒತ್ತಡಕ್ಕೆ ಒಳಪಡಿಸಿ ದುಡಿಸಿಕೊಳ್ಳುತ್ತಿತ್ತು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

ರಾಜೀವ್ ಚಂದ್ರಶೇಖರ್

ಅನಾ ಸೆಬಾಸ್ಟಿಯನ್ ಪೆರಾಯಿಲ್ ತಾಯಿ ಮಾಡಿದ ಆರೋಪಕ್ಕೆ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಪ್ರತಿಕ್ರಿಯಿಸಿದ್ದಾರೆ. ಈ ರೀತಿಯ ಘಟನೆಯಿಂದ ನೋವುಂಟಾಗಿದೆ. ಹಲವು ಹಂತದಲ್ಲಿ ಆಘಾತಕಾರಿಯಾಗಿದೆ ಎಂದ ರಾಜೀವ್ ಚಂದ್ರಶೇಖರ್ ಭಾರತ ಸರಕಾರ, ಕೇಂದ್ರ ಸಚಿವ ಮನ್ಸುಖ್ ಮಾಂಡವಿಯಾ , ಶೋಭಾ ಕರಂದ್ಲಾಜೆ ಈ ರೀತಿಯ ಶೋಷಣೆ ನೀಡುವ ಕೆಲಸದ ವಾತಾವರಣದ ಬಗ್ಗೆ ತನಿಖೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-220/2022-23/1390/2024-25 ದಿನಾಂಕ: 18.09.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಅಮುದಾ W/o. ಲೇಟ್ ಎನ್ ವೆಂಕಟೇಶ್ ಮತ್ತು ಇತರರು, ನಂ. 301, ಸಾಯಿ ಸುರಕ್ಷಾ ಅಪಾರ್ಟ್‌ಮೆಂಟ್, ಕಾನ್ ಕಾರ್ಡ್ ಗಾರ್ಡನ್ ಸಿಟಿ ಬಡಾವಣೆ ರಸ್ತೆ, ಆದಿತ್ಯಾ ಬೇಕರಿ ಹತ್ತಿರ, ಉತ್ತರಹಳ್ಳಿ-ಕೆಂಗೇರಿ ರಸ್ತೆ, ಬೆಂಗಳೂರು ದಕ್ಷಿಣ, ಬೆಂಗಳೂರು-560 060	ಯಲಹಂಕ	ಯಲಹಂಕ	ಶ್ರೀನಿವಾಸ ಪುರ	14/1	2ಎ-00ಗುಂ	ವ್ಯವಸಾಯ	ವಸತಿ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಹಸುವಿನ ತುಪ್ಪದ ಬದಲು ಕೊಬ್ಬು ಬಳಕೆ | ನಾಯ್ಡು ಗಂಭೀರ ಆರೋಪ

ತಿರುಪತಿ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬು!

ಅಮರಾವತಿ: ತಿರುಪತಿ ತಿಮ್ಮಪ್ಪನ ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಬಳಸಲಾಗುತ್ತಿತ್ತು. ಇದರಿಂದ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ. ಹಿಂದಿನ ವೈಎಸ್ ಆರ್ ಕಾಂಗ್ರೆಸ್ ಸರಕಾರದ ಅವಧಿಯಲ್ಲೇ ಈ ಬಾನಗಡಿ ನಡೆದಿದೆ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ, ಟಿಡಿಪಿ ಮುಖಂಡ ಚಂದ್ರಬಾಬು ನಾಯ್ಡು ಗಂಭೀರ ಆರೋಪ ಮಾಡಿದ್ದಾರೆ.



- ಆಂಧ್ರ ಸಿಎಂ ನಾಯ್ಡು ಗಂಭೀರ ಆರೋಪ
- ಸಿಬಿಐ ತನಿಖೆಗೆ ವೈ.ಎಸ್.ಶ್ರಮಿಳಾ ಆಗ್ರಹ

ಈ ವಿಚಾರವೀಗ ದೊಡ್ಡ ಮಟ್ಟದ ಚರ್ಚೆ-ರಾಜಕೀಯ ಜಟಾಪಟಿಗೆ ಕಾರಣವಾಗಿದೆ. ಆರೋಪದಲ್ಲಿ ರಾಜಕೀಯ ಇಲ್ಲ ಎನ್ನುವುದಾದರೆ ಸಿಬಿಐ ತನಿಖೆಗೆ ಆದೇಶಿಸಿ ಎಂದು ಕಾಂಗ್ರೆಸ್ ನಾಯಕಿ ವೈ.ಎಸ್.ಶರ್ಮಿಳಾ ಆಗ್ರಹಿಸಿದ್ದಾರೆ. ಅಮರಾವತಿಯಲ್ಲಿ ನಡೆದ ಎನ್‌ಡಿಎ ಶಾಸಕಾಂಗ ಸಭೆಯಲ್ಲಿ ಮಾತನಾಡಿದ ಚಂದ್ರಬಾಬು ನಾಯ್ಡು, ವೈ.ಎಸ್. ಜಗನ್ ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸರಕಾರವಿದ್ದಾಗಲೇ ತಿರುಪತಿ ಲಡ್ಡು ಪ್ರಸಾದ ತಯಾರಿಸಲು ಹಸುವಿನ ತುಪ್ಪದ ಬದಲು ಪ್ರಾಣಿಗಳ ಕೊಬ್ಬಿನಿಂದ ತಯಾರಿಸಿದ ತೈಲ ಬಳಸಲಾಗುತ್ತಿತ್ತು. ಕಳಪೆ ಗುಣಮಟ್ಟದ ವಸ್ತುಗಳಿಂದ ಲಡ್ಡು ಪ್ರಸಾದ ತಯಾರಿಸಲಾಗುತ್ತಿತ್ತು ಎಂದು ಆರೋಪಿಸಿದ್ದಾರೆ. ಈಗ ಹಸುವಿನ ಶುದ್ಧ ತುಪ್ಪದಲ್ಲೇ ಲಡ್ಡು ಪ್ರಸಾದ ತಯಾರಿಸಲಾಗುತ್ತಿದೆ, ದೇವಾಲಯವನ್ನು ಸಮಗ್ರವಾಗಿ ಶುದ್ಧೀಕರಿಸಲಾಗಿದೆ, ಪ್ರಸಾದದ ಗುಣಮಟ್ಟದಲ್ಲೂ ಸುಧಾರಣೆ ತರಲಾಗಿದೆ ಎಂದು ನಾಯ್ಡು ಹೇಳಿದ್ದಾರೆ.

ಈ ವಿಚಾರವಾಗಿ ಆಂಧ್ರಪ್ರದೇಶ ಮಾಹಿತಿ ತಂತ್ರಜ್ಞಾನ ಸಚಿವ ನಾರಾ ಲೋಕೇಶ್, ಮಾಜಿ ಸಿಎಂ ವೈ.ಎಸ್. ಜಗನ್ ಮೋಹನ್ ರೆಡ್ಡಿ ಗುರಿಯಾಗಿಸಿ 'ಎಕ್ಸ್'ನಲ್ಲಿ ವಾಗ್ದಾಳಿ ನಡೆಸಿದ್ದಾರೆ. 'ವೈಎಸ್‌ಆರ್‌ಸಿಪಿ ಸರಕಾರ ಭಕ್ತರ ಧಾರ್ಮಿಕ ಭಾವನೆಗೆ ಸ್ವಲ್ಪವೂ ಗೌರವ ಕೊಡಲಿಲ್ಲ. ದೇವರ ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಬಳಸಿದ್ದ ವಿಚಾರ ಆಘಾತಕಾರಿ. ಜಗನ್ ಮತ್ತು ವೈಎಸ್ ಆರ್‌ಸಿಪಿ ಪಕ್ಷಕ್ಕೆ ನಾಚಿಕೆಯಾಗಬೇಕು ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಬಿಐ ತನಿಖೆ ಆಗಲಿ

'ಸಿಎಂ ಆರೋಪದಲ್ಲಿ ರಾಜಕೀಯ ಇಲ್ಲದಿದ್ದರೆ ಉನ್ನತ ಮಟ್ಟದ ಸಮಿತಿ ರಚಿಸಿ ತನಿಖೆ ನಡೆಸಬೇಕು ಅಥವಾ ಪ್ರಕರಣ ಸಿಬಿಐಗೆ ನೀಡಿ. ಸಿಎಂ ಆರೋಪದಿಂದ ಕೋಟ್ಯಾಂತರ ಭಕ್ತರ ನಂಬಿಕೆ ಕುಸಿದು ಬಿದ್ದಿದೆ' ಎಂದು ಆಂಧ್ರ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಕಿಡಿಕಾರಿದ್ದಾರೆ.

ಸಂಕಷ್ಟ ಕಾಲದಲ್ಲೇ ರೈತರಿಗೆ ಪೆಟ್ಟು

ಭೂತಾನ್ ಅಡಿಕೆ ಆಮದು ಕೇಂದ್ರದ ಹಸಿರು ನಿಶಾನೆ

ದೆಹಲಿ: ಭೂತಾನ್‌ನಿಂದ 'ಕನಿಷ್ಠ ಆಮದು ದರ' ಎಂಬ ಷರತ್ತು ಇಲ್ಲದೇ ಹಸಿ ಅಡಿಕೆ ಆಮದು ಮಾಡಿಕೊಳ್ಳುವುದಕ್ಕೆ ಕೇಂದ್ರ ಸರಕಾರ ಒಪ್ಪಿಗೆ ಸೂಚಿಸಿದ್ದು, ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ಅಡಿಕೆ ಬೆಳೆಗಾರರಿಗೆ ಇದು ದೊಡ್ಡ ಪೆಟ್ಟು ನೀಡಲಿದೆ.

17 ಸಾವಿರ ಟನ್ ಅಡಿಕೆಯನ್ನು ಒಡಿಶಾದ ಹತಿಸರ್ ಮತ್ತು ಅಸ್ಸಾಂನ ದರ್ರಂಗ್ ಕಸ್ಟಂಸ್ ಕೇಂದ್ರದ ಮೂಲಕ ಅಮದು ಮಾಡಿಕೊಳ್ಳಲು ಕೇಂದ್ರ ಸರಕಾರ ನಿರ್ಧರಿಸಿದೆ. ಸರಕಾರದ ಈ ನಡೆ ಅದಾಗಲೇ ಫಸಲು ಇಳುವರಿ ಕುಸಿತದಿಂದ ಸಂಕಷ್ಟದಲ್ಲಿರುವ ದೇಶದ ಅಡಿಕೆ ಬೆಳೆಗಾರರಿಗೆ ದೊಡ್ಡ ಪೆಟ್ಟು ನೀಡಲಿದೆ. 2022ರ ಸೆಪ್ಟೆಂಬರ್‌ನಲ್ಲಿ ಭಾರತ ಸರಕಾರ 'ಕನಿಷ್ಠ ಆಮದು ದರ'ದ ಷರತ್ತು ಇಲ್ಲದೇ ವಾರ್ಷಿಕ 17 ಸಾವಿರ ಟನ್ ಹಸಿ ಅಡಿಕೆ ಆಮದು ಮಾಡಿಕೊಳ್ಳಲು ಅನುಮತಿ ನೀಡಿತ್ತು. ಅದರಂತೆ ಈ ವರ್ಷವೂ ಅಡಿಕೆ ಆಮದಿಗೆ ಅನುಮತಿ ನೀಡಲಾಗಿದೆ ಎಂದು ಡಿಜಿಎಫ್‌ಟಿ ಮಾಹಿತಿ ನೀಡಿದೆ. ಈ ಮೊದಲು 2017ರಲ್ಲಿ ದೇಶದ ರೈತರ ಹಿತ ಕಾಪಾಡಲು ಪ್ರತಿಕೆಜಿ ಅಡಿಕೆಗೆ 251 ರು. ಕನಿಷ್ಠ ಆಮದು ದರ ನಿಗದಿಪಡಿಸಲಾಗಿತ್ತು. ಬಳಿಕ 2018ರಲ್ಲಿ 251 ರು.ಗೂ ಅಧಿಕ ಬೆಲೆಗೆ ಯಾವುದೇ ಬಗೆಯ ಅಡಿಕೆ ಆಮದಿಗೆ ಅನು ಮತಿ ನೀಡ ಲಾಗಿತ್ತು. ಈ ಬೆಲೆ ನಿಯಮ ಕಡ್ಡಾಯ ಅನ್ವಯ ಮಾಡಲಾಗಿತ್ತು. ಆದರೆ ಈಗ ಎಲೆಚುಕ್ಕೆ ರೋಗ, ಕೊಳೆ ರೋಗ, ಅತಿಯಾದ ಮಳೆಯಿಂದ ಈ ಬಾರಿ ಅಡಿಕೆ ಉತ್ಪಾದನೆ ಕುಂಠಿತಗೊಂಡ ಸಂದರ್ಭದಲ್ಲೇ ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಳ್ಳಲು ನಿರ್ಧರಿಸಿರುವುದು ಅಡಿಕೆ ಬೆಳೆಗಾರರ ನಿದ್ದೆಗೆಡಿಸಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2544963

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office,
CESC, Mysuru-570017
Web Site: www.cescmysore.org.
E-mail ID:gmproc@cescmysore.org

Company Identity Number[CIN]:- U40109KA2004SGC035177

ಸಂಖ್ಯೆ:ಪ್ರವ್ಯ(ಖ)/ಕಾನಿಇಂ(ಕಾ)/ಸಕಾನಿಇಂ(ಕಾ)/ಸಇಂ(ಕಾ)/ಮೈ.ವ/2024-25/12954 ದಿ: 12.09.2024

"ಅಲ್ಪಾವಧಿ ಟೆಂಡರ್ ಪ್ರಕಟಣೆ"

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಧಾನ ವ್ಯವಸ್ಥಾಪಕರು (ಖರೀದಿ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರು ಚಾವಿಸನಿನಿಯ ಪರವಾಗಿ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.

ಕ್ರ. ಸಂ	ವಿಚಾರಣಾ ಸಂಖ್ಯೆ	ಕಾಮಗಾರಿ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1.	CESC/GM(Proc)/ 2024-25/ CVL-35, D:16.08.2024.	ಮೈಸೂರಿನ ಹಿನಕಲ್‌ನಲ್ಲಿ ಕಾರ್ಪೊರೇಟ್ ಕಚೇರಿಯಲ್ಲಿ ನಾಲ್ಕನೇ ಮಹಡಿಯ ನಿರ್ಮಾಣ ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳು (Facelift)	300.00

ಹೆಚ್ಚಿನ ಮಾಹಿತಿಗಾಗಿ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ http//kppp.karnataka.gov.in ಗೆ ಲಾಗ್‌ಇನ್ ಆಗಿ ದಿ: 20.09.2024ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9448994927/ 98663599999 ಅಥವಾ ಇ-ಮೇಲ್ ವಿಳಾಸ aeecivilcesc@gmail.com. ಉಳಿದಂತೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದು.

ಸಹಿ/- ಪ್ರಧಾನ ವ್ಯವಸ್ಥಾಪಕರು(ಖರೀದಿ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು

DIPR/DDMYS-571/KSMCA-388/2024-25

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.

ಸಂ:ಪಿಬಿ/ಟೆಂಡರ್ ಪ್ರಕಟಣೆ/2024-25/1830 ದಿ:-18/09/2024.

ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ. ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	PWD/2024-25/BR/WORK_INDENT12160/CALL-2	3.00
	GENERAL WORKS	
2	PWD/2024-25/BR/WORK_INDENT12233/CALL-2	5.00
3	PWD/2024-25/BR/WORK_INDENT13482/CALL-2	6.70
4	PWD/2024-25/RD/WORK_INDENT12013	200.00
5	PWD/2024-25/BG/WORK_INDENT15362	10.00
6	PWD/2024-25/BD/WORK_INDENT11950	300.00
7	PWD/2024-25/OW/WORK_INDENT15349	5.00
8	PWD/2024-25/BD/WORK_INDENT14735	200.00

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ Kppp Portal ನಲ್ಲಿ ಇರುವಂತೆ. 2.ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ 27.09.2024 (16.00 ಗಂಟೆಗೆ). 3.ಕೆ.ಪಿ.ಪಿ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ 30.09.2024 (16.30 ಗಂಟೆಗೆ). 4.ಅರ್ಥಿಕ ಬಿಡ್ ತೆರೆಯುವ ದಿನಾಂಕ: Kppp Portal ನಲ್ಲಿ ಇರುವಂತೆ

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು kppp Portal ನಲ್ಲಿ ನೊಡಿಕೊಳ್ಳಬಹುದು

ವಾ.ಸಾ.ಸಂ.ಇ/ವಿಜಯನಗರ/2024-25/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/269

ಸಹಿ/-ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ದೋವಲ್‌ಗೆ ಅಮೆರಿಕ ಕೋರ್ಟ್ ಸಮನ್ಸ್: ಭಾರತ ಆಕ್ರೋಶ

ದೆಹಲಿ: ಖಲಿಸ್ತಾನಿ ಉಗ್ರ, ಎಸ್‌ಎಫ್‌ಜೆ ಸಂಘಟನೆ ಮುಖಂಡ ಗುರುಪತ್‌ವಂತ್ ಸಿಂಗ್ ಪನ್ನೂನ್ ಹತ್ಯೆ ಸಂಚು ಪ್ರಕರಣದಲ್ಲಿ ಭಾರತದ ಉನ್ನತ ಅಧಿಕಾರಿಗೆ ಅಮೆರಿಕ ನ್ಯಾಯಾಲಯ ಸಮನ್ಸ್ ಜಾರಿ ಮಾಡಿದೆ. ಈ ಬೆಳವಣಿಗೆಗೆ ಭಾರತ ಖಾರವಾಗಿ ಪ್ರತಿಕ್ರಿಯಿಸಿದೆ. ಇದೆಲ್ಲಾ ಅನಗತ್ಯ ಆರೋಪ, ಆಧಾರರಹಿತ ಪ್ರಕರಣ ಎಂದು ಪ್ರತಿಕ್ರಿಯಿಸಿದೆ.



ಭಾರತೀಯ ಅಧಿಕಾರಿಗಳಿಂದ ಅಮೆರಿಕ ನೆಲದಲ್ಲೇ ತನ್ನ ಹತ್ಯೆಗೆ ಸಂಚು ನಡೆದಿದೆ ಎಂದು ನಿಷೇಧಿತ ಖಲಿಸ್ತಾನಿ ಪರ ಉಗ್ರ ಸಂಘಟನೆ 'ಸಿಖ್ ಫಾರ್ ಜಸ್ಟೀಸ್'(ಎಸ್‌ಎಫ್‌ಜೆ) ಮುಖಂಡ ಪನ್ನೂನ್ ಆರೋಪಿಸಿ ಅಮೆರಿಕದ ನ್ಯಾಯಾಲಯವೊಂದರಲ್ಲಿ ಪ್ರಕರಣ ದಾಖಲಿಸಿದ್ದ. ಈ ಸಂಬಂಧ ನ್ಯೂಯಾರ್ಕ್ ಸ್ಥಳೀಯ ನ್ಯಾಯಾಲಯ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಗುಪ್ತಚರ ಸಂಘಟನೆ 'ರಾ' ಮಾಜಿ ಮುಖ್ಯಸ್ಥ ಸಮಂತ್ ಗೋಯಲ್ ಮತ್ತಿತರರಿಗೆ ಸಮನ್ಸ್ ಜಾರಿ ಮಾಡಿದೆ. ಈ ಬಗ್ಗೆ ಗುರುವಾರ ಪ್ರತಿಕ್ರಿಯಿಸಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಪನ್ನೂನ್ ಆರೋಪಗಳೆಲ್ಲವೂ ಆಧಾರ ರಹಿತ ಮತ್ತು ಅನಗತ್ಯವಾದವು. ಆರೋಪ ಮಾಡಿರುವ ವ್ಯಕ್ತಿ ಪ್ರತಿನಿಧಿಸುತ್ತಿರುವ ಸಂಘಟನೆ 'ಎಸ್‌ಎಫ್‌ಜೆ'ಯನ್ನು ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾದ ಕಾರಣಕ್ಕೆ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆಯಡಿ ಭಾರತ ಈ ಮೊದಲೇ ನಿಷೇಧಿಸಿದೆ. ಪ್ರಕರಣ ದಾಖಲಿಸಿಕೊಳ್ಳುವ ಮುನ್ನ ಅದರ ಹಿಂದಿನ ವ್ಯಕ್ತಿಯ ಬಗೆಗೂ ಗಮನ ಹರಿಸಬೇಕಿದೆ ಎಂದು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ವಾಲ್ ಪೇಟಿಂಗ್ ಸ್ಪರ್ಧೆಗೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಲ್ಲಿ ವಾಲ್ ಪೇಂಟಿಂಗ್ ಸ್ಪರ್ಧೆಯನ್ನು ಸೆ. 29ರಂದು ಆಯೋಜಿಸಲಾಗಿದೆ. ಸ್ವಚ್ಛತೆಯೇ ಸೇವೆ ಅಭಿಯಾನದ ಅಂಗವಾಗಿ ಜನರಲ್ಲಿ ಜಾಗೃತಿ ಮೂಡಿಸಲು ಕಾಲೇಜು ವಿದ್ಯಾರ್ಥಿಗಳಿಗೆ ವಾಲ್ ಪೇಟಿಂಗ್ ಸ್ಪರ್ಧೆಯನ್ನು ನೈಋತ್ಯ ರೈಲ್ವೆಯು ಆಯೋಜಿಸಿದೆ. ವಿದ್ಯಾರ್ಥಿಗಳು ತಮ್ಮ ಪ್ರತಿಭೆ ತೋರಿಸಲು ಹಾಗೂ ಜಾಗೃತಿ ಕಾರ್ಯಕ್ರಮಕ್ಕೆ ತಮ್ಮ ಕೊಡುಗೆಯನ್ನು ನೀಡಲು ಈ ಸ್ಪರ್ಧೆ ಒಂದು ಅವಕಾಶವಾಗಿದೆ. ಆಸಕ್ತರು ಸೆ.24 ರೊಳಗೆ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 9164871716 ಅಥವಾ denhmsbc2024@gmail.com ಸಂಪರ್ಕಿಸಿ.

ನಾಳೆ ನೀರಿನ ವ್ಯತ್ಯಯ

ಬೆಂಗಳೂರು: ಕಾವೇರಿ ನೀರು ಸರಬರಾಜು ಐದನೇ ಹಂತದ ಚಾಲನೆಯ ಪೂರ್ವಭಾವಿ ಕಾಮಗಾರಿಯ ಹಿನ್ನೆಲೆ ಸೆ.21ರಂದು ಮಧ್ಯಾಹ್ನ 1 ರಿಂದ ರಾತ್ರಿ 10 ಗಂಟೆಯವರೆಗೆ ನಗರದ ಕೆಲ ಭಾಗಗಳಲ್ಲಿ ನೀರಿನ ವ್ಯತ್ಯಯವಾಗಲಿದೆ ಎಂದು ಮಂಡಳಿ ತಿಳಿಸಿದೆ. ಕಾವೇರಿ 5ನೇ ಹಂತದ 700ಮಿ.ಮೀ ಎಂಎಸ್ ಕೊಳವೆ ಮಾರ್ಗವನ್ನು ನಗರದ ಹೆಗ್ಗನಹಳ್ಳಿ ಜಿಎಲ್‌ಆರ್ ಆವರಣದಲ್ಲಿರುವ ಫೇಸ್ 2 ಇನ್ಲೆಟ್ 1000 ಮಿ.ಮೀ ಎಂಎಸ್ ಕೊಳವೆ ಮಾರ್ಗಕ್ಕೆ ಜೋಡಣೆ ಮಾಡಬೇಕಾಗಿದೆ. ಹೀಗಾಗಿ ನಗರದ ನಾರ್ತ್ ವೆಸ್ಟ್ ವಿಭಾಗ -1ಹಾಗೂ ವಿಭಾಗ - 2ರಲ್ಲಿ ವೆಸ್ಟ್-1ರಲ್ಲಿ, ಆರ್‌ಆರ್ ನಗರ, ಎನ್ ಡಬ್ಲ್ಯೂ ವಿಭಾಗಗಳಲ್ಲಿ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ನೀರಿನ ವ್ಯತ್ಯಯವಾಗಲಿದೆ.

ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು: ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳಿಗೆ ಸೇವಾ ಸಿಂಧೂ ಪೋರ್ಟಲ್‌ನಲ್ಲಿ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಸೆಪ್ಟೆಂಬರ್ 30 ರವರೆಗೆ ವಿಸ್ತರಿಸಲಾಗಿದೆ. ಐದು ಯೋಜನೆಗಳಾದ ಉದ್ಯೋಗಿನಿ ಯೋಜನೆ, ಚೇತನ ಯೋಜನೆ, ಲಿಂಗತ್ವ ಅಲ್ಪ ಸಂಖ್ಯಾತರ ಪುನರ್ವಸತಿ ಯೋಜನೆ, ಧನಶ್ರೀ ಯೋಜನೆ ಹಾಗೂ ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆಗೆ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30ರವರೆಗೂ ವಿಸ್ತರಿಸಲಾಗಿದೆ.

ಎಸ್‌ಬಿಐಗೆ ನೂತನ ಮುಖ್ಯ ಪ್ರಧಾನ ವ್ಯವಸ್ಥಾಪಕಿ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್‌ನ ಬೆಂಗಳೂರು ವೃತ್ತದ ಹೊಸ ಮುಖ್ಯ ಪ್ರಧಾನ

ವ್ಯವಸ್ಥಾಪಕರಾಗಿ ಜೂಹಿ ಸ್ಮಿತಾ ಸಿನ್ಹಾ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. 1995 ನೇ ತಂಡದ ಪ್ರೊಬೆಷನರಿ ಅಧಿಕಾರಿಯಾದ ಜೂಹಿ ಸ್ಮಿತಾ ಸಿನ್ಹಾ ಅವರು ಬ್ಯಾಂಕಿಂಗ್ ಉದ್ಯಮದಲ್ಲಿ ಒಟ್ಟಾರೆ 29 ವರ್ಷಗಳಿಗಿಂತ ಹೆಚ್ಚಿನ ಅನುಭವ ಹೊಂದಿದ್ದಾರೆ. ರಿಟೇಲ್ ಬ್ಯಾಂಕಿಂಗ್, ಕಾರ್ಪೊರೇಟ್ ಬ್ಯಾಂಕಿಂಗ್ ಹಾಗೂ ಮಾನವ ಸಂಪನ್ಮೂಲಗಳಂತಹ ಕ್ಷೇತ್ರಗಳಲ್ಲಿ ವಿವಿಧ ಬ್ಯಾಂಕಿಂಗ್ ಅನುಭವ ಹೊಂದಿದ್ದು, ಈ ಹಿಂದೆ ಎಸ್‌ಬಿಐನ ಕಾರ್ಪೊರೇಟ್ ಕೇಂದ್ರ, ಮುಂಬೈನಲ್ಲಿ ಮುಖ್ಯ ಪ್ರಧಾನ ವ್ಯವಸ್ಥಾಪಕರು (ಸಾಂಸ್ಥಿಕ ಯೋಜನೆ ಮತ್ತು ವ್ಯವಸ್ಥೆ ಹಾಗೂ ಕಾರ್ಯವಿಧಾನಗಳು) ಆಗಿ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ಸುವರ್ಣ ಸಂಭ್ರಮ: 50 ಸಮಾರೋಪ | ಕನ್ನಡ ಜನೋತ್ಸವದ ರೀತಿ ಕನ್ನಡ ರಾಜ್ಯೋತ್ಸವ ಆಚರಿಸಲು ಸಿದ್ದರಾಮಯ್ಯ ಸೂಚನೆ | ಈ ಬಾರಿ 69 ಮಂದಿ ರಾಜ್ಯೋತ್ಸವ ಪ್ರಶಸ್ತಿಗೆ ತೀರ್ಮಾನ

ಸಂಭ್ರಮದ ರಾಜ್ಯೋತ್ಸವಕ್ಕೆ ಸಿದ್ಧತೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ಸುವರ್ಣ ಸಂಭ್ರಮದ ಸಮಾರೋಪವನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಿರುವ ರಾಜ್ಯ ಸರಕಾರ, ಇಡೀ ಕಾರ್ಯಕ್ರಮವನ್ನು ಕನ್ನಡ ಜನೋತ್ಸವದ ರೀತಿ ಆಚರಿಸಲು ನಿರ್ಧರಿಸಿದೆ.

ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ಸುವರ್ಣ ಸಂಭ್ರಮದ ಸಮಾರೋಪಕ್ಕೆ ಸಂಬಂಧಿಸಿದಂತೆ ಗೃಹ ಕಚೇರಿ ಕೃಷ್ಣದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಿತು. ಈ ವೇಳೆ, ಕನ್ನಡ ಜನ ಚಳವಳಿ, ಕನ್ನಡತನದ ವಿಸ್ತಾರ, ಕನ್ನಡದ ಅರಿವು ವಿಸ್ತರಿಸಿದ ಮಾದರಿಗಳು, ಹೋರಾಟದ ಹಾದಿಯಲ್ಲಿ ರೂಪುಗೊಂಡ ಕನ್ನಡ ಚರಿತ್ರೆಯನ್ನು ಇವತ್ತಿನ ಕನ್ನಡ ಯುವಜನ ಸಮೂಹಕ್ಕೆ ತಲುಪಿಸಲು ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ಎಲ್ಲ ಜಿಲ್ಲೆ ಹಾಗೂ ತಾಲೂಕುಗಳಲ್ಲಿ ಕರ್ನಾಟಕ ಸುವರ್ಣ ಸಂಭ್ರಮ ನಡೆಯುತ್ತಿದ್ದು, ಹಂಪಿಯಿಂದ ಆರಂಭವಾದ ಕನ್ನಡ ರಥಯಾತ್ರೆ ಈಗಾಗಲೇ 28 ಜಿಲ್ಲೆಗಳಲ್ಲಿ ಸಾಗಿದೆ. ರಥಯಾತ್ರೆ ಸಮಾರೋಪ ಸಮಾರಂಭ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ನಡೆಯಲಿದೆ. ಕರ್ನಾಟಕ ಸುವರ್ಣ ಸಂಭ್ರಮ - 50 ಸಮಾರೋಪ ಸಮಾರಂಭ ವಿಧಾನಸೌಧದ ಮುಂಭಾಗದಲ್ಲಿ ನಡೆಯಲಿದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು.

ಇನ್ನು ಗದಗದಲ್ಲಿ ಅಂದಾನಪ್ಪ ದೊಡ್ಡ ಮೇಟಿ ಸ್ಮಾರಕ ನಿರ್ಮಿಸಲಾಗುತ್ತಿದೆ. 50 ಸಾಧಕ ಮಹಿಳೆಯರ ಕುರಿತು 100 ಪುಟಗಳ 50 ಕೃತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮೂಲಕ ಮುದ್ರಿಸಲಾಗುವುದು. ವಿಧಾನಸೌಧ ಆವರಣದಲ್ಲಿ 25 ಅಡಿ ಎತ್ತರದ ಭುವನೇಶ್ವರಿದೇವಿ ಕಂಚಿನ ಪ್ರತಿಮೆ ಕಾಮಗಾರಿ ಪ್ರಗತಿಯಲ್ಲಿದ್ದು, ನವೆಂಬರ್ 1ರಂದು ಅನಾವರಣ ಮಾಡಲಾಗುವುದು. ರಾಜ್ಯದ ನಾಲ್ಕು ವಲಯಗಳಲ್ಲಿ ವಿಶೇಷ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು. ಮೈಸೂರಿನಲ್ಲಿ ಚಿಂತನಾ ಸಮಾವೇಶ, ರಾಯಚೂರಿಗೆ ಗೋಕಾಕ್ ಚಳವಳಿ ಸಂಸ್ಮರಣೆ, ಮಹಾರಾಷ್ಟ್ರದ ಜತ್ ತಾಲೂಕಿನಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವ ಮತ್ತು ಮಂಗಳೂರಿನಲ್ಲಿ ವಿವಿಧ ಅಕಾಡೆಮಿ ಸಹಯೋಗದಲ್ಲಿ ಬಹುಸಂಸ್ಕೃತಿ ಉತ್ಸವ ಆಯೋಜನೆ ಮಾಡಿ ಕರ್ನಾಟಕ ಸುವರ್ಣ ಸಂಭ್ರಮ- 50ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದು ಸಿದ್ದರಾಮಯ್ಯ ವಿವರಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಗೃಹ ಸಚಿವ ಜಿ.ಪರಮೇಶ್ವರ್, ಮುಖ್ಯಮಂತ್ರಿ ಅವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಎಸ್.ಆರ್. ಉಮಾಶಂಕರ್, ಇಲಾಖೆ ಕಾರ್ಯದರ್ಶಿ ಅಜಯ ನಾಗಭೂಷಣ್, ವಿವಿಧ ಪ್ರಾಧಿಕಾರ ಹಾಗೂ ಅಕಾಡೆಮಿಗಳ ಅಧ್ಯಕ್ಷರು ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ರಾಜ್ಯೋತ್ಸವ ಹಾಗೂ ಕರ್ನಾಟಕ ಸುವರ್ಣ ಸಂಭ್ರಮದ ಸಮಾರೋಪಕ್ಕೆ ಸಂಬಂಧಿಸಿದಂತೆ ಗೃಹ ಕಚೇರಿ ಕೃಷ್ಣದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯಿತು.

ಮನೆಮನೆಯಲ್ಲಿ ಹಾರಾಡಲಿದೆ ಕನ್ನಡ ಬಾವುಟ

ಮನೆ ಮನೆಯಲ್ಲಿ ಕನ್ನಡ ಬಾವುಟವನ್ನು ಹಾರಿಸಲು ಮನವಿ ಮಾಡಲಾಗುವುದು. ಕರ್ನಾಟಕದ ಬಹು ಸಂಸ್ಕೃತಿ, ಸೌಹಾರ್ದ ಸಂಸ್ಕೃತಿ, ಬಹುತ್ವದ ಕುರಿತು 100 ಪುಸ್ತಕಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಡಿಸೆಂಬರ್ ವೇಳೆಗೆ ಬಿಡುಗಡೆ ಮಾಡಲಾಗುವುದು. ನಾಡಿನ ಕಲೆ, ಸಾಹಿತ್ಯ, ಕೃಷಿ, ತೋಟಗಾರಿಕೆ, ಕೈಗಾರಿಕೆ ಕುರಿತಾದ 5 ಸಂಪುಟಗಳನ್ನು ಸಿದ್ಧಪಡಿ ಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಸ್ಮರಣ ಸಂಭ್ರಮ ಸಂಪುಟ ಹೊರತರಲಾಗುವುದು. ಕನ್ನಡದ ಸಾಹಿತಿಗಳ ನುಡಿಮುತ್ತುಗಳನ್ನು ಎಲ್ಲ ಜಿಲ್ಲೆಗಳ ಪ್ರಮುಖ ಸ್ಥಳಗಳಲ್ಲಿ, ಕೆಎಸ್‌ಆರ್‌ಟಿಸಿ ಬಸ್ ಮತ್ತಿತರ ಕಡೆಗಳಲ್ಲಿ ಪ್ರಚುರಪಡಿಸಬೇಕು. ಎಲ್ಲ ಶಾಲಾ ಕಾಲೇಜುಗಳಲ್ಲಿ ಈ ಬಾರಿ ಕನ್ನಡ ರಾಜ್ಯೋತ್ಸವ ಸಂಭ್ರಮ ಅದ್ದೂರಿಯಾಗಿ ಆಚರಿ ಸಲು ಕ್ರಮಕ್ಕೈಗೊಳ್ಳಬೇಕು. ಕೊರಗ ಭಾಷೆ ಯಂತ ಹ ಸಣ್ಣ ಭಾಷೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ತಜ್ಞರ ಸಮಿತಿ ರಚಿಸುವಂತೆ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋ ತ್ತಮ ಬಿಳಿಮಲೆ ಅವರು ಮನವಿ ಮಾಡಿದರು.

ಹೆಣ್ಣುಮಕ್ಕಳನ್ನು ನಿಂದಿಸುವುದನ್ನು ಸಹಿಸುವುದಿಲ್ಲ

ಮುನಿರತ್ನ ವಿರುದ್ಧ ಮಾಜಿ ಸಂಸದ ಡಿ.ಕೆ.ಸುರೇಶ್ ವಾಗ್ದಾಳಿ

ಬೆಂಗಳೂರು: ಮೋದಿ ಅವರ ತಾಯಿ ಬಗ್ಗೆ ಮುನಿರತ್ನ ಅವಹೇಳನ ಮಾಡಿದ್ದನ್ನು ಬಿಜೆಪಿಯವರು ಸಹಿಸಬಹುದು, ಆದರೆ ನಮ್ಮ ಹೆಣ್ಣುಮಕ್ಕಳನ್ನು ನಿಂದಿಸಿರುವುದನ್ನು ನಾವು ಸಹಿಸುವುದಿಲ್ಲ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ವಾಗ್ದಾಳಿ ನಡೆಸಿದ್ದಾರೆ.

ಸದಾಶಿವನಗರದ ನಿವಾಸದಲ್ಲಿ ಮಾತನಾಡಿದ ಅವರು, ಮುನಿರತ್ನ, ಹೆಣ್ಣು ಮಕ್ಕಳ ಬಗ್ಗೆ ಮಾತನಾಡಿದರೆ ಸಹಿಸಿಕೊಂಡು ಕೂರಲು ಸಾಧ್ಯವಿಲ್ಲ. ಸಮಾಜದ ಹಿತದೃಷ್ಟಿಗೆ ಹಾಗೂ ಹೇಳಿಕೆ ವಿರುದ್ಧ ಮುಂದಿನ ದಿನಗಳಲ್ಲಿ ಯಾವ ರೀತಿ ಹೋರಾಟ ಮಾಡಬೇಕು ಎಂದು ಚರ್ಚಿಸಲಾಗುವುದು ಹಾಗೂ ಈ ವಿಚಾರ ಇಲ್ಲಿಗೆ ಬಿಟ್ಟರೆ ನಾಳೆ ಮತ್ತೊಬ್ಬರು ಮಾತನಾಡುತ್ತಾರೆ ಎಂದು ಎಚ್ಚರಿಸಿದ್ದಾರೆ.

ಹೆಣ್ಣು ಕುಲಕ್ಕೆ ಅಪಮಾನ: ಇದು ಡಿ.ಕೆ. ಶಿವಕುಮಾರ್ ಹಾಗೂ ಡಿ.ಕೆ. ಸುರೇಶ್ ಬಗ್ಗೆ ಮಾತನಾಡಿರುವ ಪದಗಳಲ್ಲ, ಇದು ಸಮಾಜದ ಮಹಿಳೆಯರು, ಸಹೋದರಿಯರ ಬಗ್ಗೆ ಆಡಿರುವ ಮಾತುಗಳಾಗಿದ್ದು, ಪ್ರಧಾನಿ ಮೋದಿ ಬಗ್ಗೆ ಟೀಕೆ, ಟಿಪ್ಪಣಿ ಮಾಡಿದರೂ ಅವರ ಸ್ಥಾನಕ್ಕೆ ನೀಡಬೇಕಾದ ಗೌರವ ನೀಡುತ್ತೇವೆ. ಇಂತಹ ಪದಗಳನ್ನು ಕೇಳಿಯೇ ಇಲ್ಲ, ಅದನ್ನು ನೀವು ಸಮರ್ಥಿಸಿಕೊಂಡರೆ ಇದಕ್ಕಿಂತ ದೌರ್ಭಾಗ್ಯ ಇನ್ನೇನಿದೆ. ಯಾವ ಕಾರಣಕ್ಕೆ ಇದನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ ಎಂದು ನಾಚಿಕೆಯಾಗಬೇಕು. ಒಕ್ಕಲಿಗ ಸಮಾಜ ಇರಲಿ, ಇಡೀ ಹೆಣ್ಣು ಕುಲಕ್ಕೆ ಅಪಮಾನ ಮಾಡಲಾಗಿದೆ ಎಂದು ಬಿಜೆಪಿ ನಾಯಕರ ವಿರುದ್ಧ ಕಿಡಿಕಾರಿದರು.

ಒಕ್ಕಲಿಗ ಸಮಾಜ ಗಮನಿಸುತ್ತಿದೆ: ಮುನಿರತ್ನ ಅವರ ಧ್ವನಿ ಎಂದು ಗೊತ್ತಿದ್ದರೂ ಸಹ ಕೇವಲ ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ಅಶೋಕ್ ಬಗ್ಗೆ ಯಾವ ರೀತಿ ಪದ ಬಳಕೆ ಮಾಡಿದ್ದಾರೆ ಎಂದು ಅವರ ಸ್ನೇಹಿತರನ್ನು ಕೇಳಿದರೆ ಹೇಳುತ್ತಾರೆ. ತಮ್ಮ ಪಕ್ಷದಲ್ಲಿದ್ದಾರೆ ಎಂದು ಈ ವಿಚಾರಗಳನ್ನು ಮುಚ್ಚಿಕೊಳ್ಳುತ್ತಿರಬಹುದು. ಒಕ್ಕಲಿಗ ಸಮಾಜ ಇದೆಲ್ಲವನ್ನು ಗಮನಿಸುತ್ತಿದೆ. ಇಲ್ಲಿ ಯಾರೂ ಕೂಡ ಅವರಿಗೆ ಪುಗಸಟ್ಟೆಯಾಗಿಲ್ಲ. ಅವರ ಋಣದಲ್ಲಿ ಒಕ್ಕಲಿಗರಿಲ್ಲ. ಒಕ್ಕಲಿಗರ ಋಣದಲ್ಲಿ ಅವರಿದ್ದಾರೆ ಎಂದರು.

ನಾನು ಸದಾ ಒಳ್ಳೆಯದು ಬಯಸುತ್ತೇನೆ. ಯಾರಿಗೂ ಕೆಟ್ಟದನ್ನು ಬಯಸುವುದಿಲ್ಲ. ಹಾಗೆಯೇ ಎಂತಹುದೇ ಸಂದರ್ಭ ಬಂದರೂ ಯಾರಿಗೂ ಹೆದರುವ ಪರಿಸ್ಥಿತಿಯಲ್ಲಿ ನಾವಿಲ್ಲ. ಸಮಾಜಕ್ಕೆ ನಾವು ಯಾವ ರೀತಿಯ ಸಂದೇಶ ನೀಡುತ್ತಿದ್ದೇವೆ ಎಂಬುದು ಮುಖ್ಯವಾಗುತ್ತದೆ. ಇಲ್ಲಿನ ಒಳಮರ್ಮಗಳು ನನಗೆ ಅರ್ಥವಾಗುತ್ತಿಲ್ಲ. ನಾನು ಆ ವ್ಯಕ್ತಿಗೆ ಯಾವತ್ತೂ ಕೆಟ್ಟದ್ದನ್ನು ಬಯಸಿಲ್ಲ. ಒಳ್ಳೆಯ ದಾರಿಯಲ್ಲಿ ಕೆಲಸ ಮಾಡಲು ಪ್ರೋತ್ಸಾಹ ನೀಡಿದ್ದೆ.

ಡಿ.ಕೆ.ಸುರೇಶ್, ಮಾಜಿ ಸಂಸದ

- ಈ ವಿಚಾರ ಇಲ್ಲಿಗೆ ಬಿಟ್ಟರೆ ನಾಳೆ ಮತ್ತೊಬ್ಬರು ಮಾತನಾಡುತ್ತಾರೆ
- ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್ ಬಗ್ಗೆ ಮಾತನಾಡಿರುವ ಪದಗಳಲ್ಲ
- ಇಡೀ ಹೆಣ್ಣು ಕುಲಕ್ಕೆ ಅಪಮಾನ ಮಾಡಲಾಗಿದೆ

ಗೊಡ್ಡು ಬೆದರಿಕೆಗೆ ಹೆದರಲ್ಲ

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್‌ಗೆ ಎಫ್‌ಐಆರ್ ದಾಖಲಿಸಿರುವ ಸರಕಾರದ ಕ್ರಮಕ್ಕೆ ಬಿಜೆಪಿ ವಿರೋಧ ವ್ಯಕ್ತಪಡಿಸಿದೆ. ಪ್ರತಿಪಕ್ಷ ನಾಯಕ ಆರ್ ಅಶೋಕ ಮಾತನಾಡಿ, ಸರಕಾರದ ಗೊಡ್ಡು ಬೆದರಿಕೆಗೆ ನಾವು ಹೆದರಲ್ಲ, ಬಾಯಿ ಮುಚ್ಚಿಸಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗಮಂಗಲದ ಕೋಮುಗಲಭೆ ವಿಚಾರದಲ್ಲಿ ಸರಕಾರ ಸರಿಯಾಗಿ ತನಿಖೆ ನಡೆಸುವಂತೆ ಆಗ್ರಹಿಸಿ ಟ್ವೀಟ್ ಮಾಡಿದ್ದೆ. ಆದರೆ ಸರಕಾರ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಿದೆ. ಎಲ್ಲ ಬಿಜೆಪಿ ನಾಯಕರ ವಿರುದ್ಧ ಪ್ರಕರಣ ದಾಖಲಿಸಿ ವಿರೋಧ ಪಕ್ಷವನ್ನು ಬಗ್ಗುಬಡಿಯಬೇಕೆಂದು ಸರಕಾರ ನಿರ್ಧರಿಸಿದ್ದು, ವಿರೋಧ ಪಕ್ಷವಾಗಿ ನಾವು ಏನು ಮಾಡಬೇಕು? ಎಂದು ಪ್ರಶ್ನಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವತಿಯಿಂದ 66/11ಕೆವಿ ಬಿ ಸ್ಟೇಷನ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿಯಿಂದಾಗಿ ಸೆ.21 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ರ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ನಗರದ ಎಂ.ಜಿ. ರಸ್ತೆ, ಚರ್ಚ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಲ್ಯಾವೆಲ್ಲೆ ರಸ್ತೆ, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ರಸ್ತೆ, ರಿಚ್ಮಂಡ್ ರಸ್ತೆ, ಕಸ್ತೂರಬಾ ರಸ್ತೆ, ವಾಲ್ಟನ್ ರಸ್ತೆ, ಡಿಕನ್ಸನ್ ರಸ್ತೆ, ಅಶೋಕ್ ನಗರ, ಪ್ರೈಮ್ ರೋಸ್ ರಸ್ತೆ, ರೆಸಿಡೆನ್ಸಿ ರಸ್ತೆ, ಟ್ರಿನಿಟಿ , ಹಲಸೂರು ರಸ್ತೆ, ಫಿರ್ ಟೌನ್ , ಹಲಸೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ. 66/11ಕೆ.ವಿ ರೆಮಕೊ ಸ್ಟೇಷನ್‌ನ ಮೈಸೂರು ರೋಡ್ 7ನೆ ಅಡ್ಡರಸ್ತೆ, ಮಂಜುನಾಥ ನಗರ, ಪೈಪ್‌ಲೈನ್, ಸಂತೋಷ್ ಟೆಂಟ್, ಅನಂತ ರಾಮಯ್ಯ ಕಾಂಪೌಂಡ್, ಹೊಸ ಮತ್ತು ಹಳೆ ಗುಡ್ಡದ ಹಳ್ಳಿ, ಕುವೆಂಪು ನಗರ, 6ನೆ ಮತ್ತು 4ನೆ ಮೈಸೂರು ರೋಡ ಅಡ್ಡರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾ ಗಲಿದೆ. 220/66/11ಕೆವಿ ನಾಗನಾಥ ಪುರ ಸ್ವೀಕರಣಾ ಕೇಂದ್ರದ ಸಿ.ಕೆ.ನಗರ- ಹೊಸರೋಡ್, ಸಿಂಗಸಂದ್ರ, ಹೊಂಗಸಂದ್ರ, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಾಯಕರು, ಕಾರ್ಯಕರ್ತರ ಹತ್ತಿಕ್ಕುವ, ಧ್ವನಿ ಅಡಗಿಸುವ ಕೆಲಸ | ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರತಿ ಪಕ್ಷ ನಾಯಕನ ಮೇಲೆ ಎಫ್‌ಐಆರ್

ರಾಜ್ಯದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ

ಬೆಂಗಳೂರು: ರಾಜ್ಯದಲ್ಲಿ ಹಿಟ್ಲರ್ ಸರಕಾರವಿದ್ದು, ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ವಿರೋಧ ಪಕ್ಷದ ನಾಯಕನ ಮೇಲೆ ಎಫ್‌ಐಆರ್ ದಾಖಲಾಗಿದ್ದು, ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಶಾಸಕರಾದ ಹರೀಶ್ ಪೂಂಜಾ, ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ, ಭರತ್ ಶೆಟ್ಟಿ, ಹೀಗೆ ನಿರಂತರವಾಗಿ ನಾಯಕರು, ಕಾರ್ಯಕರ್ತರನ್ನು ಹತ್ತಿಕ್ಕುವ, ಧ್ವನಿ ಅಡಗಿಸುವ ಕೆಲಸ ಮಾಡಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಾಂಗ್ಲಾ ಮಾದರಿಯಲ್ಲಿ ರಾಜ್ಯಪಾಲರನ್ನು ಓಡಿಸುತ್ತೇವೆ ಎಂಬ ಐವನ್ ಡಿಸೋಜ ಹೇಳಿಕೆ ವಿರುದ್ಧ ಮಂಗಳೂರಿನ ಜನರು, ಕಾರ್ಯಕರ್ತರು ದಿನವೂ ಪೊಲೀಸ್ ಸ್ಟೇಶನ್‌ಗೆ ಹೋಗಿ ದೂರು ನೀಡುತ್ತಿದ್ದರೂ, ಈವರೆಗೂ ಎಫ್‌ಐಆರ್ ದಾಖಲಾಗಿಲ್ಲ ಏಕೆ ಎಂದು ಪ್ರಶ್ನಿಸಿದ್ದಾರೆ.

ಕೇರಳದಿಂದ ಬಂದವರು ಯಾರು?

ನಾಗಮಂಗಲದಲ್ಲಿ ಗಣೇಶ ಚತುರ್ಥಿ ಸಂದರ್ಭದಲ್ಲಿ ಪೊಲೀಸ್ ವ್ಯಾನಿನಲ್ಲಿ ಗಣೇಶನನ್ನು ಕರೆದುಕೊಂಡು ಹೋಗಿ ವಿಸರ್ಜನೆ ಮಾಡುವ ಘಟನೆ ನಡೆದಿದ್ದು, ಗಣಪತಿಗೆ ಚಪ್ಪಲಿ ಎಸೆಯಲು, ಕಲ್ಲು ಎಸೆದು, ಮೂರ್ತಿ ಭಗ್ನಗೊಳಿಸಿ, ಅಲ್ಲೇ ಬಿಟ್ಟು ಓಡಿದ್ದಾರೆ. ಅಲ್ಲದೇ 25 ಅಂಗಡಿಗಳನ್ನು ಸುಟ್ಟು ಹಾಕಿರುವವರು ಯಾರು. ನಾಗಮಂಗಲದ ಜನರಿಗೆ ಆ ಧೈರ್ಯ ಹೇಗೆ ಬಂತು? ವರದಿ ಪ್ರಕಾರ ಕೇರಳದಿಂದ ಬಂದವರು ಯಾರು? ಹೇಗೆ ಮತ್ತು ಯಾಕೆ ಬಂದರು? ಪೊಲೀಸರು ಇದೊಂದು ಘಟನೆಯೇ ಅಲ್ಲ ಎಂಬಂತೆ ಕ್ಲೋಸ್ ಮಾಡಿದ್ದಾರೆ. ಪರಮೇಶ್ವರ್ ಇದೊಂದು ಚಿಕ್ಕ ಘಟನೆ ಎಂದಿದ್ದು, 25 ಅಂಗಡಿ ಸುಟ್ಟದ್ದು ಚಿಕ್ಕ ಘಟನೆಯೇ? ಪಕ್ಕದ ರಾಜ್ಯದಿಂದ ಬಂದು ಗಲಭೆ ಮಾಡಿದ್ದು ಚಿಕ್ಕ ಘಟನೆಯೇ? ಎಂದು ಕಿಡಿಕಾರಿದ್ದಾರೆ.

ರಾಷ್ಟ್ರಧ್ವಜದ ಅಶೋಕ ಚಕ್ರದ ಜಾಗದಲ್ಲಿ ಉರ್ದು ಬರಹ: ಬೆಳಗಾವಿಯಲ್ಲಿ ಗಣಪತಿ ವಿಸರ್ಜನೆ ವೇಳೆ 3 ಹಿಂದೂ ಯುವಕರಿಗೆ ಚಾಕುವಿನಿಂದ ಇರಿದಿದ್ದಾರೆ. ಕೋಲಾರದಲ್ಲಿ ಮೊದಲ ಬಾರಿಗೆ ಮೆರವಣಿಗೆಯಲ್ಲಿ ಪ್ಯಾಲೆಸ್ತೀನ್ ಧ್ವಜ ಪ್ರದರ್ಶಿಸಲಾಗಿದೆ. ಬೆಂಗಳೂರಿನ ನಂದಿನಿ ಲೇಔಟ್‌ನಲ್ಲಿ ರಾಷ್ಟ್ರಧ್ವಜ ವಿರೂಪಗೊಳಿಸಿ ಅಶೋಕ ಚಕ್ರದ ಜಾಗದಲ್ಲಿ ಉರ್ದುವಿನಲ್ಲಿ ಬರೆದಿದ್ದಾರೆ. ಇದು ರಾಜಧಾನಿಯ ಸ್ಥಿತಿ ಎಂದು ಕಳವಳ ವ್ಯಕ್ತಪಡಿಸಿದರು.

ಬಿಜೆಪಿ ರಾಜ್ಯ ಕಚೇರಿಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಸಿ. ಮುನಿರಾಜು, ರಾಜ್ಯ ವಕ್ತಾರರಾದ ಸುರಭಿ ಹೊದಿಗೆರೆ, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಕೆ.ಸಿ.ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಹಾಜರಿದ್ದರು.

ರಾಜ್ಯಾದ್ಯಂತ ಸಂವಿಧಾನ ರಕ್ಷಣೆ ಮಾಡಬೇಕೆಂದು ಶಾಲೆ- ಕಾಲೇಜು ಮಕ್ಕಳ ಮಾನವ ಸರಪಳಿ ಮಾಡಿದ್ದು, ಯಾವ ಪುರುಷಾರ್ಥಕ್ಕೆ? ಜನರು ಬಾರದೇ, ಮನೆಯಲ್ಲಿದ್ದ ಮಕ್ಕಳನ್ನು ಕರೆದು ರಸ್ತೆ ತುಂಬ ಬಿಸಿಲಲ್ಲಿ ನಿಲ್ಲಿಸಿ ಯಾವ ಸಂವಿಧಾನದ ರಕ್ಷಣೆ ಮಾಡಲು ಹೊರಟಿದ್ದೀರಿ.

- ಶೋಭಾ ಕರಂದ್ಲಾಜೆ, ಕೇಂದ್ರ ಸಚಿವೆ

ಎಸ್‌ಐಟಿ ವರದಿಯಲ್ಲಿ ನಾಗೇಂದ್ರ ಹೆಸರೇಕಿಲ್ಲ?

ಪ್ರಾಮಾಣಿಕ ಪೊಲೀಸ್ ಅಧಿಕಾರಿ ಪರಶುರಾಮ ಆತ್ಮಹತ್ಯೆ ಮಾಡಿಕೊಂಡು, ಶಾಸಕ ಮತ್ತು ಶಾಸಕರ ಪುತ್ರ ಸೇರಿ ಹಣ ಕೇಳಿ ಹಿಂಸಿಸಿದ್ದಾರೆ ಎಂದು ಹೇಳಿದ್ದರೂ ಎಫ್‌ಐಆರ್ ದಾಖಲಾಗಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಹಗರಣದಲ್ಲಿ ಎಸ್‌ಐಟಿ ರಚಿಸಲಾಗಿದ್ದು, ವರದಿ ಓದಿದ್ದೀರಾ ಸಿದ್ದರಾಮಯ್ಯನವರೇ? ಆ ವರದಿಯಲ್ಲಿ ನಾಗೇಂದ್ರ ಹೆಸರು ಯಾಕೆ ಇಲ್ಲ. ಅವರು ಅಪರಾಧಿ ಅಲ್ಲವೇ? ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರಶ್ನಿಸಿದ್ದಾರೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಇನ್ನಿಲ್ಲ

ಬೆಂಗಳೂರು: ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಹೃದಯಾಘಾತದಿಂದ

ಗುರುವಾರ ಬೆಳಗ್ಗೆ ನಿಧನ ಹೊಂದಿದ್ದಾರೆ. ಮೂವರು ಪುತ್ರಿಯರು, ಓರ್ವ ಪುತ್ರ ಮತ್ತು ಅಪಾರ ಬಂಧುಗಳನ್ನು ಅಗಲಿದ್ದು, ಸಿಎಂ ಸಿದ್ದರಾಮಯ್ಯ, ಸಚಿವರು ಸೇರಿದಂತೆ ಗುತ್ತಿಗೆದಾರರ ಸಂಘ ತೀವ್ರ ಸಂತಾಪ ಸೂಚಿಸಿವೆ.

ಹಿಂದೆ ಬಿಜೆಪಿ ಸರಕಾರದ ಸಂದರ್ಭದಲ್ಲಿ ಶೇ.40 ಕಮಿಷನ್ ಆರೋಪ ಹೊರಿಸಿ ಅದು ಪ್ರಧಾನಿ ಕಚೇರಿವರೆಗೂ ತಲುಪಿತ್ತು. ಪ್ರತಿಪಕ್ಷವಾಗಿದ್ದ ಕಾಂಗ್ರೆಸ್ ಇದನ್ನೆ ಅಸ್ತ್ರವಾಗಿ ಬಳಸಿಕೊಂಡಿತ್ತು. ಸರಕಾರ ಬದಲಾದರೂ ಒಂದೂವರೆ ವರ್ಷ ಕಳೆದರೂ ಗುತ್ತಿಗೆದಾರರ ಸಮಸ್ಯೆ ಬಗೆಹರಿದಿಲ್ಲ. ಮತ್ತೆ ಕಮಿಷನ್ ಹಾವಳಿ ಇನ್ನೂ ಹೆಚ್ಚಾಗಿದೆಯೆಂದು ಟೀಕಾ ಪ್ರಹಾರ ನಡೆಸಿದ್ದರು. ಸಿಎಂ ಸಿದ್ದರಾಮಯ್ಯ ಅವರು ಕೂಡ ಅವರನ್ನು ಕರೆಸಿಕೊಂಡು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದರು.

ಆದರೂ ಗುತ್ತಿಗೆದಾರರು ಇವರ ಬಳಿ ಬಂದು ನೋವು ತೋಡಿಕೊಳ್ಳುತ್ತಿದ್ದರು. ಕಳೆದ ಒಂದು ತಿಂಗಳ ಹಿಂದೆ ಸುದ್ದಿಗೋಷ್ಠಿ ನಡೆಸಿ ಗುತ್ತಿಗೆದಾರರ ಸಮಸ್ಯೆ ಬಗೆಹರಿಯದಿದ್ದಲ್ಲಿ ಕಾಮಗಾರಿಯನ್ನು ನಿಲ್ಲಿಸುವುದಾಗಿ ಸರಕಾರಕ್ಕೆ ಚಾಟಿ ಬೀಸಿದ್ದರು. ಕಳೆದ 50 ವರ್ಷಗಳಿಂದ ಅವರು ಗುತ್ತಿಗೆದಾರರಾಗಿ ಸೇವೆ ಸಲ್ಲಿಸುತ್ತಿದ್ದರು. ಯಾವುದೇ ಅಂಜಿಕೆ ಅಳುಕಿಲ್ಲದೆ ನೇರವಾಗಿ ಮಾತನಾಡುವ ಗುಣ ಹೊಂದಿದ್ದ ಅವರು ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಮೇಲೆ ಹೊಸ ವರ್ಚಸ್ಸು ನೀಡಿದ್ದರು. ಕೆಂಪಣ್ಣ ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ ಎಂಬ ಸುದ್ದಿ ನೋವುಂಟು ಮಾಡಿದೆ.

ಸದಾ ಕ್ರಿಯಾಶೀಲರಾಗಿ ಇರುತ್ತಿದ್ದ ಅವರ ಸಾವು ಗುತ್ತಿಗೆದಾರರ ಹೋರಾಟ ಮತ್ತು ದನಿಗೆ ತುಂಬಲಾರದ ನಷ್ಟ. ಕಳೆದ ಬಿಜೆಪಿ ಸರಕಾರದ ಅವಧಿಯಲ್ಲಿ 40% ಕಮಿಷನ್ ವಿರುದ್ಧ ದನಿ ಎತ್ತಿದ್ದರು. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿದ ಕಾರಣಕ್ಕೆ ಇಳಿ ವಯಸ್ಸಿನಲ್ಲೂ ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದ್ದರು. ಇಳಿ ವಯಸ್ಸಿನಲ್ಲೂ ಅತ್ಯಂತ ಕ್ರಿಯಾಶೀಲವಾಗಿದ್ದ ಕೆಂಪಣ್ಣ ಅವರು ನನ್ನ ಬಳಿ ಗುತ್ತಿಗೆದಾರರ ಸಮಸ್ಯೆಗಳನ್ನು ಇಟ್ಟುಕೊಂಡು ಅನೇಕ ಬಾರಿ ಚರ್ಚೆ ನಡೆಸಿದ್ದರು.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣನವರ ನಿಧನವಾರ್ತೆ ನೋವುಂಟುಮಾಡಿದೆ. ಹಿಂದಿನ ಸರಕಾರದ ಅವಧಿಯಲ್ಲಿ ದೇಶಾದ್ಯಂತ ಸುದ್ದಿ ಮಾಡಿದ್ದ ಶೇ.40 ಕಮಿಷನ್ ಹಗರಣವನ್ನು ಹೊರತಂದು, ಗುತ್ತಿಗೆ ಕಾಮಗಾರಿಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರದ ವಿರುದ್ಧ ಅವರು ಸೆಟೆದು ನಿಂತಿದ್ದರು. ಯಾವುದೇ ಒತ್ತಡ, ಆಮಿಷಗಳಿಗೆ ಒಳಗಾಗದ ನಿರ್ಭೀತ ಧ್ವನಿಯೊಂದನ್ನು ನಾಡು ಇಂದು ಕಳೆದುಕೊಂಡಿದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಅವರ ಕುಟುಂಬ ವರ್ಗಕ್ಕೆ ಈ ನೋವು ಭರಿಸುವ ಶಕ್ತಿ ಸಿಗಲಿ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಅಧ್ಯಯನ ನಡೆಸಲು ಎರಡು ದಿನ ಹರಿದ್ವಾರ, ವಾರಣಾಸಿಗೆ ಸಚಿವರ ಭೇಟಿ

ಕಾವೇರಿ ಆರತಿ; ಗಂಗಾ ಆರತಿ ವೀಕ್ಷಣೆಗೆ ನಿಯೋಗ

ಬೆಂಗಳೂರು: ಗಂಗಾ ನದಿಗೆ ಮಾಡಲಾಗುವ ಗಂಗಾ ಆರತಿ ಮಾದರಿಯಲ್ಲಿ ಕಾವೇರಿ ನದಿಗೆ ಕಾವೇರಿ ಆರತಿ ಮಾಡುವ ಕಾರ್ಯಕ್ರಮದ



ರೂಪುರೇಷೆಗಳ ಕುರಿತು ಅವಲೋಕಿಸಿ ಅಧ್ಯಯನ ನಡೆಸಲು ಸಚಿವರು, ಶಾಸಕರು ಮತ್ತು ಅಧಿಕಾರಿಗಳನ್ನೊಳಗೊಂಡ ನಿಯೋಗ ವಾರಣಾಸಿ ಮತ್ತು ಹರಿದ್ವಾರಕ್ಕೆ ಭೇಟಿ ನೀಡಲಿದೆ.

ಕೃಷಿ ಸಚಿವರು ಹಾಗೂ ಕಾವೇರಿ ಆರತಿ ಕಾರ್ಯಕ್ರಮದ ಅಧ್ಯಕ್ಷ ಚಲುವರಾಯಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಶಾಸಕರು, ವಿಧಾನಪರಿಷತ್ ಸದಸ್ಯರು, ಜಲಸಂಪನ್ಮೂಲ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ನಿಯೋಗ ಹರಿದ್ವಾರ ಮತ್ತು ವಾರಣಾಸಿಗೆ ಶುಕ್ರವಾರ, ಶನಿವಾರದಂದು ಎರಡು ದಿನಗಳ ಅಧ್ಯಯನ ಪ್ರವಾಸ ಕೈಗೊಳ್ಳಲಿದೆ. ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ತುಂಬಲಿ ಎಂಬ ಆಶಯಕ್ಕಾಗಿ ರಾಜ್ಯದ ಇತಿಹಾಸದಲ್ಲೇ ಪ್ರಥಮಬಾರಿಗೆ ಕಾವೇರಿ ನದಿಗೆ ಗಂಗಾ ಆರತಿ ಮಾದರಿ ಕಾವೇರಿ ಆರತಿ ಮಾಡುವ ಕಾರ್ಯಕ್ರಮ ಆಯೋಜಿಸುವುದಾಗಿ ಉಪಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರಾದ ಡಿ.ಕೆ. ಶಿವಕುಮಾರ್ ಅವರು ಘೋಷಣೆ ಮಾಡಿದ್ದರು. ಹರಿದ್ವಾರ ಮತ್ತು ಮತ್ತು ವಾರಣಾಸಿಯಲ್ಲಿ ಗಂಗಾ ನದಿಗೆ ಆರತಿ ಮಾಡುವದನ್ನು ವೀಕ್ಷಿಸಿ ಸಮಗ್ರವಾಗಿ ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಲು ಸಚಿವ ಚಲುವರಾಯಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಶಾಸಕರು, ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚನೆ ಮಾಡಲಾಗಿತ್ತು. ಇದೀಗ ಸಮಿತಿ ಸದಸ್ಯರು ಅಧ್ಯಯನ ಪ್ರವಾಸಕ್ಕೆ ತೆರಳಿದ್ದಾರೆ ಎಂದು ಕಾವೇರಿ ಆರತಿ ಕಾರ್ಯಕ್ರಮದ ಸಂಚಾಲಕ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ನಾನಾ ಕೈ ನಾಯಕರು ಭೇಟಿ

ಚಲುವರಾಯಸ್ವಾಮಿ ನೇತೃತ್ವದ ನಿಯೋಗದಲ್ಲಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ರಮೇಶ್ ಬಾಬು ಬಂಡಿಸಿದ್ದೇಗೌಡ, ರವಿಕುಮಾರ್, ಕೆ.ಎಂ.ಉದಯ್, ದಿನೇಶ್ ಗೂಳಿಗೌಡ, ಮಾಗಡಿ ಬಾಲಕೃಷ್ಣ, ಮೈಸೂರು ಹರೀಶ್ ಗೌಡ, ನಂಜನಗೂಡು ದರ್ಶನ್ ಧ್ರುವನಾರಾಯಣ್, ಅರಸೀಕೆರೆ ಶಿವಲಿಂಗೇಗೌಡ, ಕೊಳ್ಳೇಗಾಲ ಕೃಷ್ಣಮೂರ್ತಿ ಸೇರಿ ಅನೇಕರು ತೆರಳಲಿದ್ದಾರೆ.

ವಿಶ್ವಮಟ್ಟದಲ್ಲಿ ಬೆಂವಿವಿಗೆ ಮತ್ತೊಂದು ಗರಿ

ಬೆಂಗಳೂರು: ಬೆಂಗಳೂರು ವಿವಿಯ ಎಂಟು ಪ್ರಾಧ್ಯಾಪಕರು 2024 ಸಾಲಿನ ವಿಶ್ವದ ಶೇ.2ರಷ್ಟು ಉನ್ನತ ವಿಜ್ಞಾನಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿವಿ ಹಾಗೂ ನೆದರ್‌ಲ್ಯಾಂಡ್‌ನ ಎಲ್ಸವಿಯರ್ ಪ್ರಕಾಶನ ಸಂಸ್ಥೆ ಪ್ರತಿ ವರ್ಷ ಸೈಟೇಷನ್ ಇಂಡೆಕ್ಸ್ ಆಧಾರದಲ್ಲಿ ವಿಜ್ಞಾನಿಗಳನ್ನು ಗುರುತಿಸಿ ಸ್ಥಾನ ನೀಡುತ್ತಿದ್ದು, ಬೆಂಗಳೂರು ವಿವಿಯ ರಸಾಯನಶಾಸ್ತ್ರ, ಭೌತಶಾಸ್ತ್ರ, ಸೂಕ್ಷ್ಮ ಜೀವ ವಿಜ್ಞಾನ ಮತ್ತು ಗಣಿತ ವಿಭಾಗಕ್ಕೆ ಸೇರಿದ ಚಂದ್ರಶೇಖರಯ್ಯ ಡಿ.ಎಸ್, ದೇವಿ ಎಲ್ ಗೋ ಮತಿ, ರುದ್ರಯ್ಯ ಎನ್, ಶಿವಕುಮಾರ, ಸಿ ಶ್ರೀನಿವಾಸ್, ಕುಂಬಿನರಸಯ್ಯ ಎಸ್, ಈರಯ್ಯ ಬಿ, ವಿಷ್ಣು ಕಾಮತ್ ಸೇರಿ ಎಂಟು ಜನರು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಬೆಂಗಳೂರು ವಿವಿ ಸತತವಾಗಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸುತ್ತಿದ್ದು, ವಿವಿಯಲ್ಲಿ ವಿಜ್ಞಾನ, ಸಂಶೋಧನೆಗಳಿಗೆ ನೀಡಿರುವ ಹೆಚ್ಚಿನ ಆದ್ಯತೆಯ ಫಲವಾಗಿ ಪಟ್ಟಿಯಲ್ಲಿ ಸ್ಥಾನ ದೊರೆತಿದೆ. ವಿಜ್ಞಾನ ಕ್ಷೇತ್ರದಲ್ಲಿನ ಅಧ್ಯಯನ ಮತ್ತು ಸಂಶೋಧನೆಗಳಿಂದ ವಿವಿ ಪ್ರಾಧ್ಯಾಪಕರು ಛಾಪು ಮೂಡಿಸಿದ್ದಾರೆ. ಈ ಮೂಲಕ ವಿದ್ಯಾರ್ಥಿಗಳ ಅಭಿವೃದ್ಧಿಗೂ ಸಾಕಷ್ಟು ಅನುಕೂಲವಾಗಲಿದೆ.

-ಡಾ.ಜಯಕರ ಎಸ್ ಎಂ, ಕುಲಪತಿ

ಇಂದಿನಿಂದ 22ರವರೆಗೆ ಹಲಸು ಹಣ್ಣಿನ ಉತ್ಸವ

ಬೆಂಗಳೂರು: ಹಲಸಿನ ಹಣ್ಣು (ಜ್ಯಾಕ್ ಫ್ರೂಟ್) ಉತ್ಸವವನ್ನು ಸೆ.20 ರಿಂದ 22 ರವರೆಗೆ ಜೆಪಿ ನಗರದ ಇಂಡಿಯನ್ ಎಕ್ಸ್ ಪೀರಿಯನ್ಸ್ ಮ್ಯೂಸಿಯಂ ಮತ್ತು ಎಂಎಲ್‌ಆರ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ.



ಉತ್ಸವದಲ್ಲಿ ಸೃಷ್ಟಿ ಸ್ಪೆಷಲ್ ಅಕಾಡೆಮಿ ವಿದ್ಯಾರ್ಥಿಗಳು/ಕಲಾವಿದರಿಂದ ಸಂಗೀತೋತ್ಸವ ನಡೆಯಲಿದ್ದು, ಸನ್ನಿ ಸಿಂಫೋನಿ ಪ್ರದರ್ಶನವನ್ನು ಎಂಡಿ ಪಲ್ಲವಿಯವರು ನಡೆಸಿಕೊಡಲಿದ್ದಾರೆ. ಜತೆಗೆ ಸಿಂಗಿಂಗ್ ಟೂ ದ ಫ್ಯೂಚರ್ 2 ಕಾರ್ಯಕ್ರಮವನ್ನು ವಿದುಷಿ ಶುಭಾ ಮುದ್ಗಲ್ ನಡೆಸಿಕೊಡಲಿದ್ದು, ತಬಲಾ ಕಲಾವಿದ ಪಂಡಿತ್ ಅನೀಶ್ ಪ್ರಧಾನ್ ಜತೆಯಾಗಲಿದ್ದಾರೆ. ಸಂಗೀತಗಾರ ಅನಿಲ್ ಶ್ರೀನಿವಾಸನ್ ಅವರ ರ‍್ಯಾಪ್ಸೋಡಿ ಮ್ಯೂಸಿಕ್ ಫೌಂಡೇಶನ್ (ಚೆನ್ನೈ) ಮತ್ತು ಹಿಂದುಸ್ತಾನಿ ಮ್ಯೂಸಿಕ್ ಮೇಳ (ಪುಣೆ), ವಿದುಷಿ ಅನುರಾಧಾ ಕುಬೇರ್‌ರ ಶಿಷ್ಯರು ಹಾಗೂ ಕೋಲ್ಕತ್ತಾದ (ಸೌರೇಂದ್ರೋ-ಸೌಮ್ಯೋಜಿತ್ ಅಕಾಡೆಮಿ) ಕಲಾವಿದರು ಭಾಗವಹಿಸಲಿದ್ದಾರೆ. ಉತ್ಸವದಲ್ಲಿ ಉದಯೋನ್ಮುಖ ಸಂಗೀತಗಾರರು ಮತ್ತು ಸಂಗೀತ ಪ್ರೇಮಿಗಳಿಗಾಗಿ ಐದು ಮುಕ್ತ ಕಮ್ಮಟ ಏರ್ಪಡಿಸಲಾಗಿದೆ. ಭೂಮಿಜಾ ಮತ್ತು ಐಎಂಇ ಅವರ ಔಟ್ ರೀಚ್ ಅಂಗವಾಗಿ ಸಂಗೀತಗಾರರಾದ ಪಂಡಿತ್ ಜಯಚಂದ್ರ ರಾವ್ ಮತ್ತು ವಾಸು ದೀಕ್ಷಿತ್ ಅವರು ನಾನಾ ಶೈಕ್ಷಣಿಕ ಸಂಸ್ಥೆಗಳ ಆವರಣದಲ್ಲಿ ಕಮ್ಮಟಗಳನ್ನು ನಡೆಸಿಕೊಡುತ್ತಾರೆ.

ಬಿಬಿಎಂಪಿಯಿಂದ ಆನ್‌ಲೈನ್ ಡಿಜಿಟಲ್ ವ್ಯವಸ್ಥೆ ಆರಂಭ

ಬೆಂಗಳೂರು: ಬಿಬಿಎಂಪಿಯು ನಗರದಲ್ಲಿ ಫೇಸ್‌ಲೆಸ್, ಸಂಪರ್ಕ ರಹಿತ ಮತ್ತು ಆನ್‌ಲೈನ್ ಡಿಜಿಟಲ್ ವ್ಯವಸ್ಥೆ ಪ್ರಾರಂಭಿಸುತ್ತಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು. ಈ ಕುರಿತು ಮಾಹಿತಿ ನೀಡಿ, ಉಪಮುಖ್ಯಮಂತ್ರಿ ಮತ್ತು ನಗರಾಭಿವೃದ್ಧಿ ಸಚಿವ

ಡಿ.ಕೆ.ಶಿವಕುಮಾರ್ ನೇತೃತ್ವ ಮತ್ತು ನಿರ್ದೇಶನದಲ್ಲಿ ಪಾಲಿಕೆಯು ಫೇಸ್‌ಲೆಸ್, ಸಂಪರ್ಕ ರಹಿತ ಮತ್ತು ಆನ್‌ಲೈನ್ ಡಿಜಿಟಲ್ ವ್ಯವಸ್ಥೆ ಆರಂಭಿಸುತ್ತಿದ್ದು, ರಿಜಿಸ್ಟರ್‌ಗಳಲ್ಲಿನ ಎಲ್ಲಾ 21 ಲಕ್ಷ ಖಾತಾಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ ಮತ್ತು ರೋಲ್ ಔಟ್ ಕೂಡಾ ಶೀಘ್ರದಲ್ಲಿಯೇ ಪ್ರಾರಂಭವಾ ಗಲಿದೆ. ಇದರ ಭಾಗವಾಗಿ, ಮುಂದಿನ ದಿನಗಳಲ್ಲಿ ಬಿಬಿಎಂಪಿಯ ಸಿಬ್ಬಂದಿಯು ನಗರವಾಸಿಗಳ ಮನೆಗಳಿಗೆ ಭೇಟಿ ನೀಡಿ ಆಸ್ತಿಯ ಜಿ.ಪಿ.ಎಸ್. (GPS coordinates) ಮಾಹಿತಿ ಸೆರೆ ಹಿಡಿಯುತ್ತಾರೆ. ಪಾಲಿಕೆಯ ಇ ಖಾತಾ ಪಡೆಯಲು ಪ್ರತಿ ಆಸ್ತಿಯ ಜಿಪಿಎಸ್ ಕಡ್ಡಾಯವಾಗಿದೆ ಎಂದರು. ಈ ಪ್ರಾಪರ್ಟಿ ಜಿಪಿಎಸ್ ಆಸ್ತಿಯ ವಿಶಿಷ್ಟ ಗುರುತಾಗಿರಲಿದ್ದು, ಎಲ್ಲಾ ಬಿಬಿಎಂಪಿಯ ಇ-ಖಾತಾ ಸೇವೆಗಳ ಫೇಸ್‌ಲೆಸ್, ಸಂಪರ್ಕ ರಹಿತ ಮತ್ತು ಆನ್‌ಲೈನ್ ವಿತರಣೆಗೆ ಇದು ಬಹಳ ಮುಖ್ಯವಾಗಿರುತ್ತದೆ. ಹೀಗಾಗಿ ಜನರಿಗೆ ಉತ್ತಮ ಸೇವೆ ನೀಡಲು ಬಿಬಿಎಂಪಿಯನ್ನು ಬಲಪಡಿಸಲು ಸಾರ್ವಜನಿಕರ ಸಂಪೂರ್ಣ ಸಹಕಾರ ನೀಡಬೇಕು. ಬಿಬಿಎಂಪಿಯು ಸದಾ ಜನರ ಸೇವೆಗಿರಲಿದೆ. ಎಂದು ಮನವಿ ಮಾಡಿದ್ದಾರೆ.

ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಕಲಾವಿದರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ಲೆಬನಾನ್: ವಾಕಿಟಾಕಿ ಸ್ಫೋಟಕ್ಕೆ 25 ಸಾವು

ಇಸ್ರೇಲ್‌ನ ಮೊಸಾದ್, ಶಿನ್ ಬೆಟ್ ಮೇಲೆ ಶಂಕೆ | ಯುದ್ಧದ ಹೊಸ ಹಂತ ಆರಂಭ ಎಂದ ಇಸ್ರೇಲ್ | 10 ವರ್ಷ ಹಳೆ ವಾಕಿಟಾಕಿ ಬಳಸುತ್ತಿದ್ದ ಹಿಜ್ಬುಲ್ಲಾ

ಲೆಬನಾನ್: ಹಿಜ್ಬುಲ್ಲಾ ಉಗ್ರ ಸಂಘಟನೆಯನ್ನೇ ಕೇಂದ್ರೀಕರಿಸಿದಂತೆ ಎಲೆಕ್ಟ್ರಾನಿಕ್ ಉಪಕರಣಗಳ ಸ್ಫೋಟ ನಡೆಸಲಾಗುತ್ತಿದ್ದು, ಈ ಬಾರಿ ವಾಕಿಟಾಕಿ, ಸೋಲಾರ್, ಲ್ಯಾಪ್‌ಟಾಪ್ ಮೊದಲಾದ ಉಪಕರಣಗಳ ಸ್ಫೋಟದಲ್ಲಿ 25 ಮಂದಿ ಹಿಜ್ಬುಲ್ಲಾ ಸದಸ್ಯರು ಸಾವಿಗೀಡಾಗಿದ್ದಾರೆ. ಸಾವಿರಾರು ಎಲೆಕ್ಟ್ರಾನಿಕ್ ಉಪಕರಣಗಳು ಏಕಕಾಲದಲ್ಲೇ ಸ್ಫೋಟವಾಗಿದ್ದು, 450ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಪೇಜರ್‌ಗಳ ಸ್ಫೋಟದಲ್ಲಿ 12 ಮಂದಿ ಸಾವಿಗೀಡಾಗಿದ್ದರು.

ಹಿಜ್ಬುಲ್ಲಾ ಉಗ್ರರನ್ನು ಬೆಚ್ಚಿ ಬೀಳಿಸಿದ ಪೇಜರ್ ಸ್ಫೋಟದ ಬಳಿಕ ಮತ್ತೊಂದು ಎಲೆಕಾನಿಕ್ ಉಪಕರಣ ಸ್ಫೋಟದ ಮೂಲಕ ದೂರ ನಿಯಂತ್ರಕ ದಾಳಿ ನಡೆಸಲಾಗಿದೆ. ಪ್ಯಾಲೆಸ್ತೀನ್ ಪರ ಹೋರಾಟಕ್ಕೆ ನಿಂತಿದ್ದ ಲೆಬನಾನ್‌ನ ಹಿಜ್ಬುಲ್ಲಾ ಉಗ್ರ ಸಂಘಟನೆಯನ್ನೇ ಗುರಿಯಾಗಿಸಿ ನಿಗೂಢ ರೀತಿಯಲ್ಲಿ ದಾಳಿಗಳು ನಡೆದಿವೆ. ಈ ಸರಣಿ ಎಲೆಕ್ಟ್ರಾನಿಕ್ ಸ್ಫೋಟದ ಹಿಂದೆ ಇಸ್ರೇಲ್ ಕೈವಾಡದ ಶಂಕೆ ವ್ಯಕ್ತವಾಗಿದೆ.

ಎರಡು ದಿನಗಳಿಂದ ನಡೆಯುತ್ತಿರುವ ನಿಗೂಢ ದಾಳಿಗೆ ಇಸ್ರೇಲ್ ಕಾರಣ ಎಂದು ನೇರ ಆರೋಪ ಮಾಡಿರುವ ಹಿಜ್ಬುಲ್ಲಾ ನಾಯಕರು, ಭೀಕರ ಪ್ರತಿಕಾರ ಕ್ರಮದ ಶಪಥ ತೊಟ್ಟಿದ್ದಾರೆ.

ಪೇಜರ್ ಸ್ಫೋಟದಲ್ಲಿ ಮಂಗಳವಾರ ಮಡಿದವರ ಅಂತ್ಯ ಸಂಸ್ಕಾರ ವೇಳೆ ಲೆಬನಾನ್ ರಾಜಧಾನಿ ಬೈರೂತ್‌ನ ದಕ್ಷಿಣ ಭಾಗ ಹಾಗೂ ಬೆಕಾ ವ್ಯಾಲಿ ಪ್ರದೇಶದಲ್ಲಿ ವಾಕಿಟಾಕಿಗಳು ಸ್ಫೋಟಗೊಂಡಿವೆ. ಚಿಕ್ಕಮಕ್ಕಳು ಸೇರಿ 450 ಮಂದಿ ಗಾಯಗೊಂಡಿದ್ದಾರೆ. ಬಹಳಷ್ಟು ಜನರ ಕಣ್ಣು, ಕಿವಿ, ಮುಖ ಸುಟ್ಟು ಹೋಗಿವೆ. ಹೀಗಾಗಿ ಲೆಬನಾನ್‌ನಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಗೆ ಭಯಪಡುವಂತಾಗಿದೆ. ಬಹಳಷ್ಟು ಜನರು ಫೋನ್ ಸ್ವಿಚ್ ಆಫ್ ಮಾಡಿ ಬ್ಯಾಟರಿ ತೆಗೆದಿರಿಸಿದ್ದಾರೆ ಎಂದು ವರದಿಯಾಗಿದೆ.

10 ವರ್ಷ ಹಳೆಯ ವಾಕಿಟಾಕಿ ಸ್ಫೋಟ

ಸ್ಫೋಟಗೊಂಡ ವಾಕಿಟಾಕಿಗಳು ಜಪಾನ್‌ನ ಐಕಾಮ್ ಕಂಪನಿ ತಯಾರಿಸಿದ್ದಾಗಿದ್ದು, ಇವುಗಳ ಉತ್ಪಾದನೆ 10 ವರ್ಷ ಹಿಂದೆಯೇ ಕೊನೆಗೊಂಡಿದೆ. ವಾಕಿಟಾಕಿಗಳನ್ನು ಅಧಿಕೃತ ಏಜೆಂಟ್‌ಗಳಿಂದ ಖರೀದಿಸಿಲ್ಲ, ಯಾವುದೇ ಪರವಾನಿಗೆ ಕೂಡ ಹೊಂದಿಲ್ಲ. ಸುರಕ್ಷತಾ ಪರಿಶೀಲನೆ ಕೂಡ ನಡೆಸಲಾಗಿಲ್ಲ ಎಂದು ಲೆಬನಾನ್ ಸಂವಹನ ಸಚಿವಾಲಯದ ದತ್ತಾಂಶದಿಂದ ತಿಳಿದುಬಂದಿದೆ. ಐಕಾಮ್ ಕಂಪನಿಯೂ ಹೇಳಿಕೆ ಬಿಡುಗಡೆ ಮಾಡಿದ್ದು ಐಸಿ-ವಿ82 ಮಾಡೆಲ್ ವಾಕಿಟಾಕಿಗೆ ಬ್ಯಾಟರಿ ಅಗತ್ಯವಿಲ್ಲ. ಈ ಮಾದರಿ ವಾಕಿಟಾಕಿ ಉತ್ಪಾದನೆ- ಮಾರಾಟ 10 ವರ್ಷ ಹಿಂದೆಯೇ ಸ್ಥಗಿತವಾಗಿದೆ. ಹೀಗಾಗಿ ಸ್ಫೋಟಗೊಂಡ ವಾಕಿಟಾಕಿ ನಕಲಿ ಇರಬೇಕು ಎಂದು ಹೇಳಿದೆ.

ಯುದ್ಧದ ಹೊಸ ಹಂತ: ಇಸ್ರೇಲ್

ದೇಶದ ಸೇನಾ ವಿಭಾಗಗಳ ಜತೆಗಿನ ಸಂವಾದ ವೇಳೆ ಇಸ್ರೇಲ್ ರಕ್ಷಣಾ ಸಚಿವ ಯೊಆವ್ ಗ್ಯಾಲಂಟ್, 'ಯುದ್ಧದಲ್ಲಿ ಹೊಸ ಹಂತ' ಪ್ರವೇಶಿಸಿದ್ದೇವೆ ಎಂದು ಹೇಳಿದ್ದಾರೆ. 'ಈ ಸಂಘರ್ಷ ಎದುರಿಸಲು ಧೈರ್ಯ, ಸಂಕಲ್ಪ, ಪರಿಶ್ರಮದ ಅಗತ್ಯವಿದೆ' ಎಂದೂ ಗ್ಯಾಲಂಟ್ ಹೇಳಿದ್ದಾರೆ. ಯುದ್ಧದ ದೃಷ್ಟಿ ಉತ್ತರಕ್ಕೆ ತಿರುಗಿದೆ. ಉತ್ತರ ಭಾಗದಲ್ಲಿ ಸೇನೆ, ಶಕ್ತಿ, ಸಂಪನ್ಮೂಲ ನಿಯೋಜನೆ ಆರಂಭವಾಗಿದೆ ಎಂದಿದ್ದಾರೆ. ಸೇನೆ ಮತ್ತು ಭದ್ರತಾ ಪಡೆಗಳನ್ನು ಸಚಿವ ಮುಕ್ತ ಕಂಠದಿಂದ ಹೊಗಳಿದ್ದಾರೆ. ಫಲಿತಾಂಶ ಪರಿಣಾಮಕಾರಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ಅವರ ಈ ಎಲ್ಲಾ ಮಾತುಗಳೂ ಲೆಬನಾನ್‌ನಲ್ಲಿನ ಎಲೆಕ್ಟ್ರಾನಿಕ್ ಉಪಕರಣಗಳ ಸರಣಿ ಸ್ಫೋಟಗಳಿಗೆ ಲಿಂಕ್ ಆಗುತ್ತಿವೆ.

ಮೊಸಾದ್, ಶಿನ್ ಬೆಟ್ ಮೇಲೆ ಕಣ್ಣು

ಲೆಬನಾನ್ ಭದ್ರತಾ ಅಧಿಕಾರಿಗಳ ಪ್ರಕಾರ, ಇಸ್ರೇಲ್‌ನ ಮೊಸಾದ್ ಗುಪ್ತಚರ ಇಲಾಖೆ ಮತ್ತು ಶಿನ್‌ಬೆಟ್ ಏಜೆನ್ಸಿ ಜತೆಗೂಡಿ ಸಂಚು ನಡೆಸಿ ಪೇಜರ್‌ಗಳಲ್ಲಿ ಸ್ಫೋಟಕಗಳನ್ನು ಇಟ್ಟು ಸಿಡಿಸಿದೆ. ಈ ಎರಡು ಏಜನ್ಸಿಗಳು ಇಂತಹ ಸಂಕೀರ್ಣ ಹಾಗೂ ಅತ್ಯಾಧುನಿಕ ದಾಳಿ ನಡೆಸುವ ಇತಿಹಾಸವನ್ನೇ ಹೊಂದಿದ್ದು ಹಿಜ್ಬುಲ್ಲಾ ಗುರಿಯಾಗಿಸಿ ನಡೆದ ದಾಳಿಗೆ ಮೊಸ್ಸಾದ್ ಕಾರಣ ಎಂದು ಹೇಳಲಾಗಿದೆ. ಈ ಭದ್ರತಾ ಸಂಸ್ಥೆಗಳವರು ಫೋನ್‌ನಲ್ಲಿ ಬಾಂಬ್ ಇಟ್ಟು ಪ್ಯಾಲೆಸ್ತೀನ್ ನಾಯಕ ಮಹಮೌದ್ ಹಂಶಾರಿ ಮತ್ತು ಯಹ್ಯಾ ಅಯ್ಯಶ್‌ನನ್ನು ಕೊಂದಿದ್ದರು. ಖಲೇದ್ ಮಾಶಲ್ ಕೊಲೆಗೆ ವಿಷ ಬಳಕೆ ಮಾಡಲಾಗಿತ್ತು. ಇರಾನ್‌ನ ಯುರೇನಿಯಮ್ ಘಟಕ ವಶಕ್ಕೆ ಪಡೆಯಲು 2008ರಲ್ಲಿ ಸ್ಟಕ್ಸ್‌ನೆಟ್ ಕಂಪ್ಯೂಟರ್ ವೈರಸ್ ಬಿಡುಗಡೆ ಮಾಡಲಾಗಿತ್ತು. ಇಂತಹ ದಾಳಿಗಳ ಕಾರಣಕ್ಕೆ ಲೆಬನೀಸ್ ಪೇಜರ್ ಮತ್ತು ವಾಕಿಟಾಕಿ ಸ್ಫೋಟದಲ್ಲಿ ಮೊಸ್ಸಾದ್ ಮತ್ತು ಶಿನ್‌ಬೆಟ್ ಗುಪ್ತಚರ ಇಲಖೆಯ ಕೈವಾಡವನ್ನು ಬಲವಾಗಿ ಶಂಕಿಸಿದೆ.

ರಾಹುಲ್ ನಿಂದಿಸಿದ ಸಚಿವ ರವನೀತ್ ವಿರುದ್ಧ ದೂರು

ಬೆಂಗಳೂರು: ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ನಂ.1 ಭಯೋತ್ಪಾದಕ ಎಂದು ನಿಂದಿಸಿದ್ದ ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು ವಿರುದ್ಧ ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಖ್ ಸಮುದಾಯದ ವಿಚಾರವಾಗಿ ಅಮೆರಿಕದಲ್ಲಿ ಇತ್ತೀಚೆಗೆ ನಡೆಸಿದ ಸಂವಾದದಲ್ಲಿ ರಾಹುಲ್ ಗಾಂಧಿ ನೀಡಿದ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದ ರವನೀತ್ ಸಿಂಗ್, ರಾಹುಲ್ ಭಾರತೀಯನಲ್ಲ. ಆತನೊಬ್ಬ ಭಯೋತ್ಪಾದಕ. ಸಿಖ್ ಧರ್ಮೀಯರಿಗೆ ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿಲ್ಲ ಎಂದು ಹೇಳುತ್ತಾ ಸಿಖ್ ಸಮುದಾಯವನ್ನು ಒಡೆಯುವ ಪ್ರಯತ್ನ ಮಾಡಿದ್ದಾರೆ. ಭಾರತದ ನಂ.1 ಭಯೋತ್ಪಾದಕ ಎಂದು ವಿವಾದಾತ್ಮಕ ಹೇಳಿಕೆ ನೀಡಿದ್ದರು.ಕೆಪಿಸಿಸಿ ಪದಾಧಿಕಾರಿಯೊಬ್ಬರು ನೀಡಿದ ದೂರಿನ ಮೇರೆಗೆ ಕೇಂದ್ರ ಸಚಿವ ರವನೀತ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಲ್ಮಾನ್ ತಂದೆಗೆ ಬೆದರಿಕೆ

ಮುಂಬೈ: ಬಾಲಿವುಡ್ ಸೂಪರ್ ಸ್ಟಾರ್ ಸಲ್ಮಾನ್ ಖಾನ್ ತಂದೆ, ಪ್ರಸಿದ್ಧ ಚಿತ್ರಕಥೆಗಾರ ಸಲೀಂ ಖಾನ್ ಅವರಿಗೆ ಬುರ್ಕಾಧಾರಿ ಮಹಿಳೆಯೊಬ್ಬರು ಬೆದರಿಕೆ ಹಾಕಿದ್ದು, ಬಾಂದ್ರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬರು ಆರೋಪಿಗಳ ಬಂಧನ

ಸಲೀಂ ಖಾನ್ ಗುರುವಾರ ಮುಂಜಾನೆ ವಾಯು ವಿಹಾರದಲ್ಲಿದ್ದಾಗ ಸ್ಕೂಟರ್‌ನಲ್ಲಿ ಒಬ್ಬ ಪುರುಷನೊಂದಿಗೆ ಬಂದ ಬುರ್ಕಾಧಾರಿ ಮಹಿಳೆ, 'ನಿಮ್ಮನ್ನು ಲಾರೆನ್ಸ್ ಬಿಷ್ಣೋಯಿ ಹತ್ತಿರ ಕಳುಹಿಸುತ್ತೇನೆ' ಎಂದು ಬೆದರಿಕೆ ಹಾಕಿದಳು. ಈ ಸಂಬಂಧ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳಿಬ್ಬರೂ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ. ಸಲ್ಮಾನ್ ಬಾಂದ್ರಾ ನಿವಾಸದ ಹೊರಗೆ ಬಿಷ್ಣೋಯಿ ಗ್ಯಾಂಗ್ ಸದಸ್ಯರು ಗುಂಡು ಹಾರಿಸಿ ಬೆದರಿಕೆ ಒಡ್ಡಿದ್ದ ಪ್ರಕರಣದ ಕೆಲ ತಿಂಗಳ ನಂತರ ಈ ಘಟನೆ ನಡೆದಿದೆ.

ಸಮಾಚಾರ ಸಣ್ಣದಲ್ಲ

ದಂಡ ದಾವೆಯಲ್ಲಿ ಗೂಗಲ್ ಪಾರು

ಲಂಡನ್: ಆನ್‌ಲೈನ್ ಜಾಹೀರಾತು ವ್ಯವಹಾರಗಳಿಗೆ ಸಂಬಂಧಿಸಿದ ನಿಯಮಗಳ ಉಲ್ಲಂಘನೆ ಪ್ರಕರಣದಲ್ಲಿ ಯೂರೋಪ್ ಒಕ್ಕೂಟದಿಂದ 13,778 ಕೋಟಿ ರು. ದಂಡ ನೋಟಿಸ್ ಪಡೆದಿದ್ದ 'ಗೂಗಲ್' ಕಂಪನಿ, ನಂತರ ನಡೆಸಿದ ಕಾನೂನು ಸಮರದಲ್ಲಿ ಜಯ ಸಾಧಿಸಿದೆ. ಬೃಹತ್ ಮೊತ್ತದ ದಂಡ ಪಾವತಿಸಬೇಕಾದ ಅನಿವಾರ್ಯತೆಯಿಂದ ಪಾರಾಗಿದೆ. ಗೂಗಲ್ ತನ್ನ ಪ್ರಾಬಲ್ಯದ ಮೂಲಕ ಆಡ್‌ಸೆನ್ಸ್ ಪ್ಲಾಟ್‌ಫಾರ್ಮ್ ಹೊರತು ಪಡಿಸಿ ಉಳಿದ ವಿರೋಧಿ ಆನ್‌ಲೈನ್ ಜಾಹೀರಾತುದಾರರನ್ನು ಬ್ಲಾಕ್ ಮಾಡಿದೆ. ಅವುಗಳ ಮಾಹಿತಿ ಪಡೆಯಲು ವೆಬ್‌ಸೈಟ್‌ಗಳನ್ನು ನಿರ್ಬಂಧಿಸುತ್ತಿದೆ. 2006ರಿಂದ 16ರವರೆಗೆ ಈ ಕಾನೂನು ಬಾಹಿರ ಚಟುವಟಿಕೆ ನಡೆಸಿದೆ ಎಂದು ಎಂದು 2019ರಲ್ಲಿ ಯೂರೋಪಿಯನ್ ಒಕ್ಕೂಟಗಳ ಆಯೋಗ ಆರೋಪಿಸಿ ದಂಡ ವಿಧಿಸಿತ್ತು. ಅದನ್ನು ಪ್ರಶ್ನಿಸಿ ಗೂಗಲ್ ಕಂಪನಿ, ಲಕ್ಸಂಬರ್ಗ್ ಜನರಲ್ ಕೋರ್ಟ್‌ನಲ್ಲಿ ದಾವೆ ಹೂಡಿತ್ತು. ವಿಚಾರಣೆ ವೇಳೆ ಗೂಗಲ್ ಪರ ವಕೀಲರು, ಯೂರೋಪಿಯನ್ ಕಮಿಷನ್ ಪ್ರಕರಣದ ಪರಿಶೀಲನೆ ವೇಳೆ ಗೂಗಲ್‌ಗೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನೂ ಸೂಕ್ತವಾಗಿ ಪರಿಗಣಿಸಿಲ್ಲ ಎಂದು ವಾದಿಸಿದರು. ಬಳಿಕ ಕೋರ್ಟ್ 13 ಸಾವಿರ ಕೋಟಿ ರು. ದಂಡ ಆದೇಶವನ್ನು ವಜಾಗೊಳಿಸಿದೆ.

ಯೂಟ್ಯೂಬರ್ ವಿರುದ್ಧ ಗಂಗೂಲಿ ದೂರು

ಕೋಲ್ಕತ್ತ: ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ತಮ್ಮ ವಿರುದ್ಧ ನಿಂದನಾತ್ಮಕ ಬರಹ ಪ್ರಕಟಿಸಿದ, ತಪ್ಪು ಮಾಹಿತಿ ಹಂಚಿದ ಆರೋಪದಡಿ ಪಶ್ಚಿಮ ಬಂಗಾಳದ ಯೂ ಟ್ಯೂಬರ್ ವಿರುದ್ಧ ಪೊಲೀಸರಿಗೆ ದೂರು ದಾಖಲಿಸಿದ್ದಾರೆ. ಸಿನೆಬಾಪ್ ಎಂದೇ ಸಾಮಾಜಿಕ ಜಾಲತಾಣದಲ್ಲಿ ಗುರುತಿಸಿಕೊಂಡಿರುವ ಯೂ ಟ್ಯೂಬರ್ ಮೃಣ್ಮಯಿ ದಾಸ್, ಗಂಗೂಲಿ ವಿರುದ್ಧ ಅಸಭ್ಯ ಪದಗಳನ್ನು ಬಳಸಿ ಮಾಜಿ ಕ್ರಿಕೆಟ್ ಆಟಗಾರನ ಬಗ್ಗೆ ಸಮಾಜದಲ್ಲಿ ಕೆಟ್ಟ ಅಭಿಪ್ರಾಯ ಸೃಷ್ಟಿಯಾಗುವಂತೆ ವಿಡಿಯೊ ರಚಿಸಿ ಹಂಚಿಕೊಂಡಿದ್ದ. ಈ ಬಗ್ಗೆ ಗಂಗೂಲಿ ಅವರ ಕಾರ್ಯದರ್ಶಿ ತಾನಿಯಾ ಭಟ್ಟಾಚಾರ್ಯ ಅವರು ಸೈಬರ್ ಕ್ರೈಂ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಗಂಗೂಲಿ ಅವರ ಮಾನಹಾನಿ ಮಾಡಲು ಯೂಟ್ಯೂಬರ್ ಯತ್ನಿಸಿದ್ದಾರೆ ಎಂದೂ ದೂರಿನಲ್ಲಿ ಆರೋಪಿಸಿದ್ದಾರೆ.

ನ್ಯಾಯಾಧೀಶರ ವಿರುದ್ಧ ಮಾನನಷ್ಟ ದಾವೆ

ಗುರುಗ್ರಾಮ್: ಹರಿಯಾಣದ ಮಾಜಿ ಉಪ ಪೊಲೀಸ್ ಕಮಿಷನರ್, ಸ್ಥಳೀಯ ನ್ಯಾಯಾಲಯವೊಂದರ ನ್ಯಾಯಾಧೀಶರ ವಿರುದ್ಧವೇ 1 ಕೋಟಿ ರು ಮೊತ್ತದ ಮಾನನಷ್ಟ ಮೊಕದ್ದಮೆ ಹೂಡಿ ಸುದ್ದಿಯಾಗಿದ್ದಾರೆ. 2022ರ ಫೆಬ್ರುವರಿಯಲ್ಲಿನ ಪ್ರಕರಣವೊಂದರಲ್ಲಿ ಕೋರ್ಟ್ ಆದೇಶ ನೀಡುವಾಗ ನ್ಯಾಯಾಧೀಶರು ತನ್ನ ವಿರುದ್ಧ ವ್ಯತಿರಿಕ್ತ ಹೇಳಿಕೆ ನೀಡಿದ್ದ ಕಾರಣ ಮಾಜಿ ಡಿಸಿಪಿ ಕೃಷ್ಣಕುಮಾರ್ ರಾವ್ 1 ಕೋಟಿ ರು. ಮಾನಹಾನಿ ದಾವೆ ಹೂಡಿದ್ದಾರೆ. ಗುರುಗ್ರಾಮ್‌ದಲ್ಲಿ ಬಹು ಕೋಟಿ ಹಗರಣದಲ್ಲಿ ಲಂಚ ಪಡೆದ ಆರೋಪ ಹೊತ್ತಿದ್ದ ಮತ್ತೊಬ್ಬ ಐಪಿಎಸ್ ಅಧಿಕಾರಿಯ ಜಾಮೀನು ಅರ್ಜಿ ವಿಚಾರಣೆ ವೇಳೆ ಉಪ ಪೊಲೀಸ್ ಆಯುಕ್ತರಾಗಿದ್ದ ಕೃಷ್ಣ ಕುಮಾರ್ ರಾವ್ ಗಮನಕ್ಕೆ ಬರದೇ ಹಗರಣ ನಡೆದಿರಲು ಸಾಧ್ಯವಿಲ್ಲ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದರು. ಈ ವಿಚಾರವಾಗಿ ನ್ಯಾಯಾಧೀಶರ ಹೇಳಿಕೆಗೆ ಯಾವುದೇ ಕಾನೂನಾತ್ಮಕ ಆಧಾರವಿಲ್ಲ, ಈ ಹೇಳಿಕೆಯಿಂದ ಮಾನಹಾನಿಯಾಗಿದೆ ಎಂದು ಮಾಜಿ ಡಿಸಿಪಿ ವಾದಿಸಿದ್ದಾರೆ. ಮೊಕದ್ದಮೆಯ ವಿಚಾರಣೆ ನ.21ಕ್ಕೆ ಮುಂದೂಡಲಾಗಿದೆ.

ಹಿಜ್ಬುಲ್ಲಾ ಉಗ್ರ ನೆಲೆಗಳಿಗೆ ಬಾಂಬ್ ದಾಳಿ

ಬೈರೂತ್: ಎಲೆಕ್ಟ್ರಾನಿಕ್ ಉಪಕರಣಗಳ ಸರಣಿ ಸ್ಫೋಟಗಳ ಬಗೆಗೇ ತಲೆಕೆಡಿಸಿಕೊಂಡಿದ್ದ ಲೆಬನಾನ್‌ನಲ್ಲಿನ ಹಿಜ್ಬುಲ್ಲಾ ಉಗ್ರ ಸಂಘಟನೆ ಮೇಲೆ ದಿಢೀರ್ ಎಂಬಂತೆ ಇಸ್ರೇಲ್ ಗುರುವಾರ ವೈಮಾನಿಕ ದಾಳಿ ನಡೆಸಿ ಬಾಂಬ್‌ಗಳ ಸುರಿಮಳೆಗೆರೆದಿದೆ. ಇದರಿಂದ ನೂರಾರು ಮಂದಿ ಗಂಭೀರ ಗಾಯಗೊಂಡಿದ್ದಾರೆ. ಪೇಜರ್, ವಾಕಿ ಟಾಕಿ, ಲ್ಯಾಪ್‌ಟಾಪ್, ಸೋಲಾರ್ ಉಪಕರಣಗಳ ಸರಣಿ ಸ್ಫೋಟದಿಂದಾಗಿ 32 ಮಂದಿಯ ಸಾವು, ಸಾವಿರಾರು ಗಾಯಾಳುಗಳೊಂದಿಗೆ ಪರಿತಪಿಸುತ್ತಿದ್ದ ಹಿಜ್ಬುಲ್ಲಾ ಉಗ್ರ ಸಂಘಟನೆ ಮೇಲೆ ಇಸ್ರೇಲ್ ಇದೀಗ ನೇರವಾಗಿ ಬಾಂಬ್ ದಾಳಿಯನ್ನೇ ಶುರು ಮಾಡಿದೆ. ದಕ್ಷಿಣ ಲೆಬನಾನ್‌ನ ಹಿಜ್ಬುಲ್ಲಾ ಭದ್ರಕೋಟೆಗಳ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸುತ್ತಿದೆ. ಸಾವು-ನೋವಿನ ಮಾಹಿತಿ ಇನ್ನಷ್ಟೇ ಸಿಗಬೇಕಿದೆ.

{ ಆರ್ ಅಶೋಕ } ಪ್ರತಿಪಕ್ಷ ನಾಯಕ

ನಾಗಮಂಗಲದ ಕೋಮುಗಲಭೆ ವಿಚಾರದಲ್ಲಿ ಸರಕಾರ ಸರಿಯಾಗಿ ತನಿಖೆ ನಡೆಸುವಂತೆ ಆಗ್ರಹಿಸಿ ಟ್ವೀಟ್ ಮಾಡಿದ್ದೆ. ಆದರೆ ಸರಕಾರ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಿದೆ. ಎಲ್ಲ ಬಿಜೆಪಿ ನಾಯಕರ ವಿರುದ್ಧ ಪ್ರಕರಣ ದಾಖಲಿಸಿ ವಿರೋಧ ಪಕ್ಷವನ್ನು ಬಗ್ಗುಬಡಿಯಬೇಕೆಂದು ಸರಕಾರ ನಿರ್ಧರಿಸಿದ್ದು, ವಿರೋಧ ಪಕ್ಷವಾಗಿ ನಾವು ಏನು ಮಾಡಬೇಕು?

ಮಧ್ಯಪ್ರಾಚ್ಯ ಸಂಘರ್ಷ: ಇಂದು ವಿಶ್ವಸಂಸ್ಥೆ ಸಭೆ

ವಾಷಿಂಗ್ಟನ್: ಲೆಬೆನಾನ್‌ನಲ್ಲಿ ನಡೆದ ಪೇಜರ್ ಮತ್ತು ವಾಕಿಟಾಕಿ ಸ್ಫೋಟ ಕುರಿತು ವಿಶ್ವಸಂಸ್ಥೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಮಧ್ಯಪ್ರಾಚ್ಯದಲ್ಲಿ ತೀವ್ರ ಸಂಘರ್ಷ ಏರ್ಪಡುವ ಸಾಧ್ಯತೆ ಇದೆ ಎಂದು ಹೇಳಿದೆ. ಹಿಜ್ಬುಲ್ಲಾ ಗುರಿಯಾಗಿಸಿ ನಡೆದ ಪೇಜರ್, ವಾಕಿಟಾಕಿ, ಲ್ಯಾಪ್‌ಟಾಪ್ ಸರಣಿ ಸ್ಫೋಟ ಲೆಬನಾನ್‌ನಲ್ಲಿ ಸಂಘರ್ಷ ಉಲ್ಬಣದ ಅಪಾಯ ಸೂಚಿಸುತ್ತಿದೆ ಎಂದು ವಿಶ್ವಸಂಸ್ಥೆ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಗುರುವಾರ ಹೇಳಿದ್ದಾರೆ. ಲೆಬನಾನ್‌ನಲ್ಲಿನ ಎಲೆಕ್ಟ್ರಾನಿಕ್ ಉಪಕರಣಗಳ ಸರಣಿ ಸ್ಫೋಟಗಳ ಕುರಿತು ವಿಶ್ವಸಂಸ್ಥೆ ಭದ್ರತಾ ಮಂಡಳಿ ಶುಕ್ರವಾರ ಸಭೆ ಸೇರಲಿದೆ. ಇನ್ನೊಂದೆಡೆ ಅಮೆರಿಕ ರಾಷ್ಟ್ರೀಯ ಭದ್ರತಾ ಮಂಡಳಿ ವಕ್ತಾರ ಜಾನ್ ಕಿರ್ಬಿ, ನಾವು ಇನ್ನು ಯಾವುದೇ ರೀತಿಯ ಸಂಘರ್ಷ ಉಲ್ಬಣಿಸುವುದನ್ನು ನೋಡಲು ಬಯಸುವುದಿಲ್ಲ. ಸೇನಾ ಕಾರ್ಯಾಚರಣೆಗಳೇ ಸಮಸ್ಯೆಗೆ ಉತ್ತರವಾಗದು ಎಂದು ಹೇಳಿದ್ದಾರೆ.

ನಿತ್ಯ ನೂರಾರು ಬಾರಿ ಕರೆ; ಪತ್ನಿ ದೂರು-ಪತಿ ಬಂಧನ

ಟೋಕಿಯೊ: ನಿತ್ಯವೂ ನೂರಾರು ಬಾರಿ ಕರೆ ಮಾಡಿ ಕಿರಿಕಿರಿ ಮಾಡುತ್ತಿದ್ದ ಪತಿಯನ್ನು ಪತ್ನಿ ದೂರಿನ ಮೇರೆಗೆ ಜಪಾನ್ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಸಂಗಾತಿಯ ಬಗ್ಗೆ ಅತಿ ಕಾಳಜಿಯಿಂದಲೋ, ಅನುಮಾನದಿಂದಲೋ ಪದೇ ಪದೇ ಕರೆ ಮಾಡಿದರೆ ಸಂಕಷ್ಟಕ್ಕೆ ಒಳಗಾಗಬೇಕಾಗುತ್ತದೆ ಎನ್ನುವುದಕ್ಕೆ ಈ ಪ್ರಸಂಗವೇ ಸಾಕ್ಷಿಯಾಗಿದೆ.

ಜಪಾನ್‌ನ ಅಮಗಸಾಕಿ ನಗರದ ನಿವಾಸಿ ಪತಿ(38), ಪತ್ನಿ(31)ಗೆ ಅತಿಯಾದ ಕಾಳಜಿಯಿಂದಲೋ, ಅನುಮಾನದಿಂದಲೋ ದಿನದಲ್ಲಿ 100ಕ್ಕೂ ಅಧಿಕ ಬಾರಿ ಕರೆ ಮಾಡಿ ವಿಚಾರಿಸುತ್ತಿದ್ದ. ಪತ್ನಿ ಕರೆ ಸ್ವೀಕರಿಸುವುದನ್ನು ಕಡಿಮೆ ಮಾಡಿದಾಗ ಅಪರಿಚಿತ ಸಂಖ್ಯೆಗಳಿಂದ ಕರೆ ಮಾಡಲಾರಂಭಿಸಿದ. ಇದು ಯಾರು ಎಂದು ತಿಳಿಯದೇ ಪತ್ನಿ ಭಯಪಟ್ಟು ಪೊಲೀಸರಿಗೆ ದೂರು ನೀಡಿದ್ದಾಳೆ. ಅಲ್ಲದೆ ಪತಿ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾಳೆ. ತನಿಖೆ ನಡೆಸಿದ ಪೊಲೀಸರು ಆ ಕರೆಗಳು ಪತಿಯದ್ದೇ ಎಂದು ಪತ್ತೆ ಮಾಡಿದ್ದಾರೆ. ಬಳಿಕ ಇದೇ ಸೆ.4ರಂದು ಪತಿಯನ್ನು ಬಂಧಿಸಿದ್ದಾರೆ.

ವಿಚಾರಣೆ ವೇಳೆ ಆತ ಪತ್ನಿಯನ್ನು ಅತೀವವಾಗಿ ಪ್ರೀತಿಸುತ್ತಿರುವುದಾಗಿಯೂ, ಅದೇ ಕಾರಣಕ್ಕೆ ಪದೇ ಪದೇ ಕರೆ ಮಾಡುತ್ತಿದ್ದೆ ಎಂದು ಹೇಳಿದ್ದಾನೆ. ಆತನ ಉತ್ತರ ಕೇಳಿ ಅಧಿಕಾರಿಗಳೇ ಅಚ್ಚರಿಗೊಂಡಿದ್ದಾರೆ.

ಭಾರತ-ಬಾಂಗ್ಲಾ ನಡುವಿನ ಟೆಸ್ಟ್ | ಪಂದ್ಯ ಶುರುವಿನಲ್ಲೇ ಮುಗ್ಗರಿಸಿದ್ದ ಸ್ಟಾರ್ ಬ್ಯಾಟರ್‌ಗಳು | ಪಂದ್ಯದ ಕೈ ಹಿಡಿದ ಆಲ್‌ರೌಂಡರ್‌ಗಳು

ಬಿಳಿವಸ್ತ್ರದಾಟದಲ್ಲಿ ರಂಗೆಬ್ಬಿಸಿದ ರವಿಗಳು!

ಚೆನ್ನೈ: ಭಾರತ ಹಾಗೂ ಬಾಂಗ್ಲಾದೇಶ ನಡುವಣ ಮೊದಲ ಟೆಸ್ಟ್ ಪಂದ್ಯ ಚೆನ್ನೈನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದಿದೆ. ಮೊದಲ ಟೆಸ್ಟ್‌ನ ಮೊದಲ ದಿನ ಟೀಮ್ ಇಂಡಿಯಾ ಆಲ್‌ರೌಂಡರ್‌ಗಳು ಉತ್ತಮ ಪ್ರದರ್ಶನ ತೋರಿದ್ದಾರೆ. ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ ರವೀಂದ್ರ ಜಡೇಜಾ ಹಾಗೂ ತವರಿನ ಹುಡುಗ ರವಿಚಂದ್ರನ್ ಅಶ್ವಿನ್ ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಉತ್ತಮ ಮೊತ್ತದತ್ತ ದಾಪುಗಾಲು ಇಟ್ಟಿದೆ.

ಚೆನ್ನೈನ ಚೆಪಾಕ್ ಪಿಚ್ ಕೆಂಪು ಮಣ್ಣಿನಿಂದ ಕೂಡಿದ್ದು, ಈ ಪಿಚ್ ವೇಗದ ಬೌಲರ್‌ಗಳಿಗೆ ಕೊಂಚ ನೆರವು ನೀಡುತ್ತದೆ ಎಂದು ಅರಿತ ಬಾಂಗ್ಲಾ ನಾಯಕ ಫೀಲ್ಡಿಂಗ್ ಮಾಡಲು ಮುಂದಾದರು. ಇವರ ನಿರ್ಧಾರವನ್ನು ಬಾಂಗ್ಲಾ ತಂಡದ ವೇಗದ ಬೌಲರ್‌ಗಳು ಸಮರ್ಥಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಮೊದಲಾವಧಿಯ ಆಟದಲ್ಲೇ ಟೀಮ್ ಇಂಡಿಯಾದ ಸ್ಟಾರ್ ಆಟಗಾರರಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಶುಭಮನ್ ಗಿಲ್ ಪೆವಿಲಿಯನ್ ಸೇರಿ ಆಗಿತ್ತು.

ಕಳಪೆ ಆರಂಭ: ಆತಿಥೇಯ ತಂಡದಲ್ಲಿ ಚಿಂತೆಯ ಗೆರೆಗಳು ಕಾಣಿಸಿಕೊಂಡರೆ, ಪ್ರವಾಸಿ ತಂಡದ ಮುಖದಲ್ಲಿ ನಗು ಕಾಣಿಸಿಕೊಂಡಿತ್ತು. ಆದರೆ ನಾಲ್ಕನೇ ವಿಕೆಟ್‌ಗೆ ಟೀಮ್ ಇಂಡಿಯಾ ಎಡಗೈ ಆಟಗಾರರಾದ ಯಶಸ್ವಿ ಜೈಸ್ವಾಲ್ ಹಾಗೂ ರಿಷಭ್ ಪಂಥ್ ಎಚ್ಚರಿಕೆ ಆಟವನ್ನು ಆಡಿದರು. ಪರಿಣಾಮ ತಂಡ ಅಪಾಯದಿಂದ ಪಾರಾಯಿತು. ಈ ಜೋಡಿ ತಂಡದ ಮೊತ್ತವನ್ನು ಶತಕದ ಸನಿಹದಲ್ಲಿ ತಂದು ನಿಲ್ಲಿಸಿದ್ದಾಗ, ರಿಷಭ್ ಔಟ್ ಆದರು.

ಐದನೇ ವಿಕೆಟ್‌ಗೆ ಯಶಸ್ವಿ ಜೈಸ್ವಾಲ್ ಹಾಗೂ ಕೆಎಲ್ ರಾಹುಲ್ ಸಹ ಉತ್ತಮ ಜೊತೆಯಾಟದ ಕಾಣಿಕೆ ನೀಡಿದರು. ಕನ್ನಡಿಗ ಕೆಎಲ್ ರಾಹುಲ್ ಬಿಗ್ ಇನಿಂಗ್ಸ್ ಕಟ್ಟುವ ಭರವಸೆ ಮೂಡಿಸಿದ್ದರು. ಆದರೆ 16 ರನ್ ಬಾರಿಸಿದ್ದಾಗ ಇಲ್ಲದ ಹೊಡೆತಕ್ಕೆ ಮುಂದಾಗಿ ಔಟ್ ಆದರು.

195 ರನ್ ಜೊತೆಯಾಟ: ಟೀಮ್ ಇಂಡಿಯಾ 144 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ, ಆಲ್‌ರೌಂಡರ್‌ಗಳಾದ ರವಿಚಂದ್ರನ್ ಅಶ್ವಿನ್ ಹಾಗೂ ರವೀಂದ್ರ ಜಡೇಜಾ ಅವರು ಇನಿಂಗ್ಸ್ ಕಟ್ಟುವ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡರು. ಸಾಮಾನ್ಯವಾಗಿ ಈ ಜೋಡಿ ಬೌಲಿಂಗ್ ಮಾಡುವ ವೇಳೆ ಉತ್ತಮ ಹೊಂದಾಣಿಕೆಯನ್ನು ಹಲವು ಬಾರಿ ತೋರಿಸಿದೆ. ಈಗ ಟೀಮ್ ಇಂಡಿಯಾದ ಆಲ್‌ರೌಂಡರ್‌ಗಳು ತಮ್ಮ ಬ್ಯಾಟಿಂಗ್ ಕಲೆಯಿಂದ ತಂಡಕ್ಕೆ ಆಧಾರವಾದರು.

ಸುಮಾರು 38 ಓವರ್‌ಗಳ ವರೆಗೆ ವಿಕೆಟ್ ಬೀಳದಂತೆ ಕಾಯ್ದುಕೊಂಡು ಬ್ಯಾಟ್ ಮಾಡಿದ ಅಶ್ವಿನ್ ಹಾಗೂ ಜಡೇಜಾ ತಂಡಕ್ಕೆ ಆಧಾರವಾದರು. ಕೆಟ್ಟ ಎಸೆತಗಳನ್ನು ದಂಡಿಸುತ್ತಾ ಸಾಗಿದ ಜೋಡಿ ಡ್ರೆಸ್ಸಿಂಗ್ ರೂಮ್‌ನಲ್ಲಿ ಕುಳಿತಿದ್ದ ರೋಹಿತ್ ಶರ್ಮಾ, ಕೋಚ್ ಗೌತಮ್ ಗಂಭೀರ್ ಅವರ ಚಿಂತೆಯನ್ನು ದೂರ ಮಾಡಿದರು. ಅಶ್ವಿನ್ ಅಜೇಯ 102 ರನ್ ಬಾರಿಸಿದರೆ, ಜಡೇಜಾ ಅಜೇಯ 86 ರನ್ ಸಿಡಿಸಿದರು. ಭಾರತ ದಿನದಾಟದಂತ್ಯಕ್ಕೆ 6 ವಿಕೆಟ್‌ಗೆ 339 ರನ್ ಗಳಿಸಿದೆ.

ಎರಡನೇ ದಿನದಾಟದ ಮೊದಲಾವಧಿಯಲ್ಲಿ ಟೀಮ್ ಇಂಡಿಯಾ ಬ್ಯಾಟರ್‌ಗಳು ಎಚ್ಚರಿಕೆಯ ಬ್ಯಾಟಿಂಗ್ ಮಾಡಿ, ತಂಡದ ಮೊತ್ತವನ್ನು ಹಿಗ್ಗಿಸುವ ಅನಿವಾರ್ಯತೆ ಇದೆ. ಅಂದಾಗ ಮಾತ್ರ ಗೆಲುವಿನ ಆಸೆ ಫಲಿಸುತ್ತದೆ.

ಮೋಡಿ ಮಾಡಿದ ಅಶ್ವಿನ್

ವೇಗದ ಶತಕ ಅಶ್ವಿನ್ ಬ್ಯಾಟಿಂಗ್ ಧಾಟಿಯನ್ನು ಕಂಡು ಏಜ್ ಜಸ್ಟ್ ಎ ನಂಬರ್ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ. 144 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಅಶ್ವಿನ್ ಕ್ರೀಸ್‌ಗೆ ಎಂಟ್ರಿ ಆದರು. ತಮ್ಮ ತವರು ನೆಲದಲ್ಲಿ ಅಶ್ವಿನ್ ಕ್ಲಾಸಿಕ್ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಅಶ್ವಿನ್ ತಮ್ಮ ಟೆಸ್ಟ್ ಕ್ರಿಕೆಟ್‌ನ ಆರನೇ ಶತಕ ಬಾರಿಸಿ ಅಬ್ಬರಿಸಿದರು. ಅಲ್ಲದೆ ಇದು ಅವರ ಟೆಸ್ಟ್ ಕ್ರಿಕೆಟ್‌ನ ವೇಗದ ಶತಕವಾಗಿದೆ. ಅದರ ಜತೆಗೆ, ಈ ಶತಕದ ಮೂಲಕ ಧೋನಿ ಶತಕಕ್ಕೆ ಸರಿಸಮಾನವಾಗಿ ನಿಂತಿದ್ದಾರೆ. ಅಶ್ವಿನ್ ಇದಕ್ಕೂ ಮೊದಲು 2011ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ 117 ಎಸೆತಗಳಲ್ಲಿ ಶತಕ ಬಾರಿಸಿದ್ದರು. ಇದು ಅವರ ವೇಗದ ಶತಕವಾಗಿತ್ತು. ಆದರೆ ಗುರುವಾರ ಅಶ್ವಿನ್ 108 ಎಸೆತಗಳಲ್ಲಿ ಶತಕ ಬಾರಿಸಿ ಮಿಂಚಿದರು. 112 ಎಸೆತಗಳಲ್ಲಿ 10 ಬೌಂಡರಿ, 2 ಸಿಕ್ಸರ್ ಸಹಾಯದಿಂದ 102 ರನ್ ಬಾರಿಸಿದರು.

ಜೈಸ್ವಾಲ್ ಯಶಸ್ವಿ ದಾಖಲೆ

ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 56 ರನ್‌ಗಳ ಇನ್ನಿಂಗ್ಸ್ ಆಡಿದ ಜೈಸ್ವಾಲ್, 147 ವರ್ಷಗಳ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ, ಅದರಲ್ಲೂ ತವರು ನೆಲದಲ್ಲಿ ತಮ್ಮ ಮೊದಲ 10 ಇನ್ನಿಂಗ್ಸ್‌ಗಳಲ್ಲಿ 750 ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಹಿಂದೆ ಈ ದಾಖಲೆ ವೆಸ್ಟ್ ಇಂಡೀಸ್‌ನ ಜಾರ್ಜ್ ಹ್ಯಾಡ್ಲಿ ಹೆಸರಿನಲ್ಲಿತ್ತು. ಅವರು 1935 ರಲ್ಲಿ 747 ರನ್ ಬಾರಿಸುವ ಮೂಲಕ ಈ ದಾಖಲೆಯನ್ನು ತನ್ನ ಖಾತೆಗೆ ಹಾಕಿಕೊಂಡಿದ್ದರು. ಇದಲ್ಲದೆ ಯಶಸ್ವಿ ಜೈಸ್ವಾಲ್ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಈ ಸೀಸನ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಎರಡನೇ ಬ್ಯಾಟರ್ ಎನಿಸಿಕೊಂಡಿದ್ದಾರೆ ಅಂದರೆ ಮೂರನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಜೈಸ್ವಾಲ್ ಇದುವರೆಗೆ ಆಡಿರುವ 10 ಪಂದ್ಯಗಳ 17 ಇನ್ನಿಂಗ್ಸ್‌ಗಳಲ್ಲಿ 67.75 ಸರಾಸರಿಯಲ್ಲಿ 1084 ರನ್ ಗಳಿಸಿದ್ದಾರೆ.

ಮುನಿರತ್ನ ಕೀಳುಮಟ್ಟದ ರಾಜಕಾರಣಿ

ಮುನಿರತ್ನ ಅವರನ್ನು ಕೂಡಲೇ ಪಕ್ಷದಿಂದ ವಜಾ ಮಾಡಲಿ: ಸಲೀಂ ಅಹಮದ್

ಬೆಂಗಳೂರು: ಎಚ್‌ಐವಿ ಸೋಂಕಿತರ ರಕ್ತ ತೆಗೆದುಕೊಂಡು ರಾಜಕಾರಣಿಗಳಿಗೆ ನೀಡಿ ಸೋಂಕು ಹರಡುವಂತಹ ಕೀಳು ಮಟ್ಟಕ್ಕೆ ಇಳಿದಿರುವ ಶಾಸಕ ಮುನಿರತ್ನರಂತಹ ವ್ಯಕ್ತಿ ಪ್ರಪಂಚದಲ್ಲೇ ಸಿಗುವುದಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಕಿಡಿಕಾರಿದ್ದಾರೆ.

ಜಾತಿ ನಿಂದನೆ ಹಾಗೂ ಬೆದರಿಕೆ ಕೇಸ್‌ನಲ್ಲಿ ಸಿಲುಕಿರುವ ಶಾಸಕ ಮುನಿರತ್ನ ವಿರುದ್ಧ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಲಾಗಿದೆ. ಈ ವೇಳೆ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಹೆಣ್ಣು ಮಕ್ಕಳನ್ನು ಮಂಚಕ್ಕೆ ಕರೆಯುವ ವ್ಯಕ್ತಿಯನ್ನು ಆರ್.ಅಶೋಕ, ಪ್ರಹ್ಲಾದ್ ಜೋಷಿ ಅಂತವರೇ ಸಮರ್ಥಿಸುತ್ತಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಮಾಡಲಿ ಎಂದು ಮತ ನೀಡಿ ಗೆಲ್ಲಿಸಿ ಕಳುಹಿಸಿದರೆ, ಲಜ್ಜೆಗೆಟ್ಟು ನಡೆದುಕೊಂಡಿರುವ ಮುನಿರತ್ನ ಜನಪ್ರತಿನಿಧಿಯಾಗಲು ಅರ್ಹರಲ್ಲ ಎಂದರು.

ಬಿಜೆಪಿ ನಾಯಕರಿಗೆ ಮಾನ ಮರ್ಯಾದೆ ಇದ್ದರೆ ಮುನಿರತ್ನ ಅವರನ್ನು ಕೂಡಲೇ ಪಕ್ಷದಿಂದ ವಜಾ ಮಾಡಲಿ. ಇಲ್ಲದಿದ್ದರೆ ದಲಿತ ಹಾಗೂ ಒಕ್ಕಲಿಗ ಸಮುದಾಯಗಳ ವಿರೋಧಿ ಎಂಬ ಆರೋಪ ಎದುರಿಸಬೇಕಾಗುತ್ತದೆ. ರಾಕ್ಷಸಿ ಪ್ರವೃತ್ತಿಯ ತನ್ನ ಪಕ್ಷದ ಶಾಸಕನಿಗೆ ಬಿಜೆಪಿ ತಕ್ಕ ಪಾಠ ಕಲಿಸಬೇಕು. ಹೀಗೆ ಮಾಡಿದರೆ ಪಕ್ಷದ ಮೇಲೆ ಜನರಿಗೆ ಸ್ವಲ್ಪವಾದರೂ ಗೌರವ ಬರುತ್ತದೆ. ಸರಕಾರ ಮುನಿರತ್ನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸುತ್ತೇವೆ.

-ಸಲೀಂ ಅಹಮದ್ ವಿಧಾನ ಪರಿಷತ್ತಿನ ಮುಖ್ಯ ಸಚೇತಕ

ಶಾಸಕ ಮುನಿರತ್ನ ವಿರುದ್ಧ ಕೆಪಿಸಿಸಿ ಕಚೇರಿ ಬಳಿ ನಡೆದ ಪ್ರತಿಭಟನೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ಪಾಲ್ಗೊಂಡಿದ್ದರು. ಉಪಾಧ್ಯಕ್ಷ ಎಂ. ನಾರಾಯಣಸ್ವಾಮಿ, ಆರ್.ವಿ ವೆಂಕಟೇಶ್, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ವಾಜಿದ್ ಸೇರಿ ನೂರಾರು ಕಾರ್ಯಕರ್ತರು, ಮುಖಂಡರು ಭಾಗವಹಿಸಿದ್ದರು.

ನರೇಂದ್ರ ಮೋದಿ, ಅಮಿತ್ ಶಾ ಏನು ಹೇಳುತ್ತಾರೆ?: ಬಿಜೆಪಿಯ ಆಂತರ್ಯದ ಮಾತುಗಳನ್ನು ಮುನಿರತ್ನ ಹೊರಗೆ ಹಾಕಿದ್ದು, ಪರಿಶಿಷ್ಟರು ಒಕ್ಕಲಿಗರು ಅದರಲ್ಲೂ ಮಹಿಳೆಯರ ಬಗ್ಗೆ ಅತ್ಯಂತ ಹೀನವಾಗಿ ಮಾತನಾಡಿರುವ ನಡೆ ಖಂಡನೀಯ. ಇಂತಹ ರಾಕ್ಷಸರು, ವಿಕೃತ ಕಾಮಿಗಳ ವಿರುದ್ಧ ಸೂಕ್ತ ತನಿಖೆಯಾಗಬೇಕು. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಸಾರ್ವಜನಿಕವಾಗಿ ಮಾತನಾಡಬೇಕು. ಮುನಿರತ್ನ ಮೇಲಿನ ಪ್ರಕಾರಣವನ್ನು ಸ್ವಯಂ ಪ್ರೇರಿತ ಪ್ರಕರಣವನ್ನಾಗಿ ಪರಿವರ್ತಿಸಿ, ಯಾವುದೇ ಕಾರಣಕ್ಕೂ ಹೊರಗೆ ಬಿಡಬಾರದು ಎಂದು ಆಗ್ರಹಿಸಿದ್ದಾರೆ.

ಮುನಿರತ್ನ ವಿರುದ್ಧ ಇನ್ನಷ್ಟು ಪ್ರಕರಣ: ಮುನಿರತ್ನ ಮೇಲೆ ಹನಿಟ್ರ್ಯಾಪ್ ಅಂತಹ ಅನೇಕ ಘೋರ ಕೃತ್ಯಗಳ ಆರೋಪಗಳಿದ್ದು, ಈತನ ಮೇಲೆ ಭ್ರಷ್ಟಾಚಾರದ ಆರೋಪಗಳು ಸಹ ಇವೆ. ಈತನ ಮೇಲೆ ಅನೇಕ ಕಡೆ ಎಫ್‌ಐಆರ್ ದಾಖಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಸಾಕಷ್ಟು ಪ್ರಕರಣಗಳು ಹೊರಗೆ ಬರಲಿದೆ. ಸರಕಾರ ಗಂಭೀರವಾಗಿ ಪರಿಗಣಿಸಿದ್ದು, ಎಲ್ಲೆಲ್ಲಿ ಅಕ್ರಮ ಎಸಗಿದ್ದಾರೋ ಸೂಕ್ತ ತನಿಖೆ ನಡೆಸಿ ಶಿಕ್ಷೆ ನೀಡಬೇಕು ಎಂದು ತಿಳಿಸಿದ್ದಾರೆ.

ಕೆಇಎ ಸೀಟು ರದ್ದತಿಗೆ ಅವಕಾಶ

ಬೆಂಗಳೂರು: ಮೆಡಿಕಲ್ ಕೌನ್ಸೆಲಿಂಗ್ ಕಮಿಟಿ (ಎಂಸಿಸಿ) ಎರಡನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆ ಫಲಿತಾಂಶ ಗುರುವಾರ ಪ್ರಕಟಿಸಿದ್ದು, ಅಲ್ಲಿ ಸೀಟು ಸಿಕ್ಕಿ, ಅದನ್ನೇ ಉಳಿಸಿಕೊಳ್ಳಲು ಇಚ್ಛಿಸುವವರು ಶುಕ್ರವಾರ (ಸೆ.20) ಬೆಳಗ್ಗೆ 11 ಗಂಟೆಯೊಳಗೆ ಕೆಇಎ ಮೂಲಕ ಹಂಚಿಕೆಯಾಗಿರುವ ವೈದ್ಯಕೀಯ ಸೀಟು ರದ್ದುಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಂತಹವರು, ನಾಳೆ ಶುಕ್ರವಾರ ಕೆಇಎ ಕಚೇರಿಗೆ ಖುದ್ದಾಗಿ ಬಂದು ರದ್ದುಪಡಿಸಿಕೊಳ್ಳಬೇಕು. 10,000 ರು. ದಂಡ ವಿಧಿಸಿ, ಉಳಿದ ಮೊತ್ತ ಹಿಂದಿರುಗಿಸಲಾಗುವುದು. ಸೀಟು ರದ್ದುಪಡಿಸಿಕೊಳ್ಳುವ ಸಮಯದಲ್ಲಿ ಅಖಿಲ ಭಾರತ ಕೌನ್ಸಿಲಿಂಗ್‌ನಲ್ಲಿ ಹಂಚಿಕೆಯಾದ ಸೀಟುಗಳ ವಿವರ ಸಲ್ಲಿಸಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡ: ಅದಿತಿ ಎಐ ಅಳವಡಿಕೆ

ಮುಂಬೈ: ಬ್ಯಾಂಕ್ ಆಫ್ ಬರೋಡಾ, 'ಅದಿತಿ' ಎಂಬ ಕೃತಕ ಬುದ್ಧಿಮತ್ತೆ (ಎಐ) ಅನುಷ್ಠಾನಗೊಳಿಸುತ್ತಿದೆ. ಇದರಿಂದ ಡಿಜಿಟಲ್ ಗ್ರಾಹಕ ಸೇವಾ ಅನುಭವ ಹೆಚ್ಚಿಸುವ ಗುರಿ ಹೊಂದಿದೆ. ವರ್ಚುವಲ್ ರಿಲೇಶನ್‌ಶಿಪ್ ಮ್ಯಾನೇಜರ್ ಆಗಿ ದತ್ತಾಂಶ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿ ಸುಧಾರಿತ ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ತನ್ನ ಡಿಜಿಟಲ್ ಪರಿವರ್ತನೆಯ ಪ್ರಯಾಣದಲ್ಲಿ ಗಮನಾರ್ಹ ದಾಪುಗಾಲು ಮಾಡಿದ್ದು, ಗ್ರಾಹಕರು ಮತ್ತು ಉದ್ಯೋಗಿಗಳಿಗೆ ಸ್ವಯಂ ಚಾಲಿತ ಪರಿಹಾರ ಪಡೆದುಕೊಳ್ಳಬಹುದಾಗಿದೆ. ಈ ಮಾನವ-ತರಹದ ಇಂಟರ್‌ಫೇಸ್ ಡಿಜಿಟಲ್ ಅವತಾರಗಳ ರೂಪದಲ್ಲಿ ಪ್ರಸ್ತುತಪಡಿಸಲಾಗಿದೆ, ವಿವಿಧ ಸೇವೆಗಳಾದ್ಯಂತ ಸಂವಾದಾತ್ಮಕ ಬ್ಯಾಂಕಿಂಗ್ ಅನ್ನು ನೀಡುತ್ತದೆ. ಬ್ಯಾಂಕಿನ ವೆಬ್ ಪೋರ್ಟಲ್‌ನಲ್ಲಿ ಲಭ್ಯವಿದೆ. ಆಡಿಯೋ, ವೀಡಿಯೋ ಮತ್ತು ಚಾಟ್ ಆಧಾರಿತ ಸಹಾಯ ಬೆಂಬಲಿಸುತ್ತದೆ. ಬಹುಭಾಷಾ ಬೆಂಬಲದೊಂದಿಗೆ 24X7 ಬ್ಯಾಂಕಿಂಗ್ ಸೇವೆಗಳನ್ನು ಖಾತ್ರಿಪಡಿಸುತ್ತದೆ, ಇದರಿಂದಾಗಿ ಒಟ್ಟಾರೆ ಗ್ರಾಹಕರ ಅನುಭವ ಹೆಚ್ಚಿಸುತ್ತದೆ. ನೋಂದಣಿ ಪ್ರಕ್ರಿಯೆಯ ಮೂಲಕ ಅಸ್ತಿತ್ವದಲ್ಲಿರುವ ಗ್ರಾಹಕರಿಗೆ ಈ ಸೇವೆ ಕ್ರಮೇಣವಾಗಿ ಹೊರತರಲಾಗುತ್ತಿದೆ.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ
20.09.2024 ಶುಕ್ರವಾರ
vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಕೃಷ್ಣ ಪಕ್ಷ, ತೃತೀಯಾ ತಿಥಿ, ಧೃವ ಯೋಗ, ಅಶ್ವಿನಿ ನಕ್ಷತ್ರ, ವನಿಜ ಕರಣ, ದ್ರಿಕ್ ಋತು ಶರದ್, ದ್ರಿಕ್ ಆಯನ ದಕ್ಷಿಣಾಯನ, 1946 ಕ್ರೋಧಿ ನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ



ಮನೆಮದ್ದು

ನೆಲ್ಲಿಕಾಯಿಯು ಗ್ಯಾಸ್ಟ್ರಿಕ್ ಜ್ಯೂಸ್ ಉತ್ಪಾದನೆಯನ್ನು ಉತ್ತೇಜಿಸುವ ಮೂಲಕ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಇದು ಹೆಚ್ಚಿನ ಫೈಬರ್ ಅಂಶದಿಂದಾಗಿ ಮಲಬದ್ಧತೆಯನ್ನು ನಿವಾರಿಸುತ್ತದೆ ಮತ್ತು ಕರುಳಿನ ಆರೋಗ್ಯವನ್ನು ಸುಧಾರಿಸುತ್ತದೆ. ಜೀರ್ಣಕ್ರಿಯೆಯ ಸಮಸ್ಯೆ ಇರುವವರು ಪ್ರತಿದಿನ ನೆಲ್ಲಿಕಾಯಿ ಸೇವಿಸುವುದು ಉತ್ತಮ.

ಸೌಂದರ್ಯ ಸೂತ್ರ

ಹೆಚ್ಚು ಒತ್ತಡ ಹಾಕದೆ ಕಣ್ಣುಗಳ ಸುತ್ತಲೂ ಅಲೋವೆರಾ ಜೆಲ್ ಹಚ್ಚಿ ನಿಧಾನವಾಗಿ ಮಸಾಜ್ ಮಾಡಬಹುದು. ಇದು ಇನ್ನಷ್ಟು ಪ್ರಯೋಜನಕಾರಿಯಾಗಲು ಅಲೋವೆರಾ ರಸವನ್ನು ನಿಂಬೆ ರಸ, ಜೇನುತುಪ್ಪ ಅಥವಾ ರೋಸ್ ವಾಟರ್‌ನಂತಹ ಇತರ ಪದಾರ್ಥಗಳೊಂದಿಗೆ ಬೆರೆಸಬಹುದೆಂದು ತಜ್ಞರು ತಿಳಿಸಿದ್ದಾರೆ. ಅಲೋವೆರಾ ಕಣ್ಣಿನ ಕೆಳಗಿನ ಚರ್ಮವನ್ನು ಹೈಡ್ರೇಟ್ ಮಾಡಲು ಮತ್ತು ಹೆಚ್ಚು ಮೃದುವಾಗಿಸಲು ಸಹಾಯ ಮಾಡುತ್ತದೆ

ದಿನ ಭವಿಷ್ಯ

ಮೇಷ ಸಂತೃಪ್ತಿಯ ಜೀವನಕ್ಕಾಗಿ ಮಾನಸಿಕ ದೃಢತೆಯನ್ನು ಸುಧಾರಿಸಿ. ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕ.

ವೃಷಭ ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ.

ಮಿಥುನ ಕೆಲಸದಲ್ಲಿ ತಂಡದ ಅತ್ಯಂತ ಕಿರಿಕಿರಿಯುಂಟು ಮಾಡುವ ವ್ಯಕ್ತಿ ಇಂದು ಇದ್ದಕ್ಕಿದ್ದಂತೆ ನಿಮ್ಮ ಮೇಲೆ ಜಗಳ ಸಾಧ್ಯತೆ, ಶಾಂತಿಯಿಂದಿರಿ.

ಕಟಕ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಚೈತನ್ಯ ಕಾಪಾಡಿಕೊಳ್ಳಿ

ಸಿಂಹ ಆರೋಗ್ಯ ಪರಿಪೂರ್ಣವಾಗಿ ರುತ್ತದೆ. ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ಪ್ರೀತಿಪಾತ್ರರ ಜೊತೆ ವಾದ ಮಾಡಬೇಡಿ.

ಕನ್ಯಾ ಹೆಚ್ಚು ಆಶಾವಾದಿಗಳಾಗಿರಲು ಪ್ರೇರೆಪಿಸಿಕೊಳ್ಳಿ. ಇದು ವಿಶ್ವಾಸ ಮತ್ತು ನಮ್ಯತೆ ಹೆಚ್ಚಿಸುತ್ತದಾದರೂ, ನಕಾರಾತ್ಮಕ ಭಾವನೆ ಬಿಟ್ಟು ಬಿಡಿ.

ತುಲಾ ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆ ಹೆಚ್ಚು, ಕ್ರಿಡಾ ಸ್ಪರ್ಧೆಗಳಲ್ಲಿ ಭಾಗವಹಿ, ನಿಮ್ಮ ವಸ್ತುಗಳ ಮೇಲೆ ಗಮನವಿರಲಿ

ವೃಶ್ಚಿಕ ಅತಿಯಾದ ಒತ್ತಡ ಇದ್ದರೆ, ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಮುಗ್ಧ ಮುಗುಳ್ನಗೆಯೂ ಖುಷಿ ಪಡಿಸುತ್ತದೆ.

ಧನು ಕೆಟ್ಟ ಕಾಲದಲ್ಲಿ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ, ಇಂದಿನಿಂದಲೇ ಹಣ ಸಂಗ್ರಹಿಸುವ ಬಗ್ಗೆ ಯೋಚಿಸಿ.

ಮಕರ ಪ್ರಮುಖ ನಿರ್ಧಾರ ಕೈಗೊಳ್ಳಬೇಕು - ಇದು ನಿಮ್ಮನ್ನು ಒತ್ತಡ ಹಾಗೂ ಉದ್ವೇಗಕ್ಕೆ ಒಳಪಡಿಸುತ್ತದೆ. ಸಾಲ ಕೇಳಲು ಸ್ನೇಹಿತ ಬರಬಹುದು.

ಕುಂಭ ಮನಸ್ಸು ಒಳ್ಳೆಯ ವಿಷಯ ಗ್ರಹಿಸುತ್ತದೆ. ವಿಳಂಬಿತ ಪಾವತಿ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ.

ಮೀನ ಕೋಪವು ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ದೀರ್ಘ ಕಾಲದ ಆಸ್ತಿಗಳ ಮೇಲೆ ಹೂಡಿಕೆ ಮಾಡಿದಲ್ಲಿ ಲಾಭ ಮಾಡುತ್ತೀರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1884: ಅಮೆರಿಕದ ಖ್ಯಾತ ಪತ್ರಕರ್ತ ಮ್ಯಾಕ್ಸ್‌ವೆಲ್ ಪರ್ಕಿನ್ಸ್ ಅವರು ನ್ಯೂಯಾರ್ಕ್‌ನಲ್ಲಿ ಹುಟ್ಟಿದರು.
- 1857: ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಕೊನೆಯಗುತ್ತದೆ.
- ರಾಷ್ಟ್ರೀಯ ವ್ಯಾಪಾರಿಗಳ ದಿನ

ಚಿತ್ರಸ್ಫೂರ್ತಿ



ಇಸ್ರೇಲ್ ಹಮಾಸ್ ವಿರುದ್ಧ ಯುದ್ಧ ನಡೆಯುತ್ತಿರುವುದಂತೂ ಗೊತ್ತೇ ಇದೆ. ಆದರೆ, ಮನೆ, ವಾಣಿಜ್ಯ ಮಳಿಗೆ ಹಾಗೇ ಹಲವಾರು ಕಟ್ಟಡಗಳಿದ್ದಂತಹ ಪಟ್ಟಣಗಳು ಈಗ ನೆಲಸಮವಾಗಿದ್ದು ಹೀಗೆ!

ಶನಿದೇವ ಅಥವಾ ಲಕ್ಷ್ಮೀದೇವಿ ಯಾರು ಹೆಚ್ಚು?

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಶನಿದೇವನೆಂದರೆ ದೇವಾನುದೇವತೆಗಳಿಗೂ ಭಯ, ಆದರೆ ಅವನಿಗೆ ಆಂಜನೇಯ ಮತ್ತು ಗಣೇಶನನ್ನು ಮಾತ್ರ ಕಾಡಲಾಗಲಿಲ್ಲ. ರಾಜ ವಿಕ್ರಮಾದಿತ್ಯ, ನಳ ಮಹಾರಾಜ, ಸತ್ಯ ಹರಿಶ್ಚಂದ್ರ, ಪಾಂಡವರಲ್ಲದೆ ದೇವಾನುದೇವತೆಗಳನ್ನೂ ಬಿಡದೆ ಮಹಾ ಶಿವ ಮತ್ತು ವಿಷ್ಣುವಿನ ಸಹಿತ ಎಲ್ಲರನ್ನೂ ಕಾಡಿದ ಕಥೆಗಳನ್ನು ನೀವು ಕೇಳಿರುತ್ತೀರಿ. ಇಂಥ ಶನಿದೇವನಿಗೂ ಲಕ್ಷ್ಮಿಗೂ ಒಮ್ಮೆ ವಾದ ಪ್ರಾರಂಭವಾಗಿಯಿತು.

ಲಕ್ಷ್ಮೀ, 'ಧನ ಸಂಪತ್ತನ್ನು ಕೊಡುವ ನಾನೇ ಹೆಚ್ಚು ಎಲ್ಲರೂ ನನ್ನನ್ನೇ ಪೂಜಿಸುತ್ತಾರೆ' ಎಂದಳು. ಆಗ ಇದ್ದಕ್ಕಿದ್ದಂತೆ ಸಿಟ್ಟುಗೊಂಡ ಶನಿದೇವ, 'ದುಷ್ಟ ಹಾಗೂ ನೀಚ ಮಾರ್ಗದಲ್ಲಿ ನಡೆವ ಎಲ್ಲರ ಕರ್ಮಫಲಗಳನ್ನೂ ಕಳೆದು ಒಳ್ಳೆಯ ಮಾರ್ಗದಲ್ಲಿ ನಡೆಯುವಂತೆ ಮಾಡುವ ನಾನೇ ಹೆಚ್ಚು' ಎಂದು ವಾದ ಮಾಡಿದ. ಅಲ್ಲಿಗೆ ಮಾತು ನಿಲ್ಲಿಸದ ಲಕ್ಷ್ಮಿದೇವಿ ಮತ್ತೆ ಪಟ್ಟು ಹಿಡಿದು ' ಏನೇ ಆಗಲಿ ನನ್ನ ಸಂಪತ್ತಿಗೆ ಎಲ್ಲರೂ ಆಸೆ ಪಡುತ್ತಾರೆ. ನನ್ನನ್ನು ಆರಾಧಿಸುತ್ತಾರೆ, ಮನೆಯಲ್ಲಿ ಇಟ್ಟುಕೊಳ್ಳಲು ಇಷ್ಟಪಡುತ್ತಾರೆ' ಎಂದು ವಾದಿಸಿದಳು. ಆಗ ಶನಿದೇವ ಖಂಡಿಸುವ ಧ್ವನಿಯಲ್ಲಿ 'ಅದು ಸಾಧ್ಯವಿಲ್ಲ. ಜನರು ಯಾವಾಗಲೂ ಸಂಪತ್ತನ್ನು ಮೋಸದಿಂದ, ಭ್ರಷ್ಟಾಚಾರದಿಂದ, ಅಥವಾ ಕಳ್ಳತನ, ಸುಲಿಗೆ, ಮೋಸ, ಕೊಲೆ ಇನ್ನು ಅನೇಕ ಲಂಪಟತನದಿಂದ ಮಾಡಿ ಪಡೆದುಕೊಳ್ಳುತ್ತಾರೆ. ನೀನು ಚಂಚಲೆ, ನಿಂತಲ್ಲಿ ನಿಲ್ಲುವುದಿಲ್ಲ ಮತ್ತು ಈ ಸಂಪತ್ತಿನಿಂದ ಜೂಜು, ಹೆಂಡ, ಸ್ತ್ರೀ ಲೋಲರಾಗಿ, ಸಮಾಜದಲ್ಲಿ ದುಷ್ಟ ಕಾರ್ಯಗಳು ಅವ್ಯಾಹತವಾಗಿ ನಡೆಯುವಂತೆ ಪ್ರೇರೇಪಿಸುತ್ತೀಯ. ನಿನ್ನ ಪ್ರಭಾವದಲ್ಲಿ ಮನುಷ್ಯ ಪುಣ್ಯಕಾರ್ಯಗಳನ್ನೆಲ್ಲ ಮಾಡುವುದು ಬಿಟ್ಟು ಲೋಲೋಪ್ತಿಯಲ್ಲಿ ತನ್ನ ಜೀವನವನ್ನು ಕಳೆಯುತ್ತಾನೆ. ಅಪಾರ ಸಂಪತ್ತು ಹೊಂದಿರುವವರು, ಸಮಾಜಕ್ಕೆ ಕೆಡುಕನ್ನು ಬಯಸುವವರು ಒಳ್ಳೆಯವರಾಗಿರುವುದಿಲ್ಲ. ಅಂತಹ ದುರ್ಮಾರ್ಗಿಗಳನ್ನು ಸರಿದಾರಿಗೆ ತರಲೆಂದೇ ನಾನು ನ್ಯಾಯಯುತವಾಗಿ ಕಾರ್ಯನಿರ್ವಹಿಸಿ ಅವರಿಗೆ ಬುದ್ಧಿ ಕಲಿಸುತ್ತೇನೆ. ಇದರಿಂದ ಸಂತೋಷ ನೆಮ್ಮದಿ ಸಿಗುತ್ತದೆ' ಎಂದು ಮಾತಿನ ಸುರಿಮಳೆಯನ್ನೇಗರೆದ. ಹೀಗೆ ಇಬ್ಬರ ನಡುವೆ ವಾಗ್ವಾದ ತಾರಕಕ್ಕೆ ತಲುಪಿರುವುದು ತ್ರಿಮೂರ್ತಿಗಳಿಗೂ ತಿಳಿದು ಅವರಿಗೂ ನ್ಯಾಯ ತೀರ್ಮಾನ ಮಾಡಲು ಆಗಲಿಲ್ಲ.

ಇದು ಹೀಗೇ ಮುಂದುವರೆದರೆ ವಿಪರೀತಕ್ಕೆ ಹೋಗುತ್ತದೆ ಎಂದು ತಿಳಿದ ತ್ರಿಮೂರ್ತಿಗಳು, ಈ ವಾಗ್ವಾದವನ್ನು ಸರಿ ಮಾಡುವಂತೆ ನಾರದರನ್ನು ಕಳಿಸಿದರು. ನಾರದರನ್ನು ಕಂಡಿದ್ದೇ ತಡ ಲಕ್ಷ್ಮಿದೇವಿ ಮತ್ತು ಶನಿದೇವ ಇಬ್ಬರೂ, 'ನಾರದರೆ ನಮ್ಮಿಬ್ಬರಲ್ಲಿ ಯಾರು ಹೆಚ್ಚು ಎಂದು ನೀವೇ ಹೇಳಬೇಕು. ಇಲ್ಲದಿದ್ದರೆ ಪರಿಣಾಮವನ್ನು ನೀವು ಅನುಭವಿಸಬೇಕಾಗುತ್ತದೆ' ಎಂದು ಹೇಳಿದರು. ನಾರದರು, 'ಯಾರು ಹೆಚ್ಚು ಅಥವಾ ಯಾರು ಕಡಿಮೆ ಎಂದರೂ ನನಗೆ ವಿಪತ್ತು ಕಟ್ಟಿಟ್ಟ ಬುತ್ತಿ. ಏನಾದರೂ ಉಪಾಯ ಮಾಡಲೇಬೇಕು' ಎಂದು ಯೋಚಿಸಿ, ಲಕ್ಷ್ಮಿ ಮತ್ತು ಶನಿಗೆ 'ನೀವಿಬ್ಬರೂ ಸ್ವಲ್ಪ ದೂರದವರೆಗೆ ಹೋಗಿ ನಡೆದು ಬನ್ನಿ' ಎಂದರು. ಅವರ ಮಾತಿನಂತೆ ಲಕ್ಷ್ಮಿದೇವಿ ಮತ್ತು ಶನಿದೇವ ನಡೆದು ಒಂದಷ್ಟು ದೂರ ಹೋಗಿ ಬಂದರು. ನಾರದರು ಸಮಾಧಾನದ ಮುಗುಳ್ನಗೆಯಲ್ಲಿ 'ನಿಮ್ಮಿಬ್ಬರಲ್ಲಿ ಮಾತೆ ಮಹಾಲಕ್ಷ್ಮಿ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ಬರುವುದೇ ಬಲು ಚೆಂದ. ಹಾಗೆಯೇ ಶನಿ ತಿರುಗಿ ನೋಡದೆ ಹೋಗುವುದು ಮನಕೆ ಬಲು ಆನಂದ- ನೆಮ್ಮದಿ' ಎಂದು ಹೇಳಿದರು. ಇದನ್ನು ಕೇಳಿ ಲಕ್ಷ್ಮಿ ದೇವಿಗೂ, ಶನಿದೇವನಿಗೂ ಇಬ್ಬರಿಗೂ ಸಂತೋಷವಾಗಿ ತಮ್ಮ ತಮ್ಮ ಸ್ವಸ್ಥಾನಕ್ಕೆ ಮರಳಿದರು. ದೇವತೆಗಳೆಲ್ಲಾ ನಿಟ್ಟಿಸಿರು ಬಿಟ್ಟರು.

ಕೆಲವೊಮ್ಮೆ ಪ್ರಭಾವಿ ವ್ಯಕ್ತಿಗಳ ಮಧ್ಯೆ ಸಿಲುಕಿ ನಾವು ಕೂಡ ಅವರ ಕೋಪಕ್ಕೆ ಆಹಾರವಾಗುವ ಪರಿಸ್ಥಿತಿ ತಲುಪುತ್ತೇವೆ. ಅಂತಹ ಸಮಯದಲ್ಲಿ ಜಾಣ್ಮೆಯಿಂದ ಆ ಪರಿಸ್ಥಿತಿಯನ್ನು ನಿಭಾಯಿಸಬೇಕು. ನಮ್ಮ ಮಾತು ನಮ್ಮನ್ನು ಕಷ್ಟಕ್ಕೆ ತಳ್ಳಲೂ ಬಹುದು. ಹಾಗೆಯೇ ಕಷ್ಟದಿಂದ ಪಾರು ಮಾಡುವ ಶಕ್ತಿಯೂ ಮಾತಿಗಿದೆ. ಮಾತು ಬಲ್ಲವನಿಗೆ ಶತ್ರುಗಳಿಲ್ಲ ನೆನಪಿರಲಿ.

ಪ ದ ಬಂ ಧ



ಎಡದಿಂದಬಲಕ್ಕೆ

1. ನೀರಿನ ಮೇಲೆ ಚಲಿಸುವ ಹಡಗು (3)
3. ಶೋಚನೀಯವಾದ ಸ್ಥಿತಿಯನ್ನು ಹೀಗೆನ್ನಬಹುದು (4)
5. ಯಮನಿಗೆ ಮತ್ತೊಂದು ಹೆಸರು (3)
7. ಅಳೆಯುವ ಸಾಧನ (3)
9. ಎರಡಕ್ಷರದ ಮತ್ತೊಂದು ಕಾರಣ (2)
11. ಸ್ವಾಮೀಜಿಗಳ ಕಾಲಿನಲ್ಲಿ ಕಂಡ ಮರದ ಮೆಟ್ಟು (3)
12. ಆಕಾಶವಾಣಿಗೆ ಹೀಗೊಂದು ಹೆಸರು (3)
13. ಮಣ ಭಾರದ ಗಂಡ (3)
14. ಜಿಂಕೆಯ ಜಾತಿಯ ಒಂದು ಪ್ರಾಣಿ (3)
15. ನಾಲಗೆ ತಿಳಿಸಿದ ಸ್ವಾದ (2)
17. ಸಾರ ಅಥವಾ ಸತ್ವ (3)
19. ನೇರವಾಗಿ ಕಂಡ ಸೂರ್ಯ (3)
20. ಮಹಾಭಾರತ ಯುದ್ಧ ನಡೆದ ಸ್ಥಳ (4)
21. ಪರರಿಗೆ ಕಂಡ ಜವನಿಕೆ (3)

ಮೇಲಿನಿಂದಕೆಳಕ್ಕೆ

2. ಎಲೆ ಅಡಕೆಯ ಸಂಚಿ (3)
3. ಎರಡೇ ಅಕ್ಷರದಲ್ಲಿ ಕಂಡಿದೆ ಸ್ವರ್ಗ (2)
4. ಸಾಕುವುದು ಎಂದರ್ಥ (3)
6. ಬಿದಿರಿನ ತಟ್ಟಿ (3)
8. ಕಲಿಯ ಮಧ್ಯೆ ಕಂಡ ಶಿವ (3)
10. ಒಂದೆಡೆಯಿಂದ ಮತ್ತೊಂದೆಡೆಗೆ ಸಂಚಾರ (3)
12. ದಾಹವಾಗು ಎನ್ನುವ ಪದ (3)
13. ಅಸ್ತವ್ಯಸ್ತವಾಗಿ ಬಂದಿರುವ ಪತಿವ್ರತೆ (3)
14. ಶಕ್ತಿಮೀರಿ ಮಾಡುವ ಕೆಲಸ (3)
16. ಮರಗಿಡದ ಪಲ್ಲವ (3)
18. ಸವಿಯಾದ ಅಥವಾ ಮನೋಹರವಾದ (3)
19. ಎರಡಕ್ಷರದಲ್ಲಿ ಬಂದಿದೆ ಕಣ್ಣು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ತವರ 3. ದಾಸ್ತಾನು 5. ಕಡ 6. ವಿರಹ 8. ಡಿಗ 10. ರಿಕಾಪು 12. ವರುಣ 13. ಕಾರಣಾಂತರ 14. ಸವರು 15. ದಿವಾನ 18. ಪತಿ 20. ಸಾಮಜ 22. ಬರ 23. ಲಗಾಮು 24. ಯಮಕ

ಮೇಲಿನಿಂದ ಕೆಳಕ್ಕೆ: 1. ತಡ 2. ರವಿ 3. ದಾಹ 4. ನುಡಿ 5. ಕಸ್ತೂರಿ 7. ರಸ್ತೆ 9. ಗದ್ಯಾಣ 11. ಪುಕಾರು 12. ವರದಿ 14. ಸಲ್ಲಾಪ 16. ನಶ್ವರ 17. ಸೋಮ 19. ತಿಲ 20. ಸಾಮು 21. ಜಯ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

41 ಸಾವಿರ ಜನರ ಸಾವು

ಕಳೆದ ವರ್ಷ ಅಕ್ಟೋಬರ್ 7ರಂದು ಹಮಾಸ್ ಒಮ್ಮೆದೊಮ್ಮೆಲೇ ಇಸ್ರೇಲ್ ಮೇಲೆ ದಾಳಿ ಮಾಡುತ್ತದೆ. ಅದರಿಂದ, ಇಸ್ರೇಲಿನ 1200ಕ್ಕೂ ಹೆಚ್ಚು ಜನರು ಹತವಾಗುತ್ತಾರೆ.

ಆಗಿನಿಂದ ಇವತ್ತಿನವರೆಗೂ ಇಸ್ರೇಲ್ ಹಮಾಸ್ ಯುದ್ಧ ನಡೆಯುತ್ತಲೇ ಇದೆ. ಇಸ್ರೇಲ್ ರಾಷ್ಟ್ರ ತನ್ನ ಹುಟ್ಟಿನಿಂದ ಹಿಡಿದು ಇಲ್ಲಿಯವರೆಗೂ ಹಲವಾರು ಯುದ್ಧಗಳನ್ನು ಮಾಡುತ್ತಲೇ ಬಂದಿದೆ. ಈದೀಗ ಹಮಾಸ್ ಜತೆ ನಡೆಯುತ್ತಿದ್ದ ಯುದ್ಧ ಈಗ ಹಿಜ್ಬುಲ್ಲಾ, ಹೌಥಿಗಳೂ ಇಸ್ರೇಲ್‌ನ ವಿರುದ್ಧ ತಿರುಗಿ ಬಿದ್ದಿದ್ದಾರೆ. ಆದರೆ, ಅಷ್ಟೊಂದು ಭಯೋತ್ಪಾದಕ ಸಂಘಟನೆಗಳು ಇಸ್ರೇಲ್ ವಿರುದ್ಧ ತಿರುಗಿ ಬಿದ್ದರೂ, ಇಸ್ರೇಲ್ ಸ್ವಲ್ಪವೂ ಅಳುಕಿಲ್ಲ. ಇನ್‌ಫ್ಯಾಕ್ಟ್, ಇಸ್ರೇಲ್‌ಆ ಭಯೋತ್ಪಾಕ ನೆಲೆಯಿರುವ ರಾಷ್ಟ್ರಗಳ ಮೇಲೆ ಸವಾರಿ ಮಾಡುತ್ತಲೇ ಬಂದಿದೆ. ಇಲ್ಲಿಯವರೆಗೆ, ಅಕ್ಟೋಬರ್ 7ರ ನಂತರ ಇಸ್ರೇಲ್‌ನಲ್ಲಿ 1,139 ಜನ ಹತರಾಗಿದ್ದಾರೆ. ಆದರೆ, ಗಾಜಾದಲ್ಲಿ ಇಸ್ರೇಲ್‌ನ ದಾಳಿಗೆ ತುತ್ತಾಗಿ, 41,252 ಜನ ಹತರಾಗಿದ್ದರೆ, ಆಕ್ರಮಿಸಿಕೊಂಡ ವೆಸ್ಟ್ ಬ್ಯಾಂಕ್‌ನಲ್ಲಿ 705 ಜನರು ಹತರಾಗಿದ್ದಾರೆ. ಅದರಲ್ಲಿ 16,500ಕ್ಕೂ ಹೆಚ್ಚು ಮಕ್ಕಳೇ ಇದ್ದಾರೆ. ಅದಕ್ಕಾಗೇ ಹೇಳೋದು, ಯಾರನ್ನಾದರೂ ಕೆಣಕಿದರೆ, ನಮ್ಮ ಲೆವೆಲ್‌ನಲ್ಲಿ ಇದ್ದವರನ್ನೇ ಕೆಣಕಬೇಕು. ಇಲ್ಲದಿದ್ದರೆ, ಹೀಗೇ ಆಗುವುದು.

ಪುಸ್ತಕ ಲೋಕ

ಒಂದು ಆದಿಮ ಪ್ರೇಮ

ನಂದಿನಿ ಹೆದ್ದುರ್ಗ ಅವರ ಈ ಕವನಸಂಕಲನವೂ, ಮಣ್ಣು ಉಸಿರಾಡುತ್ತಿದೆ. ಲೋಕಕ್ಕೆ ಕೇಳುವುದಿಲ್ಲ. ಬಿಸಿಲು ಉರಿಯುತ್ತಿದೆ.

ಸದ್ದಿನ ಹಂಗಿಲ್ಲ. ಮರಗಳು ಮಳೆ ಬೆಳೆಯ ಕುರಿತು ಮಾತಾಡುತ್ತಿವೆ. ಅವುಗಳ ಭಾಷೆ ಶಬ್ದವಾಗುವುದಿಲ್ಲ. ಅಂಗಳದಲ್ಲಿ ಅರಳಿದ ಹೂಗಳು ಇಂದಿನ ಭಂಗ ಮುಗಿಯಿತೆಂದು ಒಂದೇ ದಿನದ ಆಯಸ್ಸೆಂದೂ ನಿಟ್ಟುಸುರಿಟ್ಟವೆ. ಇಲ್ಲಿ ಕೂತಿರುವ ನನಗೇ ಅದು ಕೇಳಿಲ್ಲ. ಊರ ಮಂದಿಗೆ ಉಂಡು ಒಂದಿಷ್ಟು ಹೊತ್ತು ಕಣ್ಣು ಹಚ್ಚುವ ಆಸೆ. ನಿದ್ದೆಗೂ ಸದ್ದಿಗೂ ಎಂತದಾ ನೆಂಟಸ್ತಿಕೆ? ಹಳದಿಕೊಕ್ಕಿನ ಬೆಡಗಿಯು ಗುಲಾಬಿ ಪಾದದ ಒಡೆಯನೂ ರೆಕ್ಕೆಯನ್ನು ಹಪ್ಪೆ ಮಾಡಿ ನೆಲದ ಕಾವಿಗೆ ಒಡಲು ತಾಕಿಸಿ ಮುದ ಪಡೆಯುತ್ತಿವೆ. ಅದೋ.. ಆ ಮಾಡಿನ ಕೊನೆಯಲ್ಲಿ ಕುಂತು ಅತ್ತಿಂದಿತ್ತ ಹಾರುತ್ತಿರುವ ಅವಳು ಬೆದೆಗೆ ಬಂದಿರುವುದು ತಿಳಿದಿದ್ದರೂ ಸೂರ್ಯ ನಡುನೆತ್ತಿಯಲ್ಲಿದ್ದಾಗ ಒಲಿಸಿಕೊಳ್ಳುವಾಟದಲ್ಲಿ ಇವನಿಗೆ ಖುಷಿಯಿಲ್ಲ. ಅವಳಿಗೂ ಮನಸ್ಸಿಲ್ಲ.ಲೋಕಕ್ಕೆ ಪ್ರಿಯವಾಗಿದೆ ಈ ಮೌನ. ಹೆಸರೇ... ನಾನು ಮತ್ತು ನೀನು ಈ ಜಗದ ಮುಖ್ಯ ಪ್ರಾಣ ದೇವರು.. ಎಂಬ ವಿಚಾರದ ಮೇಲೆ ಬರೆದಿದ್ದಾರೆ.

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಸುದ್ದಿಯಲ್ಲಿ ಕಂಡುಬರುವ ಧಿಲ್ಲೋ ಹಬ್ಬವನ್ನು ಎಲ್ಲಿ ಆಚರಿಸಲಾಗುತ್ತದೆ?

ಎ. ಅಸ್ಸಾಂ.
ಬಿ. ಆಂಧ್ರ ಪ್ರದೇಶ.
ಸಿ. ಗೋವಾ.
ಡಿ. ದೆಹಲಿ.

ಉತ್ತರ: ಸಿ. ಗೋವಾ.

ಮಾಹಿತಿ

ಧಿಲ್ಲೋ ಎಂಬುದು ಗೋವಾದ ಪಶ್ಚಿಮ ಘಟ್ಟಗಳಲ್ಲಿ ಆಚರಿಸಲಾಗುವ ಪರಿಸರ ಸ್ತ್ರೀವಾದಿ ಹಬ್ಬವಾಗಿದೆ. ಕರ್ನಾಟಕದ ಜೋಯಿಡಾದ ಅರಣ್ಯದ ಹಳ್ಳಿಗಳಲ್ಲೂ ಹಬ್ಬದ ಸಂಭ್ರಮ. ಈ ಗ್ರಾಮಗಳು ಗೋವಾ ಕುಣ್ಬಿ ಸಮುದಾಯದ ಸದಸ್ಯರಿಗೆ ನೆಲೆಯಾಗಿವೆ. ಅವರ ಪೂರ್ವಜರು ಪೋರ್ಚುಗೀಸ್ ಯುಗದಲ್ಲಿ ಶೋಷಣೆಯಿಂದ ತಪ್ಪಿಸಿಕೊಳ್ಳಲು ಜೋಯಿಡಾಕ್ಕೆ ವಲಸೆ ಬಂದಿದ್ದರು.

ಬೆಳವಣಿಗೆ ಯಾವುದು!?

● ಪಲ್ಲವಿ ಚೆನ್ನಬಸಪ್ಪ

ಪ್ರತಿಯೊಬ್ಬ ಮನುಜನ ಜೀವನದಲ್ಲೂ ಬಾಲ್ಯ, ಯೌವ್ವನ, ಮುಪ್ಪು ಎಂಬ ಮೂರು ಹಂತಗಳಿರುತ್ತವೆ. ಈ ಎಲ್ಲ ಹಂತದಲ್ಲಿನ ನಮ್ಮ ನಡೆಗೆಯ ಅಖೈರು ಮೊತ್ತವೆ ಸಾರ್ಥಕ ಜೀವನ. ಬಾಲ್ಯ ನಮ್ಮಿಡಿ ಜೀವನದ ಅಡಿಪಾಯ ಎಂದರೆ ತಪ್ಪಾಗಲಾರದು. ಬಾಲ್ಯದಲ್ಲಿ ನಾವು ಬೆಳೆಸಿಕೊಳ್ಳುವ ಹವ್ಯಾಸಗಳು, ಅಥವಾ ನಮ್ಮ ಪೋಷಕರು ನಮಗೆ ನೀಡುವ ಸಂಸ್ಕಾರ, ನಾವು ಬೆಳೆಯುವ ವಾತಾವರಣ, ಎಲ್ಲವೂ ನಮ್ಮ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿರುತ್ತವೆ. ಹಿಂದೆಲ್ಲ ಹೆತ್ತವರು ಈಗಿನ ರೀತಿ ಅಗತ್ಯಕ್ಕಿಂತ ಹೆಚ್ಚಿನ ಕಾಳಜಿ ಮಾಡಿ ಮಕ್ಕಳನ್ನ ಬೆಳೆಸುತ್ತಿರಲಿಲ್ಲ. ಮೂರು ನಾಲ್ಕು ಮಕ್ಕಳು, ಮನೆಯ ಆರ್ಥಿಕ ಪರಿಸ್ಥಿತಿಗಳ ಬವಣೆಯ ನಡುವೆಯೂ ಒಂದು ನೆಮ್ಮದಿಯ ಬದುಕು ಕಂಡುಕೊಳ್ಳಲು ಸಫಲರಾಗುತ್ತಿದ್ದರು. ಅಣ್ಣ ತಮ್ಮ ಅಕ್ಕ ತಂಗಿಯರ ನಡುವೆ ಇದ್ದುದರಲ್ಲೇ ಹೊಂದಿಕೊಂಡು ಬೆಳೆವ ಮಕ್ಕಳಿಗೆ ಅನಾಯಸವಾಗಿ ಮನೆಯ ಕಷ್ಟ ನಷ್ಟ ಆಗು ಹೋಗುಗಳ ಪರಿಚಯ ಇರುತ್ತಿತ್ತು. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ. ಮಕ್ಕಳ ಮೇಲಿನ ಅತಿಯಾದ ವ್ಯಾಮೋಹವನ್ನೇ, ಹೆತ್ತವರು ತಾವು 'ಮಾಡುವ ಕಾಳಜಿ ಅದು'ಎಂದು ತಪ್ಪಾಗಿ ತಿಳಿದುಕೊಂಡು ಅವರ ಸರ್ವತೋಮುಖ ಬೆಳವಣಿಗೆಗೆ ಅಡ್ಡಿಯಾಗುತ್ತಿದ್ದಾರೆ..!

ತತ್ಪರಿಣಾಮ... ಮಕ್ಕಳು ಸೀಮಿತ ಅಥವಾ ಸಂಕುಚಿತ ವಾತಾವರಣದಲ್ಲಿ ಬೆಳೆದು ಹೈಬ್ರಿಡ್ ತಳಿಗಳಂತೆ ತಯಾರಾಗುತ್ತಿದ್ದಾರೆ. ಹೊಸ ಸವಾಲು, ಪ್ರತಿಕೂಲ ಸಂಧರ್ಭಗಳು ಬಂದಾಗ ಎದುರಿಸಿ ನಿಲ್ಲುವ ಸಾಮರ್ಥ್ಯ ಕಳೆದುಕೊಂಡು ಕುಸಿದು ಕೂರುತ್ತಿದ್ದಾರೆ.

ಕೇಳಲು ಇದು ತಮಾಷೆ ಎನಿಸಿದರೂ ಸತ್ಯವೇ..! ಸಂಬಂಧಗಳ ಮೌಲ್ಯಗಳ ಅರಿವು ಸಿಕ್ಕದಾಗುತ್ತಿದೆ. ಇದರ ಮದ್ಯೆ ಆಧುನಿಕ ತಂತ್ರಜ್ಞಾನ, ಗ್ಯಾಜೆಟ್‌ಗಳ ದಾಳಿಗೆ ಸಿಲುಕಿ ಮನುಷ್ಯ ಮನುಷ್ಯರ ನಡುವೆ ಇದ್ದ ಆತ್ಮೀಯ ಮಾತುಕತೆಗಳ ಕೊಂಡಿ ಕಳಚಿಕೊಳ್ಳುತ್ತಾ ಬದುಕಿನಲ್ಲಿ ದಕ್ಕಿದ ಕೆಲವು ಸಂಬಂಧಗಳ ಮಾಧುರ್ಯದ ಬೆಲೆ ತಿಳಿಯದಾಗುತ್ತಿದೆ. ಸುತ್ತಲಿನ ಸೌಂದರ್ಯ ಸವಿಯುತ್ತಾ ಜೀವನ ಕಲೆ ಕಲಿಯುವ ಮಾಂತ್ರಿಕತೆಯಿಂದ, ಸದಾ ಅಂತರ್ಜಾಲದೊಳಗೆ

ಮುಳುಗಿ ಯಾಂತ್ರಿಕತೆಯ ಕಡೆಗೆ ಸಾಗುತ್ತಿದ್ದೇವೆ. ಇಂತ ವಾತಾವರಣದಲ್ಲಿ ಬೆಳೆದ ನಮ್ಮ ಮುಂದಿನ ತಲೆಮಾರುಗಳು ಕಲಿಯುವುದಾದರು ಇನ್ನೇನನ್ನು..?! ಇದನ್ನೇ ತಾನೇ.

ಈಗಿನ ಮಕ್ಕಳಿಗೆ ಹಿರಿಯರೆಂದರೆ ಗೌರವ ಇಲ್ಲ, ಸಂಸ್ಕೃತಿ ಸಂಪ್ರದಾಯ ಗೊತ್ತಿಲ್ಲ, ಯಾವುದರಲ್ಲೂ ಆಸಕ್ತಿ ಇಲ್ಲ, ಗಟ್ಟಿತನ ಇಲ್ಲ. ಜೆನರೇಶನ್ ಗ್ಯಾಪ್ ಸೃಷ್ಟಿಯಾಗುತ್ತಿದೆ ಎಂದೆಲ್ಲ ದೂರುವ ಮೊದಲು, ನಾವು ನಮ್ಮ ಮಕ್ಕಳಿಗೆ ಇದನ್ನೆಲ್ಲ ಆಸಕ್ತಿಯಿಂದ ಕಲಿಸುತ್ತಿದ್ದೇವಾ? ಜನಗಳೊಳಗೆ ಬೆರೆತು ನಲಿಯುವುದನ್ನು ತಿಳಿಸಿಕೊಡುತ್ತಿದ್ದೇವಾ? ಮೊದಲು ನಾವದನ್ನು ಪಾಲಿಸುತ್ತಿದ್ದೇವಾ? ಆಯ್ಕೆಯ ಸ್ವಾತಂತ್ರ್ಯ ಕೊಟ್ಟು ಅವರಿಷ್ಟದ ಬದುಕು ಪೊರೆಯುವ ಕಲೆ ಕಲಿಯಲು ಪ್ರೋತ್ಸಾಹಿಸುತ್ತಿದ್ದೇವಾ? ಎಂಬುದನ್ನು ಯೋಚಿಸಬೇಕು ಅಲ್ಲವೇ..? ಅದೇ ಹಳೆ ಮೊಂಡುವಾದ ವಿಷಯಗಳಿಗೆ ಅಂಟಿಕೂರುವ ಬದಲು, ಸದಾ ಇತರರನ್ನು ಮತ್ತು ಸುತ್ತಲಿನ ಪರಿಸ್ಥಿತಿಯನ್ನು ದೂರುತ್ತಾ ಕೂರುವ ಬದಲು, ಇನ್ನಾದರೂ ಬಿಗುಮಾನವನ್ನ ಕಡಿಮೆ ಮಾಡಿಕೊಂಡು, ನಮ್ಮ ತಪ್ಪುಗಳನ್ನು ಒಪ್ಪಿಕೊಂಡು,ಬದುಕಿನ ಹೊಸತನಗಳಿಗೆ ತೆರೆದುಕೊಳ್ಳುತ್ತಾ, ಕಲಿಯುತ್ತ ಮತ್ತು ನಾವು ಕಲಿತ ಜೀವನಪಾಠಗಳ ಸಾರವನ್ನು ಮುಂದಿನ ಪೀಳಿಗೆಗೆ ತಲುಪಿಸುತ್ತಾ ಚಲನಶೀಲರಾಗಿ ಬದುಕುವುದನ್ನು ರೂಢಿಸಿಕೊಳ್ಳೋಣ. ಹಳೇಬೇರಿಗೆ ಹೊಸಚಿಗುರು ಮೆರಗು ನೀಡಲಿ. ಜೀವನ ಹಸುರಾಗಿ ನಳನಳಿಸುವಂತೆ ನೋಡಿಕೊಳ್ಳೋಣ. ಇದೇ ನಮ್ಮ ನಿಜವಾದ ಬೆಳವಣಿಗೆ. ಏನಂತೀರಿ..?

ಇಡ್ಲಿ ಮಾಡೂದು ಕಷ್ಟ ಐತ್ರಿ!

● ವಾಣಿ ಹುಗ್ಗಿ

ಬೆಳಗಿನ ನಾಷ್ಟಾಕ ಇಡ್ಲಿ, ಚಟ್ನಿ, ಸಾಂಬಾರು ಭಾಳ ಚಲೋ. ಆರಾಮ ಇಲ್ಲದಾವ್ರಿಗೂ ತಿನ್ನಾಕ ಬರತೇತಿ. ನಾಷ್ಟಾಕ ಇಡ್ಲಿ ಬೇಕಂದ್ರ ಹಿಂದಿನ ದಿನ ಉದ್ದಿನಬೇಳಿ, ಅಕ್ಕಿ, ರವಾ ನೆನೆಸಿಟ್ಟ ರಾತ್ರಿ ರುಬ್ಬಿ ಕಲಸಿ ಹುದಗ ಬರಾಕ ಇಡಬೇಕ್ರಿ. ಹಿಟ್ಟ ಚಲೋ ತಂಗ ಉಬ್ಬಿ ಬಂದ್ರ ಇಡ್ಲಿ ಮೆತ್ತಗ ತಿನ್ನಾಕ ಬರುವಂಗ ಆಗ್ತಾವ್ರಿ. ರಾತ್ರಿ ಹತ್ತಕ್ಕ ರುಬ್ಬಿ ಹಾಕಿದ್ರು ನಡೀತೇತಿ. ಈ ಬ್ಯಾಸಗಿ ಕಾಲ್ದಾಗ ಇಡ್ಲಿ ಮಾಡುದ ಕಠಿಣರಿ, ಯಾಕಂದ್ರ ಹಿಟ್ಟ ಜಾಸ್ತಿ ಹುದುಗ ಬಂದು ಇಡ್ಲಿ ಹುಳಿ ಆಗ್ತಾವ್ರಿ. ಹಿಟ್ಟನ ಮುಂಜಾನೆ ಎರಡ ಭಾಂಡೆಕ ಹಾಕಿಡಬೇಕ್ರಿ, ಇಲ್ಲಂದ್ರ ಭಾಂಡೆ ಕೆಳಗ ದೊಡ್ಡದೊಂದ ತಾಟ ಇಡಬೇಕ್ರಿ. ಹಿಟ್ಟ ಭಾಳ ಹುಳಿ ಬರಬಾರ್ದು ಅಂದ್ರು, ಹಿಟ್ಟ ಹುದುಗಿ ಭಾಂಡೆ ಹೊರಗ ಬಂದು ಸುತ್ತು ಕಡೆ ಏನೇನ್ ಐತಿ ಅಂತ ಹಣಿಕಿ ಹಾಕಿ ನೋಡ್ತೇತಿ. ಇಡ್ಲಿ ಭಾಳ ಹುಳಿ ಆಗಿ ಬಾಯಾಗ ಇಡಾಕ ಆಗಲ್ದಂಗ ಆಗ್ತಾವ್ರಿ. ಇನ್ನ ಚಳಿಗಾಲದಾಗ ಇದರ ಉಲ್ಟಾರಿ. ಬೆಳಗ್ಗೆ ಏಳೋದ ಬ್ಯಾಸರಿ. ಈ ಇಡ್ಲಿ ಮಾಡೋದ ಇನ್ನ ಬ್ಯಾಸರಿ. ಹಿಟ್ಟ ನಾನಂತೂ ಉಬ್ಬಾಂಗಿಲ್ಲಂತ ಹಠಾ ಹಿಡಿದ ಕುಂಡ್ರತೇತಿ. ಅದನ ಇಡ್ಲಿ ಭಾಂಡೆಕೇನರ ಹಾಕಿದ್ರ, ಗಟ್ಟಿ ಕಲ್ಲಿನಂಗ ಆಗ್ತಾವ್ರಿ. ಹಿಟ್ಟ ಕಲಸಾಕ ಬಿಸಿನೀರ ಹಾಕುದ, ಹಿಟ್ಟ ಕಲಸಿ ಬಿಸಿನೀರ ಭಾಂಡೆದಾಗ ಇಡುದ, ಹಿಟ್ಟ ಕಲಸಿ ಭಾಂಡೆ ಗಟ್ಯಂಗ ಮುಚ್ಚಿಡೊದ ಹಿಂಗ ಹಿಟ್ಟ ಹುಳಿ ಬರಸಾಕ ಏನರ ಉಪಾಯ ಮಾಡಬೇಕ್ರಿ.

ನಾನ ಇಡ್ಡಲಿಗೆ ಮಾಡಾಕ ಕಲ್ಕೊಂಡಿದ್ದ ಭಾಳಷ್ಟ ಇಡ್ಲಿ ತಿನ್ನಾಕ ಬರಲ್ದಂಗ ಕೆಡಿಸ್ತಾದ್ಗನರಿ. ಮದ್ವಿಯಾಗಿದ್ದ ಹೊಸದ್ರಾಗ ಅಡಿಗಿ ಮಾಡಾಕ ಬರ್ತಿರ್ಲಿಲ್ಲರಿ. ಕುಕ್ಕರ್ದಾಗ ಅನ್ನಕ್ಕ ಇಡಾಕು ನಂಗ ನಮ್ಮೆಜಮಾನ್ರ ಹೇಳಿಕೊಟ್ಟರಿ. ದಿನಾ ಮಾಡ್ಕೊಂತ ಹೋದ್ರ ತಾನ ರೂಢಿ ಆಗತೇತಿ, ಇಂಗು ತೆಂಗು ಇದ್ರ ಮಂಗ್ಯಾನೂ ಅಡಿಗಿ ಮಾಡತೇತಿ ಅನ್ನೋ ಸ್ಫೂರ್ತಿಜತಿ ಅಡ್ಗಿ ಮನಿ ಪ್ರವೇಶ ಆತು. ನಾಳಿ ನಾಷ್ಟಾಕ ಇಡ್ಲಿ ಮಾಡುನು ಅಂತ ಅನ್ಕೊಂಡಿನಿ. ಆದ್ರ ಇಡ್ಲಿ ಹಿಟ್ಟ ಹಾಕಿರ್ಲಿಲ್ಲ. ರೆಡಿ ಟು ಮಿಕ್ಸ್ ತಗೊಂಡ ಬಂದ ಮಾಡೂನು ಅಂತ ಹಿಟ್ಟಿನ ಪೊಟ್ಟಣ ತಂದುಕೊಟ್ರು. ಅದ್ನ ಮಸರ್ಯಾಗ ಕಲಸಿ ಒಂದ ತಾಸ ಇಡ್ಬೇಕಂತ. ಆಮ್ಯಾಲ ಭಾಂಡೆಕ ಹಾಕಿ ಉಗಿದಾಗ ಬೇಸ್ಬೇಕಂತ ಬರದಿದ್ರು. ನಮ್ಮನಿಯವ್ರ ಅಂದ್ರು ಹಂಗ ನೀರ್ನ್ಯಾಗ ಕಲ್ಸ ನಡೀತೇತಿ. ಗಂಡನ ವಿರುದ್ಧ ಯಾರರ ಮಾತಾಡ್ತಾರೇನ್ರಿ? ನಾನು ಹೂ ಅನ್ನಿ. ಆದ್ರ ಇಡ್ಲಿ ಮಾತ್ರ ಹೂ ಅನಲಿಲ್ಲ. ಮೆತ್ತಗ ಮಲ್ಲಿಗಿ ಹಂಗ ಆಗಬೇಕಾಗಿದ್ದ ಇಡ್ಲಿ ಗಟ್ಟಿ ಕಲ್ಲ ಆಗಿದ್ದು. ಒಂದ ಇಡ್ಲಿ ತಿಂದನ ಹೊಟ್ಟಿ ಕೆಟ್ಟಿತ್ತು. ಯಾವ ಪರಿ ಆಗಿದ್ದು ಇಡ್ಲಿ ಅನ್ನೋವು ನೀವ ಊಹಿಸ್ಕೊಬಹುದ್ರಿ. ಇಡ್ಲಿ ಆಗಾಕ ಹಿಟ್ಟ ಹುದುಗು ಬರ್ಬೇಕ ಅನ್ನೋ ತಿಳಿವಳಿಕೆ ಇಲ್ಲದ ನನ್ನ ಬುದ್ಧಿಗಿ ನಾನ ಬೈಕೊಂಡಿದ್ನಿ.

ಹಗ್ಗ ನನ್ನ ನಟನಾ ಜೀವನದ ವಿಭಿನ್ನ ಸಿನಿಮಾ

ಸ್ಯಾಂಡಲ್‌ವುಡ್‌ನಲ್ಲಿ ಸಿದ್ಧವಾಗಿರುವ ಹಗ್ಗ ಟೈಟಲ್‌ನಲ್ಲಿಯೇ ಸದ್ದು ಮಾಡುತ್ತಿದೆ. ಹಾರರ್ ಜಾನರ್‌ನ ಈ ಸಿನಿಮಾ ಕೂತೂಹಲವನ್ನೂ ಮೂಡಿಸಿದೆ. ಅನು ಪ್ರಭಾಕರ್ ಮೊದಲ ಬಾರಿಗೆ ಹಾರರ್ ಪಾತ್ರದಲ್ಲಿ ಕಾಣಿಸಿ ಕೊಂಡಿರುವುದು ವಿಶೇಷ. ತಮ್ಮ ಚಿತ್ರ ಹಾಗೂ ಪಾತ್ರದ ಬಗ್ಗೆ ಅನು ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

- **ವಿ.ಸಿ: ಹಗ್ಗ ಬಲು ವಿಶೇಷವಾಗಿದೆ, ಚಿತ್ರದಲ್ಲಿ ನಿಮ್ಮ ಪಾತ್ರ ?**

ಅನು ಪ್ರಭಾಕರ್: ನಿಜವಾಗಿಯೂ ಚಿತ್ರ ತುಂಬಾ ವಿಶೇಷವಾಗಿದೆ. ಒಳ್ಳೆಯ ಕಥೆಯೂ ಇದೆ. ಎಮೋಷನ್, ಸಸ್ಪೆನ್ಸ್ ಜತೆಗೆ ಹಾರರ್ ಕಥೆಯೂ ಬೆರೆತಿದೆ. ಹಗ್ಗ ಕೂಡ ಒಂದು ಪ್ರಮುಖ ಪಾತ್ರವಾಗಿ ಕಾಣಿಸಿಕೊಂಡಿದೆ. ದುಷ್ಟ ಶಕ್ತಿಯ ವಿರುದ್ಧ ಹೋರಾಡುವ ಅಸ್ತ್ರವೇ ಹಗ್ಗ, ಅದು ಹೇಗೆ ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು. ಇಲ್ಲಿ ನಾನು ಪವರ್ ಫುಲ್ ಪಾತ್ರ ನಿರ್ವಹಿಸಿದ್ದೇನೆ. ಈ ಹಿಂದೆ ಮೋಹಿನಿ, ಕನಕಾಂಬರಿ ಚಿತ್ರ ದಲ್ಲಿಯೂ ನಟಿಸಿದ್ದೇನೆ. ಅದಕ್ಕೂ ಭಿನ್ನವಾಗಿ ಇಲ್ಲಿ ನನ್ನ ಪಾತ್ರ ಮೂಡಿಬಂದಿದೆ.

- **ವಿ.ಸಿ: ಈ ಕಥೆಯನ್ನು ಮೆಚ್ಚಿ ನಟಿಸಲು ಕಾರಣ ?**

ಅನು ಪ್ರಭಾಕರ್: ನನಗೆ ಹಾರರ್ ಸಿನಿಮಾಗಳು ಎಂದರೆ ಅಷ್ಟಾಗಿ ಇಷ್ಟವಿಲ್ಲ. ಹಾರರ್ ಚಿತ್ರಗಳನ್ನು ನೋಡುವುದೂ ಇಲ್ಲ. ಹೀಗಿರುವಾಗಲೇ ನಿರ್ದೇಶಕ ಅವಿನಾಶ್ ಒಮ್ಮೆ ಭೇಟಿಯಾಗಿ ಕಥೆ ಹೇಳಿದರು. ಸ್ಟೋರಿ ಕೇಳುತ್ತಾ ಮನಸಿಗೆ ಹಿಡಿಸಿತು. ಹಾರರ್ ಜಾನರ್‌ನ ಕಥೆಯಾದರೂ ನನ್ನ ಪಾತ್ರ ಬಲು ಇಷ್ಟವಾಯಿತು. ಹಾಗಾಗಿ ನಟಿಸಲು ಸಮ್ಮತಿಸಿದೆ. ನಿರ್ದೇಶಕರು ಪೂರ್ವ ತಯಾರಿ ಮಾಡಿಕೊಂಡೆ ಚಿತ್ರೀಕರಣಕ್ಕೆ ನಡೆದರು. ಮೊದಲು ಹೇಗೆ ಕಥೆ ಹೇಳಿದ್ದರೋ ಅದೇ ರೀತಿಯಲ್ಲಿ ಸಿನಿಮಾವನ್ನು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

- **ವಿ.ಸಿ :ಇದು ನೈಜ ಘಟನೆ ಆಧಾರಿತ ಕಥೆಯೆ?**

ಅನು ಪ್ರಭಾಕರ್: ಇಲ್ಲ, ಇದು ಪಿರಿಯಾಡಿಕ್ ಡ್ರಾಮಾ. ಹಳ್ಳಿಯ ಹಿನ್ನೆಲೆಯಲ್ಲಿ ಸಾಗುವ ಗಟ್ಟಿಯಾದ ಕಥೆ ಇಲ್ಲಿದೆ. ಗತಕಾಲದ ಜತೆಗೆ ಪ್ರಸ್ತುತ ಕಾಲ ಘಟ್ಟದವರೆಗೂ ಚಿತ್ರದ ಕಥೆ ಸಾಗುತ್ತದೆ. ಅಂದಿನ ಕಾಲದ ಹೆಣ್ಣಿನ ವೇಷಭೂಷಣ ಇವೆಲ್ಲ ವನ್ನು ನಿರ್ದೇಶಕರು ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. ನನ್ನ ಪಾತ್ರವೂ ಕೂಡ ಹಲವು ಶೇಡ್‌ಗಳಲ್ಲಿ ಸಾಗುತ್ತದೆ. ಹಾರರ್ ಜತೆಗೆ ಸಸ್ಪೆನ್ಸ್, ಎಮೋಷನ್ಸ್, ಕಾಮಿಡಿಯೂ ಬೆರೆತಿದೆ.

> **ನನ್ನ ಮೊದಲ ಚಿತ್ರ ಹೃದಯ ಹೃದಯ ಕೂಡ 1999ರ ಸೆಪ್ಟೆಂಬರ್ 19ರಂದು ರಿಲೀಸ್ ಆಗಿತ್ತು. ಈಗ ಇಪ್ಪತ್ತೈದು ವರ್ಷಗಳ ಬಳಿಕ ಹಗ್ಗ ಕೂಡ ಸೆಪ್ಟೆಂಬರ್ ನಲ್ಲಿಯೇ ರಿಲೀಸ್ ಆಗುತ್ತಿದೆ. ಇದು ನನಗೆ ತುಂಬಾ ಖುಷಿ ಕೊಟ್ಟಿದೆ.**

> **ಇದು ಸ್ಫೂರ್ತಿದಾಯಕ ಕಥೆಯಾಗಿದೆ, ಸಿನಿಮಾ ನೋಡಿದ ಮೇಲೆ ಎಲ್ಲರಲ್ಲೂ ಹೊಸಕನಸು ಚಿಗುರೊಡೆಯುತ್ತದೆ. ಹೋರಾಟದ ಮನೋಭಾವ ಬೆಳೆಸುತ್ತದೆ.**

ಸಂತೋಷನ ಮನದಲ್ಲಿ ಕನಸೊಂದು ಶುರುವಾಗಿದೆ

ಹಲವು ಸಿನಿಮಾಗಳಲ್ಲಿ ಪೋಷಕ ನಟನಾಗಿ, ಖಳನಟನಾಗಿ ನಟಿಸಿದ್ದ ಸಂತೋಷ್ ಬಿಲ್ಲವ ಮುಂದೆ ನಾಯಕನಾಗಿ ನಟಿಸಬೇಕು ಎಂಬ ಕನಸು ಕಂಡಿದ್ದರು. ಆ ಕನಸು ಈಗ ನನಸಾಗಿದೆ. ಆ ಮೂಲಕ ಅವರ ಮನದಲ್ಲಿ ಹೊಸ ಕನಸೊಂದು ಶುರುವಾಗಿದೆ. ಇದೇ ಶೀರ್ಷಿಕೆಯಲ್ಲಿ ಸಿನಿಮಾ ಸಿದ್ಧವಾಗಿದ್ದು ತೆರೆಗೆ ಬರಲು ರೆಡಿಯಾಗಿದೆ. ತಮ್ಮ ಚಿತ್ರದ ಕುರಿತಂತೆ ಸಂತೋಷ್, ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

- **ವಿ.ಸಿನಿಮಾಸ್: ಯಾವುದು ಈ ಹೊಸ ಕನಸು ?**

ಸಂತೋಷ್ ಬಿಲ್ಲವ: ಇದು ನನ್ನ ಬಹುದಿನಗಳ ಕನಸು, ಅದು ಈಗ ನನಸಾಗಿದೆ. ಕನಸೊಂದು ಶುರುವಾಗಿದೆ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿರುವುದು ಖುಷಿ ಕೊಟ್ಟಿದೆ. ನಿರ್ದೇಶಕ ಮಂಜೇಶ್ ಭಾಗವತ್ ಹಿಂದಿನಿಂದಲೂ ಪರಿಚಯ. ಒಮ್ಮೆ ಈ ಸಿನಿಮಾದ ಕಥೆ ಹೇಳಿದರು, ಕಥೆ ಕೇಳಿ ನನಗೂ ಖುಷಿಯಾಯಿತು. ಈ ಸಿನಿಮಾದಲ್ಲಿ ನಾಯಕನಾಗಿ ಯಾರು ನಟಿಸಿದರೆ ಚೆಂದ ಎಂದು ಯೋಚಿಸುತ್ತಿದ್ದೆ. ಆಗ ನಿರ್ದೇಶಕರು, ಈ ಚಿತ್ರಕ್ಕೆ ನೀವೇ ಹೀರೋ ಎಂದರು. ಅದನ್ನು ಕೇಳಿ ನನಗೆ ಅಚ್ಚರಿಯಾಯಿತು. ನಿರ್ದೇಶಕರು ನನಗೆ ಮರು ಮಾತನಾಡಲು ಬಿಡದೆ ಚಿತ್ರೀಕರಣಕ್ಕೆ ಸಿದ್ಧತೆ ನಡೆಸಿದರು. ಒಂದು ವಾರದಲ್ಲಿಯೇ ಚಿತ್ರೀಕರಣಕ್ಕೆ ಹೊರಟೆವು.

- **ವಿ.ಸಿ : ಇದು ನೈಜ ಘಟನೆಯಾಧಾರಿತ ಚಿತ್ರವೆ ?**

ಸಂತೋಷ್: ಹೌದು, ನೈಜ ಘಟನೆಗಳನ್ನು ಆಧರಿಸಿ ನಿರ್ದೇಶಕರು ಈ ಕಥೆ ಹೆಣೆದಿದ್ದಾರೆ. ಶೋಷಣೆಯ ವಿರುದ್ಧದ ಹೋರಾಟ ಚಿತ್ರದಲ್ಲಿದೆ. ನಾಯಕಿ ಅಪ್ಪಟ ಹೋರಾಟಗಾರ್ತಿ ಶೋಷಣೆಯ ವಿರುದ್ಧ ಸದಾ ಸಿಡಿದೇಳುವ ಮನೋಭಾವ ಅವಳದ್ದು, ಆಕೆಯ ಹೋರಾಟಕ್ಕೆ ಶಕ್ತಿ ತುಂಬುವ ಪಾತ್ರ ನನ್ನದು. ಈ ನಡುವೆ ನಾಯಕನ ಕನಸೇನು ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು.

- **ವಿ.ಸಿ : ಚಿತ್ರದಲ್ಲಿ ಮಾಸ್, ಕ್ಲಾಸ್ ಅಂಶಗಳು ಇವೆಯೆ ?**

ಸಂತೋಷ್: ಇಲ್ಲಿ ನೈಜತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಯಾವುದೂ ಅತಿಯಾಗದಂತೆ ಎಲ್ಲರಿಗೂ ಸಿನಿಮಾ ಹಿಡಿಸುವಂತೆ ನಿರ್ದೇಶಕರು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಇಂದಿಗೂ ಶೋಷಣೆ ಎಲ್ಲೆಡೆ ನಡೆಯುತ್ತಿದೆ, ಸಿನಿಮಾ ನೋಡುತ್ತಿದ್ದರೆ ನಮ್ಮ ಸುತ್ತಮುತ್ತ ನಡೆದ ಘಟನೆಗಳು ನೆನಪಿಗೆ ಬರುತ್ತವೆ. ಹೋರಾಟಕ್ಕೆ ಸ್ಫೂರ್ತಿ ತುಂಬುತ್ತದೆ. ಹಾಗಾಗಿ ಈ ಕಥೆ ಎಲ್ಲರಿಗೂ ಕನೆಕ್ಟ್ ಆಗುತ್ತದೆ. ನವಿರಾದ ಲವ್ ಸ್ಟೋರಿಯ ಜತೆಗೆ ಸಸ್ಪೆನ್ಸ್ ಅಂಶಗಳು ಬೆರೆತಿವೆ. ನನಗೆ ನಾಯಕಿಯಾಗಿ ಸಾತ್ವಿಕಾ ರಾವ್ ಅಭಿನಯಿಸಿದ್ದಾರೆ.

- **ವಿ.ಸಿ : ಇದೇ ಶೀರ್ಷಿಕೆ ಆಯ್ದುಕೊಳ್ಳಲು ಕಾರಣ ?**

ಸಂತೋಷ್: ಈ ಚಿತ್ರಕ್ಕೆ ಮೊದಲು ಡ್ರೀಮ್ ಕ್ಯಾಚರ್ ಎಂದು ಶೀರ್ಷಿಕೆ ಆಯ್ದುಕೊಂಡಿದ್ದೆವು. ಒಮ್ಮೆ ಅಪ್ಪು ಸರ್ ನಟಿಸಿರುವ ಮಿಲನ ಚಿತ್ರದ ನಿನ್ನಿಂದಲೇ ನಿನ್ನಿಂದಲೇ ಕನಸೊಂದು ಶುರು ವಾಗಿದೆ. ಹಾಡು ಪ್ರಸಾರವಾಗುತ್ತಿತ್ತು. ಆ ಸಾಲು ಮನಕ್ಕೆ ನಾಟಿತು, ಅದನ್ನೇ ಟೈಟಲ್ ಆಗಿ ಇಟ್ಟೆವು. ಅಪ್ಪು ಸರ್ ನಮ್ಮೊಂದಿಗೆ ಇದ್ದಿದ್ದರೆ ನಮ್ಮ ಚಿತ್ರದ ಹಾಡಿಗೆ ಖಂಡಿತಾ ದನಿಯಾಗುತ್ತಿದ್ದರು.

ತೆರೆಯಲ್ಲಿ ಪ್ರತ್ಯಕ್ಷವಾದ ಲಂಗೋಟಿ ಮ್ಯಾನ್

ವಿಭಿನ್ನ ಶೀರ್ಷಿಕೆಯ ಮೂಲಕ ಗಮನಸೆಳೆದು ಒಂದಷ್ಟು ವಿವಾದವನ್ನೂ ಎದುರಿಸಿದ ಲಂಗೋಟಿ ಮ್ಯಾನ್ ತೆರೆಗೆ ಬಂದಿದ್ದಾನೆ. ಶೀರ್ಷಿಕೆಯ ಕಾರಣಕ್ಕೆ ಒಂದು ಹಂತದ ಬಿಸಿ ಎದುರಿಸಿರುವ ಚಿತ್ರತಂಡ, ಸಿನಿಮಾ ಬಿಡುಗಡೆಯ ನಂತರದ ಪ್ರತಿಕ್ರಿಯೆಗೆ ಕಾಯಬೇಕಿದೆ. ತಾತ ಮೊಮ್ಮಗನ ಸುತ್ತ ನಡೆಯುವ ಈ ಕಥೆ ಚಿತ್ರದ ಹೈಲೈಟ್ಸ್. ಸಂಪ್ರದಾಯವಾದಿ ತಾತನ ಆಚರಣೆ, ವಿಧಿ ವಿಧಾನಗಳಿಗೆ ತಿರುಗಿ ಬೀಳುವ ಮೊಮ್ಮಗ, ಅದರಿಂದ ಏನೆಲ್ಲಾ ಫಜೀತಿ ಅನುಭವಿಸುತ್ತಾನೆ ಎಂಬುದನ್ನು ನವಿರಾದ ಹಾಸ್ಯದ ಮೂಲಕ ಮನರಂಜನಾತ್ಮಕವಾಗಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದೇವೆ ಎನ್ನುತ್ತಾರೆ ನಿರ್ದೇಶಕಿ ಸಂಜೋತಾ ಭಂಡಾರಿ. ಆಕಾಶ್ ರ‍್ಯಾಂಬೋ ಈ ಚಿತ್ರದ ನಾಯಕನಾಗಿ ನಟಿಸಿದ್ದು, ತನ್ನಿಚ್ಛೆಯಂತೆ ಬಟ್ಟೆ ಧರಿಸಲು ಬಿಡದ ತಾತನ ಮೇಲೆ ಕ್ರಾಂತಿ ಸಾರುವ ಯುವಕನಾಗಿ ಕಾಣಿಸಿಕೊಂಡಿದ್ದಾರೆ. ಸಂಹಿತಾ ವಿನ್ಯಾ ಈ ಚಿತ್ರದ ನಾಯಕಿಯಾಗಿ ಬಣ್ಣ ಹಚ್ಚಿದ್ದು, ಪೊಲೀಸ್ ಅಧಿಕಾರಿಯಾಗಿ ಕಂಗೊಳಿಸಿದ್ದಾರೆ. ಹುಲಿ ಕಾರ್ತಿಕ್, ಸ್ನೇಹಾ ಖುಷಿ ಮುಂತಾದವರು ತಾರಾಗಣದಲ್ಲಿದ್ದಾರೆ

> **ಯಾವುದೇ ಸಮುದಾಯದ ವರನ್ನೂ ನೋಯಿಸುವ ಕಥೆ ಚಿತ್ರ ದಲ್ಲಿಲ್ಲ. ಸಿನಿಮಾ ನೋಡದೆ ಯಾವ ನಿರ್ಧಾರಕ್ಕೂ ಬರಬೇಡಿ, ನಮ್ಮ ಸಿನಿಮಾದಲ್ಲಿ ಯಾವುದೇ ಜಾತಿ ಜನಾಂಗದ ವಿರುದ್ಧ ಚಿತ್ರಣಗಳಿಲ್ಲ. ಶುದ್ಧ ಮನರಂಜನೆ ದೃಷ್ಟಿಯಿಂದ ಮಾಡಿರುವ ಸಿನಿಮಾವಿದು. ಚಿತ್ರ ನೋಡಿದ ಮೇಲೆ ಅದು ಮನವರಿಕೆಯಾಗುತ್ತದೆ.**
>
> **-ಸಂಜೋತಾ ಭಂಡಾರಿ** ನಿರ್ದೇಶಕಿ

ಕರಾವಳಿ ಸೊಗಡಿನ ಕಥೆಯನ್ನು ಒಳಗೊಂಡ ಮಾರ್ನಮಿ ಚಿತ್ರ ಸೆಟ್ಟೇರಲು ಸಿದ್ಧವಾಗಿದೆ. ಸದ್ಯ ಚಿತ್ರದ ಟೈಟಲ್ ಟೀಸರ್ ಬಿಡುಗಡೆಯಾಗಿದೆ. ರಿಶಿತ್ ಶೆಟ್ಟಿ ನಿರ್ದೇಶನದ ಮಾರ್ನಮಿ ಟೀಸರ್‌ನಲ್ಲಿಯೇ ಕುತೂಹಲ ಹೆಚ್ಚಿಸಿದೆ. ಕರಾವಳಿ ಭಾಗದ ಹುಲಿವೇಷದ ಹಿನ್ನೆಲೆ ಹಾಗೂ ತುಳುನಾಡಿನ ಸಂಸ್ಕೃತಿಯ ಎಳೆ ಚಿತ್ರದಲ್ಲಿರಲಿದೆ. ಅಪರೂಪದ ಪ್ರೇಮಕಥೆಯ ಜತೆಗೆ ಆ್ಯಕ್ಷನ್, ಎಮೋಷನ್, ಕಾಮಿಡಿ ಮಿಶ್ರಣವೂ ಮಾರ್ನಮಿಯಲ್ಲಿದೆ. ರಿತ್ವಿಕ್ ಹಾಗೂ ಚೈತ್ರಾ.ಜೆ.ಆಚಾರ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ಪ್ರಕಾಶ್ ತುಮಿನಾಡು, ಸೋನು ಗೌಡ, ಜ್ಯೋತೀಶ್ ಶೆಟ್ಟಿ, ರೋಚಿತ್, ಯಶ್ ಶೆಟ್ಟಿ, ಮೈಮ್ ರಾಮದಾಸ್ ಹಾಗೂ ಚೈತ್ರಾ ಶೆಟ್ಟಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.

ಮಾರ್ನಮಿಗೆ ರೆಡಿಯಾದ ಚೈತ್ರಾ

ಪ್ರೀತಂ ಶೆಟ್ಟಿ ಅವರ ಜತೆ ಒಂದಷ್ಟು ಚಿತ್ರಗಳಲ್ಲಿ ಕೆಲಸ ಮಾಡಿದ್ದೇನೆ. ಮಂಗಳೂರಲ್ಲಿ ಸ್ಕ್ರಿಪ್ಟ್ ಕೆಲಸಕ್ಕೆ ಹೋಗಿದ್ದಾಗ ಸುಧಿ ಪರಿಚಯವಾದರು. ಅವರು ಒಂದು ಒಳ್ಳೆಯ ಕಥೆ ಮಾಡಿಕೊಂಡಿದ್ದರು. ಆದರೆ ಅವರಿಗೆ ನಿರ್ದೇಶನ ಮಾಡಲು ಇಷ್ಟವಿಲ್ಲ ಅಂದಾಗ ಆ ಕಥೆಯನ್ನು ನಾನು ಕಥೆ ಕೇಳಿದೆ. ಅವರು ಪ್ರೀತಿಯಿಂದ ಕೊಟ್ಟರು. ಅಲ್ಲಿಂದ ಚಿತ್ರದ ಕೆಲಸಗಳು ಪ್ರಾರಂಭವಾದವು ಎಂದು ನಿರ್ದೇಶಕ ರಿಶಿತ್ ಶೆಟ್ಟಿ ಹೇಳಿದರು. ಈ ಚಿತ್ರದ ಬಗ್ಗೆ ನನಗೆ ತುಂಬಾ ಹೆಮ್ಮೆ ಇದೆ. ಒಂದು ಕಥೆ. ಚೆನ್ನಾಗಿ ಎಳೆದುಕೊಂಡು ಬಂದಿದ್ದು ರಿಶಿತ್ ಶೆಟ್ಟಿ. ಕರಾವಳಿ ಭಾಗದಲ್ಲಿ ನಡೆಯುವ ಅದ್ಭುತ ಲವ್ ಸ್ಟೋರಿ. ದಸರಾ ದಿನವನ್ನು ಮಾರ್ನಮಿ ಎಂದು ಕರೆಯುತ್ತಾರೆ. ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇದೆ, ಅದ್ಭುತ ತಾಂತ್ರಿಕ ವರ್ಗವೂ ಇದೆ ಎಂದು ನಟ ರಿತ್ವಿಕ್ ತಿಳಿಸಿದರು. ಚಿತ್ರಕ್ಕೆ ಚರಣ್ ರಾಜ್ ಸಂಗೀತ ನಿರ್ದೇಶನವಿದ್ದು, ಶಿವಸೇನ ಛಾಯಾಗ್ರಹಣ ನಿರ್ವಹಿಸುತ್ತಿದ್ದಾರೆ. ಗುನಾಢ್ಯ ನಿರ್ಮಾಣ ಸಂಸೆಯಲ್ಲಿ ಶಿಲ್ಪಾ ನಿಶಾಂತ್ ನಿರ್ಮಾಣ ಮಾಡುತ್ತಿದ್ದಾರೆ. ಅಕ್ಟೋಬರ್ ಒಂದರಿಂದ ಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡ ಸಜ್ಜಾಗಿದೆ.

> **ನನಗೆ ಕಥೆ ಬಹಳ ಇಷ್ಟವಾಯ್ತು. ಆದರೆ ಡೇಟ್ ಸಮಸ್ಯೆಯಿಂದ ಚಿತ್ರದಲ್ಲಿ ನಟಿಸಲು ಸಾಧ್ಯವಾಗಿರಲಿಲ್ಲ. ಈಗ ಈ ಕಥೆ ನನ್ನ ಬಳಿಯೇ ಬಂತು. ಅದ್ಭುತ ಕಥೆ, ಟೆಕ್ನಿಕಲ್ ಆಗಿ ಚಿತ್ರವೂ ಶ್ರೀಮಂತವಾಗಿ ಮೂಡಿಬರಲಿದೆ. ನಾನು ಕೂಡ ಶೂಟಿಂಗ್‌ಗೆ ತೆರಳಲು ಕಾಯುತ್ತಿದ್ದೇನೆ.** **-ಚೈತ್ರಾ ಆಚಾರ್** ನಟಿ

ಬೆಂಗಳೂರು| ಕೆ.ಜಿ.ರಸ್ತೆ
ಭೂಮಿಕಾ
ಮಾಗಡಿ ರಸ್ತೆ ಪ್ರಸನ್ನ
ರಾಜಾಜಿನಗರ ನವರಂಗ್

ಜೆ.ಪಿ.ನಗರ ಸಿದ್ಧಲಿಂಗೇಶ್ವರ
ಗೊಲ್ಲರಹಟ್ಟಿ ವೆಂಕಟೇಶ್ವರ
ನಾಗವಾರ ಪೃಥ್ವಿ
PVR INOX
NEXUS | ORION VAISHNAVI | REGALIA MARKETCITY | AURA VEGACITY | SPIRIT UPTOWN | BHARTIYA REX | GT | VR MALL GLOBAL | FALCONCITY SWAGATH | CENTRAL LIDO | MANTRI | RMZ GARUDA | YELAHANKA NEIGHBOURHOOD SBR | BROOKFIELD
cinépolis
ETA | MEENAKSHI ORION EAST | LULU SHANTINIKETAN | SJR
GOPALAN CINEMAS
ARCH | INNOVATION GRAND | SIGNATURE LEGACY
ROCKLINE cinemas JALAHALLI
MIRAJ SUNKADAKATTE
KINI CINEMAS SEEGEHALLI
INNOVATIVE MULTIPLEX MARATHHALLI
CINEPHILE THE MOVIE HUB HSR LAYOUT
V CINEMAS T.C.PALYA
ತುಮಕೂರು ಜೈಭಾರತ್
PVR INOX
ಚನ್ನಪಟ್ಟಣ (4ಆಟ) ಬಾಲಾಜಿ
ಚಿಕ್ಕಬಳ್ಳಾಪುರ ವಾಣಿ
ವಿಜಯಪುರ ಸಂಗಮೇಶ್ವರ
ಕುಣಿಗಲ್ ಆಕಾಶ್
ಮೈಸೂರು ಸಂಗಮ್
PVR INOX GARUDA | FORUM | SATYAM
DRC CINEMAS
VISION CINEMAS

ಮಂಡ್ಯ ಸಂಜಯ
ಮಳವಳ್ಳಿ ರಾಜರಾಜೇಶ್ವರಿ
ಟಿ.ನರಸೀಪುರ (4ಆಟ) ವಿಜಯಭಗವಾನ್
ನಂಜನಗೂಡು ಶಾರದ
ಹೊಳೆನರಸೀಪುರ ಎಸ್.ಎಲ್.ಎನ್
ಚನ್ನರಾಯಪಟ್ಟಣ ಬಾಲಾಜಿ
ಪಾಂಡವಪುರ ಲಾಲ್‌ಬಹದ್ದೂರ್
ದಾವಣಗೆರೆ MOVIETIME CINEMAS
ಬಳ್ಳಾರಿ ನಟರಾಜಕಾಂಪ್ಲೆಕ್ಸ್
MOVIETIME CINEMAS
ಹೊಸಪೇಟೆ ಲಕ್ಷ್ಮಿ
ಹುಬ್ಬಳ್ಳಿ ರೂಪಂ
PVR INOX
cinépolis
ಧಾರವಾಡ PVR INOX
ಬೆಳಗಾವಿ PVR INOX
KAPEEL
ಬಿಜಾಪುರ ಅಲಂಕಾರ್
ಇಳಕಲ್ ನಾರಾಯಣ
ಹಾವೇರಿ ಮಾಘಾವಿ
ಮುಧೋಳ ಸುಭಾಷಿಣಿ
ರೋಣ ಮಲ್ಲಿಕಾರ್ಜುನ

ನಿಪ್ಪಾಣಿ MAGNUM CINEMAS
ಗುಲ್ಬರ್ಗ PVR INOX
MIRAJ
ರಾಯಚೂರು MIRAJ
ಬೀದರ್ ಸಪ್ನ
ಗಂಗಾವತಿ ಶಿವೆ
ಕೊಪ್ಪಳ ಲಕ್ಷ್ಮಿ
ದೇವದುರ್ಗ ಭರತ್
ಷಹಪುರ ಜಯಶ್ರೀ
ಸಿಂಧನೂರು ಚನ್ನಬಸವೇಶ್ವರ
ಮಸ್ಕಿ ವಿಜಯ
ಶಿವಮೊಗ್ಗ Bharath Cinemas
ಮಂಗಳೂರು ರಮಾಕಾಂತಿ
PVR INOX
cinépolis
Bharath Cinemas
ಮಣಿಪಾಲ PVR INOX
Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas
ಪುತ್ತೂರು Bharath Cinemas